₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 17.09.2024 ಸಂಪುಟ: 67 ಸಂಚಿಕೆ: 132 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಏಷ್ಯನ್ ಟ್ರೋಫಿ ಹಾಕಿ: ಇಂದು ಭಾರತ-ಚೀನಾ ಫೈನಲ್

ಚೀನಾದ ಮೋಕಿ ಹಾಕಿ ತರಬೇತಿ ಕೇಂದ್ರದಲ್ಲಿ ಸೋಮವಾರ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾ ವಿರುದ್ಧ 4-1 ರಿಂದ ಜಯ ಗಳಿಸಿರುವ ಭಾರತ, ಇಂದು ಫೈನಲ್‌ನಲ್ಲಿ ಚೀನಾ ತಂಡವನ್ನು ಎದುರಿಸಲಿದೆ.

ದೆಹಲಿ ಹೊಸ ಸಿಎಂ ಆಯ್ಕೆ ಇಂದು

ದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಂಗಳವಾರ ಲೆಫ್ಟಿನೆಂಟ್ ಗವರ್ನರ್ ವಿ.ಕೆ ಸಕ್ಸೇನಾ ಅವರನ್ನು ಭೇಟಿ ಮಾಡಲು ಸಮಯ ಕೇಳಿದ್ದು, ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ. ಅಲ್ಲದೆ ಮಂಗಳವಾರ ಮಧ್ಯಾಹ್ನ 11.30ಕ್ಕೆ ಮುಖ್ಯಮಂತ್ರಿ ಆಯ್ಕೆ ಮಾಡಲು ಶಾಸಕಾಂಗ ಪಕ್ಷದ ಸಭೆ ಕರೆದಿದ್ದಾರೆ. ಸಭೆಯಲ್ಲಿ ಎಲ್ಲ ಶಾಸಕರ, ಎಎಪಿ ಮುಖಂಡರ ಅಭಿಪ್ರಾಯ ಸಂಗ್ರಹಿಸಿ, ನೂತನ ಮುಖ್ಯಮಂತ್ರಿಯ ಹೆಸರನ್ನು ಘೋಷಿಸಲಿದ್ದಾರೆ ಎಂದು ಎಎಪಿ ಮೂಲಗಳು ತಿಳಿಸಿವೆ.

ಪುಟ ತೆರೆದಂತೆ...

ಒಡೆದ ಕನ್ನಡಿಯಾದ ರಾಜ್ಯ ಬಿಜೆಪಿ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

ಸಂ.ಪುಟ | 6

ವಲಸೆ ಹಕ್ಕಿಗಳೇ... ದಿಕ್ಕು ತಪ್ಪದಿರಿ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

ಸಂ.ಗಮ | 7

ದಾರಿದೀಪೋಕ್ತಿ

ದುರ್ಬಲ ವ್ಯಕ್ತಿಗಳು ತಮಗೆ ಕೇಡನ್ನು ಬಗೆದವರ ವಿರುದ್ಧ ಮುಯ್ಯಿ ತೀರಿಸಿಕೊಳ್ಳಲು ಬಯಸುತ್ತಾರೆ. ಶಕ್ತಿಶಾಲಿಗಳು ಕ್ಷಮಿಸುತ್ತಾರೆ. ಬುದ್ಧಿವಂತರಾದವರು ನಿರ್ಲಕ್ಷಿಸುತ್ತಾರೆ ಮತ್ತು ಎಂದೂ ಅವರನ್ನು ನೆನಪಿಸಿಕೊಳ್ಳಲು ಬಯಸುವುದಿಲ್ಲ.

ವಕ್ರತುಂಡೋಕ್ತಿ

ಕೆಲವರು ಸಂತಸ ಮತ್ತು ಪ್ರೀತಿಯಲ್ಲಿದ್ದಾಗ ಶಾಂಪೇನ್ ಕುಡಿಯುತ್ತಾರೆ. ಅದಿಲ್ಲದಿದ್ದರೂ ಕುಡಿಯುತ್ತಾರೆ.

ಹೆಗಡೆ ಅಳಿಯ ನಿಚ್ಚಾನಿ ಇನ್ನಿಲ್ಲ

ಬೆಂಗಳೂರು: ಉದ್ಯಮಿ, ಮಾಜಿ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆ ಅವರ ಅಳಿಯ ಮನು ನಿಚ್ಚಾನಿ (74) ಅವರು ಬೆಂಗಳೂರಿನ ಸದಾಶಿವನಗರದ ತಮ್ಮ ನಿವಾಸದಲ್ಲಿ ಭಾನುವಾರ ನಿಧನರಾದರು. ಅಲ್ಪ ಕಾಲದ ಅನಾರೋಗ್ಯದಿಂದ ಮನು ನಿಚ್ಚಾನಿ ಬಳಲುತ್ತಿದ್ದರು. ಅವರು ಪತ್ನಿ ಮಮತಾ ನಿಚ್ಚಾನಿ, ಪುತ್ರಿ ಜೀತಿ, ಅತ್ತೆ ಶಕುಂತಲಾ ಹೆಗಡೆ ಸೇರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಮಹತ್ವದ ನಿರ್ಧಾರ ಸಂಭವ

ಕಲಬುರಗಿಯಲ್ಲಿ ಇಂದು ಕ್ಯಾಬಿನೆಟ್

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದ ಸರ್ವಾಂಗೀಣ ಅಭಿವೃದ್ಧಿ ಹಾಗೂ ವಿವಿಧ ಯೋಜನೆಗಳಿಗೆ ಅನುಮತಿ ನೀಡುವ ನಿಟ್ಟಿನಲ್ಲಿ ಮಂಗಳವಾರ ಬೆಳಗ್ಗೆ ಕಲಬುರಗಿಯ ಪ್ರಾದೇಶಿಕ ಕಚೇರಿಯಲ್ಲಿ ದಶಕದ ಬಳಿಕ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದೆ.

ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಆಡಳಿತಾತ್ಮಕ, ಶೈಕ್ಷಣಿಕ, ಮೂಲಸೌಕರ್ಯ ಅಭಿವೃದ್ಧಿ, ಆರೋಗ್ಯ, ಲೋಕೋಪಯೋಗಿ, ಕೃಷಿ, ನೀರಾವರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು371(ಜೆ) ಕಲಂ ಅನ್ನು ಪರಿಣಾಮಕಾರಿ ಜಾರಿ, ಸ್ಥಳೀಯ ವೃಂದದ 30 ಸಾವಿರಕ್ಕೂ ಹೆಚ್ಚು ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ಅಭಿವೃದ್ಧಿ ಯೋಜನೆಗಳ ಕುರಿತು ಮಹತ್ವದ ಘೋಷಣೆ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ. ಸಂಪುಟ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಬಹುತೇಕ ಸಚಿವರು ಸೋಮವಾರ ಸಂಜೆಯೇ ಕಲಬುರಗಿಗೆ ತೆರಳಿದ್ದಾರೆ. ಅಮೆರಿಕಕ್ಕೆ ತೆರಳಿದ್ದ ಡಿಸಿಎಂ ಶಿವಕುಮಾರ್ ಅವರು ಮಂಗಳವಾರ ಬೆಳಗ್ಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಬಂದು ನಂತರ ಕಲಬುರಗಿಗೆ ತೆರಳಲಿದ್ದಾರೆ.

ಒಂದು ದಶಕದ ಬಳಿಕ ಕ.ಕರ್ನಾಟಕದಲ್ಲಿ ಸಭೆ

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪ್ರತ್ಯೇಕ ಸಚಿವ ಸಂಪುಟ ಸಭೆಯನ್ನು ನಡೆಸಬೇಕೆಂದು ಮೊದಲ ಬಾರಿಗೆ ಆಲೋಚಿಸಿದ್ದು ಮಾಜಿ ಸಿಎಂ ಆರ್.ಗುಂಡೂರಾವ್. 1982ರಲ್ಲಿ ಮೊದಲ ಬಾರಿಗೆ ಗುಲ್ಬರ್ಗದಲ್ಲಿ ಸಚಿವ ಸಂಪುಟ ಸಭೆ ನಡೆಸಲಾಗಿತ್ತು. ಅದಾದ ದಶಕದ ಬಳಿಕ ಯಡಿಯೂರಪ್ಪ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಸತತ ಮೂರು ವರ್ಷ ಗುಲ್ಬರ್ಗದಲ್ಲಿ ಸಂಪುಟ ಸಭೆ ನಡೆಸಿದರು. 2014ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಡೆಸಿದ ಬಳಿಕ ವಿವಿಧ ಕಾರಣಕ್ಕೆ ಕಲಬುರಗಿಯಲ್ಲಿ ಸಂಪುಟ ಸಭೆ ನಡೆದಿರಲಿಲ್ಲ. ದಶಕದ ಬಳಿಕ ಸಿದ್ದರಾಮಯ್ಯ ಅವರೇ ಮತ್ತೆ ಸಂಪುಟ ಸಭೆ ನಡೆಸಲು ತೀರ್ಮಾನಿಸಿದ್ದಾರೆ.

ಕಲಬುರಗಿಯಲ್ಲಿ ಈ ಹಿಂದೆ ನಡೆದ ಸಚಿವ ಸಂಪುಟ ಸಭೆ

1981-1982:	ಆರ್.ಗುಂಡುರಾವ್ ಅಧ್ಯಕ್ಷತೆಯಲ್ಲಿ ಸಭೆ
26-09-2008:	ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಸಭೆ
27-08-2009:	ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಸಭೆ
04-10-2010:	ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಸಭೆ
18-10-2012:	ಜಗದೀಶ್ ಶೆಟ್ಟರ್ ಅಧ್ಯಕ್ಷತೆಯಲ್ಲಿ ಸಭೆ
28-11-2014:	ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸಭೆ

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಘೋಷಿಸಿದ ಯೋಜನೆ ಹಾಗೂ ಇತರ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲಾಗುವುದು. ಈ ಭಾಗದ ಜನರಿಗೆ ಉದ್ಯೋಗಾವಕಾಶ ಹಾಗೂ ಪ್ರತ್ಯೇಕ ಸಚಿವಾಲಯ ರಚನೆ, ಪ್ರತ್ಯೇಕ ಕೈಗಾರಿಕಾ ನೀತಿಯ ಬಗ್ಗೆಯೂ ಚರ್ಚಿಸಲಾಗುವುದು.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಮಿ ಟೂ

ಒಡೆದ ಮನೆಯಾದ ಸ್ಯಾಂಡಲ್‌ವುಡ್

ಬೆಂಗಳೂರು: ಕೇರಳ ಚಿತ್ರರಂಗದಲ್ಲಿ ಕೇಳಿಬಂದಿರುವ ಲೈಂಗಿಕ ದೌರ್ಜನ್ಯ ಆರೋಪದ ಬೆನ್ನಲ್ಲೇ ಕರ್ನಾಟಕದಲ್ಲಿಯೂ ಎದ್ದಿರುವ ಮಿ ಟೂ ಪ್ರಕರಣದ ಬಗ್ಗೆ ಚರ್ಚಿಸಲು ನಡೆದ ಸಭೆಯಲ್ಲಿ ಪ್ರತ್ಯೇಕ ಸಮಿತಿ ರಚನೆಗೆ ಪರ-ವಿರೋಧ ಚರ್ಚೆ ನಡೆದ ವಾಕ್ಸಮರಕ್ಕೆ ಕಾರಣವಾಗಿದೆ.

ಸೋಮವಾರ ಕರ್ನಾಟಕ ಚಲನಚಿತ್ರ ಮಂಡಳಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ 'ಫೈರ್' ಸಂಸ್ಥೆಯ ಪದಾಧಿಕಾರಿಗಳು, ಮಹಿಳಾ ಆಯೋಗದ ಅಧ್ಯಕ್ಷೆ ಸೇರಿದಂತೆ ಚಲನಚಿತ್ರ ಮಂಡಳಿಯ ಸದಸ್ಯರು ಭಾಗವಹಿಸಿದ್ದರು. ಪ್ರಮುಖವಾಗಿ ಹಿರಿಯ ನಟಿ ತಾರಾ, ಸಂಜನಾ, ಅನಿತಾ ಭಟ್, ಕವಿತಾ ಲಂಕೇಶ್, ಭಾವನಾ ರಾಮಣ್ಣ, ನೀತು ಶೆಟ್ಟಿ , ವಾಣಿಶ್ರೀ ಸೇರಿದಂತೆ ಅನೇಕ ಕಲಾವಿದೆಯರು ಭಾಗವಹಿಸಿದ್ದರು. ಫಿಲ್ಮ್ ಚೇಂಬರ್ ಕಡೆಯಿಂದ ಫೈರ್ ಸದಸ್ಯರಿಗೆ ಆಹ್ವಾನವಿರದಿದ್ದರೂ, ಫೈರ್ ಸಂಸ್ಥೆಯ ಅಧ್ಯಕ್ಷೆ ಕವಿತಾ ಲಂಕೇಶ್ ಸಭೆಯಲ್ಲಿ ಭಾಗಿಯಾಗಿ ತಾವು ಸರಕಾರದ ಮುಂದೆ ಕಮಿಟಿ ರಚನೆಗೆ ಒತ್ತಾಯಿಸಿದ್ದು ಏಕೆ ಎನ್ನುವುದನ್ನು ವಿವರಿಸಿದರು. ಮಲಯಾಳಂ ಚಿತ್ರರಂಗದ ರೀತಿಯಲ್ಲಿಯೇ ಕರ್ನಾಟಕದ ಲ್ಲಿಯೂ ಸಮಿತಿ ರಚಿಸಬೇಕೆಂದು ಹಲವು ನಾಯಕಿಯರು ಸಭೆಯಲ್ಲಿ ಆಗ್ರಹಿಸಿದರು.

ಆದರೆ ಕವಿತಾ ಲಂಕೇಶ್ ಆರೋಪಕ್ಕೆ ರಾಕ್‌ಲೈನ್ ವೆಂಕಟೇಶ್, ಸಾ.ರಾ.ಗೋವಿಂದು, ಪ್ರವೀಣ್ ಸೇರಿ ಹಲವು ನಿರ್ಮಾಪಕರು 'ಕನ್ನಡ ಚಿತ್ರೋದ್ಯಮದಲ್ಲಿ ಮಿ ಟೂ ಎನ್ನುವಂತಹದ್ದಿಲ್ಲ. ಇಂತಹ ಆರೋಪ ಮಾಡಿ ಕನ್ನಡ ಚಿತ್ರರಂಗ ದ 9 ದಶಕಗಳ ಇತಿಹಾಸಕ್ಕೆ ಕಪ್ಪುಚುಕ್ಕೆ ಆಗಬೇಡಿ' ಅಂತ ಮನವಿ ಮಾಡಿದರು. ಆದರೆ ಇದಕ್ಕೆ ಅನೇಕ ನಟಿಯರು ಶೋಷಣೆ ಎಂದರೆ ಕೇವಲ ಲೈಂಗಿಕ ಶೋಷಣೆಯಲ್ಲ. ನಾನಾ ರೂಪದಲ್ಲಿ ಸ್ತ್ರೀಯರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಆರೋಪಿಸಿದರು.

→ 4

ಚಿತ್ರರಂಗದಲ್ಲಿ ಕೆಲಸ ಮಾಡುವ ಮಹಿಳೆಯರ ರಕ್ಷಣೆಗೆ ನಾವು ಸದಾ ಬದ್ಧವಾಗಿರುತ್ತೇವೆ. ಮಹಿಳಾ ಆಯೋಗದ ಅಧ್ಯಕ್ಷರು ಸೂಚಿಸಿರುವಂತೆ ಲೈಂಗಿಕ ದೌರ್ಜನ್ಯ ತಡೆ ಸಮಿತಿ ಮಾಡಲು ಚಿತ್ರರಂಗದ ಎಲ್ಲ ಅಂಗ ಸಂಸ್ಥೆಗಳ ಜತೆ ಚರ್ಚಿಸುತ್ತೇವೆ. ಇದಕ್ಕೆ 15 ದಿನ ಕಾಲಾವಕಾಶ ಕೇಳಿದ್ದೇವೆ. ಲೈಂಗಿಕ ದೌರ್ಜನ್ಯ ತಡೆಯುವ ನಿಟ್ಟನಲ್ಲಿ ಸಮಿತಿ ಮಾಡಲು ಕ್ರಮವಹಿಸುತ್ತೇವೆ.

– ಎನ್.ಎಂ ಸುರೇಶ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ

ಚಿತ್ರರಂಗ ಮೊದಲು ಉದ್ಯಮವಾಗಿ ರೂಪುಗೊಳ್ಳಬೇಕು. ಉದ್ಯಮ ಎನಿಸಿಕೊಂಡಾಗ ಎಲ್ಲ ಸೌಲಭ್ಯಗಳು ದೊರಕುತ್ತವೆ. ಹಾಗಾಗಿ ಅದರತ್ತ ನಮ್ಮ ಗುರಿ ಇರಬೇಕು. ಚಿತ್ರರಂಗವನ್ನು ಬೆಳೆಸಬೇಕು. ಮಹಿಳೆಯರಿಗೆ ರಕ್ಷಣೆ ಸಿಗುವಂತೆ ನೋಡಿಕೊಳ್ಳಬೇಕು.

– ತಾರಾ ಅನುರಾಧಾ, ನಟಿ

ಕನ್ನಡ ಚಿತ್ರರಂಗದಲ್ಲಿ ಈ ರೀತಿಯ ಸಮಿತಿ ಇಲ್ಲ. ಹೀಗಾಗಿ ಸಮಿತಿ ರಚನೆಯ ಅವಶ್ಯಕತೆಯಿದೆ. ಆದರೆ ಫೈರ್ ಹೆಸರಿನ ಸಮಿತಿ ಮಾಡುವ ಬಗ್ಗೆ ಪರ ವಿರೋಧ ವ್ಯಕ್ತವಾಗಿದೆ. ಹೀಗಾಗಿ ಮುಂದಿನ 15 ದಿನಗಳಲ್ಲಿ ಫಿಲ್ಮ್ ಚೇಂಬರ್ ಹಾಗೂ ಫೈರ್ ಕಮಿಟಿಯವರು ಚರ್ಚೆ ಮಾಡಿ ತಿಳಿಸಲು ಸೂಚಿಸಲಾಗಿದೆ.

– ನಾಗಲಕ್ಷ್ಮಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

ಬಿಸಿ ಏರಿದ ಬಿ.ಸಿ. ರೋಡ್

ಮಂಗಳೂರು: ಈದ್ ಆಚರಣೆಗೆ ಸಂಬಂಧಿಸಿ ವಿಎಚ್‌ಪಿ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್ ವೆಲ್ ನೀಡಿದ ಹೇಳಿಕೆ ಹಾಗೂ ಅದಕ್ಕೆ ಪ್ರತಿಯಾಗಿ ಬಂಟ್ವಾಳ ಪುರಸಭೆಯ ಮಾಜಿ ಅಧ್ಯಕ್ಷ ಮಹಮ್ಮದ್ ಶರೀಫ್ ನೀಡಿದ ಹೇಳಿಕೆಗಳು ಬಿ.ಸಿ.ರೋಡ್‌ನಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ನಾಗಮಂಗಲದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ನಡೆದ ಗಲಭೆ ಖಂಡಿಸಿ ಮಂಗಳೂರಿನಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆ ವೇಳೆ ಶರಣ್ ಪಂಪ್‌ವೆಲ್, 'ಹಿಂದೂಗಳು ಮನಸು ಮಾಡಿದರೆ ಈದ್ ಮೆರವಣಿಗೆ ಅಸಾಧ್ಯ' ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಯಾಗಿ ಹೇಳಿಕೆ ನೀಡಿದ್ದ ಮಹಮ್ಮದ್ ಶರೀಫ್ 'ತಾಕತ್ತಿದ್ದರೆ ಬಿ.ಸಿ. ರೋಡ್‌ಗೆ ಬನ್ನಿ ಎಂದು ಸವಾಲೆಸೆದಿದ್ದರು.

ಮುನಿರತ್ನ ವಿರುದ್ಧ ಕ್ರಮ ಒಕ್ಕಲಿಗರ ಒತ್ತಡ

ಬೆಂಗಳೂರು: ಜಾತಿ ನಿಂದನೆ ಆರೋಪ ಎದುರಿಸಿ ಬಂಧನಕ್ಕೆ ಒಳಗಾಗಿರುವ ಶಾಸಕ ಮುನಿರತ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಸಮುದಾಯದ ಸಚಿವರು ಹಾಗೂ ಶಾಸಕರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಹುಬ್ಬಳ್ಳಿ-ಪುಣೆ ಮಧ್ಯೆ ವಂದೇ ಭಾರತ್ ಚಾಲನೆ

ಹುಬ್ಬಳ್ಳಿ: ಹುಬ್ಬಳ್ಳಿ-ಪುಣೆ ವಂದೇ ಭಾರತ್ ರೈಲಿಗೆ ಪ್ರಧಾನಿ ಮೋದಿ ಸೋಮವಾರ ವರ್ಚುವಲ್ ಮೂಲಕ ಚಾಲನೆ ನೀಡಿದರು. ಹುಬ್ಬಳ್ಳಿ-ಪುಣೆ-ಹುಬ್ಬಳ್ಳಿ ಮಧ್ಯೆ ಸಂಚರಿಸುವ ವಂದೇ ಭಾರತ್ ರೈಲು ಎರಡು ವಾಣಿಜ್ಯ ಮಹಾನಗರಗಳನ್ನು ಸಂಪರ್ಕಿಸುವ ಕೊಂಡಿಯಾಗಿದೆ. ಇದು ಕರ್ನಾಟಕದ 10ನೇ ವಂದೇ ಭಾರತ್ ರೈಲಾಗಿದೆ. ಈ ರೈಲು ಕೇವಲ 8.5 ಗಂಟೆಗಳಲ್ಲಿ 557 ಕಿ.ಮೀ ಕ್ರಮಿಸುತ್ತದೆ. ಇತರ ರೈಲುಗಳಿಗೆ ಹೋಲಿಸಿದರೆ 3 ಗಂಟೆಗಳ ಪ್ರಯಾಣದ ಸಮಯ ಕಡಿಮೆ ಮಾಡುತ್ತದೆ.

ಸಮಾಚಾರ ಸಣ್ಣದಲ್ಲ

ನೆಕ್ಕುಂಟಿ ನಾಗರಾಜ್‌ಗೆ ಜಾಮೀನು ಮಂಜೂರು

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ (ಕೆಎಂವಿಎಸ್‌ಟಿಡಿಸಿಎಲ್) ಬಹುಕೋಟಿ ಹಣ ದುರ್ಬಳಕೆ ಪ್ರಕರಣದಲ್ಲಿ ಮಾಜಿ ಸಚಿವ ನಾಗೇಂದ್ರ ಆಪ್ತ ನೆಕ್ಕುಂಟಿ ನಾಗರಾಜ್‌ಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಇಡೀ ಪ್ರಕರಣದಲ್ಲಿ ಜಾಮೀನು ಪಡೆದಿರುವ ಮೊದಲ ಆರೋಪಿ ನಾಗರಾಜ್ ಆಗಿದ್ದಾರೆ. ಸಿಐಡಿಯ ವಿಶೇಷ ತನಿಖಾ ದಳದಿಂದ (ಎಸ್‌ಐಟಿ) ತನಿಖೆ ನಡೆದಿರುವ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ಕೋರಿ ನೆಕ್ಕುಂಟಿ ನಾಗರಾಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ. ನೆಕ್ಕುಂಟಿ ನಾಗರಾಜ್ ಅವರು 1 ಲಕ್ಷ ರು.. ಮೌಲ್ಯದ ವೈಯಕ್ತಿಕ ಬಾಂಡ್, ಇಬ್ಬರ ಭದ್ರತೆ ಒದಗಿಸಬೇಕು. ವಿಚಾರಣಾಧೀನ ನ್ಯಾಯಾಲಯ ವಿನಾಯಿತಿ ನೀಡದ ಹೊರತು ವಿಚಾರಣೆಯ ಎಲ್ಲಾ ದಿನ ನ್ಯಾಯಾಲಯದಲ್ಲಿ ಹಾಜರಿರಬೇಕು. ಪ್ರಾಸಿಕ್ಯೂಷನ್ ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು. ಇಂಥದ್ದೇ ಪ್ರಕರಣದಲ್ಲಿ ಭಾಗಿಯಾಗಬಾರದು. ಪ್ರಕರಣ ವಿಲೇವಾರಿಯಾಗುವವರೆಗೆ ನ್ಯಾಯಾಲಯದ ಅನುಮತಿ ಪಡೆಯದೇ ವ್ಯಾಪ್ತಿ ತೊರೆಯುವಂತಿಲ್ಲ ಎಂಬ ಷರತ್ತುಗಳನ್ನು ವಿಧಿಸಿದೆ.

ಎಫ್‌ಐಆರ್ ರದ್ದತಿಗೆ ಹೈಕೋರ್ಟ್ ನಕಾರ

ಬೆಂಗಳೂರು: ಬಗರ್‌ಹುಕುಂ ಸಾಗುವಳಿ ಭೂ ಮಂಜೂರಾತಿ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಮಾಜಿ ಶಾಸಕ ಕೆ ಎಸ್ ಲಿಂಗೇಶ್ ಸೇರಿ 9 ಮಂದಿಯ ವಿರುದ್ಧ ಹಾಸನ ಜಿಲ್ಲೆಯ ಬೇಲೂರು ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ. ಬಗರ್ ಹುಕುಂ ಸಾಗುವಳಿ ಸಮಿತಿಯ ಮಾಜಿ ಅಧ್ಯಕ್ಷ ಕೆ ಎಸ್ ಲಿಂಗೇಶ್, ಸಮಿತಿಯ ಮಾಜಿ ಸದಸ್ಯರಾದ ಜಿ ಕೆ ಕುಮಾರ್, ಶೈಲಾ ಮೋಹನ್, ಟಿ.ಆರ್. ರಮೇಶ್, ಪರ್ವತಗೌಡ, ಎಂ.ಆರ್. ಚೇತನಾ, ಈಶ್ವರ್ ಪ್ರಸಾದ್, ಎಸ್.ಎನ್. ಲಿಂಗೇಶ್ ಮತ್ತು ರಂಗನಾಥ್ ಅವರು ತಮ್ಮ ವಿರುದ್ಧದ ಎಫ್‌ಐಆರ್ ರದ್ದತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಜಾಮಾಡಿದೆ. ಬೇಲೂರು ತಾಲೂಕಿನಲ್ಲಿ 2,750 ಎಕರೆ ಭೂಮಿಯನ್ನು 1,430 ಮಂದಿ ನಕಲಿ ಮತ್ತು ಅಕ್ರಮ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. ತಾಲ್ಲೂಕು ಬಗರ್‌ಹುಕುಂ ಸಾಗುವಳಿ ಸಮಿತಿ ಅಧ್ಯಕ್ಷರಾಗಿದ್ದ ಮೊದಲ ಆರೋಪಿ ಮಾಜಿ ಶಾಸಕ ಲಿಂಗೇಶ್ 750 ಎಕರೆಗಿಂತ ಹೆಚ್ಚಿನ ಪ್ರಮಾಣದ ಸರಕಾರಿ ಜಮೀನುಗಳ ಅನುದಾನವನ್ನು ಅನುಮೋದಿಸಿದ್ದಾರೆ. ಆರೋಪಿಗಳೆಲ್ಲರೂ ಅಧಿಕಾರಿಗಳ ಜತೆ ಶಾಮೀಲಾಗಿ ತಮ್ಮ ಅಧಿಕಾರ ಮತ್ತು ಸ್ಥಾನ ದುರ್ಬಳಕೆ ಮಾಡಿಕೊಂಡಿದ್ದಾರೆ. ನಕಲಿ ದಾಖಲೆ ದೃಷ್ಟಿಸಲು ಸಹರಿಸುವ ಮೂಲಕ ಅಧಿಕಾರಿಗಳು ಭಾಗಿಯಾಗಿದ್ದು, ಸರಕಾರಕ್ಕೆ ವಂಚಿಸುವ ಉದ್ದೇಶ ದಿಂದ ಒಳಸಂಚು ನಡೆಸಿದ್ದಾರೆ. ಮಾಜಿ ಶಾಸಕ ವೈ ಎನ್ ರುದ್ರೇಶ್‌ಗೌಡ ಅಕ್ರಮ ವಹಿವಾಟಿನ ಭಾಗವಾಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಗೌರಿ ಲಂಕೇಶ್ ಕೊಲೆ: ನಾಲ್ವರಿಗೆ ಜಾಮೀನು

ಬೆಂಗಳೂರು: ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಪ್ರಕರಣದ ನಾಲ್ವರು ಆರೋಪಿಗಳಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಈ ಆದೇಶದಿಂದ ಗೌರಿ ಕೊಲೆ ಪ್ರಕರಣ 18 ಆರೋಪಿಗಳ ಪೈಕಿ 8 ಮಂದಿಗೆ ನ್ಯಾಯಾಲಯದಿಂದ ಜಾಮೀನು ಸಿಕ್ಕಂತಾಗಿದೆ. ಪ್ರಕರಣದಲ್ಲಿ 6ನೇ ಆರೋಪಿಯಾಗಿರುವ ಬೆಳಗಾವಿಯ ಭರತ್ ಜಯವಂತ್ ಕುರಾನೆ, 9ನೇ ಆರೋಪಿ ಮಹಾ

ರಾಷ್ಟ್ರದ ಸತಾರದ ಸುಧನ್ವ ಗೊಂಧಾಲೇಕರ್, 13ನೇ ಆರೋಪಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಸುಜಿತ್ ಕುಮಾರ್, 16ನೇ ಆರೋಪಿ ಮಹಾ ರಾಷ್ಟ್ರದ ಔರಂಗಾಬಾದ್‌ನ ಶ್ರೀಕಾಂತ್ ಪಂಗಾರ್ಕರ್ ಸಲ್ಲಿಸಿದ್ದ ಜಾಮೀನು ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಷರತ್ತುಗಳು: ಆರೋಪಿಗಳು ತಲಾ ಒಂದು ಲಕ್ಷ ರುಪಾಯಿ ಮೌಲ್ಯದ ವೈಯಕ್ತಿಕ ಬಾಂಡ್, ಇಬ್ಬರ ಭದ್ರತಾ ಖಾತರಿ ಒದಗಿಸಬೇಕು. ವಿಚಾರಣಾಧೀನ ನ್ಯಾಯಾಲಯ ವಿನಾಯಿತಿ ನೀಡದ ಹೊರತು ವಿಚಾರಣೆಯ ಎಲ್ಲಾ ದಿನ ಆರೋಪಿಗಳು ವಿಚಾರಣೆಗೆ ಹಾಜರಾಗಬೇಕು. ಅರ್ಜಿದಾರರು ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಮತ್ತು ಇಂಥಹದ್ದೇ ಆರೋಪದಲ್ಲಿ ಮತ್ತೆ ಭಾಗಿಯಾಗುವಂತಿಲ್ಲ. ಪ್ರಕರಣ ಇತ್ಯರ್ಥವಾಗುವವರೆಗೆ ನ್ಯಾಯಾಲಯ ಅನುಮತಿಸದ ಹೊರತು ಅರ್ಜಿದಾರರು ವಿಚಾರಣಾಧೀನ ನ್ಯಾಯಾಲಯದ ವ್ಯಾಪ್ತಿ ತೊರೆಯುವಂತಿಲ್ಲ. ಈ ಪೈಕಿ ಯಾವುದೇ ಷರತ್ತು ಉಲ್ಲಂಘಿಸಿದರೂ ಪ್ರಾಸಿಕ್ಯೂಷನ್ ಜಾಮೀನು ರದ್ದತಿಗೆ ಕೋರಬಹುದು.

ನ್ಯಾಯಾಲಯದ ಆದೇಶದಲ್ಲೇನಿದೆ..?: ಘಟನೆ ನಡೆದ ಸ್ಥಳದಲ್ಲಿ ಅರ್ಜಿದಾರರು ಇರಲಿಲ್ಲ. ಎರಡನೇ ಆರೋಪಿ ಪರಶುರಾಮ್ ವಾಘ್ಮೋರೆ ಮತ್ತು 3ನೇ ಆರೋಪಿ ಗಣೇಶ್ ಮಿಸ್ಕಿನ್ ಕೊಲೆಮಾಡಿದ ಆರೋಪಿಗಳಾಗಿದ್ದಾರೆ. ಉಳಿದವರ ಜತೆ ಸೇರಿ ಕೊಲೆಗೆ ವಾಹನ, ಶಸ್ತ್ರಾಸ್ತ್ರ ಪೂರೈಕೆ ಇತ್ಯಾದಿ ಮೂಲಕ ಪಿತೂರಿ ನಡೆಸಿರುವ ಆರೋಪ ಅರ್ಜಿದಾರರ ವಿರುದ್ಧವಿದೆ. ಇದೇ ಆರೋಪ ಈಚೆಗೆ ಜಾಮೀನು ಪಡೆದಿದ್ದ ಅಮಿತ್ ದಿಗ್ವೇಕರ್, ಎಚ್.ಎಲ್. ಸುರೇಶ್, ಎನ್.ಮೋಹನ್ ನಾಯಕ್ ಮತ್ತು ಕೆ.ಟಿ.ನವೀನ್ ಕುಮಾರ್ ವಿರುದ್ಧವಿತ್ತು.

PUBLIC NOTICE

This is to inform the General Public that **GEETHAMANI H.S W/o Late Ramanujam,** No.46, 6th Cross, R K Layout, Near D G Hospital, Padmanabhanagar, Bangalore City - 560070. she has lost the original Sale deed, Document No.SNo.KEN-01-00745-2005-06, dated 06-04-2005, C.D.No.KEND200, and also has lodged Police Complaint in Bangalore City Police, vide lost report No.**1183961/2024**, dated **08/08/2024**, In case anybody find said Documents, shall inform the above mentioned Address / below mentioned Contact Number : 9900938536.

ಗಾಂಜಾ ಸೇದಬೇಡ ಎಂದಿದ್ದಕ್ಕೆ ಹಲ್ಲೆ

ಯುವಕನ ಬೆತ್ತಲೆಗೊಳಿಸಿ ನಡುರಸ್ತೆಯಲ್ಲೆ ಅಟ್ಟಾಡಿಸಿ ಹೊಡೆದ ರೌಡಿಶೀಟರ್

ಬೆಂಗಳೂರು: ಸುಂಕದಕಟ್ಟೆಯಲ್ಲಿ ಯುವಕನೊಬ್ಬನ ಮೇಲೆ ರೌಡಿಶೀಟರ್ ಅಟ್ಟಹಾಸ ಮೆರೆದಿದ್ದು, ಯುವಕನ ಬಟ್ಟೆ ಬಿಚ್ಚಿ ಹಲ್ಲೆ ಮಾಡಿದ್ದಲ್ಲದೇ, ಬಳಿಕ ಬೆತ್ತಲೆ ಮಾಡಿ ವಿಡಿಯೊ ರೆಕಾರ್ಡ್ ಮಾಡಿ ವಿಡಿಯೊ ಹರಿಯಬಿಟ್ಟಿದ್ದಾನೆ.

ರಾಜಗೋಪಾಲ ನಗರದ ರೌಡಿಶೀಟರ್ ಪವನ್ ಅಲಿಯಾಸ್ ಕಡಬು ಹಲವು ಕ್ರೈಂ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ತುಮಕೂರು ಮೂಲದ ಕಡಬು ಇತ್ತೀಚೆಗೆ ಜೈಲಿನಿಂದ ಬಿಡುಗಡೆಯಾಗಿದ್ದ. ಆತನ ವಿರುದ್ಧ ಕಾಮಾಕ್ಷಿಪಾಳ್ಯ ಠಾಣೆಯಲ್ಲೂ ಒಂದು ಪ್ರಕರಣವಿದ್ದು, ವಾರಂಟ್ ಕೂಡ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಕಾಮಾಕ್ಷಿಪಾಳ್ಯ ಪೊಲೀಸರು ಹುಡುಕಾಟ ನಡೆಸುತ್ತಿದ್ದರು. ಆದರೆ ಪವನ್ ಅಲಿಯಾಸ್ ಕಡಬು ಪೊಲೀಸರ ಕೈಗೆ ಸಿಗದೆ ಬೆಂಗಳೂರಿನಲ್ಲಿ ಓಡಾಡಿಕೊಂಡಿದ್ದ.

ಅಪರಾಧ ಸುದ್ದಿಗಳು

ಭಾನುವಾರ ಮಧ್ಯರಾತ್ರಿ ಯುವಕನನ್ನು ಹಿಡಿದು ಬಟ್ಟೆಬಿಚ್ಚಿ ಹಲ್ಲೆ ಮಾಡಿದ್ದಲ್ಲದೆ, ಬೆತ್ತಲೆಯಲ್ಲಿಯೇ ಮನೆಗೆ ಓಡಿಸಿ ವಿಡಿಯೊ ರೆಕಾರ್ಡ್ ಮಾಡಿ ಹರಿಬಿಟ್ಟಿದ್ದಾನೆ. ಹಲ್ಲೆಗೊಳಗಾದ ಯುವಕ ಕಾಮಾಕ್ಷಿಪಾಳ್ಯ ಪೊಲೀಸರ ಮಾಹಿತಿದಾರ ಎಂದು ಹೇಳಲಾಗಿತ್ತು. ಈ ಹಿಂದೆ ಗಾಂಜಾ ಸೇದುವ ವಿಚಾರಕ್ಕೆ ಯುವಕ, ಪವನ್ ಕಡವುಗೆ ಬುದ್ಧಿಹೇಳಿದ್ದ. ಗಾಂಜಾ ಸೇದಬೇಡ ಅಂದಿದ್ದ. ಇದೇ ವಿಚಾರಕ್ಕೆ ಯುವಕನನ್ನು ಹುಡುಕಿ ಬೆತ್ತಲೆ ಮಾಡಿ ಹಲ್ಲೆಮಾಡಿದ್ದಾನೆ ಎನ್ನಲಾಗುತ್ತಿದೆ. ಇನ್ನು ವಿಡಿಯೊ ಮಾಧ್ಯಮಗಳಲ್ಲಿ ಬರುವರೆಗೂ ಈ ವಿಚಾರವೇ ಕಾಮಾಕ್ಷಿಪಾಳ್ಯ ಪೊಲೀಸರಿಗೆ ತಿಳಿದಿರಲಿಲ್ಲ ಎನ್ನಲಾಗಿದೆ.

ಹಳೇ ವಿಡಿಯೊ ಹರಿಬಿಟ್ಟ ರೌಡಿಶೀಟರ್ ಸ್ನೇಹಿತರು: ಕಾಮಾಕ್ಷಿಪಾಳ್ಯ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬನಿಗೆ ಹಲ್ಲೆ ಮಾಡಿ ಬೆತ್ತಲೆಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತ ಪಶ್ಚಿಮ ವಿಭಾಗ ಡಿಸಿಪಿ ಗಿರೀಶ್ ಹೇಳಿಕೆ ನೀಡಿದ್ದಾರೆ. ಭಾನುವಾರ ರಾತ್ರಿ ಘಟನೆ ನಡೆದಿದೆ. ರಾಜಗೋಪಾಲ್ ನಗರ ರೌಡಿ ಶೀಟರ್ ಪವನ್ ಎಂಬಾತ ವಿಶ್ವಾಸ್ ಎಂಬುವವನಿಗೆ ಹೊಡೆದಿದ್ದಾನೆ. ವಿಶ್ವಾಸ್ ಮತ್ತು ಆತನ ಸ್ನೇಹಿತರು ಪವನ್ ಅಲಿಯಾಸ್ ಕಡಬು ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದರು ಎಂಬ ಕೋಪಕ್ಕೆ ಹಲ್ಲೆ ನಡೆಸಿದ್ದಾನೆ. ಹಲ್ಲೆ ನಡೆದ ಕೆಲವೇ ಗಂಟೆಗಳಲ್ಲಿ ಪವನ್ ಇನ್ನೊಬ್ಬನಿಗೆ ಹೊಡೆದಿದ್ದ ಒಂದು ತಿಂಗಳ ಹಳೇ ವಿಡಿಯೋ ವೈರಲ್ ಆಗಿದೆ. ಅರ್ಜುನ್ ಎಂಬಾತನಿಗೆ ಬಟ್ಟೆ ಬಿಚ್ಚಿ ಹೊಡೆದ ವಿಡಿಯೊ ಆಚೆ ಬಂದಿದೆ. ಪವನ್ ಸ್ನೇಹಿತರೇ ಇದನ್ನು ಲೀಕ್ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಪವನ್‌ಗಾಗಿ ಹುಡುಕುತಿದ್ದೇವೆ. ಜತೆಗೆ ವೈರಲ್ ಆದ ವಿಡಿಯೋದಲ್ಲಿ ಹೊಡೆಸಿ ಕೊಂಡಿರುವ ವ್ಯಕ್ತಿಯನ್ನು ಹುಡುಕುತಿದ್ದೇವೆ. ಒಂದು ತಿಂಗಳಾದರೂ ಹಲ್ಲೆ ಸಂಬಂಧ ಯಾರು ದೂರು ನೀಡಿಲ್ಲ. ಇಬ್ಬರು ಕೆಟ್ಟ ಚಾಳಿ ಇರುವವರು ಎಂಬುದು ಗೊತ್ತಾಗಿದೆ. ಸದ್ಯ ವಿಶ್ವಾಸ್‌ನಿಂದ ದೂರು ಪಡೆದು ಕ್ರಮಕ್ಕೆ ಮುಂದಾಗಿದ್ದೇವೆ ಎಂದು ಮಾಹಿತಿ ನೀಡಿದ್ದಾರೆ.

ವ್ಯಕ್ತಿ ಸಾವಿಗೆ ಪೊಲೀಸ್ ಕಾರಣ: ಆರೋಪ

ಕೋಣನಕುಂಟೆ ಪೊಲೀಸರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ವ್ಯಕ್ತಿಯೊಬ್ಬನ ಸಾವಿಗೆ ಪೊಲೀಸ್ ಇನ್‌ಸ್ಪೆಕ್ಟರ್ ಕಾರಣ ಎಂದು ಆರೋಪಿಸಿರುವ ಮಹಿಳೆಯೊಬ್ಬರು ಮೇಲಾಧಿಕಾರಿಗಳ ಮೊರೆಹೋಗಿದ್ದಾರೆ.

ಜಮೀನು ವಿಚಾರವಾಗಿ ರಾಮಸ್ವಾಮಿ ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಠಾಣೆಯಲ್ಲಿ ವಿಚಾರಣೆ ನೆಪದಲ್ಲಿ ಮಾರಣಾಂತಿಕ ಹಲ್ಲೆ ನಡೆಸಿದ್ದರು. ಪೊಲೀಸರ ಹೊಡೆತದಿಂದಲೇ ರಾಮಸ್ವಾಮಿ ಸಾವನ್ನಪ್ಪಿದ್ದಾರೆ ಎಂದು ಮೃತಳ ಪತ್ನಿ ಮುನಿಯಮ್ಮ ಆರೋಪ ಮಾಡಿದ್ದಾರೆ. ಪತಿಯ ಮೈಮೇಲಿನ ಗಾಯಗಳೇ ಎಲ್ಲವನ್ನೂ ಹೇಳುತ್ತಿದೆ. ಈ ಕೃತ್ಯ ಎಸಗಿರುವ ಕೋಣನಕುಂಟೆ ಠಾಣೆಯ ಇನ್‌ಸ್ಪೆಕ್ಟರ್ ಪಾಪಣ್ಣ ವಿರುದ್ಧ ಕ್ರಮ ಕೈಗೊಳ್ಳುವಂತೆ ಮುನಿಯಮ್ಮ ಒತ್ತಾಯಿಸಿದ್ದಾರೆ.

ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ: ಜಮೀನು ವಿವಾದ ಹಿನ್ನೆಲೆಯಲ್ಲಿ ಶಿವಕುಮಾರ್ ಎಂಬಾತ ರಾಮಸ್ವಾಮಿ ವಿರುದ್ಧ ದೂರು ನೀಡಿದ್ದರು. ದೂರನ್ನು ಪರಿಗಣಿಸಿದ ಪೊಲೀಸರು ಜಮೀನಿನ ಬಳಿ ತೆರಳಿ ರಾಮಸ್ವಾಮಿಯನ್ನು ವಶಕ್ಕೆ ಪಡೆಯಲು ಮುಂದಾಗಿದ್ದರು. ಬಂಧಿಸಲು ಹೋದಾಗ ರಾಮಸ್ವಾಮಿಯ ಪತ್ನಿ ಹಾಗೂ ಮಗಳು ಅಡ್ಡ ಬಂದಿದ್ದರು. ಈ ವೇಳೆ ತಮ್ಮನ್ನು ವಿವಸ್ತ್ರಗೊಳಿಸಿ ಹಲ್ಲೆಗೆ ಯತ್ನಿಸಿದ್ದಾರೆಂದು ಮುನಿಯಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನಂತರ ರಾಮಸ್ವಾಮಿ ಹಾಗೂ ಆತನ ಮಗಳನ್ನು ಠಾಣೆಗೆ ಕರೆ ತಂದು ಬಡಿದಿದ್ದಾರೆ. ಕುಸಿದು ಬಿದ್ದವನನ್ನು ತಕ್ಷಣ ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದರು. ನಂತರ ನ್ಯಾಯಾಲಯಕ್ಕೆ ಹೋಗುವ ಮುನ್ನ , ಪೊಲೀಸರು ಹೊಡೆದರು ಎಂದು ಬಾಯ್ಬಿಟ್ಟರೆ ನಿನ್ನ ಹೆಂಡತಿ– ಮಕ್ಕಳನ್ನು ಶಾಶ್ವತವಾಗಿ ಜೈಲಿಗೆ ಹಾಕುವುದಾಗಿಯೂ ಬೆದರಿಸಿದ್ದರು. ಆದರೆ ನ್ಯಾಯಾಧೀಶರ ಮುಂದೆ ನಿಲ್ಲಿಸಿದಾಗ ರಾಮಸ್ವಾಮಿ ಏಕಾಏಕಿ ಕುಸಿದು ಬಿದ್ದಿದ್ದ . ಕೂಡಲೇ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಭಾನುವಾರ ಚಿಕಿತ್ಸೆ ಫಲಿಸದೇ ಆತ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಇನ್ನು ಈ ಸಂಬಂಧ ಮುಖ್ಯಮಂತ್ರಿ ಹಾಗು ನಗರ ಪೊಲೀಸ್ ಆಯುಕ್ತರಿಗೂ ದೂರು ನೀಡಲಾಗಿದೆ.

ಎಸಿಪಿ ನೇತೃತ್ವದಲ್ಲಿ ತನಿಖೆ ಪ್ರಾರಂಭ: ಈ ಪ್ರಕರಣ ಸಂಬಂಧ ಜಯನಗರ ಎಸಿಪಿ ನಾರಾಯಣಸ್ವಾಮಿ ನೇತೃತ್ವದಲ್ಲಿ ತಂಡ ರಚನೆ ಮಾಡಿ ಮಾಹಿತಿ ಕಲೆಹಾಕುವ ಕೆಲಸ ಮುಂದುವರಿದಿದೆ. ನಿಜಕ್ಕೂ ಪೊಲೀಸರ ಏಟಿನಲ್ಲಿ ರಾಮಸ್ವಾಮಿ ಮೃತಪಟ್ಟನಾ ಎಂಬುದು ತನಿಖೆಯಿಂದಷ್ಟೆ ತಿಳಿಯಲಿದೆ.

ಹಳೇ ದ್ವೇಷ: ಚಾಕುವಿನಿಂದ ಇರಿದು ಹತ್ಯೆ

ಬೆಂಗಳೂರು: ಚಾಕುವಿನಿಂದ ಇರಿದು ಯುವಕನನ್ನು ರೌಡಿಶೀಟರ್ ಹತ್ಯೆ ಮಾಡಿರುವ ಘಟನೆ ಬನಶಂಕರಿ ಕಾವೇರಿ ನಗರದ 8ನೇ ಕ್ರಾಸ್‌ನಲ್ಲಿ ಘಟನೆ ನಡೆದಿದೆ. 21 ವರ್ಷದ ವಿಕ್ರಂ ಕೊಲೆಯಾದ ಯುವಕ. ಹಳೇದ್ವೇಷದ ಹಿನ್ನೆಲೆಯಲ್ಲಿ ರೌಡಿಶೀಟರ್ ವಸೀಂ (28) ಎಂಬಾತ ಕೃತ್ಯವೆಸಗಿದ್ದಾನೆ. ಕೆಲ ವರ್ಷಗಳ ಹಿಂದೆ ಆರೋಪಿ ವಸೀಂ ಮೇಲೆ ವಿಕ್ರಂ ಹಲ್ಲೆ ಮಾಡಿದ್ದ. ಇದೇ ದ್ವೇಷದಿಂದ ಸ್ನೇಹಿತನ ಜತೆ ನಿಂತಿದ್ದಾಗ ಎದೆಗೆ ಇರಿದಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ವಿಕ್ರಂ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಪೊಲೀಸರು ಆರೋಪಿ ವಸೀಂನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳೇ ಸ್ಕೂಟರ್‌ನ ಬಿಡಿಭಾಗಗಳ ಕಳ್ಳತನ

ಬೆಂಗಳೂರು: ಮನೆ ಮುಂದೆ ನಿಲ್ಲಿಸಿದ್ದ ಹಳೇ ಸ್ಕೂಟರ್‌ನ ಬಿಡಿಭಾಗಗಳನ್ನು ಕಳ್ಳನೊಬ್ಬ ಕದ್ದೊಯ್ದ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ. ಸೆಪ್ಟೆಂಬರ್ 14ರಂದು ಬೇಗೂರಿನ ರಾಯಲ್ ಮೆರಿಡಿಯನ್ ಲೇಔಟ್‌ನಲ್ಲಿ ಘಟನೆ ನಡೆದಿದ್ದು, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಒಂದೇ ತಿಂಗಳಿನಲ್ಲಿ ಎರಡೆರಡು ಬಾರಿ ರಾತ್ರಿ ಸಮಯದಲ್ಲಿ ಬಂದಿರುವ ಕಳ್ಳ, ನಿರ್ಭೀತಿಯಿಂದ ದ್ವಿಚಕ್ರ ವಾಹನದ ಭಾಗಗಳನ್ನು ಬಿಚ್ಚಿಕೊಂಡು ಕದ್ದೊಯ್ದಿದ್ದಾನೆ. ಕಳ್ಳನ ಉಪಟಳದಿಂದ ಬೇಸತ್ತ ಸ್ಕೂಟರ್ ಮಾಲೀಕ ಸುಬ್ರಹ್ಮಣ್ಯ ನವ್ಗಿರೆ ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಪೊಲೀಸರ ಗಮನಕ್ಕೆ ತಂದಿದ್ದಾರೆ. ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಪೊಲೀಸರು, ಘಟನೆಯ ಕುರಿತು ಹೆಚ್ಚಿನ ಮಾಹಿತಿ ನೀಡುವಂತೆ ಕೋರಿದ್ದಾರೆ. ಹೆಲ್ಮೆಟ್ ಧರಿಸಿರುವ ವ್ಯಕ್ತಿಯೊಬ್ಬ , ಮುಖಕ್ಕೆ ಮಾಸ್ಕ್ ಹಾಕಿಕೊಂಡು, ಮನೆಯ ಗೇಟ್ ತೆಗೆದು ಒಳ ಪ್ರವೇಶಿಸಿದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ನಗರದ ಗೌತಮ್ ಸಮೂಹ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯನ್ನು ಅಯನ ಲೀಗಲ್ ಸಂಸ್ಥೆಯ ನ್ಯಾಯವಾದಿ ಕೌಸ್ತುಭ ಭಾರತೀಪುರಂ, ಡಾ.ಎ.ಟಿ.ಎಸ್. ಗಿರಿ ಅವರು ಉದ್ಘಾಟಿಸಿದರು. ಈ ವೇಳೆ ಸಂಸ್ಥೆಯ ಬಿ.ಎಡ್ ಪ್ರಾಂಶುಪಾಲರಾದ ಪ್ರೊ.ಸತೀಶ್ ಕುಮಾರ್.ಎ.ಟಿ, ಲೀಲಾವತಿ, ಬಿ.ಎಸ್.ಪುಷ್ಪಾಂಜಲಿ ಸೇರಿದಂತೆ ಹಲವರಿದ್ದರು.

ಮದ್ಯಸೇವಿಸಿ ವಾಹನ ಚಾಲನೆ: 870 ಪ್ರಕರಣಗಳು ದಾಖಲು

ಬೆಂಗಳೂರು: ಮದ್ಯ ಸೇವಿಸಿ ವಾಹನ ಚಲಾಯಿಸುವವರ ಮೇಲೆ ಸಮರ ಸಾರಿರುವ ನಗರ ಸಂಚಾರ ಪೊಲೀಸರು ಕಳೆದೊಂದು ವಾರದಲ್ಲಿ ಸಾವಿರಾರು ವಾಹನಗಳನ್ನು ತಪಾಸಣೆ ಮಾಡಿದ್ದಾರೆ. ಸೆಪ್ಟೆಂಬರ್ 9ರಿಂದ 15ರ ವರೆಗೆ ನಗರದಲ್ಲಿ 57,717 ವಾಹನಗಳನ್ನು ತಡೆಗಟ್ಟಿ 870 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಡ್ರಂಕ್ ಅಂಡ್ ಡ್ರೈವ್ ಪ್ರಕರಣ ದಾಖಲಾದರೆ ವಾಹನ ಜಪ್ತಿ ಜತೆಗೆ ನ್ಯಾಯಾಲಯದಲ್ಲಿ ದಂಡ ಪಾವತಿಸಬೇಕಿದೆ. ಸುಮಾರು 10 ಸಾವಿರ ರು.ಗಳಿಂದ ಗರಿಷ್ಠ 25 ಸಾವಿರ ರು.ಗಳವರೆಗೆ ದಂಡ ವಿಧಿಸಬಹುದಾಗಿದೆ.

ದರ್ಶನ್‌ಗೆ ರಾಜಾತಿಥ್ಯ: ಚಾರ್ಜ್‌ಶೀಟ್ ಸಿದ್ಧ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಆರೋಪಿ ನಟ ದರ್ಶನ್‌ಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ರಾಜಾತಿಥ್ಯ ಕೊಟ್ಟ ಪ್ರಕರಣದ ತನಿಖೆ ಮುಕ್ತಾಯವಾಗಿದೆ. ಪ್ರಕರಣದ ಚಾರ್ಜ್‌ಶೀಟ್‌ಗೆ ಪರಪ್ಪನ ಅಗ್ರಹಾರ ಪೊಲೀಸರು ತಯಾರಿ ಮಾಡಿಕೊಂಡಿದ್ದಾರೆ.

ದರ್ಶನ್ ಪರಪ್ಪನ ಅಗ್ರಹಾರ ಜೈಲಲ್ಲಿರುವಾಗ ರಾಜಾತಿಥ್ಯದ ಫೋಟೋಗಳು ವೈರಲ್ ಆಗಿತ್ತು. ಆದಾದ ಬಳಿಕ ದರ್ಶನ್ ವಿರುದ್ಧ ಎರಡು ಎಫ್ ಐಆರ್ ಹಾಗೂ ಪರಪ್ಪನ ಅಗ್ರಹಾರ ಜೈಲು ಅಧಿಕಾರಿಗಳ ವಿರುದ್ಧ ಒಂದು ಪ್ರಕರಣ ದಾಖಲಾಗಿತ್ತು. ಈ 3 ಪ್ರಕರಣಗಳನ್ನು ಮೂವರು ಅಧಿಕಾರಿಗಳು ತನಿಖೆ ಮಾಡಿ ಮುಗಿಸಿದ್ದಾರೆ. ಹುಳಿಮಾವು ಇನ್‌ಸ್ಪೆಕ್ಟರ್, ನಟ ದರ್ಶನ್‌ಗೆ ಸಿಗರೇಟ್, ಟೀ, ಕುರ್ಚಿ ಕೊಟ್ಟಿದ್ಯಾರು ಎಂಬುದರ ಬಗ್ಗೆ ತನಿಖೆ ಮಾಡಿದ್ದಾರೆ. ದರ್ಶನ್‌ಗೆ ಕುರ್ಚಿ, ಟೀ, ಸಿಗರೇಟ್ ಅಧಿಕಾರಿಗಳೇ ವಿಲ್ಸನ್ ಗಾರ್ಡನ್ ನಾಗನ ಮೂಲಕ ಪೂರೈಸಿರುವುದು ತಿಳಿದು ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇನ್ನೂ ಬೇಗೂರು ಇನ್‌ಸ್ಪೆಕ್ಟರ್ ರೌಡಿಶೀಟರ್ ಮಗ ಸತ್ಯನಿಗೆ ವಿಡಿಯೊ ಕಾಲ್ ಮಾಡಿದ್ದಾಗ ಆರೋಪಿ ದರ್ಶನ್ ಮಾತನಾಡಿದ ಬಗ್ಗೆ ತನಿಖೆ ಮಾಡಿ ಮುಗಿಸಿದ್ದಾರೆ. ಆರೋಪಿ ವಿಡಿಯೋ ಕಾಲ್‌ಗೆ ಬಳಸಿದ ಮೊಬೈಲ್ ಅಕ್ರಮವಾಗಿ ಅಧಿಕಾರಿಗಳ ಮೂಲಕ ಪಡೆದುಕೊಂಡಿದ್ದು ತನಿಖೆಯ ವೇಳೆ ತಿಳಿದು ಬಂದಿದೆ ಮೂರನೇ ಪ್ರಕರಣವನ್ನು ಎಲೆಕ್ಟ್ರಾನಿಕ್ ಸಿಟಿ ಎಸಿಪಿ ತನಿಖೆ ಮಾಡಿದ್ದರು. ತನಿಖೆಯಲ್ಲಿ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯನ್ನು ಮೀರಿ ಕೈದಿಗಳನ್ನೇ ಬಳಸಿಕೊಂಡು ಕೆಲಸ ಮಾಡಿರುವುದು ಕಂಡು ಬಂದಿದೆ ಎನ್ನಲಾಗಿದೆ.

ಭೂಗತ ಪಾತಕಿಯ ಸಹಚರ ಶಶಿ ಪೂಜಾರಿಗೆ ಜಾಮೀನು

ಬೆಂಗಳೂರು: ಉಡುಪಿಯ ಉದ್ಯಮಿ ರತ್ನಾಕರ ಡಿ. ಶೆಟ್ಟಿಗೆ ಜೀವ ಬೆದರಿಕೆ ಹಾಕಿದ ಆರೋಪ ಎದುರಿಸುತ್ತಿರುವ ಕುಖ್ಯಾತ ರೌಡಿಶೀಟರ್ ಬನ್ನಂಜೆ ರಾಜನ ಸಹಚರ ಶಶಿ ಪೂಜಾರಿ ಅಲಿಯಾಸ್ ಶಾಡೊ ಅಲಿಯಾಸ್ ಶಶಿ ಕುಮಾರ್‌ಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಈ ಪ್ರಕರಣದಲ್ಲಿ ಜಾಮೀನು ಪಡೆದ 4ನೇ ಆರೋಪಿ ಶಶಿಕುಮಾರ್ ಆಗಿದ್ದಾನೆ. ಬೆಂಗಳೂರಿನ ಜೆ.ಪಿ ನಗರದ ನಿವಾಸಿ ಶಶಿ ಪೂಜಾರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.

ಪ್ರಕರಣದ ವಿವರ: 2019ರ ಮಾರ್ಚ್ 3ರಂದು ಉಡುಪಿಯ ಉದ್ಯಮಿ ರತ್ನಾಕರ ಶೆಟ್ಟಿ ದೂರಿನ ಮೇರೆಗೆ ಬನ್ನಂಜೆ ರಾಜ, ಶಶಿ ಪೂಜಾರಿ ಅಲಿಯಾಸ್ ಶಾಡೊ ಅಲಿಯಾಸ್ ಶಶಿಕುಮಾರ್, ಧನರಾಜ್ ವಿ. ಕೋಟ್ಯಾನ್ ಅಲಿಯಾಸ್ ಧನರಾಜ್ ಪೂಜಾರಿ ಅಲಿಯಾಸ್ ಧನರಾಜ್ ಅಲಿಯಾಸ್ ರಾಕ್, ರವಿಚಂದ್ರ ಪೂಜಾರಿ ಅಲಿಯಾಸ್ ವಿಕ್ಕಿ ಪೂಜಾರಿ, ಧನರಾಜ್ ಸಾಲಿಯಾನ್ ಅಲಿಯಾಸ್ ಧನು ಕೋಳ, ಉಲ್ಲಾಸ್ ಶೆಣೈ ಅಲಿಯಾಸ್ ಉಲ್ಲಾಸ್ ವಿರುದ್ಧ 2019ರಲ್ಲಿ ಉಡುಪಿ ನಗರ ಠಾಣೆಯಲ್ಲಿ ವಿವಿಧ ಕಾಯಿದೆಗಳಡಿ ಪ್ರಕರಣ ದಾಖಲಿಸಲಾಗಿದೆ. ಆನಂತರ ಪ್ರಕರಣ ಮೈಸೂರಿನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದೆ.

ಬನ್ನಂಜೆ ರಾಜ ಸಂಘಟಿತ ಅಪರಾಧ ಸಿಂಡಿಕೇಟ್‌ನ ಕಿಂಗ್‌ಪಿನ್ ಆಗಿದ್ದು, ತನ್ನ ಸಹಚರರಾದ ಶಶಿ ಪೂಜಾರಿ, ಧನರಾಜ್ ಕೋಟ್ಯಾನ್, ರವಿಚಂದ್ರ ಪೂಜಾರಿ, ಧನರಾಜ್ ಮತ್ತು ಉಲ್ಲಾಸ್ ಶೆಣೈ ಮೂಲಕ ಶ್ರೀಮಂತ ಉದ್ಯಮಗಳಿಗೆ ಜೀವ ಬೆದರಿಕೆ ಹಾಕಿ ಹಣ ಸುಲಿಗೆ ಮಾಡಿದ್ದಾನೆ ಎಂದು ಪ್ರಾಸಿಕ್ಯೂಷನ್ ಆಕ್ಷೇಪಿಸಿತ್ತು. ಕಳೆದ ಆಗಸ್ಟ್ 12ರಂದು ಬನ್ನಂಜೆ ರಾಜ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಮೈಸೂರಿನ ಜಿಲ್ಲಾ ಸತ್ರ ನ್ಯಾಯಾಲಯವು ತಿರಸ್ಕರಿಸಿದೆ. ಅಂಕೋಲಾ ಉದ್ಯಮಿ ಆರ್.ಎನ್. ನಾಯಕ್ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಬನ್ನಂಜೆ ರಾಜ ಸದ್ಯ ಬೆಳಗಾವಿಯ ಹಿಂಡಲಗಾ ಜೈನಲ್ಲಿದ್ದಾನೆ.

ಗ್ರಾಮೀಣ ಭಾಗದಲ್ಲಿ ಪ್ರಥಮ ಚಿಕಿತ್ಸೆ ಅರಿವು ಅಗತ್ಯ: ಡಾ. ಶೃತಿ

ಬೆಂಗಳೂರು: ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಎರಡನೇ ಶನಿವಾರದಂದು ವಿಶ್ವ ಪ್ರಥಮ ಚಿಕಿತ್ಸಾ ದಿನ ಆಚರಿಸಲಾಗುತ್ತದೆ. ಜನರಲ್ಲಿ ಪ್ರಥಮ

ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ. ಹೀಗಾಗಿ ಗ್ರಾಮೀಣ ಭಾಗದ ಜನರಿಗೆ ಪ್ರಥಮ ಚಿಕಿತ್ಸೆಯ ಬಗ್ಗೆ ಹೆಚ್ಚು ಅರಿವು ಮೂಡಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ವಾಸವಿ ಆಸ್ಪತ್ರೆಯ ತುರ್ತುನಿಗಾ ಘಟಕದ ಮುಖ್ಯಸ್ಥರಾದ ಡಾ. ಶೃತಿ ಭಾಸ್ಕರನ್ ತಿಳಿಸಿದ್ದಾರೆ.

ನಮ್ಮ ದೈನಂದಿನ ಬದುಕಿನಲ್ಲಿ ಮಾನವನ ಜೀವಕ್ಕೆ ಕುತ್ತು ತರುವ ಅನೇಕ ಸಂದರ್ಭಗಳು ಎದುರಾಗುತ್ತವೆ. ಅಂತಹ ಸಂದರ್ಭದಲ್ಲಿ ನಾವು ಹೇಗೆ ಪ್ರತಿಕ್ರಿಯಿಸಬೇಕು ಮತ್ತು ಅಂತಹ ಸಂದರ್ಭವನ್ನು ಹೇಗೆ ಎದುರಿಸಬೇಕು ಎನ್ನುವುದನ್ನು ನಾವು ಮೊದಲು ತಿಳಿಯಬೇಕು. ಏಕೆಂದ್ರೆ ಘಟನೆ ಸಂಭವಿಸಿದ ನಂತರದ ಒಂದು ಗಂಟೆಯ ಅವಧಿಯನ್ನು ಗೋಲ್ಡನ್ ಸಮಯ/ಸುವರ್ಣ ಸಮಯ ಎಂದು ಕರೆಯಲಾಗುತ್ತದೆ. ಏಕೆಂದರೆ ಆ ಸಮಯದಲ್ಲಿ ಸರಿಯಾದ ಕ್ರಮ ತೆಗೆದುಕೊಂಡಲ್ಲಿ ಮಾತ್ರ ಒಂದು ಜೀವವನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದ್ದಾರೆ.

ಯಾರಿಗಾದರೂ ಗಾಯವಾದಲ್ಲಿ, ಚರ್ಮ ಹರಿದು ರಕ್ತಸ್ರಾವ ಉಂಟಾದಲ್ಲಿ ಕೂಡಲೇ ಪ್ರಥಮ ಚಿಕಿತ್ಸೆ ನೀಡುವುದು ಮುಖ್ಯ. ಒಂದು ವೇಳೆ ಚಿಕಿತ್ಸೆ ತೆಗೆದುಕೊಳ್ಳಲು ವಿಫಲವಾದಲ್ಲಿ ಅದು ದೀರ್ಘಕಾಲದ ಸಮಸ್ಯೆಗೆ ಎಡೆಮಾಡಿಕೊಡುವ ಸಾಧ್ಯತೆಗಳಿರುತ್ತವೆ. ನಮ್ಮ ಕಣ್ಣೆದುರು ಯಾರಾದರು ತಲೆ ಸುತ್ತಿ ಬೀಳುವಂತದ್ದು ಅಥವಾ ಮೆದುಳಿನ ರಕ್ತಸ್ರಾವವಾಗುವುದುಕಂಡುಬಂದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದರು.

ನಾನವನಲ್ಲ, ನಾನವನಲ್ಲ ಎನ್ನುತ್ತಿರುವ ಶಾಸಕ ಮುನಿರತ್ನ

ಜಾತಿನಿಂದನೆ, ಜೀವ ಬೆದರಿಕೆ ಪ್ರಕರಣ: ತನಿಖೆ ತೀವ್ರ | ಜಯದೇವ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ

ಬೆಂಗಳೂರು: ಆಂಧ್ರಕ್ಕೆ ಹೋಗುತ್ತಿದ್ದ ಶಾಸಕ ಮುನಿರತ್ನ ಅವರ ಮೊಬೈಲ್ ನೆಟ್‌ವರ್ಕ್ ಟ್ರ್ಯಾಕ್ ಮಾಡಿ ಬಂಧನ ಮಾಡಲಾಗಿತ್ತು. ಜಾತಿ ನಿಂದನೆ ಹಾಗೂ ಜೀವ ಬೆದರಿಕೆ ಪ್ರಕರಣ ಸಂಬಂಧ ಶಾಸಕ ಮುನಿರತ್ನ ವಿಚಾರಣೆ ತೀವ್ರಗೊಂಡಿದೆ. ಆದರೆ ಶಾಸಕರು ಮಾತ್ರ , ಈ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ ಎನ್ನುವ ಮೂಲಕ 'ನಾನವನಲ್ಲ' ಎನ್ನುತ್ತಿದ್ದಾರೆ ಎನ್ನಲಾಗಿದೆ.

ಮುನಿರತ್ನ ಬಂಧನಕ್ಕೂ ಮೊದಲು ಬಿಬಿಎಂಪಿ ಗುತ್ತಿಗೆದಾರ ಚೆಲುವರಾಜು ಅವರನ್ನು ವೈಯಾಲಿಕಾವಲ್‌ನಲ್ಲಿರುವ ಶಾಸಕರ ಕಚೇರಿಯಲ್ಲಿ ಸ್ಥಳ ಮಹಜರು ನಡೆಸಲಾಗಿತ್ತು. ಈ ವೇಳೆ ಶಾಸಕ ಕೂತು ಬೈದ ಸ್ಥಳ, ಹಲ್ಲೆ ಮಾಡಿದ್ದ ಸ್ಥಳದ ಬಗ್ಗೆ ವಿವರಣೆ ನೀಡಿದ್ದರು. ಆದರೆ ಮುನಿರತ್ನ ಅವರ ಸ್ಥಳ ಮಹಜರು ಪ್ರಕ್ರಿಯೆ ನಡೆದಿಲ್ಲ. ಅದೆಲ್ಲಾದಕ್ಕೂ ಹೆಚ್ಚಾಗಿ ನಾನವನಲ್ಲ ಎಂಬ ಉತ್ತರಕ್ಕೆ ಕಟ್ಟುಬಿದ್ದಿದ್ದಾರೆ.

ಮುನಿರತ್ನಗೆ 35 ಪ್ರಶ್ನೆ ಸಿದ್ಧ: ಶಾಸಕ ಮುನಿರತ್ನಗೆ 35ಕ್ಕೂ ಹೆಚ್ಚು ಪ್ರಶ್ನೆಗಳನ್ನು ಪೊಲೀಸರು ಸಿದ್ಧಪಡಿಸಿದ್ದಾರೆ. ಆದರೆ ಅದಕ್ಕೆ ತಕ್ಕುದಾದ ಸ್ಪಷ್ಟನೆ ಶಾಸಕರಿಂದ ಸಿಗುತ್ತಿಲ್ಲ. ಇನ್ನು ಇದೆಲ್ಲಾ ರಾಜಕೀಯ ಷಡ್ಯಂತ್ರ, ನನ್ನ ಧ್ವನಿಯನ್ನು ತಿರುಚಲಾಗಿದೆ ಎಂಬ ಮಾತಿಗೆ ನಿಂತಿದ್ದಾರೆ. ಸೋಮವಾರ ಅಶೋಕನಗರ ಪೊಲೀಸ್ ಠಾಣೆಗೆ ಫೋರೆನ್ಸಿಕ್ ತಜ್ಞರು ಸಹ ಆಗಮಿಸಿದ್ದರು. ಶಾಸಕ ಮುನಿರತ್ನ ಅವರ ಧ್ವನಿ ಮಾದರಿ ಕೂಡ ಸಂಗ್ರಹಿಸಿದ್ದಾರೆ. ಈ ವಾಯ್ಸ್ ಸ್ಯಾಂಪಲ್‌ನಿಂದ

ಮಾತ್ರ ಆಡಿಯೋ ಅಸಲಿಯತ್ತು ತಿಳಿಯಲಿದೆ.

ಸದ್ಯ ಎರಡು ದಿನದ ಪೊಲೀಸ್ ಕಸ್ಟಡಿ ಅಂತ್ಯವಾಗಲಿದೆ. ಅಷ್ಟರಲ್ಲಿ ಆದಷ್ಟು ಬೇಗ ಮುನಿರತ್ನ ಹೇಳಿಕೆ ಪಡೆಯಬೇಕಿದೆ. ಸೋಮವಾರ ಮುನಿರತ್ನ ವೈದ್ಯಕೀಯ ಪರೀಕ್ಷೆಗಾಗಿ ಜಯದೇವ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆಸ್ಪತ್ರೆಯಲ್ಲಿ ಯಾವುದೇ ತೊಂದರೆ ಇಲ್ಲ ಎಂದು ವೈದ್ಯರು ತಿಳಿಸಿದರು. ಬಳಿಕ ಮುನಿರತ್ನ ಅವರನ್ನು ಅಶೋಕ ನಗರ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು.

ಎಫ್‌ಎಸ್‌ಎಲ್ ವರದಿಗೆ ವಿರುದ್ಧವಾಗಿ ದೋಷಾರೋಪಣೆ: ಹೈಕೋರ್ಟ್ ತರಾಟೆ

ಬೆಂಗಳೂರು: ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಯಲ್ಲಿ ಗಾಂಜಾ ಸೇವನೆಯಾಗಿಲ್ಲ ಎಂದು ಸ್ಪಷ್ಟವಾಗಿದ್ದರೂ ಅದಕ್ಕೆ ವಿರುದ್ಧವಾಗಿ ದೋಷಾರೋಪ ಪಟ್ಟಿ ಸಲ್ಲಿಸುವ ಮೂಲಕ ಯುವಕರಿಬ್ಬರನ್ನು ಕಾನೂನು ಸಂಕಷ್ಟಕ್ಕೆ ದೂಡಿದ್ದ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ. ಅಲ್ಲದೆ, ಇಬ್ಬರೂ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಗೃಹ ಇಲಾಖೆಗೆ ನಿರ್ದೇಶನ ನೀಡಿದೆ.

ಗಾಂಜಾ ಸೇವನೆ ಆರೋಪದಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಹನುಮಂತ ಮತ್ತು ಮಂಜುನಾಥ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ. ಜತೆಗೆ, 2019ರಲ್ಲಿ ಅರ್ಜಿದಾರ ವಿದ್ಯಾರ್ಥಿಗಳನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವರ್ತೂರು ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಮತ್ತು ಸಬ್ ಇನ್‌ಸ್ಪೆಕ್ಟರ್ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹೈಕೋರ್ಟ್ ಆದೇಶಿಸಿದೆ.

ಅರ್ಜಿದಾರರ ವಿರುದ್ಧದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಎರಡನೇ ಎಸಿಎಂಎಂ ನ್ಯಾಯಾಲಯದಲ್ಲಿ ಬಾಕಿಯಿದ್ದ ವಿಚಾರಣಾ ಪ್ರಕ್ರಿಯೆಯನ್ನೂ ನ್ಯಾಯಾಲಯ ರದ್ದುಪಡಿಸಿ ಆದೇಶಿಸಿದೆ. ಅರ್ಜಿದಾರರ ರಕ್ತದ ಮಾದರಿಯನ್ನು ಪರೀಕ್ಷೆಗಾಗಿ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿತ್ತು. ರಕ್ತದಲ್ಲಿ ಗಾಂಜಾ ಅಂಶಗಳು ಪತ್ತೆಯಾಗಿಲ್ಲ ಎಂದು ಪ್ರಯೋಗಾಲಯದ ವರದಿ ಸ್ಪಷ್ಟವಾಗಿ ಹೇಳಿದೆ. ಹೀಗಿದ್ದರೂ, ಅರ್ಜಿದಾರರು ಗಾಂಜಾ ಸೇವಿಸಿರುವುದು ಎಫ್‌ಎಸ್‌ಎಲ್ ವರದಿಯಿಂದ ದೃಢಪಟ್ಟಿದೆ ಎಂದು ಪ್ರಕರಣದ ತನಿಖಾಧಿಕಾರಿಯಾಗಿದ್ದ 2019ರಲ್ಲಿ ಪ್ರೊಬೇಷನರಿ ಸೇವೆಯಲ್ಲಿದ್ದ ವರ್ತೂರು ಠಾಣೆ ಸಬ್‌ಇನ್‌ಸ್ಪೆಕ್ಟರ್ ರಾಜಕುಮಾರ್ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಆ ವರದಿಯನ್ನು ಅಂದಿನ ಇನ್‌ಸ್ಪೆಕ್ಟರ್ ಒಪ್ಪಿದ್ದಾರೆ. ಇದು ಕಾನೂನುಬಾಹಿರ ಕ್ರಮ ಎಂದು ಹೈಕೋರ್ಟ್ ಆದೇಶದಲ್ಲಿ ಹೇಳಿದೆ.

ಅರ್ಜಿದಾರರಿಂದ 15 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಲಾಗಿದೆ. ಆದರೆ, ವಶಪಡಿಸಿಕೊಂಡಿರುವ ಗಾಂಜಾ ಎಲ್ಲಿದೆ, ಏನಾಯಿತು ಎನ್ನುವುದು ನಿಗೂಢವಾಗಿದೆ. ಒಮ್ಮೆ ಮಾದಕವಸ್ತುವನ್ನು ವಶಪಡಿಸಿಕೊಂಡರೆ, ಅದರ ಪಂಚನಾಮೆ, ದಾಸ್ತಾನು ಮಾಡಬೇಕು. ಅದರ ಮಾದರಿಯನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಬೇಕು. ಪ್ರಕರಣದಲ್ಲಿ 15 ಗ್ರಾಂ ಪಂಚನಾಮೆ ಮಾಡಲಾಗಿದೆ ಎಂಬುದು ನಂಬುವಂತಹದ್ದಲ್ಲ. ಅರ್ಜಿದಾರರು ಗಾಂಜಾ ಸೇವನೆ ಮಾಡಿದ್ದರು ಎನ್ನುವುದೂ ಸಹ ಸಮರ್ಥನೀಯವಲ್ಲ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸುತ್ತೋಲೆ ಹೊರಡಿಸಲು ಆದೇಶ

ಮಾದಕವಸ್ತುಗಳನ್ನು ಹೊಂದಿದ್ದವರು ಸಿಕ್ಕಿಬಿದ್ದಲ್ಲಿ ಅವರನ್ನು ಕೂಡಲೇ ಮಾದಕದ್ರವ್ಯ ಮತ್ತು ಅಮಲು ಪದಾರ್ಥಗಳು (ಎನ್‌ಡಿಪಿಎಸ್) ಕಾಯಿದೆಯ ಸೆಕ್ಷನ್ 42ರಲ್ಲಿ ವ್ಯಾಖ್ಯಾನಿಸಲಾಗಿರುವ ಅಧಿಕಾರಿಗಳಾದ ಕೇಂದ್ರ ಹಾಗೂ ರಾಜ್ಯ ಸರಕಾರದ ಅಬಕಾರಿ, ಮಾದಕವಸ್ತು, ಕಸ್ಟಮ್ಸ್, ಕಂದಾಯ ವಿಚಕ್ಷಣಾ, ಕೇಂದ್ರ ಸರಕಾರದ ಅಧೀನ ಸಂಸದೀಯ ಪಡೆಯ ಮತ್ತು ಸಶಸ್ತ್ರಪಡೆ, ಪೊಲೀಸರು, ಡ್ರಗ್ ಕಂಟ್ರೋಲ್ ಇನ್ನಿತರ ಇಲಾಖೆಗಳ ಗೆಜೆಟೆಡ್ ಅಧಿಕಾರಿಗಳು ಅಥವಾ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬೇಕು. ಈ ನಿಯಮವನ್ನು ಸೆಕ್ಷನ್ 50 ಪ್ರತಿಪಾದಿಸುತ್ತದೆ. ಅಧಿಕಾರಿಗಳು ಈ ನಿಯಮ ಪಾಲಿಸದ ಹಲವು ಪ್ರಕರಣಗಳು ಕೋರ್ಟ್ ಮುಂದೆಬರುತ್ತಿವೆ. ಆದ್ದರಿಂದ, ಎನ್‌ಡಿಪಿಎಸ್ ಸೆಕ್ಷನ್ 50 ಮತ್ತು 52 ನಿಯಮ ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಅಥವಾ ಗೃಹ ಇಲಾಖೆ ಸುತ್ತೋಲೆ ಹೊರಡಿಸಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

ಸಿಲಿಂಡರ್ ಸ್ಫೋಟ, ಹೊಸದಾಗಿ 12 ಮನೆ ನಿರ್ಮಾಣ: ಜಮೀರ್

ಸಂಜಯ ನಗರದಲ್ಲಿ ಸಿಲಿಂಡರ್ ಸ್ಫೋಟಗೊಂಡು ಹಾನಿಗೊಳಗಾದ ಮನೆಗಳಿಗೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಭೇಟಿ ನೀಡಿದ್ದರು. ಕಾಂಗ್ರೆಸ್ ಮುಖಂಡ ಆನಂದ್ ಮತ್ತಿತರರಿದ್ದರು.

ಬೆಂಗಳೂರು: ಸಂಜಯ ನಗರದ ಕೊಳಗೇರಿಯಲ್ಲಿ ಸಿಲಿಂಡರ್ ಸ್ಫೋಟಗೊಂಡು ಹಾನಿಗೊಳಗಾದ ಮನೆಗಳಿಗೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಭೇಟಿನೀಡಿ ಹೊಸಮನೆಗಳನ್ನು ಕಟ್ಟಿಸಿಕೊಡುವುದಾಗಿ ಭರವಸೆ ನೀಡಿದ್ದಾರೆ.

ಘಟನೆಯಲ್ಲಿ ಇಡೀ ಬ್ಲಾಕ್‌ನ ಆರು ಮನೆ ಶಿಥಿಲಗೊಂಡಿದ್ದು, ಒಟ್ಟು 12 ಮನೆಗಳನ್ನು ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ವಿವೇಚನ ನಿಧಿಯಲ್ಲಿ ಹೊಸದಾಗಿ ಕಟ್ಟಿಕೊಡುವುದಾಗಿ ಘೋಷಿಸಿದರು. 1994ರಲ್ಲಿ ಹುಡ್ಕೋ ಅನುದಾನದಲ್ಲಿ ನಿರ್ಮಿಸಿರುವ 130 ಮನೆಗಳು ಶಿಥಿಲ ಗೊಂಡಿರುವ ಬಗ್ಗೆ ಸ್ಥಳೀಯರು ಮನವಿ ಸಲ್ಲಿಸಿದರು. ಈ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ನಂತರ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಭೇಟಿಮಾಡಿ ಉಚಿತ ಚಿಕಿತ್ಸೆ ನೀಡಲು ವೈದ್ಯರಿಗೆ ಸೂಚಿಸಿದರು. ಗಾಯಾಳು ಅಣ್ಣಾದೊರೆ ಎಂಬುವರಿಗೆ 50 ಸಾವಿರ ನೀಡಿದ್ದಲ್ಲದೇ, ಜಖಂಗೊಂಡಿದ್ದ ಎರಡು ದ್ವಿಚಕ್ರ ವಾಹನಗಳ ರಿಪೇರಿಗೆ ತಲಾ 25 ಸಾವಿರ ನೀಡಿದರು.

ಸಮಾಚಾರ ಸಣ್ಣದಲ್ಲ

ಇಂದಿನಿಂದ 22ರವರೆಗೆ ಚಿತ್ರಕಲಾ ಪ್ರದರ್ಶನ

ಬೆಂಗಳೂರು: ಪುಣೆಯ ಚಿತ್ರ ಕಲಾವಿದ ಅಪೂರ್ವ ವೈದ್ಯ ರಚಿಸಿರುವ ಚಿತ್ರಕಲಾ ಪ್ರದರ್ಶನ ಸೆ.17 ರಿಂದ 22 ವರೆಗೆ ಬೆಳಗ್ಗೆ 10 ರಿಂದ ಸಂಜೆ 7 ರವರಗೆ ನಗರದ ಚಿತ್ರಕಲಾ ಪರಿಷತ್‌ನಲ್ಲಿ ನಡೆಯಲಿದೆ. ಸಾಮಾಜಿಕ ಕಳಕಳಿ ಮತ್ತು ವೈಚಾರಿಕ ಚಿಂತನೆಯಲ್ಲಿ ತೊಡಗಿಸಿಕೊಂಡು ಅಂತಹ ಭಾವನೆಗಳನ್ನು ಕಲಾಕೃತಿಗಳ ರೂಪದಲ್ಲಿ ಅಭಿವ್ಯಕ್ತಿಸುವ ಅಪರೂಪದ ಏಕ ವ್ಯಕ್ತಿಯಾಗಿ ಚಿತ್ರಗಳನ್ನು ಕಲಾವಿದ ಅಪೂರ್ವ ವೈದ್ಯ ರಚಿಸಿದ್ದು, ನಿಸರ್ಗದ ರಮ್ಯ ಮತ್ತು ಗಮ್ಯ ಅನುಭವವನ್ನು ಮತ್ತು ದೃಶ್ಯವನ್ನು ಕಟ್ಟಿಕೊಡುವ ಚಿತ್ರಗಳು ಹಾಗೂ ಹೆಣ್ಣು ಮಕ್ಕಳ ಶಿಕ್ಷಣವನ್ನು ಬೆಂಬಲಿಸಲು ಮತ್ತು ಸಮಾನ ಸಮಾಜವನ್ನು ರಚಿಸುವ ಉದ್ದೇಶದಿಂದ ಆರ್ಟ್ ಫಾರ್ ಪರ್ಪಸ್ ಧ್ಯೇಯದೊಂದಿಗೆ, ಈ ಪ್ರದರ್ಶನದ ಮಾರಾಟದ ಆದಾಯದ ಒಂದು ಭಾಗವನ್ನು ಮೈ ಲಿಟ್ಟಲ್ ಬಿಟ್ ಸಂಸ್ಥೆಗೆ ದೇಣಿಗೆ ಹಣ ನೀಡುವುದಾಗಿ ಕಲಾವಿದ ಅಪೂರ್ವ ವೈದ್ಯ ಹೇಳಿದ್ದಾರೆ.

ನಾಳೆ ನಿವೃತ್ತ ನೌಕರರ ವೇದಿಕೆಯಿಂದ ಪ್ರತಿಭಟನೆ

ಬೆಂಗಳೂರು: 7ನೇ ವೇತನ ಆಯೋಗದ ವರದಿಯಂತೆ ನಿವೃತ್ತ ಸರಕಾರಿ ನೌಕರರಿಗೆ ಪಿಂಚಣಿಯಲ್ಲಿ ತಾರತಮ್ಯ ಸರಿಪಡಿಸುವಂತೆ ಒತ್ತಾಯಿಸಿ ಫ್ರೀಡಂ ಪಾರ್ಕ್‌ನಲ್ಲಿ ಸೆ.18ರಂದು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ನಿವೃತ್ತ ನೌಕರರ ವೇದಿಕೆ ಎಚ್ಚರಿಕೆ ನೀಡಿದೆ. ವೇದಿಕೆ ರಾಜ್ಯ ಮಹಾ ಸಂಚಾಲಕ ಎಂ.ಪಿ.ಎಂ ಶಣ್ಮುಖಂ ಮಾತನಾಡಿ, ರಾಜ್ಯಾದ್ಯಂತ ಹತ್ತು ಸಾವಿರಕ್ಕೂ ಅಧಿಕ ನಿವೃತ್ತ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದು, ತಾರತಮ್ಯ ಸರಿಪಡಿಸುವ ತನಕ ಹೋರಾಟ ಮುಂದುವರೆಸಲಾಗುವುದು. ಕಳೆದ 2022 ರ ಜುಲೈ ನಿಂದ ಈ ವರ್ಷದ ಜುಲೈವರೆಗೆ ನಿವೃತ್ತರಾಗಿರುವ ಅಧಿಕಾರಿಗಳು ಹಾಗೂ ನೌಕರರಿಗೆ 7ನೇ ವೇತನ ಆಯೋಗದ ವರದಿಯಲ್ಲಿ ಪಿಂಚಣಿ ಸೌಲಭ್ಯಗಳಲ್ಲಿ ಉಂಟಾಗಿರುವ ಆರ್ಥಿಕ ನಷ್ಟವನ್ನು ಸರಿಪಡಿಸಿ ಸೌಲಭ್ಯ ಒದಗಿಸಿಕೊಡಬೇಕೆಂದು ಹೋರಾಟ ನಡೆಸುತ್ತಿದ್ದೇವೆ. ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗಡೆ, ಸರಕಾರಿ ನೌಕರರ ಸಂಘದ ಮಾಜಿ ಮತ್ತು ನಿವೃತ್ತ ನೌಕರ ಸಂಘದ ಹಾಲಿ ರಾಜ್ಯಾಧ್ಯಕ್ಷ ಡಾ. ಎಲ್ ಭೈರಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: 220/66/11 ಕೆವಿ ಹೆಬ್ಬಾಳ ಸ್ವೀಕರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುವ

ಹಿನ್ನೆಲೆ ಸೆ.17ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ನಗರದ ಜಯಮಹಲ್ ವಿಸ್ತರಣೆ, ನಂದಿ ದುರ್ಗ, ದೂರ ದರ್ಶನ, ಜಯಮಹಲ್ ರಸ್ತೆ, ಮುನಿರೆಡ್ಡಿ ಪಾಳ್ಯ, ಜೆ.ಸಿ.ನಗರ, ಮಾರಪ್ಪ ಗಾರ್ಡನ್, ಚಿನಪ್ಪ ಗಾರ್ಡನ್, ಎನ್.ಡಿ.ರಸ್ತೆ, ಏರ್‌ಟೆಲ್, ದೂರದರ್ಶನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ವಿದ್ಯುತ್ ಸಂಬಂಧಿತ ದೂರುಗಳಿಗಾಗಿ ಬೆ.ವಿ.ಕಂ ಸಹಾಯವಾಣಿ ಸಂಖ್ಯೆ 1912 ಸಂಪರ್ಕಿಸಬಹುದು.

ಸ್ಥಳೀಯ ಸಂಸ್ಥೆಗಳ ಚುನಾವಣೆ ಘೋಷಿಸಿ

ಬೆಂಗಳೂರು: ಪ್ರಜಾಪ್ರಭುತ್ವದ ಸರಪಳಿಯ ತಳಮಟ್ಟದ ಆಧಾರಸ್ತಂಭಗಳಾದ ಜಿಲ್ಲಾ ತಾಲೂಕು ಪಂಚಾಯತಿ ಮತ್ತು ಬಿಬಿಎಂಪಿ ಚುನಾವಣೆ ನಡೆಸದೇ,

ಕತ್ತು ಹಿಸುಕಿ ವಿಧಾನ ಸೌಧದಲ್ಲಿ ಮೆರೆದರೇನು ಭಾಗ್ಯ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಟೀಕಿಸಿದ್ದಾರೆ. ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಮಾನವ ಸರಪಳಿ ನೆಪದಲ್ಲಿ ಪುಕ್ಕಟೆ ಪ್ರಚಾರ ಪಡೆದಿದ್ದು, ಸರಕಾರಕ್ಕೆ ಪ್ರಜಾಪ್ರಭುತ್ವ ಉಳಿಸುವ ಕಾಳಜಿಯೇ ಇದಿದ್ದರೆ ಮೊದಲು ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಿ ಎಂದು ತಾಕೀತು ಮಾಡಿದ್ದಾರೆ. ಸಿದ್ದರಾಮಯ್ಯನವರೇ, ನೀವು ಅಧಿಕಾರಕ್ಕೆ ಬಂದು ವರ್ಷದ ಮೇಲೆ 4 ತಿಂಗಳಾಯಿತು. ಈವರೆಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸಾಧ್ಯವಾಗಿಲ್ಲ. ನಿಮ್ಮ ಪ್ರಜಾಪ್ರಭುತ್ವ, ಜನಪರತೆ, ಜಾಹೀರಾತುಗಳಲ್ಲಷ್ಟೆ ಝುಗಮಗಿಸುತ್ತಿದೆ. ನಿಮ್ಮದು ಪ್ರಚಾರ ಜಾಸ್ತಿ, ಆಚಾರ ನಾಸ್ತಿ ಎಂದು ಕಿಡಿಕಾರಿದರು. ವಿಚ್ಛಿದ್ರ ಶಕ್ತಿಗಳನ್ನು ದಮನ ಮಾಡುವುದು ಎಂದರೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ತತ್ವಕ್ಕೆ ತಿಲಾಂಜಲಿ ಇಡುವುದೇ? ಮಾನವ ಸರಪಳಿಯಿಂದ ಪ್ರಜಾಪ್ರಭುತ್ವ ಉಳಿಯುತ್ತದೆಯೇ? ಜನರ ತೆರಿಗೆ ಹಣದ ಪೋಲು ಪ್ರಜಾಪ್ರಭುತ್ವಕ್ಕೆ ಭೂಷಣವೇ? ಮೊದಲು ಸ್ಥಳೀಯ ಸಂಸ್ಥೆ ಚುನಾವಣೆ ಘೋಷಿಸಿ. ನೈಜ ಪ್ರಜಾಪ್ರಭುತ್ವದ ಸರಪಳಿಯನ್ನು ಗಟ್ಟಿಗೊಳಿಸಿ ಎಂದು ಆಗ್ರಹಿಸಿದರು.

{ ದಿನೇಶ್ ಗುಂಡೂರಾವ್ } ಸಚಿವ

ಮುನಿರತ್ನ ವಿಚಾರವೇ ಬೇರೆ, ಚೆನ್ನಾರೆಡ್ಡಿ ವಿಚಾರವೇ ಬೇರೆ. ಅತ್ಯಂತ ಕೆಳಮಟ್ಟದ ನಿಂದಿಸುವ ಕೆಲಸ ಅವರು ಮಾಡಿದ್ದಾರೆ. ಮಹಿಳೆಯವರ ಬಗ್ಗೆ ಇರುವ ಧೋರಣೆ ತೋರಿಸಿದ್ದಾರೆ. ಅಂಥವರ ಬಗ್ಗೆ ಕ್ರಮ ಆಗಬೇಕಾಗುತ್ತದೆ. ಸಬ್ ಇನ್‌ಸ್ಪೆಕ್ಟರ್ ಪರುಶುರಾಮ್ ಹೃದಯಾಘಾತದಿಂದ ತೀರಿಕೊಂಡಿದ್ದಾರೆ. ಆದರೆ ಬಿಜೆಪಿ ಯವರು ದಾರಿ ತಪ್ಪಿಸುತ್ತಿದ್ದಾರೆ.

ಸೆ.16ರವರೆಗೆ ಗಡುವು ನೀಡಿದ್ದ ರಾಜ್ಯ ಸರಕಾರ | ಗುಂಡಿ ಮುಚ್ಚಲು ಹರಸಾಹಸ

ಗಡುವು ಮುಗಿದರೂ ನಗರದಲ್ಲಿ ಮುಗಿದಿಲ್ಲ ರಸ್ತೆಗುಂಡಿಗಳ ಸಮಸ್ಯೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ರಾಜ್ಯ ಸರಕಾರವು ಸೆ.16ರಂದು ಗಡುವು ನೀಡಿದ್ದು, ಪಾಲಿಕೆ ಅಧಿಕಾರಿಗಳು ಗುಂಡಿ ತುಂಬಲು ಕೊನೆಯ ಕ್ಷಣದವ ರೆಗೂ ಹರಸಾಹಸ ಪಡುತ್ತಿರುವುದು ಕಂಡು ಬಂದಿದೆ.

ಇತ್ತೀಚೆಗೆ ಡಿಸಿಎಂ ಅವರು ರಸ್ತೆ ಗುಂಡಿಗಳ ಬಗ್ಗೆ ಸಾರ್ವಜನಿಕ ವಲಯದಿಂದ ಸಾಕಷ್ಟು ದೂರುಗಳು ಆಗಮಿಸುತ್ತಿದ್ದು, ಮುಂದಿನ 15ದಿನಗಳಲ್ಲಿ ದುರಸ್ತಿ ಕಾರ್ಯವನ್ನು ನಡೆಸದೇ ಹೋದರೆ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಸೂಚನೆ ನೀಡಿದ್ದರು. ಸರಕಾರದ ಸೂಚನೆಯ ಹಿನ್ನೆಲೆ ಪಾಲಿಕೆಯು ರಸ್ತೆ ಗುಂಡಿಗಳ ದುರಸ್ತಿ ಮಾಡಲು ಕೊನೆ ಕ್ಷಣದವರೆಗೂ ಭಾರೀ ಕಸರತ್ತು ನಡೆಸುತ್ತಿದೆ. ಡಿಸಿಎಂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್‌ರಿಗೆ ಸೂಚನೆ ನೀಡಿದ್ದರು. ಇದರಂತೆ ನೀಡಿದ್ದ ಗಡುವು ಸೋಮವಾರಕ್ಕೆ ಕೊನೆಗೊಂಡಿದ್ದು, 15 ದಿನಗಳ ನಂತರ ಇದೀಗ ಡಿಕೆ.ಶಿವಕುಮಾರ್ ಅವರು ನಗರದಲ್ಲಿ ಮತ್ತೆ ಪರಿಶೀಲನೆ ನಡೆಸಲಿದ್ದು, ಗಡುವು ಪಾಲನೆ ಮಾಡದ ಅಧಿಕಾರಿಗಳು ವಿರುದ್ಧ ಕ್ರಮ ಕೈಗೊಳ್ಳುವ ಸಾಧ್ಯತೆಗಳಿವೆ. ಈ ನಡುವೆ ಗಡುವಿನ ಅಂತಿಮ ದಿನವಾದ ಭಾನುವಾರ ರಜೆ ದಿನವಾದರೂ ಪಾಲಿಕೆ ಅಧಿಕಾರಿಗಳು ನಗರದಲ್ಲಿ ಗುಂಡಿ ಮುಚ್ಚುವ ಕಾರ್ಯವನ್ನು ತೊಡಗಿದ್ದರು.

ಬಿಬಿಎಂಪಿ ಅಧಿಕಾರಿಯೊಬ್ಬರು ಈ ಕುರಿತು ಮಾತನಾಡಿ, ಎಲ್ಲಾ ವಲಯಗಳಲ್ಲಿ ಗುಂಡಿ ತುಂಬುವ ಕಾರ್ಯ ನಡೆಯುತ್ತಿದೆ. ಪಾಲಿಕೆಗೆ ವರದಿ ಮಾಡಿದ ಎಲ್ಲಾ ಗುಂಡಿಗಳ ದುರಸ್ತಿ ನಡೆಸಲಾಗುತ್ತಿದೆ. ವರದಿಯಾಗದ ಗುಂಡಿಗಳನ್ನೂ ಕೂಡ ತುಂಬುತ್ತಿದ್ದೇವೆ. ಹಾಗಾಗಿ ಇಲ್ಲಿಯವರೆಗೆ ತುಂಬಿದ ಗುಂಡಿಗಳ ನಿಖರವಾದ ಸಂಖ್ಯೆಯನ್ನು ಇನ್ನೂ ಪಟ್ಟಿ ಮಾಡಿಲ್ಲ, ಮುಖ್ಯ ಆಯುಕ್ತರು ಹೇಳಿದಂತೆ ನಾವು ಗಡುವಿನೊಳಗೆ ಕೆಲಸ ಮಾಡಲು ಪ್ರಯತ್ನಿಸುತ್ತೇವೆಯ ಒಂದು ಅಥವಾ ಎರಡು ದಿನದಲ್ಲಿ ಕೆಲಸ ಪೂರ್ಣಗೊಳ್ಳಬಹುದು. ಹೊಸ ಗುಂಡಿ ಗಳು ಸೃಷ್ಟಿಯಾಗುವ ಸಾಧ್ಯತೆಗಳಿದ್ದು, ಸೋಮವಾರ ಬೊಮ್ಮನಹಳ್ಳಿ ವಲಯದಲ್ಲಿ ಗುಂಡಿ ತುಂಬುವ ಕಾರ್ಯವನ್ನು ಚುರುಕುಗೊಳಿಸಲಾಗುವುದು ಎಂದರು.

ಹಗಲು ರಾತ್ರಿ ಕಾರ್ಯನಿರ್ವಹಿಸಿ ಗುಂಡಿ ಮುಚ್ಚಲಾಗುತ್ತಿದೆ: ರಮ್ಯಾ

ಬೆಂಗಳೂರು: ಬೊಮ್ಮನಹಳ್ಳಿ ವಲಯದಲ್ಲಿ ಹಗಲು- ರಾತ್ರಿ ಕಾರ್ಯನಿರ್ವಹಿಸಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ ಎಂದು ಪಾಲಿಕೆ ವಲಯ ಆಯುಕ್ತೆ ರಮ್ಯಾ ತಿಳಿಸಿದರು.

ನಗರದ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಜೆಪಿ ನಗರದ ನಂದಿನಿ ಹೋಟೆಲ್ ಬಳಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಪರಿಶೀಲಿಸಿದ ಬಳಿಕ ಮಾತನಾಡಿ, ರಸ್ತೆ ಗುಂಡಿಗಳನ್ನು ಮುಚ್ಚಲು ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಈಗಾಗಲೇ ಸಾಕಷ್ಟು ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. ಮಳೆ ಬಾರದಿರುವ ಹಿನ್ನೆಲೆ ನಿರಂತರವಾಗಿ ರಸ್ತೆ ಗುಂಡಿಗಳನ್ನು ಮುಚ್ಚಲು ಸಾಧ್ಯವಾಗಿದೆ. ಸಂಚಾರದಟ್ಟಣೆ ಹೆಚ್ಚಿರುವ ರಸ್ತೆಗಳಲ್ಲಿ ಆದ್ಯತೆ ಮೇರೆಗೆ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. ಇದೀಗ ವಾರ್ಡ್ ರಸ್ತೆಗಳಲ್ಲಿ ಎಲ್ಲೆಲ್ಲಿ ರಸ್ತೆ ಗುಂಡಿಗಳಿವೆ ಅವುಗಳನ್ನು ಕೂಡಲೆ ಮುಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿ ನಿರಂತರವಾಗಿ ರಸ್ತೆ ಗುಂಡಿಗಳನ್ನು ಮುಚ್ಚುತ್ತಿರುವುದರಿಂದ ಸಾರ್ವಜನಿಕ ರಿಂದ ಹೆಚ್ಚು ಸಕ್ರಿಯವಾಗಿ ರಸ್ತೆ ಗುಂಡಿ ಗಮನ ತಂತ್ರಾಂಶದಲ್ಲಿ ದೂರುಗಳು ಬರುತ್ತಿವೆ. ಸಾರ್ವಜನಿಕರಿಂದ ಬರುತ್ತಿರುವ ದೂರುಗಳನ್ನು ಸಹ ಆಧರಿಸಿ ಕಾಲಮಿತಿಯೊಳಗಾಗಿ ಗುಂಡಿಗಳನ್ನು ಮುಚ್ಚಲಾಗುತ್ತದೆ ಎಂದರು. ಪರಿಶೀಲನೆಯ ವೇಳೆ ಮುಖ್ಯ ಅಭಿಯಂತರ ಶಶಿಕುಮಾರ್, ಕಾರ್ಯಪಾಲಕ ಅಭಿಯಂತರ ಜಯರಾಮ್ ಇದ್ದರು.

ಮೂಲ ಡಿಪಿಆರ್‌ನಲ್ಲಿ ನಿಲ್ದಾಣಗಳ ಪ್ರಸ್ತಾಪವಿಲ್ಲ

ಅನುದಾನದ ಕೊರತೆ; ಎರಡು ನಿಲ್ದಾಣಗಳಿಗೆ ಮೆಟ್ರೋ ಕೊಕ್

ಬೆಂಗಳೂರು: ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೆಟ್ರೋವನ್ನು ಸಂಪರ್ಕಿಸುವ ಮೆಟ್ರೋ ಮಾರ್ಗದ ನಿಲ್ದಾಣಗಳಲ್ಲಿ ಎರಡು ನಿಲ್ದಾಣಗಳ ಹೆಸರುಗಳನ್ನು ಕೈಬಿಡಲಾಗಿದೆ ಎಂದು ನಮ್ಮ ಮೆಟ್ರೋ ಮೂಲಗಳು ತಿಳಿಸಿದೆ.

140 ಕೋಟಿ ವೆಚ್ಚದ ಬೆಟ್ಟಹಲಸೂರು, 130 ಕೋಟಿ ಚಿಕ್ಕಜಾಲ ನಿಲ್ದಾಣ ಮಾಡಲು ಉದ್ದೇಶಿಸಲಾಗಿತ್ತು. ಅನುದಾನ ಸಮಸ್ಯೆ, ಮೂಲ ಡಿಪಿಆರ್‌ನಲ್ಲಿ ಇವೆರಡು ನಿಲ್ದಾಣಗಳ ಪ್ರಸ್ತಾಪವಿಲ್ಲದ ಕಾರಣ ಎರಡು ನಿಲ್ದಾಣಗಳನ್ನು ನಿರ್ಮಿಸದಿರಲು ಚರ್ಚೆ ನಡೆಯುತ್ತಿದೆ. ಅಧಿಕಾರಿಗಳು ಚಿಕ್ಕಜಾಲ ನಿಲ್ದಾಣದ ನಿರ್ಮಾಣಕ್ಕೆ 130ಕೋಟಿ ಮತ್ತು ಬೆಟ್ಟ ಹಲಸೂರು ನಿಲ್ದಾಣದ ನಿರ್ಮಾಣಕ್ಕೆ 140 ಕೋಟಿ ರು. ಅನುದಾನ ಬೇಕಾಗಬಹುದು ಎಂದು ಅಂದಾಜಿಸಿದ್ದರು, ಆದರೆ ಇದಕ್ಕೆ ಅನುದಾನದ ಕೊರತೆಯುಂಟಾಗಿರುವ ಹಿನ್ನೆಲೆ ಈ ಎರಡೂ ನಿಲ್ದಾಣಗಳನ್ನು ಈ ಯೋಜನೆಯಿಂದ ಕೈಬಿಡಲಾಗಿದೆ.

36.44 ಕಿಮೀ ಉದ್ದದ ನಮ್ಮ ಮೆಟ್ರೋ 2ಬಿ ಹಂತದಲ್ಲಿ 17 ನಿಲ್ದಾಣಗಳು ತಲೆ ಎತ್ತಲಿವೆ. ಡಿಪಿಆರ್‌ನಲ್ಲಿ ಚಿಕ್ಕಜಾಲ ಮತ್ತು ಬೆಟ್ಟಹಲಸೂರು ನಿಲ್ದಾಣಗಳು ಮೊದಲು ಇರಲಿಲ್ಲ. ಆದರೆ ಹಲವು ಕಾರಣಕ್ಕೆ ಈ ನಿಲ್ದಾಣಗಳನ್ನು ನಂತರ ಸೇರಿಸಲಾಗಿತ್ತು. 2019ರಲ್ಲಿ ರಾಜ್ಯ ಸಚಿವ ಸಂಪುಟ ಕೂಡ ಒಪ್ಪಿಗೆ ನೀಡಿತ್ತು. ಆದರೆ, ಮೂಲ ಡಿಪಿಆರ್ ನಲ್ಲಿ ಪ್ರಸ್ತಾಪವಿರದ ಹಿನ್ನೆಲೆ ನಿಲ್ದಾಣಕ್ಕೆ ಕೇಂದ್ರದಿಂದ ಅನುದಾನ ಬಿಡುಗಡೆ ಆಗಿಲ್ಲ. ಆದ್ದರಿಂದ ರಾಜ್ಯ ಸರಕಾರವೇ ಸಂಪೂರ್ಣ ಮೊತ್ತ ಭರಿಸಬೇಕಾಗಿ ಬಂದಿತ್ತು. ನಂತರ ಬೆಟ್ಟಹಲಸೂರು ನಿಲ್ದಾಣ ಒಂದರ ನಿರ್ಮಾಣಕ್ಕೆ ಸಕ್ತಿ ತೋರಿದ್ದ ಎಂಬೆಸಿ ಗ್ರೂಪ್ ಕೂಡಾ ಈಗ ಅನುದಾನ ಒದಗಿಸಲು ಆಸಕ್ತಿ ತೋರಿಸುತ್ತಿಲ್ಲ ಎನ್ನಲಾಗಿದೆ.

ಕೈಬಿಟ್ಟ ಚಿಕ್ಕಜಾಲ, ಬೆಟ್ಟಹಲಸೂರು

ನಮ್ಮ ಮೆಟ್ರೋ ಬೆಂಗಳೂರು ವಿಮಾನ ನಿಲ್ದಾಣಕ್ಕೆ ನಮ್ಮ ಮೆಟ್ರೋ ಸಂಪರ್ಕ ಕಲ್ಪಿಸಲು 'ನೀಲಿ' ಮಾರ್ಗವನ್ನು ವಿನ್ಯಾಸಗೊಳಿಸಿದ್ದು, 36.44 ಕಿ. ಮೀ. ಉದ್ದದ ಈ ಮಾರ್ಗವು 17 ನಿಲ್ದಾಣಗಳನ್ನು ಒಳಗೊಂಡಿದೆ. ಈ ಮಾರ್ಗದಲ್ಲಿ ಬಾಗಲೂರು ಕ್ರಾಸ್ ಮತ್ತು ದೊಡ್ಡಜಾಲ ನಿಲ್ದಾಣಗಳ ನಡುವೆ ಚಿಕ್ಕಜಾಲ ಮತ್ತು ಬೆಟ್ಟಹಲಸೂರು ನಿಲ್ದಾಣಗಳನ್ನು ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿತ್ತು. ನಮ್ಮ ಮೆಟ್ರೋ 2ನೇ ಬಿ ಹಂತದ ಯೋಜನೆಯ ಡಿಪಿಆರ್‌ನಲ್ಲಿ ಚಿಕ್ಕಜಾಲ ಮತ್ತು ಬೆಟ್ಟಹಲಸೂರು ನಿಲ್ದಾಣಗಳು ಇರಲಿಲ್ಲ. ಆದರೆ ಸ್ಥಳೀಯರ ಒತ್ತಡ ಸೇರಿದಂತೆ ವಿವಿಧ ಕಾರಣಕ್ಕೆ ಈ ನಿಲ್ದಾಣಗಳನ್ನು ಬಳಿಕ ಸೇರಿಸಲಾಯಿತು. ಸರಕಾರ ಈಗಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಈ ಎರಡು ನಿಲ್ದಾಣಗಳ ನಿರ್ಮಾಣಕ್ಕೆ ಅನುದಾನವನ್ನು ನೀಡುವುದಿಲ್ಲ. ಆದ್ದರಿಂದ ನಮ್ಮ ಮೆಟ್ರೋ ಚಿಕ್ಕಜಾಲ ಮತ್ತು ಬೆಟ್ಟಹಲಸೂರು ನಿಲ್ದಾಣಗಳನ್ನು ಹೊರತುಪಡಿಸಿ ಮೂಲ ಡಿಪಿಆರ್ ಮಾದರಿಯಲ್ಲಿಯೇ ಉಳಿದ ಕಾಮಗಾರಿಗಳನ್ನು ವೇಗವಾಗಿ ಮುಗಿಸುವತ್ತ ಗಮನಹರಿಸಿದೆ.

ಗುತ್ತಿಗೆದಾರ ಚಲುವರಾಜುಗೆ ರಕ್ಷಣೆ

ಬೆಂಗಳೂರು: ಬಿಜೆಪಿ ವಿರುದ್ಧ ಶಾಸಕ ಮುನಿರತ್ನ ಪ್ರಕರಣವನ್ನೇ ಸರಕಾರ ಅಸ್ತ್ರವನ್ನಾಗಿಸಿದೆ. ಈಗಾಗಲೇ ಕಾಂಗ್ರೆಸ್ ಮುಖಂಡ ಹನುಮಂತ ರಾಯಪ್ಪ ಗುತ್ತಿಗೆದಾರ ಚಲುವರಾಜುಗೆ ಕರೆಮಾಡಿ ಬೆಂಬಲ ವ್ಯಕ್ತಪಡಿಸಿರುವ ಬೆನ್ನಲ್ಲೇ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಚಲುವರಾಜು ಮನೆಗೆ ಭೇಟಿನೀಡಿ ಸಾಂತ್ವನ ಹೇಳಿರುವುದು ಭಾರಿ ಕುತೂಹಲ ಕೆರಳಿಸಿದೆ.

ಈ ವೇಳೆ ಮಾತನಾಡಿದ ಸಚಿವರು, ಬಿಜೆಪಿ ಶಾಸಕರ ನಿಂದನೆ ಮಾತುಗಳಿಂದ ನೊಂದಿರುವ ಚಲುವರಾಜು ಹಾಗೂ ಅವರ ಕುಟುಂಬಕ್ಕೆ ಧೈರ್ಯ ತುಂಬಿದ್ದು, ಸರಕಾರ ಸೂಕ್ತ ರಕ್ಷಣೆ ಹಾಗೂ ನ್ಯಾಯ ಒದಗಿಸುವುದಾಗಿ ಎಂದು ತಿಳಿಸಿದ್ದಾರೆ. ಕಳೆದ ಎರಡು

ದಿನಗಳಿಂದ ಮಾಧ್ಯಮದಲ್ಲಿ ಬರುತ್ತಿರುವ ವಿಚಾರವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಮಹಿಳೆಯಾಗಿ ಇನ್ನೊಬ್ಬ ಮಹಿಳೆಗೆ ಧೈರ್ಯ ತುಂಬುವ ಕೆಲಸ ಮಾಡಲು ಬಂದಿರುವೆ. ಆಡಿಯೋ ಕೇಳಿಸಿಕೊಂಡಿಲ್ಲ, ಗುತ್ತಿಗೆದಾರ ಚಲುವರಾಜು ಜತೆ ಸರಕಾರ ಇರಲಿದ್ದು, ಅವರ ಕುಟುಂಬದ ರಕ್ಷಣೆ ಜವಾಬ್ದಾರಿ ಸರಕಾರದ್ದು ಎಂದು ತಿಳಿಸಿದ್ದಾರೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ 30ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಪರಿಷತ್ತಿನ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯ ಸಾನಿಧ್ಯವನ್ನು ಗದಗಿನ ಶ್ರೀ ತೋಂಟದ ಮಠದ ಡಾ. ಸಿದ್ದರಾಮಸ್ವಾಮೀಜಿ ವಹಿಸಿದ್ದರು. ಪಾಂಡೋಮಟ್ಟಿ ಮಠದ ಶ್ರೀ ಗುರುಬಸವ ಸ್ವಾಮಿಗಳು, ಮಾಜಿ ಸಚಿವ ಎಸ್.ಎಸ್ ಪಾಟೀಲ್, ಲೀಲಾದೇವಿ ಪ್ರಸಾದ್ ಇದ್ದರು.

ಜೆಡಿಎಸ್‌ನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಆರ್.ಅಭಿಷೇಕ್ ಗೆ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ ನೇಮಕಾತಿ ಆದೇಶ ನೀಡಿದರು. ಜೆಡಿಎಸ್ ಪ್ರಧಾನ ಕಾರ್ಯದರ್ಶಿ ರಮೇಶ್, ರೇವಣ್ಣ ಇನ್ನಿತರ ಮುಖಂಡರು ಇದ್ದರು.

ನಗರಕ್ಕೆ ಬೇಕಿದೆ 400 ಕಿ.ಮೀ ಒಳಚರಂಡಿ ಮಾರ್ಗ

ಬೆಂಗಳೂರು: ನಗರದಲ್ಲಿ ಕೊಳಚೆನೀರು ಸಂಗ್ರಹಕ್ಕೆ ಹಾಗೂ ಸಂಸ್ಕರಿಸಿದ ಕೊಳಚೆನೀರು ಕೆರೆಗಳಿಗೆ ಸೇರದಂತೆ ತಡೆಯಲು 400 ಕಿ.ಮೀ ಒಳಚರಂಡಿ ಮಾರ್ಗ ಹಾಗೂ 9 ಒಳಚರಂಡಿ ಸಂಸ್ಕರಣಾ ಘಟಕದ ಅಗತ್ಯವಿದೆ ಎಂದು ವರದಿಯಾಗಿದೆ.

ಒಳಚರಂಡಿ ನಿರ್ವಹಣೆಯಲ್ಲಿನ ಅಂತರ ಸರಿಪಡಿಸುವ ಗುರಿ ಹೊಂದಿರುವ ಈ ಯೋಜನೆಗೆ ಅಂದಾಜು 850 ಕೋಟಿ ರುಪಾಯಿ ವೆಚ್ಚವಾಗುವ ಸಾಧ್ಯತೆಯಿದ್ದು, ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆಯಲು ಮಂಡಳಿ ನಿರ್ಧರಿಸಿದೆ. 2008ರಲ್ಲಿ ಬಿಬಿಎಂಪಿಗೆ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಈ ಮೂಲಸೌಕರ್ಯ ವಿಸ್ತರಿಸುವ ಅಗತ್ಯವಿದೆ. ಈಗಾಗಲೇ ನಿರ್ಮಾಣ ಹಂತದಲ್ಲಿರುವ 1,538 ಕಿ.ಮೀ. ಪೈಪ್‌ಲೈನ್ ಮತ್ತು 13 ಒಳಚರಂಡಿ ನೀರು ಸಂಸ್ಕರಣಾ ಘಟಕಗಳಿಗೆ ಇದು ಹೆಚ್ಚುವರಿಯಾಗಿ ಸೇರ್ಪಡೆಯಾಗಲಿದೆ.

ವರ್ಷಾಂತ್ಯದಲ್ಲಿ ಕಾಮಗಾರಿ ಪೂರ್ಣ: ಈಗಾಗಲೇ ಶೇ.80ರಷ್ಟು ಕಾಮಗಾರಿ ಮುಗಿದಿದ್ದು ಈ ವರ್ಷಾಂತ್ಯದೊಳಗೆ ಯೋಜನೆ ಪೂರ್ಣಗೊಳ್ಳುವ

ಗುರಿಯಿದೆ. ಈ ಹಳ್ಳಿಗಳಲ್ಲಿ ಒಳಚರಂಡಿ ಮೂಲಸೌಕರ್ಯ ಕಲ್ಪಿಸಲು ಜಲಮಂಡಳಿ 925 ಕೋಟಿ ರುಪಾಯಿ ವೆಚ್ಚಮಾಡಿದೆ. ಈ ಸಮೀಕ್ಷೆಯಲ್ಲಿ 110 ಹಳ್ಳಿಗಳಲ್ಲಿ ಉಂಟಾಗುವ ಕೊಳಚೆ ನೀರಿನ ಪ್ರಮಾಣ ಮತ್ತು ಕೊಳಚೆ ನೀರು ಮಳೆ ನೀರಿನ ಚರಂಡಿ, ಕೆರೆಗಳಿಗೆ ಸೇರುವ ಜಾಗಗಳನ್ನು ಗುರುತಿಸಲಾಗಿದೆ. ಈ ಹಳ್ಳಿಗಳಲ್ಲಿರುವ 104 ಕೆರೆಗಳಿಗೆ ಒಳಚರಂಡಿ ಹರಿವಿನಿಂದ ನೀರಿನ ಗುಣಮಟ್ಟ ಹಾಳಾಗುವ ಸಾಧ್ಯತೆಯಿದ್ದು, ಇದರ ನಿವಾರಣೆಗೆ ಅಗತ್ಯ ಕ್ರಮವನ್ನು ಕೈಗೊಳ್ಳಲು ಹಂತಹಂತವಾಗಿ ಹಣ ಬಿಡುಗಡೆ ಮಾಡಿ ಕೈಗೊಳ್ಳಬಹುದಾದ ಸುಧಾರಣಾ ಕ್ರಮಗಳ ಬಗ್ಗೆ ಕೆರೆ ಸಂರಕ್ಷಣಾ ಕಾರ್ಯಕರ್ತರು ಕರೆ ನೀಡಿದ್ದಾರೆ.

ಕಾಮಗಾರಿ ವಿವರ

- ಒಳಚರಂಡಿ ಮಾರ್ಗಗಳ ಒಟ್ಟು ಉದ್ದ: ಅಂದಾಜು 8,386 ಕಿ.ಮೀ
- ಒಳಚರಂಡಿ ಸಂಸ್ಕರಣಾ ಘಟಕ: 33
- ಒಳಚರಂಡಿ ಸಂಸ್ಕರಣಾ ಸಾಮರ್ಥ್ಯ ಪ್ರತಿನಿತ್ಯ 1372.5 ಮಿ.ಲೀ
- 110 ಗ್ರಾಮಗಳಲ್ಲಿ ಒಟ್ಟು 1,538 ಕಿ.ಮೀ. ಒಳಚರಂಡಿ ಮಾರ್ಗ ನಿರ್ಮಾಣಕಾರ್ಯ ಪ್ರಗತಿಯಲ್ಲಿದೆ
- ನಿರ್ಮಾಣ ಹಂತದಲ್ಲಿರುವ ಒಳಚರಂಡಿ ಸಂಸ್ಕರಣಾ ಘಟಕಗಳು: 13
- ಒಟ್ಟು ವೆಚ್ಚ: 925 ಕೋಟಿ ರು.

ಇಂಧನ ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಹೇಳಿಕೆ

6 ವರ್ಷದಲ್ಲಿ 19.2ಗಿ.ವ್ಯಾ ಮರುಬಳಕೆ ಇಂಧನ

ಬೆಂಗಳೂರು: ರಾಜ್ಯದಲ್ಲಿರುವ ನವೀಕರಿಸಬಹುದಾದ ಇಂಧನದ ಈಗಿನ 18 ಗಿ ವ್ಯಾ ಸಾಮರ್ಥ್ಯದ ಜತೆಗೆ ಮುಂದಿನ ಆರು ವರ್ಷಗಳಲ್ಲಿ 19.2 ಗಿಗಾ ವ್ಯಾಟ್ ಸೇರಿಸಲಾಗುವುದು ಎಂದು ಇಂಧನ ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಹೇಳಿದರು.

ಗುಜರಾತಿನ ಗಾಂಧಿನಗರ ಮಹಾತ್ಮಾ ಮಂದಿರದಲ್ಲಿ ನಡೆಯುತ್ತಿರುವ ಮೂರು ದಿನಗಳ ನವೀಕರಿಸಬಹುದಾದ ಇಂಧನ ಹೂಡಿಕೆ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿ, 2030ರ ವೇಳೆಗೆ ದೇಶದ ನವೀಕರಿಸಬಹುದಾದ ಇಂಧನ ಉತ್ಪಾದನೆಯ ಸಾಮರ್ಥ್ಯವನ್ನು 500 ಗಿ.ಗ್ಯಾ.. ಹೆಚ್ಚಿಸಬೇಕು ಎಂಬ ಸಂಕಲ್ಪಕ್ಕೆ ಬದ್ಧವಾಗಿ ರಾಜ್ಯದ ಹಸಿರು ಇಂಧನ ಉತ್ಪಾದನೆ ಸಾಮರ್ಥ್ಯಕ್ಕೆ ಮುಂದಿನ 6 ವರ್ಷಗಳಲ್ಲಿ 19.2 ಗಿ.ವ್ಯಾ. ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಲಾಗುವುದು. ಇಂಧನ ಸಚಿವ ಕೆ.ಜೆ.ಜಾರ್ಜ್‌ರ ಮಾರ್ಗದರ್ಶನದಲ್ಲಿ ಈ ಹೊಸ ಸಂಕಲ್ಪ ಸಾಕಾರಗೊಳಿಸಲಾಗುವುದು ಎಂದರು.

ಎರಡನೇ ಅತಿ ದೊಡ್ಡ ಸೋಲಾರ್ ಪಾರ್ಕ್ ಎಂಬ ಹೆಗ್ಗಳಿಕೆಗೆ ಪಾವಗಡ ಸೋಲಾರ್ ಪಾರ್ಕ್ ಪಾತ್ರವಾಗಿದ್ದು, ಪವನ ವಿದ್ಯುತ್ ಸಾಮರ್ಥ್ಯದಲ್ಲಿ ರಾಜ್ಯ ಮೂರನೇ ಸ್ಥಾನದಲ್ಲಿದೆ. ಒಟ್ಟಾರೆ ಸೌರ ವಿದ್ಯುತ್ ಸಾಮರ್ಥ್ಯದಲ್ಲೂ ರಾಜ್ಯ ಮೂರನೇ ಸ್ಥಾನದಲ್ಲಿದ್ದು, ಜಲವಿದ್ಯುತ್

ಸಾಮರ್ಥ್ಯದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ಈ ನಾಲ್ಕು ವಲಯಗಳಲ್ಲಿನ ರಾಜ್ಯದ ಸಾಧನೆಗಾಗಿ ಸಮಾವೇಶದಲ್ಲಿ ಕೇಂದ್ರ ಹೊಸ ಹಾಗೂ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಅವರು ಪ್ರಶಸ್ತಿ ಪ್ರದಾನ ಮಾಡಿದರು ಎಂದು ಹರ್ಷ ವ್ಯಕ್ತಪಡಿಸಿದರು.

ನವೀಕರಿಸಬಹುದಾದ ಇಂಧನ ಉತ್ಪಾದನೆ ಮತ್ತು ಉತ್ತೇಜನದಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. ಹಸಿರು ಇಂಧನ ಸಾಮರ್ಥ್ಯ ಹೆಚ್ಚಳಕ್ಕೆ ಈಗಾಗಲೇ ಹಲವಾರು ಉಪಕ್ರಮಗಳನ್ನು ಜಾರಿಗೆ ತಂದಿದ್ದೇವೆ. ಜತೆಗೆ ಈ ವಲಯದಲ್ಲಿ ಬಂಡವಾಳ ಹೂಡಿಕೆ ಆಕರ್ಷಿಸಲು ಪ್ರಕ್ರಿಯೆಗಳನ್ನು ಸರಳಗೊಳಿಸಲಾಗಿದೆ. ಅಲ್ಲದೇ, ಯೋಜನೆಗಳು ಸಕಾಲದಲ್ಲಿ ಕಾರ್ಯಗತಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಪೂರಕ ನೀತಿ ರೂಪಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಗಳನ್ನು ಸರಳಗೊಳಿಸಿದ್ದೇವೆ. ತ್ವರಿತ ಅನುಮತಿಗಳನ್ನು ನೀಡಿದ್ದೇವೆ ಮತ್ತು ರಾಜ್ಯದ ಕೈಗಾರಿಕಾ ನೀತಿಗೆ ಅನುಗುಣವಾಗಿ ಯೋಜನೆಗಳಿಗೆ ಪ್ರೋತ್ಸಾಹಕಗಳನ್ನು ಒದಗಿಸಿದ್ದೇವೆ ಎಂದರು.

ಪ್ರಧಾನಿ ಮೋದಿ ಭೇಟಿ

ಹೊಯ್ಸಳ ವಾಸ್ತು ಶೈಲಿಯಲ್ಲಿ ನಿರ್ಮಿಸಿರುವ ಕರ್ನಾಟಕ ಪೆವಿಲಿಯನ್‌ಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ್ದು, ನವೀಕರಿಸಬಹುದಾದದ ಇಂಧನ- ಸೌರ, ರಾಜ್ಯದ ಪವನ ವಿದ್ಯುತ್, ಜೈವಿಕ ಇಂಧನ, ಕಿರು ಜಲ ವಿದ್ಯುತ್ ಯೋಜನೆಗಳ ಬಗ್ಗೆ ಪ್ರಧಾನಿಗೆ ಗೌರವ ಗುಪ್ತಾ ವಿವರಿಸಿದರು. ಪ್ರಧಾನಿ ಮೋದಿ ಅವರ ಜತ ಹೊಸ ಹಾಗೂ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಅವರು ನಮ್ಮ ಪೆವಿಲಿಯನ್‌ಗೆ ಭೇಟಿ ನೀಡಿ ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದ ಸಾಧನೆಗಳ ಕುರಿತಂತೆ ಮಾಹಿತಿ ಪಡೆದರು. ಸಮಾವೇಶದಲ್ಲಿ 4 ಪಾಲುದಾರ ರಾಷ್ಟ್ರಗಳು, 7 ಪಾಲುದಾರ ರಾಜ್ಯಗಳು, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹಿರಿಯ ಅಧಿಕಾರಿಗಳು, ಖಾಸಗಿ ಸಂಸ್ಥೆಯ ಪ್ರತಿನಿಧಿಗಳು, ಹೂಡಿಕೆದಾರರು ಸೇರಿ ಒಟ್ಟು 10,000 ಮಂದಿ ಭಾಗಿಯಾಗಿದ್ದರು.

ಕಾಂಚನೋತ್ಸವ ಸೆ.21ಕ್ಕೆ ಆಯೋಜನೆ

ಬೆಂಗಳೂರು: ಕಾಂಚನಶ್ರೀ ಲಕ್ಷ್ಮೀನಾರಾಯಣ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್ ವತಿಯಿಂದ ಸೆ.21 ಮತ್ತು 22ರಂದು 'ಕಾಂಚನೋತ್ಸವ-2024' ಅನ್ನು ಆಯೋಜಿಸಿದೆ. ಇದೇ ವೇಳೆ ಕರ್ನಾಟಕದ ಹಿರಿಯ ಮೋರ್ಚಿಗ್ ವಿದ್ವಾಂಸರಾದ ವಿದ್ವಾನ್ ಎಲ್. ಭೀಮಾಚಾರ್ ಅವರಿಗೆ 'ಕಾಂಚನಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಸೆ.21ರಂದು ಸಂಜೆ 6 ಗಂಟೆಗೆ ಜೆ.ಎ. ಜಯಂತ್ ಅವರಿಂದ ಕೊಳಲು ವಾದನ, ಮತ್ತೂರು ಶ್ರೀನಿಧಿ ಅವರಿಂದ ಪಿಟೀಲು ವಾದನ ನಡೆಯಲಿದೆ. ಪದ್ಮಶ್ರೀ ಡಾ. ಯೆಲ್ಲಾ ವೆಂಕಟೇಶ್ವರ ರಾವ್ ಅವರಿಂದ ಮೃದಂಗ ವಾದನ, ಶ್ರೀಜಿತ್ ವೆಲ್ಲತ್ತಂಜೂರ್ ಅವರಿಂದ ಘಟಂ ವಾದನ ನಡೆಯಲಿದೆ. ಸೆ.22ರಂದು ಬೆಳಗ್ಗೆ 10 ಗಂಟೆಗೆ ಶಡ್ಜ್ ಗೋಡ್ಖಿಂಡಿ ಅವರಿಂದ ಬಾನ್ಸುರಿ ವಾದನ, ರೂಪಕ್ ಕಲ್ಲೂರ್ಕರ್ ಅವರಿಂದ ತಬಲಾ ವಾದನ ನಡೆಯಲಿದೆ. 11.30ಕ್ಕೆ ಅತುಲ್ ಕೆ. ಮರಾರ್ ಕಿರ್ಘೋರ್ ವರಿಂದ ತಯಂಬಕ ವಾದನ ನಡೆಯಲಿದೆ. ಸಂಜೆ 5 ಗಂಟೆಗೆ ಕುಕ್ಕೆಸುಬ್ರಮಣ್ಯಮಠದ ಶ್ರೀ ಪ್ರಸನ್ನ ಸ್ವಾಮೀಜಿಯವರು ಭೀಮಾ ಚಾರ್ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡುವರು. ಸಂಜೆ 6 ಗಂಟೆಗೆ ಜಿ. ಬೇಬಿ ಶ್ರೀರಾಮ್ ಅವರಿಂದ ಗಾಯನ ನಡೆಯಲಿದೆ. ಬಿ.ಕೆ. ರಘು ಅವರ ಪಿಟೀಲು, ಆನೂರು ಅನಂತಕೃಷ್ಣ ಶರ್ಮ ಅವ ರಿಂದ ಮೃದಂಗ ಹಾಗೂ ಓಂಕಾರ್ ಜಿ. ಅವರಿಂದ ಘಟಂ ವಾದನ ನಡೆಯಲಿದೆ.

ಸ್ಥಳ: ಜೆಎಸ್‌ಎಸ್ ಸ್ಕೂಲ್, ಮಹಾವಿದ್ಯಾಪೀಠ, ಘನಲಿಂಗ ಶಿವಯೋಗಿ ಸಭಾ ಭವನ, ನಂ.31, 15ನೇ ಮುಖ್ಯರಸ್ತೆ, 22ನೇ ಕ್ರಾಸ್, ಬನಶಂಕರಿ 2ನೇ ಹಂತ.

ಬನಶಂಕರಿಯ ಶ್ರೀ ಕೃಷ್ಣ ವಿದ್ಯಾಸಂಸ್ಥೆ ವತಿಯಿಂದ ಶಿಕ್ಷಕರ ದಿನಾಚರಣೆ | ಪ್ರೊ.ಕೃಷ್ಣೇಗೌಡ ಅಭಿಮತ

ಇಂದು ವಿದ್ಯಾರ್ಥಿಗಳಿಂದಲೇ ಶಿಕ್ಷಕರ ಮೌಲ್ಯಮಾಪನ

ಬೆಂಗಳೂರು: ತಾಂತ್ರಿಕತೆ ಎಷ್ಟು ಮುನ್ನಡೆದಿದೆ ಎಂದರೆ ಹಿಂದೆ ವಿದ್ಯಾರ್ಥಿಗಳ ಬುದ್ಧಿಮಟ್ಟವನ್ನು ಶಿಕ್ಷಕರು ಅಳೆಯುತ್ತಿದ್ದರು. ಆದರೆ ಇಂದು ವಿದ್ಯಾರ್ಥಿಗಳೇ ಶಿಕ್ಷಕರ ಬುದ್ಧಿ ಗುಣ ನಡತೆ ಮೌಲ್ಯಮಾಪನ ಮಾಡುವ ಪರಿಸ್ಥಿತಿ ತಲುಪಿದ್ದು, ಹೀಗಾಗಿ ವಿದ್ಯಾರ್ಥಿಗಳಿಗೆ ಬೋಧಿಸುವ ಕ್ರಮ ತಪ್ಪಬಹುದು ಎಂದು ಹಾಸ್ಯ ಕಲಾವಿದ, ಸಾಹಿತಿ ಪ್ರೊ.ಕೃಷ್ಣೇಗೌಡ ಹೇಳಿದರು.

ಬನಶಂಕರಿಯ ಶ್ರೀ ಕೃಷ್ಣ ವಿದ್ಯಾಸಂಸ್ಥೆ ವತಿಯಿಂದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಮಾಜದಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿದ್ದು, ಶಿಕ್ಷಣ ತಾಂತ್ರಿಕತೆಯ ಮಾಹಿತಿಗಳು ಅಂತರ್ಜಾಲದಲ್ಲಿ ಲಭ್ಯವಾಗುತ್ತಿರುವು ದರಿಂದ ವಿದ್ಯಾರ್ಥಿಗಳಲ್ಲಿ ಗುರು ಹಿರಿಯರ ತಂದೆ ತಾಯಿಗಳ ಬಗ್ಗೆ ಗೌರವ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಉತ್ತರ ನಡವಳಿಕೆ ಅಳವಡಿಸಿಕೊಳ್ಳಿ

ಶಿಕ್ಷಕರು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ಜೀವನದ ಮೌಲ್ಯಗಳನ್ನು ತಿಳಿಸಬೇಕು ಮತ್ತು

ಬನಶಂಕರಿಯ ಶ್ರೀ ಕೃಷ್ಣ ವಿದ್ಯಾಸಂಸ್ಥೆ ವತಿಯಿಂದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹಾಸ್ಯ ಕಲಾವಿದ, ಸಾಹಿತಿ ಪ್ರೊ.ಕೃಷ್ಣೆಗೌಡ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸಂಸ್ಥಾಪಕ ಅಧ್ಯಕ್ಷ ರಕ್ಮಾಂಗದ ನಾಯ್ಡು ಇದ್ದರು.

ಇಂದಿನ ಪ್ರಪಂಚದಲ್ಲಿ ಶಿಕ್ಷಣ , ತಾಂತ್ರಿಕತೆ ತುಂಬಾ ವೇಗವಾಗಿ ಬೆಳೆಯುತ್ತಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಬೋಧಿಸುವ ವೇಳೆ ವೈಚಾರಿಕತೆ ಬುದ್ಧಿ ಮತ್ತು ಉತ್ತಮ ನಡವಳಿಕೆಗಳನ್ನು ಅಳವಡಿಸಿಕೊಳ್ಳಬೇಕು. ಶಿಕ್ಷಕರ ಪ್ರಭಾವದಿಂದ ವಿದ್ಯಾರ್ಥಿಗಳೂ ಉತ್ತಮ ಪ್ರಜೆಗಳಾಗುತ್ತಾರೆ ಎಂದು ಹಲವರು ಉದಾಹರಣೆಗಳ ಮೂಲಕ ಮನವರಿಕೆ ಮಾಡಿದರು. ನಮ್ಮ ದೇಶದಲ್ಲಿ ಸ್ವದೇಶಿ ಸಂಪ್ರದಾಯ ಸಂಸ್ಕೃತಿ ಎಲ್ಲವುಗಳನ್ನು ಬಿಟ್ಟು ವಿದೇಶದ ಸಂಸ್ಕೃತಿಗೆ ತಮ್ಮಗರಿವಿಲ್ಲದಂತೆ ಒಳಗಾಗುತ್ತಿದ್ದೇವೆ. ನಮ್ಮ ಸಂಸ್ಕೃತಿ ಹಾಳಾಗದಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸಬೇಕೆಂದು ಹೇಳಿದರು.

ಕೋಮು ಗಲಭೆ: ಎನ್‌ಐಎಗೆ ವಹಿಸಿ

ಬೆಂಗಳೂರು: ನಾಗಮಂಗಲದ ಘಟನೆ ಕುರಿತು ರಾಜಕೀಯ ಕೆಸರೆರಚಾಟ ಮುಂದುವರಿದಿದ್ದು, ನಾಗಮಂಗಲದ ಕೋಮುಗಲಭೆ, ಚಿಕ್ಕಮಗಳೂರಿನಲ್ಲಿ ಪ್ಯಾಲೆಸ್ತೀನ್ ಧ್ವಜ ಹಾರಿಸಿದ ಘಟನೆ ಹಾಗೂ ಮಂಗಳೂರಿನ

ಕೋಮುಗಲಭೆ ಪ್ರಕರಣವನ್ನು ಎನ್ ಐಎ ತನಿಖೆಗೆ ವಹಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮುಸ್ಲಿಮರು ಪೆಟ್ರೋಲ್ ಬಾಂಬ್ ಎಲ್ಲಿಂದ ತಂದಿದ್ದಾರೆ, ಅದು ಮಸೀದಿಗಳಿಂದ ಬಂದಿದೆಯೇ ಎಂಬುದೂ ಸೇರಿದಂತೆ ಎಲ್ಲ ಸಂಗತಿಗಳನ್ನು ತನಿಖೆ ಮಾಡಬೇಕಿದೆ. ಇದಕ್ಕಾಗಿ ಈ ಎಲ್ಲ ಪ್ರಕರಣಗಳನ್ನು ಎನ್‌ಐಎ ಗೆ ವಹಿಸಬೇಕು ಎಂದು ತಿಳಿಸಿದ್ದಾರೆ. ನಾಗಮಂಗಲದ ಕೋಮುಗಲಭೆ ಪ್ರಕರಣದಲ್ಲಿ ಮೊದಲು ಹಿಂದೂಗಳ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಇದು ಕಾಂಗ್ರೆಸ್‌ನ ತುಷ್ಟೀಕರಣದ ರಾಜಕಾರಣಕ್ಕೆ ಸಾಕ್ಷಿ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಮುಸ್ಲಿಂ ಸಂಘಟನೆಗಳಿಗೆ ಹಾಗೂ ಭಯೋತ್ಪಾದಕರಿಗೆ ಕಾಂಗ್ರೆಸ್ ಬೆಂಬಲಿಸುತ್ತದೆ ಎಂಬ ಧೈರ್ಯದಿಂದ ಹೀಗೆ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಶ್ರೀನಿವಾಸ ರಾವ್ ರಾಜೀನಾಮೆ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ವ್ಯವಸ್ಥಾಪಕರ ಹುದ್ದೆಗೆ ಎಸ್.ಕೆ. ಶ್ರೀನಿವಾಸರಾವ್ ರಾಜೀನಾಮೆ ನೀಡಿದ್ದಾರೆ.

ಆರೋಗ್ಯ ಮತ್ತು ವಯಸ್ಸಿನ ಕಾರಣಗಳಿಗಾಗಿ ಸೆ.8 ರಂದು ತಾವು ರಾಜೀನಾಮೆ ಸಲ್ಲಿಸಿರುವುದಾಗಿ ಅವರು ತಿಳಿಸಿದ್ದಾರೆ. ತಮ್ಮ ರಾಜೀನಾಮೆಯನ್ನು ಸ್ವೀಕರಿಸಲು ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು ಇಷ್ಟವಿಲ್ಲದೆ ದಯೆ ತೋರಿದ್ದಾರೆ ಮತ್ತು ಅದರಂತೆ ಸೇವೆಯಿಂದ ಬಿಡುಗಡೆ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ಸರ್ವರೂ ತೋರಿದ ಪ್ರೀತಿ ಮತ್ತು ವಾತ್ಸಲ್ಯಕ್ಕೆ ಕೃತಜ್ಞರಾಗಿರುವುದಾಗಿ ಶ್ರೀನಿವಾಸರಾವ್ ಸ್ಮರಿಸಿಕೊಂಡಿದ್ದಾರೆ.

ಎಎಸ್‌ಐ ಸಾವು ಪ್ರಕರಣ: 11 ಮಂದಿ ವಶಕ್ಕೆ

ಹುಬ್ಬಳ್ಳಿ: ಫ್ಲೈಓವರ್ ಕಾಮಗಾರಿ ವೇಳೆ ಕಬ್ಬಿಣದ ರಾಡ್ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ನಾಬಿರಾಜ್ ದಯಣ್ಣವರ (59) ಚಿಕಿತ್ಸೆ

ಫಲಕಾರಿಯಾಗದೆ ಕಿಮ್ಸ್ ಆಸ್ಪತ್ರೆಯಲ್ಲಿ ಭಾನುವಾರ ಸಾವನ್ನಪ್ಪಿದ್ದಾರೆ. ಎಎಸ್‌ಐ ನಾಬಿರಾಜ್ ಅವರು ಕಳೆದ ಮಂಗಳವಾರ ಸಂಜೆ ಕರ್ತವ್ಯಕ್ಕೆ ಬೈಕ್ ಮೇಲೆ ತೆರಳುತ್ತಿದ್ದರು. ಹಳೇ ಕೋರ್ಟ್ ಸರ್ಕಲ್ ಬಳಿ ನಡೆಯುತ್ತಿದ್ದ ಫ್ಲೈಓವರ್ ಕಾಮಗಾರಿಯ ಕಬ್ಬಿಣದ ರಾಡ್ ಅವರ ತಲೆಯ ಮೇಲೆ ಬಿದ್ದಿತ್ತು. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ನಂತರ ಕಿಮ್ಸ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ತಲೆಗೆ ಬಲವಾದ ಏಟು ಬಿದ್ದ ಕಾರಣ ಕೋಮಾಗೆ ಜಾರಿದ್ದ ನಾಬಿರಾಜ್ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಉಪನಗರ ಠಾಣೆ ಪೊಲೀಸರು, ಕಾಮಗಾರಿ ನಡೆಸಿದ್ದ ಕಂಪನಿಯ 11 ಸಿಬ್ಬಂದಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಮೀ ಟೂ: ಸಮಿತಿ ರಚನೆಗೆ ಪರ-ವಿರೋಧ

← ಮೊದಲಪುಟದಿಂದ

ಪರ-ವಿರೋಧ ಚರ್ಚೆಯ ಬಳಿಕ ಸಮಿತಿ ರಚಿಸಲು ಒಪ್ಪಿಗೆ ನೀಡಲಾಗಿದೆ. ಆದರೆ ಚೇಂಬರ್ ನೇತೃತ್ವದಲ್ಲೇ ಸಮಿತಿ ರಚನೆಯಾಗಬೇಕು, ತನಿಖೆ ನಡೆಬಯಬೇಕು ಎಂದು ಹಿರಿಯ ನಿರ್ಮಾಪಕರು ಆಗ್ರಹಿಸಿದ್ದಾರೆ.

ಸಭೆಯ ಬಳಿಕ ಮಾತನಾಡಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಅವರು, ಕನ್ನಡ ಚಿತ್ರರಂಗದಲ್ಲಿ ಈವರೆಗೆ ಸಮಿತಿ ರಚನೆಯಾಗಿಲ್ಲ. ಆದರೆ ಮಹಿಳೆಯರನ್ನು ರಕ್ಷಿಸುವ ದೃಷ್ಟಿಯಲ್ಲಿ ಕಮಿಟಿ ರಚನೆ ಬಗ್ಗೆ ಯೋಚಿಸಲಿದ್ದೇವೆ. ಚಿತ್ರರಂಗ ಪ್ರವೇಶಿಸಲು ಪೋಷಕರ ಮುಂದಾಳತ್ವ ಬೇಕು. ಆಯೋಗವೂ ಅದನ್ನೇ ಯೋಚಿಸುತ್ತಿದೆ ಎಂದರು.

ಸಮಿತಿಯೊಂದು ಆಗಬೇಕು ಎನ್ನುವ ಮನವಿ ಕೇಳಿಬಂದಿದೆ. ಸೋಮವಾರದ ಸಭೆಯಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ನಟಿಯರು ಬಂದಿದ್ದರು. ಶೂಟಿಂಗ್ ಹಾಗೂ ಇತರೆ ಕೆಲಸಗಳಿಂದಾಗಿ ಅವರು ಬಂದಿಲ್ಲ ಅನಿಸುತ್ತದೆ. ಕಮಿಟಿಯಲ್ಲಿ ಯಾರೆಲ್ಲಾ ಇರಬೇಕೆಂಬುದರ ಬಗ್ಗೆ ಕಾನೂನಿದೆ. ಎಲ್ಲರನ್ನೂ ಮುಂದಿನ ಸಭೆಗೆ ಕರೆಯಬೇಕು. ಸಿನಿಮಾದಲ್ಲಿ ನಟಿಸುವ ಹೆಣ್ಣುಮಕ್ಕಳಿಗೆ ಯಾವ ಸೌಲಭ್ಯ ಕೊಡಬೇಕೆಂಬುದರ ಬಗ್ಗೆಯೂ ಚರ್ಚೆಯಾಗಬೇಕಿದೆ ಎಂದರು.

ದೌರ್ಜನ್ಯ ಅಂತಾ ಬಂದಾಗ ಲೈಂಗಿಕವಾಗಿಯೂ ಇರಬಹುದು, ಮೌಖಿಕವಾಗಿಯೂ ಇರಬಹುದು. ಕನ್ನಡ ಚಿತ್ರರಂಗದಲ್ಲಿ ಇಂಥದ್ದೊಂದು ಕಮಿಟಿ ಆಗಿಲ್ಲ. ಈ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಇದೆ. ಸಿನಿಮಾರಂಗಕ್ಕೆ ಹೆಣ್ಣು ಮಕ್ಕಳನ್ನು ಕಳಿಸುವಂತಹ ವಾತಾವರಣವಿರಬೇಕು. ಆದರೆ ಚಿತ್ರರಂಗಕ್ಕೆ ಹೆಣ್ಣು ಮಕ್ಕಳನ್ನು, ಕುಟುಂಬಸ್ಥರನ್ನು ಕಳಿಸೋಕೆ ಹಿಂದೆ ಮುಂದೆ ನೋಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾತಾಡಲು ಅವಕಾಶ ನೀಡಿಲ್ಲ- ನೀತು: ಪಾಶ್ ಕಮಿಟಿಯಾಗಬೇಕು ಎನ್ನುವುದು ಸರಕಾರದ ನೀತಿಯಲ್ಲಿದೆ. ಆದರೆ ಸಭೆಯಲ್ಲಿ ಹೊಸ ಕಮಿಟಿ ವಿಚಾರವಾಗಿ ಚರ್ಚೆ ಮಾಡಲು ಬಂದೆವು. ನಿರ್ಮಾಪಕ, ಫಿಲ್ಮ್ ಚೇಂಬರ್ ಮಾಜಿ ಅಧ್ಯಕ್ಷ ಸಾ.ರಾ ಗೋವಿಂದು ಅವರು ನೀವು ಮಾತನಾಡಬೇಡಿ ಎಂದರು. ಈ ಮೂಲಕ ನನ್ನನ್ನು ಹತ್ತಿಕ್ಕುವ ಕೆಲಸ ಮಾಡಿದ್ದಾರೆ. ಆದರೆ ಈ ಯಾವುದಕ್ಕೂ ತಲೆಕೆಡಿಸಿಕೊಳ್ಳದೇ, ಎಲ್ಲವನ್ನು ಮಾತಾಡುತ್ತೇನೆ.

ನಮ್ಮ ಸಿನಿಮಾ ಇಂಡಸ್ಟ್ರಿಯಲ್ಲೂ ಸಮಸ್ಯೆಗಳಿವೆ. ಚಿಕ್ಕ ಚಿಕ್ಕ ವಿಷಯಗಳಿಗೆ ನಿರ್ಮಾಪಕರು ಹಾಗೂ ನಿರ್ದೇಶಕರು ಕೆಟ್ಟದಾಗಿ ಮಾತನಾಡಿರೋ ಉದಾಹರಣೆಗಳಿವೆ ಎಂದು ಅಸಮಾಧಾನ ಹೊರಹಾಕಿದರು. ನಾನು ಸಿನಿಮಾಗಳನ್ನು ಮಾಡುವಾಗ ಕೆಲವು ಬಾರಿ ಸಮಸ್ಯೆಗಳನ್ನು ಎದುರಿಸಿದ್ದೇನೆ. ಒಮ್ಮೆ ಸಿನಿಮಾ ವಿಚಾರವಾಗಿ ಫಿಲ್ಮ್ ಚೇಂಬರ್‌ನಲ್ಲಿ ದೂರು ನೀಡಲು ಬಂದಾಗ ಸರಿಯಾಗಿ ನ್ಯಾಯ ಸಿಗಲಿಲ್ಲ. ಇಂಥ ಸಂದರ್ಭದಲ್ಲಿ ನಾನು ಎಲ್ಲಿಗೆ ಹೋಗಬೇಕು? ಎಂದು ಪ್ರಶ್ನಿಸಿದರು.

ಸಭೆಯ ನಿರ್ಧಾರದಿಂದ ಅಸಮಾಧಾನವಾಗಿದೆ. ನಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಮಹಿಳೆಯರಿಗೆ ಸಿನಿಮಾ ರಂಗದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಆದರೆ ಆ ಕಾಲದಲ್ಲಿ ಯಾವ ನಟಿಯರೂ ತಮಗಾದ ಸಮಸ್ಯೆ ಹೇಳಿಕೊಂಡಿರಲಿಲ್ಲ. ಈಗ ನಟಿಯರು ಮುಂದೆ ಬರುತ್ತಿದ್ದಾರೆ. ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಅವರು ಯಾರಿಗೂ ತಿಳಿಯದಂತೆ ಸರ್ವೇ ಮಾಡುತ್ತೇವೆ ಎಂದಿರುವುದು ಉತ್ತಮ ವಿಷಯ.

- ಕವಿತಾ ಲಂಕೇಶ್ ಫೈರ್ ಅಧ್ಯಕ್ಷೆ

ಕಲ್ಯಾಣ ಕರ್ನಾಟಕಕ್ಕೆ 371(ಜೆ) ಕಾಂಗ್ರೆಸ್ ಕೊಡುಗೆ

ಕಲಬುರಗಿಯಲ್ಲಿ ಇಂದು ಸಚಿವ ಸಂಪುಟ ಸಭೆ | ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಚರ್ಚೆ: ಸಿಎಂ ಸಿದ್ದರಾಮಯ್ಯ

ಕಲಬುರಗಿ: ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಕಲಬುರಗಿಯಲ್ಲಿ ಮಂಗಳವಾರ 19ನೇ ರಾಜ್ಯ ಸಚಿವ ಸಂಪುಟ ಸಭೆ ನಡೆಸಲಾಗುತ್ತಿದ್ದು, ಈ ಭಾಗದ ಅಭಿವೃದ್ಧಿಗಾಗಿ ಪೂರಕ ಚರ್ಚೆ ಹಾಗೂ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

- ಕಲಬುರಗಿಯಲ್ಲಿ ಇಂದು 19ನೇ ರಾಜ್ಯ ಸಚಿವ ಸಂಪುಟ ಸಭೆ
- ಬಜೆಟ್ ನಲ್ಲಿ ಘೋಷಿಸಿದ ಯೋಜನೆ , ಇತರೆ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ
- ಜನರಿಗೆ ಉದ್ಯೋಗಾವಕಾಶ, ಪ್ರತ್ಯೇಕ ಸಚಿವಾಲಯ ರಚನೆ, ಪ್ರತ್ಯೇಕ ಕೈಗಾರಿಕಾ ನೀತಿಯ ಬಗ್ಗೆಯೂ ಚರ್ಚೆ

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಬಜೆಟ್ ನಲ್ಲಿ ಘೋಷಿಸಿದ ಯೋಜನೆ ಹಾಗೂ ಇತರ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲಾಗುವುದು. ಈ ಭಾಗದ ಜನರಿಗೆ ಉದ್ಯೋಗಾವಕಾಶ ಹಾಗೂ ಪ್ರತ್ಯೇಕ ಸಚಿವಾಲಯ ರಚನೆ, ಪ್ರತ್ಯೇಕ ಕೈಗಾರಿಕಾ ನೀತಿಯ ಬಗ್ಗೆಯೂ ಚರ್ಚಿಸಲಾಗುವುದು ಎಂದರು.

371 (ಜೆ) ಜಾರಿಗೆ ತಂದಿದ್ದು ಕಾಂಗ್ರೆಸ್ ಸರಕಾರ: ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರಕಾರದ ಅವಧಿಯಲ್ಲಿ 371 (ಜೆ) ಕಾನೂನು ತರಲಾಗಿದ್ದು, ಇದಕ್ಕಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾಜಿ ಮುಖ್ಯಮಂತ್ರಿ ಧರಂಸಿಂಗ್ ಅವರು ಶ್ರಮವಹಿಸಿದ್ದರು. 2013ರಲ್ಲಿ ಈ ಕಲಂ ಅನ್ನು ಕರ್ನಾಟಕದಲ್ಲಿ ಜಾರಿಗೆ ತರಲು ಕಾಂಗ್ರೆಸ್ ಸರಕಾರ ಪ್ರಯತ್ನಿಸಿತೇ ಹೊರತು ಬಿಜೆಪಿಯವರಲ್ಲ. ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಕೇಂದ್ರ ಸರಕಾರ 371(ಜೆ) ಕಲಂ ಅನ್ನು ಜಾರಿಗೆ ತರಲು ಅಂದಿನ ಉಪಪ್ರಧಾನಿ ಎಲ್.ಕೆ ಅಡ್ವಾಣಿ ತಿರಸ್ಕರಿಸಿದ್ದರು ಎಂದು ಸಿದ್ದರಾಮಯ್ಯ ಬಿಜೆಪಿಗೆ ತಿರುಗೇಟು ನೀಡಿದರು.

ಕಲಬುರಗಿ ತಾಲೂಕಿನ ಕವಲಗಿ (ಕೆ) ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ತಿಂಥಣಿ ಕಾಗಿನೆಲೆ ಪೀಠದ ಜಗದ್ಗುರು ಸಿದ್ದರಾಮಾನಂದಪುರಿ ಶ್ರೀ, ಶಾಸಕ ಎಂ. ವೈ.ಪಾಟೀಲ, ಸಚಿವರಾದ ಭೈರತಿ ಸುರೇಶ್, ಶರಣ ಪ್ರಕಾಶ್ ಪಾಟೀಲ್ ಉಪಸ್ಥಿತರಿದ್ದರು.

ನಾಗಮಂಗಲ ಪ್ರಕರಣ: ಅಧಿಕಾರಿಗಳ ಅಮಾನತು

ನಾಗಮಂಗಲದ ಗಲಭೆ ಪ್ರಕರಣದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿ, ಅಲ್ಲಿ ಈಗ ಪರಿಸ್ಥಿತಿ ಶಾಂತವಾಗಿದೆ. ಗಲಭೆಗಳಿಗೆ ಪೊಲೀಸರ ಕರ್ತವ್ಯ ವೈಫಲ್ಯವೇ ಕಾರಣ ಎಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಉಪಪೊಲೀಸ್ ವರಿಷ್ಠಾಧಿಕಾರಿ ಹಾಗೂ ಇನ್ಸ್ ಪೆಕ್ಟರ್‌ರನ್ನು ಅಮಾನತು ಗೊಳಿಸಲಾಗಿದೆ. ಈ ಪ್ರಕರಣದಲ್ಲಿ ಹಾನಿಗೊಳಗಾದ ಅಂಗಡಿ -ಮುಂಗಟ್ಟು, ವಾಹನಗಳಿಗೆ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

5000 ಕೋಟಿ ರು. ಅನುದಾನ: ಕಾಂಗ್ರೆಸ್ ಸರಕಾರದ ಮೇಲೆ ಕಲ್ಯಾಣ ಕರ್ನಾಟಕದ ಜನರ ನಿರೀಕ್ಷೆಯಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಡವರ ಪರವಾದ ಸರಕಾರ ನಮ್ಮದು. ಆದ್ದರಿಂದ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಕೆಕೆಆರ್‌ಡಿಬಿಗೆ 5000 ಕೋಟಿ ರು.ಗಳನ್ನು ನೀಡಲಾಗಿದೆ ಎಂದರು.

ಈ ವೇಳೆ ಸಂಸದ ರಾಧಾಕೃಷ್ಣ ದೊಡ್ಡಮನಿ, ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್, ಪ್ರಿಯಾಂಕ್ ಖರ್ಗೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್, ಶಾಸಕ ಅಲ್ಲಮಪ್ರಭು ಪಾಟೀಲ್, ವಿಪ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ್, ಜಗದೇವ್ ಗುತ್ತೇದಾರ್ ಮೊದಲಾದವರಿದ್ದರು.

ಎಚ್‌ಡಿಕೆ, ಬಿಎಸ್‌ವೈ ನನ್ನನ್ನು ಮುಗಿಸಲು ಆಗಲ್ಲ

ಕಲಬುರಗಿ: ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್ ಯಡಿಯೂರಪ್ಪ ನನ್ನನ್ನು ಮುಗಿಸ್ತೀನಿ ಅಂದುಕೊಂಡಿದ್ದರೆ ಅದು ಅವರ ಮೂರ್ಖತನ. ನನ್ನನ್ನು ಅಷ್ಟು ಸುಲಭ ಅಂದುಕೊಳ್ಳಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ನೇರ ಸವಾಲೆಸೆದರು.

ಕಲಬುರಗಿ ತಾಲೂಕಿನ ಕವಲಗಿ (ಕೆ) ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಲೋಕಾರ್ಪಣೆಗೊಳಿಸಿ ಮಾತನಾಡಿ, ಬ್ರಿಟೀಷರ ಜತೆ ನಮ್ಮವರು ಕೈಜೋಡಿಸಿದ್ದರಿಂದಲೇ 200 ವರ್ಷ ಗುಲಾಮಗಿರಿ ಅನುಭವಿಸಿದೆವು. ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದುಕೊಟ್ಟವರು ನಮ್ಮವರೇ ಆದ ಮನೆ ಮುರುಕರು. ನಮ್ಮ ಸಮಾಜದಲ್ಲೇ ಇಂತಹ ಮನೆ ಮುರುಕರು ಹಿಂದೆಯೂ ಇದ್ದರು. ಮುಂದೆಯೂ ಇರುತ್ತಾರೆ. ಇಂಥವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದರು.

ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಬಡವರ, ಮಧ್ಯಮ ವರ್ಗದವರ ಕಲ್ಯಾಣಕ್ಕೆ ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದಕ್ಕೆ ಪಟ್ಟಭದ್ರರು ಷಡ್ಯಂತ್ರ ನಡೆಸುತ್ತಿದ್ದಾರೆ. 40 ವರ್ಷದಿಂದ ಸಣ್ಣ ತಪ್ಪು ಮಾಡದವನು ಈಗ ಮಾಡ್ತೀನಾ.? ಹಿಂದೆಯೂ ಮಾಡಿಲ್ಲ, ಮುಂದೆಯೂ ಮಾಡಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶದಲ್ಲಿ ಆಹಾರ ಭದ್ರತೆ ಕಾಯ್ದೆ ಜಾರಿಗೆ ಬಂದಿದ್ದು ಕಾಂಗ್ರೆಸ್ ಅವಧಿಯಲ್ಲಿ. ನಾವು ನಮ್ಮ ಜನರಿಗೆ 5 ಕೆಜಿ ಹೆಚ್ಚುವರಿ ಅಕ್ಕಿ ಕೊಡಬೇಕು ಎಂದು ತೀರ್ಮಾನಿಸಿದರೆ ನರೇಂದ್ರ ಮೋದಿಯವರು ಅಕ್ಕಿ ಕೊಡಲು ಬಿಡಲಿಲ್ಲ. ಅದಕ್ಕಾಗಿ ನಾವು ಅಕ್ಕಿ ಬದಲಿಗೆ 5ಕೆಜಿ ಅಕ್ಕಿಯ ಹಣ ಕೊಡುತ್ತಿದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಎಲೆಮರೆಕಾಯಿಯಾಗಿ ಉಳಿದ ಮನು ನಿಚ್ಚಾನಿ

ಬೆಂಗಳೂರು: ಸಿಂಧಿ ಸಮಾಜದವರಾದ ಮನು ನಿಚ್ಚಾನಿ ಅವರು ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಪುತ್ರಿ ಮಮತಾ ಅವರೊಂದಿಗೆ ವಿವಾಹವಾಗಿ ಕರ್ನಾಟಕದವರಾಗಿಯೇ ಜೀವನ ಸಾಗಿಸಿದ್ದು ವಿಶೇಷ. ಉದ್ಯಮಿಯಾಗಿ ಸಮಾಜದೊಂದಿಗೆ ಬೆರೆತಿದ್ದರು.



ರಾಜಕೀಯ ಆಸಕ್ತಿಯನ್ನು ಹೊಂದಿರದ ಇವರು ತಮ್ಮ ಪತ್ನಿಯ ರಾಜಕೀಯ ಆಸಕ್ತಿಗೆ ಪ್ರೋತ್ಸಾಹವನ್ನು ನೀಡಿದ್ದರು. ಮನು ನಿಚ್ಚಾನಿ ಅವರು ಎಲೆ ಮರೆಯ ಕಾಯಿಂತೆ ಬದುಕಿದ್ದವರು. ಹಲವಾರು ಸಾಮಾಜಿಕ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೆ, ಉದ್ಯಮ ಸಂಬಂಧಿ ಸಮ್ಮೇಳನ ದಲ್ಲಿಯೂ ಭಾಗವಹಿಸುತ್ತಿದ್ದರು.

ಬಲಗೈನಲ್ಲಿ ನೀಡಿದ ದಾನ ಎಡಗೈಗೆ ಗೊತ್ತಾಗಬಾರದು ಎಂಬ ಮನಃಸ್ಥಿತಿಯವರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಧಾರ್ಮಿಕ ಚಿಂತನೆಯಲ್ಲಿ ತೊಡಗಿಸಿಕೊಂಡಿದ್ದರು. ಯಾವುದೇ ಪ್ರಚಾರವನ್ನು ಬಯಸದೇ ಸಮಾಜ ಹಿತ ಕಾರ್ಯದಲ್ಲಿ ನಿರತರಾಗಿದ್ದರು ಎನ್ನುವುದಾಗಿ ಅವರ ಕುಟುಂಬದ ಆತ್ಮೀಯರು ತಿಳಿಸಿದ್ದಾರೆ.

ಸಾತ್ವಿಕ ವ್ಯಕ್ತಿತ್ವದ ಮನು ಅವರು ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರ ವರೆಗೂ ಬೆರೆಯುವ ಸ್ವಭಾವ ಹೊಂದಿದ್ದರು. ಅವರು ಧಾನ-ಧರ್ಮ ಮಾಡುವ ಕೆಲಸ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಉತ್ತಮ ವ್ಯಕ್ತಿತ್ವ ಹೊಂದಿದ್ದ ಅವರ ನಿಧನ ಕುಟುಂಬದರಾದ ನಮಗೆ ತುಂಬಲಾರದ ನಷ್ಟ. ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ನಮ್ಮ ಕುಟುಂಬದವರ ಪರವಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ಕುಟುಂಬಸ್ಥರಾದ ಹಾಗೂ ಸಿದ್ದಾಪುರ ಶಿಕ್ಷಣ ಪ್ರಸಾರಕ ಸಂಸ್ಥೆಯ ಉಪಾಧ್ಯಕ್ಷ ಡಾ. ಶಶಿಭೂಷಣ ಹೆಗಡೆ ತಿಳಿಸಿದ್ದಾರೆ.

ಪಂಚಮಸಾಲಿ ಮೀಸಲು ಬೇಡಿಕೆ | ಹೋರಾಟ ತೀವ್ರ

22ರೊಳಗೆ ನಿರ್ಧಾರ ಕೈಗೊಳ್ಳಿ

ಸರಕಾರಕ್ಕೆ ಜಯಮೃತ್ಯುಂಜಯ ಸ್ವಾಮೀಜಿ ಗಡುವು

ಬೆಳಗಾವಿ: ಪಂಚಮಸಾಲಿ ಸಮಾಜಕ್ಕೆ ಮೀಸಲು ಕೊಡಿಸಲು ಸೆ.22ಕ್ಕೆ ಬೆಳಗಾವಿಯಲ್ಲಿ ರಾಜ್ಯಮಟ್ಟದ ಮಹಾ ಪರಿಷತ್ತಿನ ಸಭೆ ಆಯೋಜಿಸಲಾಗಿದೆ ಎಂದು ಪಂಚಮ ಸಾಲಿ ಕೂಡಲಸಂಗಮ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸೆ.22ರೊಳಗಾಗಿ ಸಿಎಂ ಸಿದ್ದರಾಮಯ್ಯ ನೀಡಿರುವ ಗಡುವಿನ ಕುರಿತು ನಮ್ಮ ಸಮಾಜದ ಕಾನೂನುತಜ್ಞರ ಜೊತೆಗೆ ಚರ್ಚೆ ನಡೆಸದಿದ್ದರೆ, ಮಹಾ ಪರಿಷತ್ತಿನ ಸಭೆಯಲ್ಲಿ ಕಠಿಣ ನಿರ್ಧಾರ ಕೈಕೊಳ್ಳಲು ತೀರ್ಮಾನಿಸಲಾಗಿದೆ ಎಂದರು. ಈ ಸಭೆಯಲ್ಲಿ ರಾಜ್ಯದ ಎಲ್ಲ ಪಂಚಮಸಾಲಿ ಸಮಾಜ, ಮಲೆಗೌಡ ಸಮಾಜದವರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸರಕಾರದ ವಿರುದ್ಧ ಆಕ್ರೋಶ: ಪಂಚಮ ಸಾಲಿ ಸಮಾಜಕ್ಕೆ 2ಎ ಮೀಸಲು ನೀಡಬೇಕೆಂದು 2012ರಿಂದಲೇ ಹೋರಾಟ ಮಾಡುತ್ತಿದ್ದೇವೆ. ನಮ್ಮ ಸಮಾಜದ ಮತ ಪಡೆದು ಅಧಿಕಾರಕ್ಕೆ ಬರುವ ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಂಚಮಸಾಲಿ ಸಮಾಜಕ್ಕೆ ಮೀಸಲು ಕೊಡಿಸುವ ನಿಟ್ಟಿನಲ್ಲಿ ನಮ್ಮ ಸಮಾಜದ 20 ಶಾಸಕರು ಅಧಿವೇಶನದ ಸದನದಲ್ಲಿ ಚರ್ಚೆ ಮಾಡಿಲ್ಲ. ಈಗಾಗಲೇ ನಮ್ಮ ಸಮಾಜದವರು ಶಾಸಕರ ಮನೆಗೆ ಪತ್ರ ಚಳವಳಿ ಮಾಡಿದ್ದರು. ಆದರೆ ಇಲ್ಲಿಯವರೆಗೂ ಧ್ವನಿ ಎತ್ತಿಲ್ಲ.

- ಜಯಮೃತ್ಯುಂಜಯ ಸ್ವಾಮೀಜಿ
ಪಂಚಮಸಾಲಿ ಕೂಡಲಸಂಗಮ ಪೀಠ

ನಾಗಮಂಗಲ ಗಲಭೆ: ಕಾಣದ ಕೈಗಳ ಪತ್ತೆ ಮಾಡಿ

ಶಾಸಕ ಅಶ್ವತ್ಥನಾರಾಯಣ ನೇತೃತ್ವದ ಸತ್ಯಶೋಧನಾ ಸಮಿತಿ ನಾಗಮಂಗಲಕ್ಕೆ ಭೇಟಿ

ನಾಗಮಂಗಲ: ಕೇರಳದ ಇಬ್ಬರು ನಾಗಮಂಗಲ ಗಲಭೆಯಲ್ಲಿ ಭಾಗಿಯಾಗಿದ್ದಾರೆ. ಅವರಿಗೆ ಪಿ.ಎಫ್.ಐ ನಂಟು ಇದೆ ಎಂಬ ಆರೋಪ ಕೇಳಿಬಂದಿದೆ. ಹೀಗಾಗಿ ಘಟನೆ ಹಿಂದಿರುವ ಕಾಣದ ಕೈಗಳನ್ನು ಪತ್ತೆಮಾಡಲು ಸಮಗ್ರ ತನಿಖೆಯಾಗಬೇಕು ಎಂದು ಬಿಜೆಪಿ ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಆಗ್ರಹಿಸಿದರು.

ಪಟ್ಟಣದಲ್ಲಿ ಗಲಭೆಯಿಂದ ಹಾನಿಯಾದ ಅಂಗಡಿಗಳಿಗೆ ಮತ್ತು ಬದ್ರಿಕೊಪ್ಪಲು ಬಡಾವಣೆಗೆ ಸೋಮವಾರ ಅಶ್ವತ್ಥ ನಾರಾಯಣ ನೇತೃತ್ವದ ಬಿಜೆಪಿ ಸತ್ಯ ಶೋಧನಾ ಸಮಿತಿ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಈ ಸಂದರ್ಭದಲ್ಲಿ ಮಾತನಾಡಿದ, ಮಾದಕವಸ್ತು ಸೇರಿದಂತೆ ಬೇರೆ ಬೇರೆ ಚಟುವಟಿಕೆ ನಡೆಯುತ್ತಿದೆ. ಗಲಭೆ ಪ್ರಕರಣದ ಆಳ-ಅಗಲ ತಿಳಿಯುವ ಕೆಲಸವಾಗಬೇಕಿದ್ದು, ಸತ್ಯಾಸತ್ಯತೆ ಹೊರಬರಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಸರಕಾರ ವಿಫಲ: ಕಾಂಗ್ರೆಸ್ ಸರಕಾರ ಆಡಳಿತ ನಡೆಸುವಲ್ಲಿ ಸಂಪೂರ್ಣ ವಿಫಲವಾಗಿದ್ದು, ತುಷ್ಟೀಕರಣದ ರಾಜಕಾರಣ ಮಾಡುತ್ತಿದೆ. ಗಣೇಶ ಮೂರ್ತಿ ಇಟ್ಟವರನ್ನೇ ಬಂಧಿಸುತ್ತಾರೆ ಎಂದರೆ ಅವರ ಮನಸ್ಥಿತಿ ಹೇಗಿದೆ ಎಂಬುದು ಅರ್ಥವಾಗುತ್ತದೆ. ಕಾಂಗ್ರೆಸ್ ಸರಕಾರಕ್ಕೆ ಸ್ಪಷ್ಟ ಎಚ್ಚರಿಕೆ ನೀಡಲೆಂದೇ ಇಲ್ಲಿಗೆ ಬಂದಿದ್ದೇವೆ. ಗಲಭೆಗಳ ಬಗ್ಗೆ ಎನ್.ಐ.ಎ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

ವಿಧಾನಮಂಡಲದಲ್ಲೂ ಚರ್ಚೆ: ನಷ್ಟ ಅನುಭವಿಸಿದ ಅಂಗಡಿ ಮಾಲೀಕರಿಂದ ಮಾಹಿತಿ ಪಡೆದುಕೊಂಡು, ಸಾಂತ್ವನ ಹೇಳಿದ್ದೇವೆ. ಕಾನೂನಾತ್ಮಕವಾಗಿ ಕ್ರಮ ಜರುಗಿಸುವ ಎಲ್ಲ ಮಾಹಿತಿ ಕಲೆ ಹಾಕಿದ್ದೇವೆ. ಘಟನೆಯಿಂದ ನೊಂದವರಿಗೆ ನ್ಯಾಯ ಮತ್ತು ಪರಿಹಾರ ಸಿಗಬೇಕು ಎಂಬುದು ನಮ್ಮ ಉದ್ದೇಶ. ವರದಿ ತಯಾರಿಸಿ, ಪಕ್ಷದ ವೇದಿಕೆಯಲ್ಲಿ ಮಂಡಿಸು ತ್ತೇವೆ ಹಾಗೂ ರಾಜ್ಯ ಸರಕಾರಕ್ಕೂ ಕೊಡುತ್ತೇವೆ. ವಿಧಾನಮಂಡಲದಲ್ಲಿ ಈ ಬಗ್ಗೆ ಕೂಲಂಕಷವಾಗಿ ಚರ್ಚಿಸುತ್ತೇವೆ ಎಂದು ಡಾ. ಅಶ್ವತ್ಥನಾರಾಯಣ್ ತಿಳಿಸಿದರು.

ಕಾಡುಗಳಲ್ಲಿ ತರಬೇತಿ: ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಮಾತನಾಡಿ, ಬದ್ರಿಕೊಪ್ಪಲು ಗ್ರಾಮದ ಯುವಕರು ಭಯದಿಂದ ಊರು ತೊರೆದಿದ್ದಾರೆ. ಕೆಲವರನ್ನು ಬಂಧಿಸಲಾಗಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ಕೇರಳ ಮೂಲದವರು ಇಲ್ಲಿಗೆ ಬಂದು ಕಾಡುಗಳಲ್ಲಿ ತರಬೇತಿ ಪಡೆದಿದ್ದಾರೆ ಎಂಬ ಮಾಹಿತಿ ಇದೆ. ಆಯ್ದ ಅಂಗಡಿಗಳಿಗೆ ಬೆಂಕಿ ಹಚ್ಚಿ ದ್ದಾರೆ. ಇದು ಪೂರ್ವಯೋಜಿತ ಎಂದು ಅನಿಸುತ್ತಿದೆ ಎಂದರು.

ಪಟ್ಟಣದಲ್ಲಿ ಗಲಭೆಯಿಂದ ಹಾನಿಯಾದ ಅಂಗಡಿಗಳಿಗೆ ಮತ್ತು ಬದ್ರಿಕೊಪ್ಪಲು ಬಡಾವಣೆಗೆ ಸೋಮವಾರ ಅಶ್ವತ್ಥ ನಾರಾಯಣ ನೇತೃತ್ವದ ಬಿಜೆಪಿಯ ಸತ್ಯಶೋಧನಾ ಸಮಿತಿ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಗೃಹಲಕ್ಷ್ಮಿ ಎಂದಿಗೂ ನಿತ್ಯ, ಸತ್ಯ ನಿರಂತರ: ಸಚಿವೆ ಲಕ್ಷ್ಮೀ

ಬೆಂಗಳೂರು: ಕರ್ನಾಟಕದ ಬಹುನಿರೀಕ್ಷಿತ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ಎಂದಿಗೂ ಬಂದ್ ಆಗುವುದಿಲ್ಲ. ಇದು ನಿತ್ಯ, ಸತ್ಯ, ನಿರಂತರ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಹಲವು ಬಾರಿ ಗೃಹಲಕ್ಷ್ಮಿ ಬಗ್ಗೆ ಸ್ಪಷ್ಟನೆ ನೀಡಿದ್ದೇನೆ. ಮತ್ತೊಮ್ಮೆ ಸ್ಪಷ್ಟನೆ ಕೊಡುತ್ತಿದ್ದೇನೆ. ಗೃಹಲಕ್ಷ್ಮಿ ಹಣ ನಿತ್ಯ, ಸತ್ಯ, ನಿರಂತರ. ಕಳೆರಡು ತಿಂಗಳಿಂದ ಬಾರದಿರುವ ಹಣ ಒಂದೇ ಬಾರಿ ಅಕೌಂಟ್‌ಗೆ ಪಾವತಿಯಾಗಲಿದೆ. ಲಿಂಗತ್ವ ಅಲ್ಪಸಂಖ್ಯಾತರಿಗೆ 3 ತಿಂಗಳ ಹಿಂದಷ್ಟೆ ಅರ್ಜಿ ಹಾಕಲು ಅವಕಾಶ ನೀಡಲಾಗಿತ್ತು. ಅವರಿಗೂ ಕೂಡ ಅಷ್ಟು ಬಾಕಿ ಹಣ ಒಟ್ಟಿಗೆ ಜಮಾ ಆಗಲಿದೆ ಎಂದರು.

ಚಿತ್ರರಂಗದ ಕಲಾವಿದೆಯರೊಂದಿಗೆ ಮಹಿಳಾ ಆಯೋಗ ಸಭೆ ನಡೆಸಿದೆ. ಕೇಳಿಬಂದಿರುವ ದೂರಿಗೆ ಸಂಬಂಧಿಸಿದಂತೆ ಖಂಡಿತಾ ಸಮಿತಿ ರಚನೆಯಾಗಬೇಕು. ಮುಖ್ಯಮಂತ್ರಿಗಳು ಈಗಾಗಲೇ ಮಾಹಿತಿ ಪಡೆದಿದ್ದಾರೆ ಎಂದು ಹೇಳಿದರು.

ಪಾಲಕರು ನಿರಾಕರಿಸಿದ ಕಾರಣ ಆರ್ಗ್ಯಾನಿಕ್ ಬೆಲ್ಲದ ಬದಲಿಗೆ ಗಟ್ಟಿ ಬೆಲ್ಲವನ್ನೇ ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುವುದು. ಒಂದೂವರೆ ವರ್ಷದ ಹಿಂದಿನಿಂದಲೇ ಅಂಗನವಾಡಿ ಕೇಂದ್ರಗಳಲ್ಲಿ ಆರ್ಗ್ಯಾನಿಕ್ ಬೆಲ್ಲ ನೀಡಲಾಗುತ್ತಿತ್ತು. ಆದರೆ, ಪಾಲಕರು ವಿರೋಧಿಸಿದ ಕಾರಣ, ಅ.1ರಿಂದಲೇ ಗಟ್ಟಿ ಬೆಲ್ಲ ನೀಡಲಾಗುವುದು.

- ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಸಮಗ್ರ ಪ್ರಗತಿಗೆ ಇಲಾಖಾವಾರು ನೀಲನಕ್ಷೆಗೆ ನಿರ್ಧಾರ

ಸಿಎಂ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ | ರಾಜ್ಯದ ಜತೆಗೆ ಕಲ್ಯಾಣ ಕರ್ನಾಟಕದ ಚರ್ಚೆ: ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ: ಕಲ್ಯಾಣ ಕರ್ನಾಟಕ ಉತ್ಸವದ ಉದ್ಘಾಟನೆಗೆ ಸಿಎಂ ಸಿದ್ದರಾಮಯ್ಯ ಆಗಮಿಸಲಿದ್ದು, ಬೆಳಗ್ಗೆ ಸರ್ದಾರ ವಲ್ಲಭಭಾಯಿ ಪಟೇಲ್ ಪ್ರತಿಮೆ ಮಾಲಾರ್ಪಣೆ ಮಾಡಿ ನಂತರ ಡಿಎಆರ್ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಿ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ ಜನರ ಬಹು ನಿರೀಕ್ಷೆಯಂತೆ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕಲಬುರಗಿಯಲ್ಲಿ ಸೆಪ್ಟೆಂಬರ್ 17ರಂದು ಸಚಿವ ಸಂಪುಟ ಸಭೆ ನಡೆಸಲಾಗುತ್ತಿದೆ. ಈ ಭಾಗದ ಇಲಾಖಾವಾರು ಸಮಗ್ರ ಅಭಿವೃದ್ಧಿಯ ಕುರಿತು ಚರ್ಚಿಸಿ ನೀಲನಕ್ಷೆ ತಯಾರಿಸುವ ಬಗ್ಗೆಯೂ ನಿರ್ಧರಿಸಲಾಗುವುದು ಎಂದರು.

ಮ್ಯಾಕ್ರೋ ಯೋಜನೆಯಡಿ ಕಾರ್ಯಕ್ರಮ: ನಮ್ಮ ಭಾಗದ ಎಲ್ಲ ಶಾಸಕರ ಬೇಡಿಕೆಯ ಪಟ್ಟಿ ನೋಡಿದರೆ ರಾಜ್ಯದ ಬಜೆಟ್ ಗಾತ್ರದಷ್ಟಾಗುತ್ತದೆ. ಆದರೆ ಮ್ಯಾಕ್ರೋ ಯೋಜನೆಯಡಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಕೊನೇಪಕ್ಷ ಈ ಸಲ ಯೋಜನೆಗಳ ಬಗ್ಗೆ ಚರ್ಚಿಸಿದರೆ ಮುಂದಿನ ವರ್ಷವಾದರೂ ಯೋಜನೆ ಬರುತ್ತವೆ ಎಂದು ಖರ್ಗೆ ತಿಳಿಸಿದರು.

2.5 ಲಕ್ಷ ಹುದ್ದೆ ಹಂತಹಂತವಾಗಿ ಭರ್ತಿ: ಮುಂದಿನ ಎರಡು ವರ್ಷದಲ್ಲಿ ಕಲ್ಯಾಣಪಥ ಯೋಜನೆಯಡಿ ರಸ್ತೆಗಳ ರಿಪೇರಿ ಹಾಗೂ ಉನ್ನತೀಕರಣ ಮಾಡಲಾಗುವುದು. ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ನಮ್ಮ ಭಾಗದ ಅಭಿವೃದ್ಧಿ ವಿಚಾರದಲ್ಲಿ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಅವರು ಭರವಸೆ ನೀಡಿದ ಅವರು, ರಾಜ್ಯದಲ್ಲಿ ಒಟ್ಟು 2.5 ಲಕ್ಷ ಸರಕಾರಿ ಹುದ್ದೆಗಳು ಖಾಲಿ ಇದ್ದು ಹಂತಹಂತವಾಗಿ ತುಂಬಲಾಗುವುದು ಎಂದು ಪ್ರಿಯಾಂಕ್ ಖರ್ಗೆ ವಿವರಿಸಿದರು. ಈ ಸಂದರ್ಭದಲ್ಲಿ ವಿಪ ಸದಸ್ಯ ಜಗದೇವ್ ಗುತ್ತೇದಾರ, ಕುಡಾ ಅಧ್ಯಕ್ಷ ಮಜರ್ ಆಲಂಖಾನ್, ಡಿಸಿ ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿಇಒ ಭಂವರಸಿಂಗ್ ಮೀನಾ ಸೇರಿ ಅನೇಕರು ಇದ್ದರು.

2 ವರ್ಷದಲ್ಲಿ 25 ಸಾವಿರ ಹುದ್ದೆ ಭರ್ತಿ

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಮಾತನಾಡಿ, 2013-18ರ ಅವಧಿಯಲ್ಲಿ ಕಕ ಭಾಗದ13,000 ಶಿಕ್ಷಕರು ಸೇರಿದಂತೆ 30,000 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಮುಂದಿನ ಒಂದು ವರ್ಷದ ಅವಧಿಯಲ್ಲಿ 6500 ಶಿಕ್ಷಕರು ಸೇರಿ 15000 ಖಾಲಿ ಹುದ್ದೆ ತುಂಬಲಾಗುವುದು ನಂತರ ಎರಡು ವರ್ಷದ ಅವಧಿಯಲ್ಲಿ 25,000 ಹುದ್ದೆ ತುಂಬಲಾಗುವುದು. ನಮ್ಮ ಸರಕಾರದ ಅವಧಿ ಮುಗಿಯುವುದ ರೊಳಗೆ 50,000 ಖಾಲಿಹುದ್ದೆ ತುಂಬುವುದಾಗಿ ಹಾಗೂ ವಾರ್ಷಿಕ 5000 ಕೋಟಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಹಿರಿಯ ನಾಯಕರಾದ ಖರ್ಗೆ ಹಾಗೂ ಸಿಎಂ ಭರವಸೆ ನೀಡಿದ್ದು, ಅದಕ್ಕೆ ಬದ್ಧವಾಗಿದ್ದೇವೆ ಎಂದರು.

ಬಿಜೆಪಿಯವರನ್ನು ಜನರು ತಿರಸ್ಕಾರ ಮಾಡಿದ್ದಾರೆ. ಅವರು ಸಕರಾತ್ಮಕ ರಾಜಕೀಯ ಮಾಡದೆ ಜನರ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಬಿಜೆಪಿಯವರಿಗೆ ಮತ್ತು ಸತ್ಯಕ್ಕೆ ಸಂಬಂಧವೇ ಇಲ್ಲ.

- ಡಾ.ಶರಣಪ್ರಕಾಶ್ ಪಾಟೀಲ್ ವೈದ್ಯಕೀಯ ಶಿಕ್ಷಣ ಸಚಿವ

ಮುನಿರತ್ನ ವಿರುದ್ಧ ಪ್ರತಿಭಟನೆ ಮಾಡಲಿ

ಪ್ರತಿಭಟನೆ ಮಾಡುವುದಿದ್ದರೆ ಶಾಸಕ ಮುನಿರತ್ನ ವಿರುದ್ಧ ಮಾಡಲಿ. ಅದಕ್ಕೂ ಮೊದಲು ಶಿಕ್ಷಣ ಸಂಸ್ಥೆಗಾಗಿ ಪಡೆದ ಜಾಗದಲ್ಲಿ ಬಿರಿಯಾನಿ ಹೋಟೆಲ್ ನಡೆಸುತ್ತಿರುವ ಬಗ್ಗೆ ಸ್ಪಷ್ಟನೆ ನೀಡಲಿ. ಅದು ಬಿಟ್ಟು ಇಲ್ಲಿ ಬಂದು ನಾಟಕ ಮಾಡಬಾರದು ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿಗೆ ಸಚಿವ ಖರ್ಗೆ ತಿರುಗೇಟು ನೀಡಿದರು. ನಾಗಮಂಗಲ ಗಲಭೆ ವಿಚಾರ, ಸಮಗ್ರ ತನಿಖೆ ನಡೆಸಲಾಗುತ್ತಿದೆ. ಗಲಭೆ ಬಗ್ಗೆ ಪರಿಶೀಲನೆ ಮಾಡಲು ಬಿಜೆಪಿ ಸತ್ಯಶೋಧನಾ ಸಮಿತಿ ರಚಿಸಿರುವ ಬಗ್ಗೆ ವ್ಯಂಗ್ಯವಾಡಿದ ಅವರು, ರಾಜ್ಯದಲ್ಲಿ ಬರಗಾಲ ಇದ್ದಾಗ ಬಿಜೆಪಿ ಯಾಕೆ ಸತ್ಯಶೋಧನಾ ಸಮಿತಿ ರಚಿಸಲಿಲ್ಲ ಎಂದು ಪ್ರಶ್ನಿಸಿದರು.

ಗಣೇಶ ಮೂರ್ತಿಗೆ ಹಾಗೂ ನಾಗಮಂಗಲ ಗಲಭೆ ಬಗ್ಗೆ ಮಾತನಾಡುವ ಪ್ರಧಾನಿ ಯಡಿಯೂರಪ್ಪನವರ ಪೋಕ್ಸೊ ಕೇಸ್, ಮುನಿರತ್ನ ಪ್ರಕರಣದ ಬಗ್ಗೆ ಯಾಕೆ ಮಾತನಾಡಲ್ಲ? ಹೇಗಿದ್ದರೂ ಪ್ರಧಾನಿಗೆ ಮಾಹಿತಿ ಹೋಗಿರುತ್ತದೆ ತಾನೇ? ಅದರ ಬಗ್ಗೆಯೂ ಮಾತನಾಡಲಿ.

-ಪ್ರಿಯಾಂಕ್ ಖರ್ಗೆ ಸಚಿವ

ವರದಕ್ಷಿಣೆ ಕಿರುಕುಳ: ನವವಿವಾಹಿತೆ ಆತ್ಮಹತ್ಯೆ

ಚಿಂತಾಮಣಿ: ಗಂಡನ ಮನೆಯವರ ವರದಕ್ಷಿಣೆ ಕಿರುಕುಳಕ್ಕೆ ತಾಳಲಾರದೇ ಯುವತಿ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಚಿಂತಾಮಣಿ ನಗರದಲ್ಲಿ ನಡೆದಿದೆ.

ಮೃತ ಯುವತಿಯನ್ನು ನಗರದ ಗಾಂಧಿನಗರ ಬಿಂದುಶ್ರೀ (22) ಎನ್ನಲಾಗಿದೆ. ಕಳೆದ 7 ತಿಂಗಳ ಹಿಂದೆಯಷ್ಟೇ ಬಿಂದುಶ್ರೀಯನ್ನು ಆವಲಹಳ್ಳಿ ಬಳಿಯ ಹೀರಾಂಡಹಳ್ಳಿಯ ರಾಘವೇಂದ್ರಗೆ 2024 ರ ಫೆ. 21 ರಂದು ಕೈವಾರ ಸಮೀಪ ಮದುವೆ ಮಾಡಿಕೊಡಲಾಗಿತ್ತು. ಮದುವೆಯಾದ ಎರಡೇ ತಿಂಗಳಿಗೆ ಕಾರು ಹಾಗೂ 20 ಲಕ್ಷ ಹಣಕ್ಕಾಗಿ ಪೀಡಿಸುತ್ತಿದ್ದ. ಇದೇ ವಿಚಾರವನ್ನು ಮಗಳು ಪೋಷಕರಿಗೆ ಮಾಹಿತಿ ತಿಳಿಸಿದ್ದಾಳೆ. ಆದರೆ ಪೋಷಕರು ಅಷ್ಟೊಂದು ಹಣ ನಮ್ಮಬಳಿ ಇಲ್ಲಾ ಸಾಧ್ಯವಾದಷ್ಟು ಕೊಡುವುದಾಗಿ ತಿಳಿಸಿದ್ದಾರೆ. ನಂತರ ಗಂಡನ ಮನೆಯವರು ತವರಿಗೆ ವಾಪಸ್ ಕಳುಹಿಸಿದ್ದಾರೆ. ಮಗಳನ್ನು ಮನೆಗೆ ವಾಪಸ್ ಕರೆತಂದು ಸೆ.12 ರಂದು ಅವಲಹಳ್ಳಿಯಲ್ಲಿ ದೂರು ದಾಖಲಿಸಿದ್ದರು.

ಚಿಂತಾಮಣಿ ನಗರದ ಮನೆಯಲ್ಲಿ ಇರುವಾಗ ಬಿಂದುಶ್ರೀ ಸೆ.14ರ ಸಂಜೆ ಮನೆಯ ಫ್ಯಾನ್ ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದಾರೆ. ನಂತರ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದಾಗ ಮೃತಪಟ್ಟಿರುವುದಾಗಿ ವೈದ್ಯರು ಸ್ಪಷ್ಟಪಡಿಸಿದ್ದಾರೆ. ಸ್ಥಳಕ್ಕೆ ಪೊಲೀಸರು ಧಾವಿಸಿ ಪರಿಶೀಲನೆ ನಡೆಸಿ ದೂರು ದಾಖಲಿಸಿಕೊಂಡು ತನಿಖೆಯನ್ನು ನಡೆಸುತ್ತಿದ್ದಾರೆ.

ಟ್ವೀಟೂ-ಖಾರಾ

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಮಾನವ ಸರಪಳಿ ನೆಪದಲ್ಲಿ ಪುಕ್ಕಟೆ ಪ್ರಚಾರ ಗಿಟ್ಟಿಸಿದ ಕಾಂಗ್ರೆಸ್ ಸರಕಾರಕ್ಕೆ ಪ್ರಜಾಪ್ರಭುತ್ವ ಉಳಿಸುವ ಕಾಳಜಿಯೇ ಇಲ್ಲ.ಇದ್ದರೆ ಮೊದಲು ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಿ.ಅಧಿಕಾರಕ್ಕೇರಿದಾಗಿನಿಂದ ಜಿಲ್ಲಾ ಮತ್ತು ತಾ.ಪಂ. ಹಾಗೂ ಬಿಬಿಎಂಪಿ ಚುನಾವಣೆ ನಡೆಸಿಲ್ಲ ಯಾಕೆ..? ಸ್ಥಳೀಯ ಸರಕಾರಗಳ ಕತ್ತು ಹಿಸುಕಿ ನೀವು ವಿಧಾನಸೌಧದಲ್ಲಿ ಮೆರೆದರೇನು ಭಾಗ್ಯ..?

ಶ್ರೀನಿವಾಸ ಕಾರ್ಕಳ, ದ.ಕನ್ನಡ

ಸ್ವಾತಂತ್ರ್ಯ ದಿನಾಚರಣೆ ಮಾಡಿದರೆ ಸ್ವಾತಂತ್ರ್ಯ ಉಳಿಯುತ್ತಾ ಕುಮಾರಣ್ಣ..? ಅದನ್ನೂ ನಿಲ್ಲಿಸಬೇಕಲ್ವಾ..?

ಸಮಾಚಾರ ಸಣ್ಣದಲ್ಲ

ಕಾಂಗ್ರೆಸ್ ಮೀಸಲು ವಿರೋಧಿ: ಛಲವಾದಿ

ಕಲಬುರಗಿ: ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಹೊರ ದೇಶಗಳಿಗೆ ಹೋಗಿ, ಭಾರತ ದೇಶದ ಮರ್ಯಾದೆಯನ್ನು ತೆಗೆಯುತ್ತಿದ್ದಾರೆ.ರಾಹುಲ್ ಗಾಂಧಿ ಅವರೇ ಹೊರದೇಶಗಳಿಗೆ ಹೋದಾಗಲೆಲ್ಲ ನಿಮ್ಮ ತಲೆ ಏನಾದರೂ ಸುತ್ತುತ್ತದೆಯೇ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ. ಸೋಮವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ವಿದೇಶದ ನೆಲದಲ್ಲಿ ಕುಳಿತು ಮೀಸಲು ರದ್ದತಿ ಬಗ್ಗೆ ಮಾತನಾಡುವ ರಾಹುಲ್ ಹೇಳಿಕೆ, ಕಾಂಗ್ರೆಸ್ ಮೀಸಲು ವಿರೋಧಿ ಎಂಬುದನ್ನು ಸಾಬೀತುಪಡಿಸಿದೆ. ಮೀಸಲು ವಿರೋಧಿಸುವ ಮನಸ್ಥಿತಿಯನ್ನು ದೇಶದ ಜನರು ಗಮನಿಸಿದ್ದು, ಇದೀಗ ಕಾಂಗ್ರೆಸ್ ವಿರುದ್ಧ ತಿರುಗಿಬಿದ್ದಿದ್ದಾರೆ ಎಂದು ಹೇಳಿದರು.

ಗೂಂಡಾಗಳಿಂದ ಸಂಘರ್ಷದ ಹೇಳಿಕೆ

ಹುಬ್ಬಳ್ಳಿ: ರಾಜ್ಯದ ಕಾಂಗ್ರೆಸ್ ಸರಕಾರದ ವರ್ತನೆಯಿಂದ ಕೆಲವು ಮುಸ್ಲಿಂ ಗೂಂಡಾಗಳು ಸಂಘರ್ಷ ಉಂಟುಮಾಡುವ ಹೇಳಿಕೆ ನೀಡುತ್ತಿದ್ದು, ತಕ್ಷಣ ಅವರನ್ನು ಬಂಧಿಸಬೇಕು ಎಂದು ಶ್ರೀರಾಮ ಸೇನಾ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತ ನಾಡಿ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಮುಸ್ಲಿಂ ಸಂಘಟನೆಯವರು ಹಿಂದೂ ಗಳಿಗೆ ತಾಕತ್ತಿದ್ದರೆ ಬಿ.ಸಿ. ರಸ್ತೆ ಬಳಿ ಬನ್ನಿ ಎಂದು ಸವಾಲು ಹಾಕಿದ್ದಾರೆ. ಆ ಬಿ.ಸಿ. ರಸ್ತೆ ಅಫಘಾನಿಸ್ತಾನ ಅಥವಾ ಪಾಕಿಸ್ತಾನದಲ್ಲಿ ಇದೆಯಾ? ಭಾರತ ನೆಮ್ಮದಿಯಿಂದ ಇದೆ. ಇಂಥ ಹೇಳಿಕೆ ನೀಡಿ ಸಂಘರ್ಷಕ್ಕೆ ಕರೆಯುತ್ತಿರುವುದು ಸರಿಯಲ್ಲ. ಈಗಾಗಲೇ ಅವರನ್ನು ಜೈಲಿಗೆ ಹಾಕಬೇಕಿತ್ತು. ಇದಕ್ಕೆಲ್ಲ ಕಾಂಗ್ರೆಸ್ ಸರಕಾರದ ಮನಸ್ಥಿತಿಯೇ ಕಾರಣ ಎಂದು ಕಿಡಿಕಾರಿದರು.

ಕಾರು ಡಿಕ್ಕಿ: ಅಜ್ಜಿ, ಮೊಮ್ಮಗ ಸಾವು

ಭಾರತೀನಗರ: ಗಣಪತಿ ಪ್ರಸಾದ ಸ್ವೀಕರಿಸಿ ಮನೆಗೆ ಹಿಂತಿರುಗುತ್ತಿದ್ದ ಅಜ್ಜಿ ಮತ್ತು ಒಂದು ವರ್ಷದ ಮಗು (ಮೊಮ್ಮಗ) ಕಾರು ಡಿಕ್ಕಿಯಾಗಿ ಸಾವನ್ನಪ್ಪಿರುವ ಘಟನೆ ಮದ್ದೂರು-ಮಳವಳ್ಳಿ ಹೆದ್ದಾರಿಯ ಹುಣ್ಣನದೊಡ್ಡಿ ಬಳಿ ಭಾನುವಾರ ರಾತ್ರಿ ಸಂಭವಿಸಿದೆ. ಹುಣ್ಣನದೊಡ್ಡಿಯ ಸಾಕಮ್ಮ (65), ಒಂದು ವರ್ಷ ಮಗು ಧನಿಕ ಗೌಡ ಸಾವನ್ನಪ್ಪಿದ್ದು, ಗಾಯಗೊಂಡಿರುವ ಮೂರು ವರ್ಷದ ನಂದನ್‌ಗೌಡನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಹುಣ್ಣನದೊಡ್ಡಿಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿಯನ್ನು ಭಾನುವಾರ ಸಂಜೆ ವಿಸರ್ಜನೆ ಹಿನ್ನೆಲೆಯಲ್ಲಿ ಭಕ್ತರಿಗೆ ಪ್ರಸಾದ ವಿತರಿಸಲಾಗುತ್ತಿತ್ತು. ಶಂಕರ್ ಮತ್ತು ಅಂಜಲಿ ದಂಪತಿ ಮಕ್ಕಳಾದ ಧನಿಕ ಮತ್ತು ನಂದನ್, ತಮ್ಮ ಅಜ್ಜಿ ಜೊತೆ ಪ್ರಸಾದ ಸ್ವೀಕರಿಸಲು ತೆರಳಿದ್ದರು. ಅಜ್ಜಿ ಸಾಕಮ್ಮ, ಒಂದು ವರ್ಷದ ಮೊಮ್ಮಗುವನ್ನು ಎತ್ತಿಕೊಂಡು, ಮತ್ತೊಂದು ಮಗುವನ್ನು ನಡೆಸಿಕೊಂಡು ಪ್ರಸಾದ ಸ್ವೀಕರಿಸಿ ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಒಂದು ವರ್ಷದ ಮಗು, ಅಜ್ಜಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಒಕ್ಕಲಿಗ ಶಾಸಕ, ಸಚಿವರಿಂದ ಸಿದ್ದರಾಮಯ್ಯ ಭೇಟಿ | ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಸಿಎಂ

ಮುನಿರತ್ನ ವಿರುದ್ಧ ಕ್ರಮಕ್ಕೆ ಸಿಎಂಗೆ ಒತ್ತಡ

ಬೆಂಗಳೂರು: ಜಾತಿ ನಿಂದನೆ ಆರೋಪ ಎದುರಿಸಿ ಬಂಧನಕ್ಕೆ ಒಳಗಾಗಿರುವ ಶಾಸಕ ಮುನಿರತ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಸಮುದಾಯದ ಸಚಿವರು ಹಾಗೂ ಶಾಸಕರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಸಿಎಂ ನಿವಾಸ ಕಾವೇರಿಯಲ್ಲಿ ಸಚಿವ ಚಲುವರಾಯಸ್ವಾಮಿ, ಎಂ.ಸಿ ಸುಧಾಕರ್, ಶಾಸಕರಾದ ಶರತ್ ಬಚ್ಚೇಗೌಡ , ಮಾಗಡಿ ಬಾಲಕೃಷ್ಣ, ಕುಣಿಗಲ್ ರಂಗನಾಥ್, ಮಾಲೂರು ಮಂಜೇಗೌಡ , ಎಸ್.ರವಿ ಅವರ ನಿಯೋಗ ಭೇಟಿಯಾಗಿ ಸಿದ್ದರಾಮಯ್ಯಗೆ ಮನವಿ ಪತ್ರ ಸಲ್ಲಿಸಿದರು.

ನಂತರ ಮಾತನಾಡಿದ ಸಚಿವ ಚಲುವರಾಯಸ್ವಾಮಿ, ಮುನಿರತ್ನ ವಿರುದ್ಧ ಈಗಾಗಲೇ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಹೆಚ್ಚಿನ ಮಾಹಿತಿ ಪಡೆದು ಮತ್ತಷ್ಟು ಕ್ರಮ ಕೈಗೊಳ್ಳಲು ಸಿಎಂಗೆ ಮನವಿ ಮಾಡಲಾಗಿದೆ. ಪ್ರಕರಣದಿಂದ ತಪ್ಪಿಸಿಕೊಳ್ಳಲು ಮುನಿರತ್ನ ಇಲ್ಲಸಲ್ಲದ ಟ್ವೀಟ್ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಬಿಬಿಎಂಪಿಯಲ್ಲಿ ದಾಖಲೆ ಸುಟ್ಟು ಹಾಕಿದ ಇತಿಹಾಸವೂ ಅವರಿಗಿದೆ. ಇಂತಹ ಕೆಲಸಗಳಲ್ಲಿನ ಮುನಿರತ್ನ ನಿಸ್ಸೀಮರು. ಕಾನೂನು ವ್ಯಾಪ್ತಿಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದು, ಇಂತಹ ಪ್ರಯತ್ನಕ್ಕೆ ಅವಕಾಶ ಮಾಡಿಕೊಡದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಅವರಿಗೆ ಮನವಿ ಮಾಡಲಾಗಿದೆ ಎಂದರು.

ಕಸ್ಟಡಿ ಅಂತ್ಯ: ಜಾತಿ ನಿಂದನೆ ಆರೋಪದಲ್ಲಿ ಬಂಧಿತರಾಗಿರುವ ಶಾಸಕ ಮುನಿರತ್ನ ಅವರ ಪೊಲೀಸ್ ಕಸ್ಟಡಿ ಅವಧಿ ಮಂಗಳವಾರಕ್ಕೆ ಮುಗಿಯಲಿದ್ದು, ಇಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುತ್ತದೆ. ಶೇಷಾದ್ರಿಪುರ ಉಪವಿಭಾಗದ ಎಸಿಪಿ ಪ್ರಕಾಶ್ ಅವರು, ಮುನಿರತ್ನ ಅವರನ್ನು ವಿಚಾರಣೆಗೆ ಒಳಪಡಿಸಿ ಪ್ರಕರಣ ಸಂಬಂಧ ತನಿಖೆ ಚುರುಕುಗೊಳಿಸಿ ಹಲವು ಮಾಹಿತಿ ಪಡೆದುಕೊಂಡಿದ್ದಾರೆ ಎನ್ನಲಾಗಿದೆ. ಮುನಿರತ್ನ ಅವರು ನಿಂದಿಸಿದ್ದಾರೆ ಎನ್ನಲಾದ ಆಡಿಯೊದಲ್ಲಿ ಧ್ವನಿ ಅವರದ್ದೇ ಎಂಬುದರ ಬಗ್ಗೆ ತನಿಖೆ ಚುರುಕುಗೊಳಿಸಿರುವ ಪೊಲೀಸರು ಧ್ವನಿ ಸ್ಯಾಂಪಲ್ ಅವರನ್ನು ಪಡೆದುಕೊಂಡು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಹಿಸಿದ್ದಾರೆ. ಈ ವರದಿ ಬಂದ ನಂತರ ಧ್ವನಿಯ ಸತ್ಯಾಸತ್ಯತೆ ಗೊತ್ತಾಗಲಿದೆ.

ಜಾತಿ ನಿಂದನೆ ಆರೋಪ ಎದುರಿಸಿ ಬಂಧನಕ್ಕೆ ಒಳಗಾಗಿರುವ ಶಾಸಕ ಮುನಿರತ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಸಮುದಾಯದ ಸಚಿವರು ಹಾಗೂ ಶಾಸಕರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

> ನಾಗಮಂಗಲದಲ್ಲಿ ಹಿಂದೂ -ಮುಸ್ಲಿಮರು ಒಟ್ಟಾಗಿ ಸೇರಿ ಗಣೇಶ ವಿಸರ್ಜಿಸಿದ್ದಾರೆ. ಬಿಜೆಪಿಯವರಿಗೆ ಇಷ್ಟು ಬೇಗ ಪ್ರಕರಣ ಮುಗಿದು ಹೋಯಿತಲ್ಲ ಎಂಬ ಬೇಸರವಿದೆ. ಬಿಜೆಪಿಯವರಿಗೆ ಈ ಬೆಳವಣಿಗೆಗೆ ಸಂತೋಷ ಪಡುವುದನ್ನು ಬಿಟ್ಟು ಮತ್ತೆ ಸಮಿತಿ ಕಳಿಸಿದ್ದಾರೆ.
> - **ಚಲುವರಾಯಸ್ವಾಮಿ,** ಕೃಷಿ ಸಚಿವ

> ಒಕ್ಕಲಿಗ ಹಾಗೂ ದಲಿತರ ಕುರಿತಾಗಿ ಮುನಿರತ್ನ ಮಾತನಾಡಿರುವುದು ಖಂಡನೀಯ. ಅದು ಬಹಳಷ್ಟು ನೋವುಂಟು ಮಾಡಿದೆ. ಸರಕಾರ ಅವರನ್ನು ಬಂಧಿಸಿದ್ದು, ಇದೀಗ ಒಂದು ಆಡಿಯೊ ಮಾತ್ರ ಬೆಳಕಿಗೆ ಬಂದಿದ್ದು, ಈ ಹಿಂದೆ ಹಲವು ಬಾರಿ ಮಾತನಾಡಿದ್ದಾರೆ.
> -**ಎಂ.ಸಿ.ಸುಧಾಕರ್,** ಸಚಿವ

ಶಾಸಕ ಸ್ಥಾನದಿಂದ ಮುನಿರತ್ನ ವಜಾಕ್ಕೆ ಎಎಪಿ ಆಗ್ರಹ: ಜಾತಿನಿಂದನೆ ಮತ್ತು ಬಿಬಿಎಂಪಿಯ ಘನ ತ್ಯಾಜ್ಯ ವಿಲೇವಾರಿ ಗುತ್ತಿಗೆದಾರರಿಂದ ಲಂಚಕ್ಕೆ ಬೇಡಿಕೆ ಇಟ್ಟ ಆರೋಪದಲ್ಲಿ ಬಂಧಿಸಲಾಗಿರುವ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಆ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಮಹಿಳಾ, ದಲಿತ ವಿರೋಧಿ ಶಾಸಕನನ್ನು ಕಿತ್ತೊಗೆಯಿರಿ, ಮುನಿರತ್ನ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲೇಬೇಕು ಎಂದು ಫಲಕಗಳನ್ನು ಪ್ರದರ್ಶಿಸಿ ಘೋಷಣೆ ಕೂಗಿದರು. ಈ ವೇಳೆ ಮಾತನಾಡಿದ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಮೋಹನ್ ದಾಸರಿ ಅವರು, ಗೂಂಡಾ ಪ್ರವೃತ್ತಿಯ ಶಾಸಕ ಮುನಿರತ್ನ ಎದುರು ನಿಂತು ಮಾತನಾಡುವ ಧೈರ್ಯ ಬಿಜೆಪಿ ನಾಯಕರಿಗೆ ಇದೆಯೇ? ದಲಿತ ಸಮುದಾಯದವರ ಬಳಿ ಬಿಜೆಪಿ ಬಹಿರಂಗ ಕ್ಷಮೆ ಕೇಳಿ, ಮುನಿರತ್ನ ಅವರನ್ನು ಪಕ್ಷದಿಂದ ಹೊರದಬ್ಬಬೇಕು ಎಂದು ಒತ್ತಾಯಿಸಿದರು.

ಹನುಮಂತರಾಯಪ್ಪರ ಜತೆ ಮಾತಾಡಿರೋದು ಸತ್ಯ

ಗಲಾಟೆ ಸೃಷ್ಟಿಸಿ ವೇಲು ನಾಯಕ್ ಮೇಲೆ ಆರೋಪ ಹೊರಿಸಲು ಹನುಮಂತನರಾಯಪ್ಪ ಮೂಲಕ ವಿಷಯಾಂತರಕ್ಕೆ ಕುತಂತ್ರ ಮಾಡಲಾಗಿದೆ ಎಂದು ಚಲುವರಾಜು ಆರೋಪಿಸಿದ್ದಾರೆ. ಬೆಳಗ್ಗೆ ನನ್ನನ್ನು ಕರೆದು ನ್ಯಾಯ ಕೊಡಿಸುತ್ತೇನೆ ಅಂದರು. ಬಳಿಕ ಹಣಕ್ಕೆ ಬೇಡಿಕೆ ಇಟ್ಟರು. ಇದಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ ಎಂದಿದ್ದಾರೆ. ಹನುಮಂತರಾಯಪ್ಪರ ಜತೆ ಮಾತಾಡಿರೋದು ಸತ್ಯ. ಶಾಸಕನನ್ನು ಬೈಯುವುದಕ್ಕೆ ಆಗುತ್ತಾ? 3 ವರ್ಷದಿಂದ ಎಷ್ಟು ಕಷ್ಟ ಪಟ್ಟಿದ್ದೇನೆ ನನಗೆ ಗೊತ್ತಿದೆ. ಇದು ಒಂದು ತಿಂಗಳ ಹಿಂದೆ ನಡೆದಿರುವ ಪ್ರಕರಣ. ರೇಣುಕಾಸ್ವಾಮಿ ಹೊಡೆದು ಹಾಕಿದ್ದು ಯಾರು ಗೊತ್ತಾ? ರೇಣುಕಾಸ್ವಾಮಿ ಹೊಡೆದಾಕಿದ್ದು ನನ್ನ ತಂಗಿ ಮಗ ಅಂದಿದ್ದರು. ಅವತ್ತೇ ನಾನು ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದೆ ಎಂದು ಹೇಳಿದ್ದಾರೆ.

ಇಂದು ಮತ್ತೆರಡು ಆಡಿಯೊ ಬಿಡುಗಡೆ ?

ಮುನಿರತ್ನ ಅವರ ಕುರಿತ ಇನ್ನೂ ಎರಡು ಆಡಿಯೊ ಇವೆ. ಮಂಗಳವಾರ ರಿಲೀಸ್ ಮಾಡುತ್ತೇನೆ ಎಂದು ಗುತ್ತಿಗೆದಾರ ಚಲುವರಾಜು ಸ್ಫೋಟಕ ಹೇಳಿಕೆ ನೀಡಿದ್ದಾರೆ. ಗುತ್ತಿಗೆದಾರ ಚಲುವರಾಜು ನಿವಾಸಕ್ಕೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಭೇಟಿ ನೀಡಿದ್ದಾರೆ. ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಚಲುವರಾಜು, ರಾಜರಾಜೇಶ್ವರಿ ನಗರ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಕುಸುಮಾ ತಂದೆ ಹನುಮಂತರಾಯಪ್ಪ ಜತೆ ಮಾತಾಡಿದ ಆಡಿಯೊ ಹಾಗೂ 30% ಕಮಿಷನ್ ವಿಚಾರದ ಆಡಿಯೊ ಬಿಡುಗಡೆ ಮಾಡುತ್ತೇನೆ. ಮಂಗಳವಾರ 2 ಆಡಿಯೊ ಬಿಡುಗಡೆ ಮಾಡುತ್ತೇನೆ ಎಂದಿದ್ದಾರೆ.

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಡಿಕೆಶಿ ವಿರುದ್ಧ ವಾಗ್ದಾಳಿ

ಮುನಿರತ್ನ ಪ್ರಕರಣದ ಹಿಂದೆ ಸಿಡಿ ಶಿವು ಕೈವಾಡ

ಚಿಕ್ಕೋಡಿ: ಬಿಜೆಪಿ ಶಾಸಕ ಮುನಿರತ್ನ ಬಂಧನದ ಹಿಂದೆ ಸಿಡಿ ಶಿವು ಇದ್ದಾನೆ. ರಾಜಕೀಯ ವಿರೋಧಿಗಳನ್ನು ಈ ರೀತಿ ಷಡ್ಯಂತ್ರದಿಂದ ಮುಗಿಸುವುದೇ ಅವನ ಕಾರ್ಯವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ವಿರುದ್ಧ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಾಗ್ದಾಳಿ ನಡೆಸಿದರು.

ಸೋಮವಾರ ಜಿಲ್ಲೆಯ ಅಥಣಿ ಪಟ್ಟಣದಲ್ಲಿ ನಡೆದ ಕಾರ್ಯಕರ್ತರ ಸಭೆ ನಂತರ ಪ್ರತಿಕ್ರಿಯೆ ನೀಡಿದ ಅವರು, ಶಾಸಕ ಮುನಿರತ್ನ ದಲಿತರಿಗೆ ಹಾಗೂ ಒಕ್ಕಲಿಗರ ಕುರಿತು ಆಡಿರುವ ಮಾತಿನ ಆಡಿಯೊ ಸತ್ಯಾಸತ್ಯತೆ ಹೊರಬರಬೇಕು. ಆದರೆ ಸಿಡಿ ಶಿವು ಅವನ ವಿರೋಧಿಗಳನ್ನು ಜೈಲಿಗೆ ಹಾಕುವ ಕೆಲಸ ಮಾಡುತ್ತಿದ್ದಾನೆ. ಇವರ ಕುತಂತ್ರಕ್ಕೆ ಮೊದಲು ಬಲಿಯಾಗಿದ್ದು ನಾನು, ನಂತರ ದೇವೆಗೌಡರ ಕುಟುಂಬ, ಈಗ ಮುನಿರತ್ನ ಆಗಿದ್ದಾರೆ ಎಂದರು.

ಸಿಡಿ ಶಿವುನಿಂದ ಕಾಂಗ್ರೆಸ್ ನಾಯಕರೇ ನೋವು ಅನುಭವಿಸುತ್ತಿದ್ದಾರೆ. ಇನ್ನುಮುಂದೆ ಅನೇಕ ಸಿಡಿಗಳು ದೊಡ್ಡ ಪ್ರಮಾಣದಲ್ಲಿ ಹೊರಬರುತ್ತವೆ. ಸದ್ಯ ಸಿಡಿ ಕುರಿತಾದ ತನಿಖೆಯನ್ನು ಸಿಬಿಐಗೆ ನೀಡಬೇಕಾಗಿದೆ. ಜಾತಿ, ಜಾತಿಗಳ ನಡುವೆ ಬೆಂಕಿ ಹಚ್ಚುವ ಕಾರ್ಯ ನಡೆಯುತ್ತದೆ. ನಕಲಿ ಸಿಡಿ ತಡೆಗೆ ಮೋದಿ ಯವರೇ ಸಿಬಿಐ ತನಿಖೆಗೆ ವಹಿಸಬೇಕೆಂದು ಜಾರಕಿಹೊಳಿ ಮನವಿ ಮಾಡಿದರು .

ವಿಜಯೇಂದ್ರ ವಿರುದ್ಧ ಆಕ್ರೋಶ

ಬಿಜೆಪಿ ಅತೃಪ್ತ ನಾಯಕರ ಜೊತೆ ಸಂಘ ಪರಿವಾರದ ಮುಖಂಡರು ನಡೆಸಿದ್ದ ಸಭೆ ಉದ್ದೇಶಿಸಿ ಮಾತನಾಡಿದ ಇವರು. ಸಂಘ ಪರಿವಾರದ ನಾಯಕರಿಗೆ ಸಾಮೂಹಿಕ ನಾಯಕತ್ವದ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದೇವೆ. ತಪ್ಪು ಮಾಡಿದವರನ್ನು ಹಿರಿಯರು ಬೈದಿದ್ದಾರೆ. ನಾವು ಈವರೆಗೂ ವಿಜಯೇಂದ್ರ ನಾಯಕತ್ವ ಒಪ್ಪಿಲ್ಲ. ಆತನಿಂದೆ ಬಿಜೆಪಿಗೆ ಭ್ರಷ್ಟತೆ ಎಂಬ ಲೇಬಲ್ ಕೊಟ್ಟಿದ್ದು ಆತನೇ ಎಂದು ಹರಿಹಾಯ್ದರು. ನಾವು ವಿಜಯೇಂದ್ರನನ್ನು ವಿರೋಧಿಸುತ್ತೇವೆ ಹೊರತು ಯಡಿಯೂರಪ್ಪ ಅವರನ್ನಲ್ಲ. ನಮ್ಮ ಪಕ್ಷದ ಪ್ರಶ್ನಾತೀತ ನಾಯಕ. ಯಡಿಯೂರಪ್ಪನವರಿಗೆ ವಯಸ್ಸಾಗಿದೆ, ಅವರು ವಿಶ್ರಾಂತಿ ಪಡೆಯಲಿ. ಸಾಮೂಹಿಕ ನಾಯಕತ್ವದಲ್ಲಿ ಜವಾಬ್ದಾರಿ ನೀಡಲಿ ಅದರಲ್ಲಿ ನಾವು ಸೋತರೆ ಪಕ್ಷದಿಂದ ಹೊರಹಾಕಲಿ ಎಂದು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಗಂಭೀರ ಆರೋಪ

ದುಷ್ಟಶಕ್ತಿಗಳನ್ನು ಮಟ್ಟಹಾಕದ ರಣಹೇಡಿ ಸರಕಾರ

ಶಿವಮೊಗ್ಗ: ಗಣಪತಿ ಉತ್ಸವಗಳಲ್ಲಿ ಗಲಭೆ ಸೃಷ್ಟಿಸುತ್ತಿರುವ ದುಷ್ಟಶಕ್ತಿಗಳನ್ನು ಮಟ್ಟಹಾಕದ ರಣಹೇಡಿ ರಾಜ್ಯ ಸರಕಾರ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಗಂಭೀರ ಆರೋಪ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗಮಂಗಲದಲ್ಲಿ ಗಲಭೆ ಮಾಡಿ, ಮಂಗಳೂರು, ದಾವಣಗೆರೆ ಮೊದಲಾದ ಕಡೆಗಳಲ್ಲಿ ಗಲಭೆ ಸೃಷ್ಟಿಸಲು ಯತ್ನಿಸುತ್ತಿರುವವರ ಮೇಲೆ ಯಾವುದೇ ಕ್ರಮಕೈಗೊಂಡಿಲ್ಲ. ಇದರ ಪರಿಣಾಮ ದುಷ್ಟರಿಗೆ ಬಲಕೊಟ್ಟಂತಾಗಿದೆ ಎಂದು ಹರಿಹಾಯ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಪರಮೇಶ್ವರ ಇಡೀ ನಾಡಿನ ಸಿಎಂ, ಗೃಹ ಸಚಿವರು ಎನ್ನುವುದನ್ನು ಮರೆತು ಒಂದು ಕೋಮಿಗೆ ತಾವು ಸೀಮಿತ ಎನ್ನುವಂತೆ ನಡೆದುಕೊಳ್ಳುತ್ತಿದ್ದಾರೆ. ಕೋಟ್ಯಂತರ ರು. ಆಸ್ತಿಪಾಸ್ತಿ ಹಾನಿಯಾಗಿದ್ದರೂ ಅದು ಸಣ್ಣ ಘಟನೆ ಎಂದು ಹೇಳಲಾಗುತ್ತಿದೆ. ಇದನ್ನು ಬಿಟ್ಟು ಎಲ್ಲಾ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗುವಂತಹ ಕೆಲಸ ಮಾಡುವಂತೆ ಆಗ್ರಹಿಸಿದರು.

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ನಡೆದ ಗಲಭೆಯ ಬೆನ್ನ ಹಿಂದೆಯೇ ಪಾಂಡವಪುರದಲ್ಲಿನ ಆರ್‌ಎಸ್‌ಎಸ್ ಕಚೇರಿಗೆ ಪೊಲೀಸರ ಸೋಗಿನಲ್ಲಿ ದಾಳಿ ಮಾಡಿ ಕಾರ್ಯಕರ್ತರಿಗೆ ತೊಂದರೆ ನೀಡಲಾಗಿದೆ. ಇದು ಅತ್ಯಂತ ಖಂಡನೀಯ. ದಾವಣಗೆರೆಯಲ್ಲಿಯೂ ಗಲಭೆಗೆ ಯತ್ನ ನಡೆಸಲಾಗಿದೆ ಎಂದರು.

> ವಿರೋಧ ಪಕ್ಷದವರು ನನ್ನನ್ನು ಬಿಜೆಪಿ ರಾಜ್ಯಾಧ್ಯಕ್ಷನೆಂದು ಒಪ್ಪಿಕೊಳ್ಳಲಿ ಬಿಡಲಿ, ಸಂಬಂಧವಿಲ್ಲಿಫಿ. ನಮ್ಮ ಪಕ್ಷದ ನಾಯಕರು ರಾಜ್ಯಾಧ್ಯಕ್ಷನನ್ನಾಗಿ ಮಾಡಿದ್ದಾರೆ. ಅವರ ಆಶಯಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದೇನೆ. ನಮ್ಮ ಪಕ್ಷದ ಶಾಸಕ ಮುನಿರತ್ನ ಅವರ ಬಂಧನ ರಾಜಕೀಯ ಪಿತೂರಿಯಾಗಿದೆ. ದೂರು ನೀಡಿದಾಕ್ಷಣ ಸೂಚನೆಯೇ ಇಲ್ಲದೆ ಬಂಸಲಾಗಿದೆ. ಸತ್ಯ ಏನೆಂಬುದು ತನಿಖೆಯಿಂದ ಹೊರಬರಲಿದೆ.
> -**ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಮುಸ್ಲಿಂ ಮುಖಂಡನ ಸವಾಲಿಗೆ ಹಿಂದೂ ಸಂಘಟನೆಗಳ ತಿರುಗೇಟು | ಮದ್ಯ ಮಾರಾಟ ಬಂದ್, ಪರಿಸ್ಥಿತಿ ನಿಯಂತ್ರಣಕ್ಕೆ ಪೊಲೀಸರ ಹೆಣಗಾಟ

ಬಿ.ಸಿ.ರೋಡ್ ಚಲೋ: ಬಿಸಿ ಏರಿದ ಬಂಟ್ವಾಳ

ಮಂಗಳೂರು: ವಿಶ್ವ ಹಿಂದೂ ಪರಿಷತ್ ಮುಖಂಡ ಶರಣ್ ಪಂಪ್‌ವೆಲ್ ಹಾಗೂ ಬಂಟ್ವಾಳ ಟಿಎಂಸಿ ಮಾಜಿ ಅಧ್ಯಕ್ಷ ಮೊಹಮ್ಮದ್ ಷರೀಫ್ ಪ್ರಚೋದನಕಾರಿ ಹೇಳಿಕೆ ಹಿನ್ನೆಲೆಯಲ್ಲಿ ಮಂಗಳೂರು ಹೊರವಲಯದ ಬಿಸಿ ರೋಡ್‌ನಲ್ಲಿ ಸೋಮವಾರ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಷರೀಫ್ ಹೇಳಿಕೆ ವಿರೋಧಿಸಿ ಹಿಂದೂ ಸಂಘಟನೆಗಳ ಕರೆ ಮೇರೆಗೆ ಭಾರಿ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು.

ಗಣೇಶ ಚತುರ್ಥಿ ಮೆರವಣಿಗೆಯ ದಿನದಂದು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ನಡೆದ ಕೋಮು ಘರ್ಷಣೆ ಖಂಡಿಸಿ ತಾವು ಪ್ರತಿಭಟನೆ ನಡೆಸುತ್ತಿದ್ದು, ಈದ್ ಮಿಲಾದ್ ರ್‍ಯಾಲಿಗೆ ಕಡಿವಾಣ ಹಾಕುವಂತೆ ಶರಣ್ ಪಂಪ್‌ವೆಲ್ ಒತ್ತಾಯಿಸಿದ್ದರು.

ಪಂಪ್‌ವೆಲ್‌ಗೆ ಸವಾಲು: ಈ ಹೇಳಿಕೆಗೆ ಪ್ರತಿಕ್ರಿಯೆಯಾಗಿ, ವೈರಲ್ ಆದ ಆಡಿಯೊ ಸಂದೇಶದಲ್ಲಿ, ಶರಣ್ ಪಂಪ್‌ವೆಲ್ ಬಿ.ಸಿ. ರೋಡ್‌ಗೆ ಬಂದು ಸೋಮವಾರ ಈದ್ ರ್‍ಯಾಲಿಯನ್ನು ತಡೆಯಲಿ ಎಂದು ಷರೀಫ್ ಸವಾಲು ಹಾಕಿದ್ದರು. ಈ ಸವಾಲನ್ನು ಸ್ವೀಕರಿಸಿದ ಶರಣ್ ಪಂಪ್‌ವೆಲ್ , ಪುನೀತ್ ಅತ್ತಾವರ ಸೇರಿದಂತೆ ಹಲವು ಹಿಂದೂ ಕಾರ್ಯಕರ್ತರು ಬಿ.ಸಿ. ರೋಡ್ ಚಲೋ ನಡೆಸಿದರು.

ಸವಾಲು ಸ್ವೀಕರಿಸಿದ್ದೇವೆ: ಸೋಮವಾರ ಬೆಳಗ್ಗೆ ಬಿಸಿ ರೋಡ್‌ನ ರಕ್ತೇಶ್ವರಿ ದೇವಸ್ಥಾನದ ಬಳಿ ಜಮಾಯಿಸಿದ ಹಿಂದೂ ಕಾರ್ಯಕರ್ತರು, ಷರೀಫ್ ವಿರುದ್ಧ ಘೋಷಣೆ ಕೂಗಿದರು. ಆದರೆ ಹೆಚ್ಚಿನ ಸಂಖ್ಯೆಯಲ್ಲಿದ್ದ ಪೊಲೀಸ್ ಸಿಬ್ಬಂದಿ ಬ್ಯಾರಿಕೇಡ್ ಬಳಸಿ ಅವರನ್ನು ಮುಂದೆ ಸಾಗದಂತೆ ತಡೆದರು.

'ನಾವು ಸವಾಲು ಸ್ವೀಕರಿಸಿ ಬಿ.ಸಿ. ರೋಡ್‌ಗೆ ಬಂದಿದ್ದೇವೆ ಮತ್ತು ನಾವು ಈ ಹಿಂದೆಯೂ ಇಂತಹ ಸವಾಲುಗಳನ್ನು ಎದುರಿಸಿದ್ದೇವೆ ಯಾವುದೇ ಆಹ್ವಾನ ನೀಡದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿರುವುದು ಹಿಂದುತ್ವದ ವಿಜಯವಾಗಿದೆ 'ಎಂದು ಶರಣ್ ಪಂಪ್‌ವೆಲ್ ಹೇಳಿದ್ದಾರೆ. ಪಶ್ಚಿಮ ವಲಯದ ಉಪ ಪೊಲೀಸ್ ಮಹಾನಿರೀಕ್ಷಕ (ಡಿಐಜಿಪಿ) ಅಮಿತ್ ಸಿಂಗ್, ದಕ್ಷಿಣ ಕನ್ನಡ ಎಸ್‌ಪಿ ಯತೀಶ್ ಎನ್, ಸಹಾಯಕ ಆಯುಕ್ತ ಹರ್ಷವರ್ಧನ್ ಮತ್ತು ತಹಸೀಲ್ದಾರ್ ಅರ್ಚನಾ ಭಟ್ ಅವರು ಪರಿಸ್ಥಿತಿ ಅವಲೋಕಿಸಲು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ.

ಬಿ.ಸಿ.ರೋಡ್ ನ ಶ್ರೀರಕ್ತೇಶ್ವರಿ ದೇವಸ್ಥಾನ ಬಳಿ ಜಮಾವಣೆಗೊಂಡು ಪ್ರತಿಭಟನೆ ನಡೆಸಿದ ವಿಶ್ವ ಹಿಂದೂ ಪರಿಷತ್ , ಬಜರಂಗದಳ ಕಾರ್ಯಕರ್ತರು.

ಮೆರವಣಿಗೆ ಏಕಕಾಲಕ್ಕೆ ಸಂಪನ್ನ

ಪ್ರಚೋದನಕಾರಿ ಆಡಿಯೋ ಬೆನ್ನಲ್ಲೇ ಹಿಂದೂ ಸಂಘಟನೆಗಳು ಕರೆಕೊಟ್ಟಿದ್ದ ಬಿ.ಸಿ.ರೋಡ್ ಚಲೋ ಶಾಂತಿಯುತವಾಗಿ ನಡೆದಿದೆ. ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ನಡೆದ ಬಿ.ಸಿ.ರೋಡ್ ಚಲೋ ಹಾಗೂ ಈದ್ ಮಿಲಾದ್ ಮೆರವಣಿಗೆ ಶಾಂತಿಯುತವಾಗಿ ನಡೆದಿದೆ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಎಸ್‌ಪಿ ಗಿರೀಶ್ ತಿಳಿಸಿದ್ದಾರೆ. ಎಸ್‌ಪಿ ಎನ್.ಯತೀಶ್ ಮಾತನಾಡಿ, ಕೈಕಂಬ ಮಸೀದಿಯ ಈದ್ ಮಿಲಾದ್ ಮೆರವಣಿಗೆ ಮಾರ್ಗ ಬದಲಿಸಿಲ್ಲ. ಹಿಂದೂ ಸಂಘಟನೆಗಳು ಶಾಂತಿಯುತ ಧರಣಿ ನಡೆಸುತ್ತೇವೆಂದಿದ್ದರು. ಹಾಗಾಗಿ ಬಿ.ಸಿ.ರೋಡ್ ಜಂಕ್ಷನ್‌ನಲ್ಲಿ ಅವಕಾಶ ನೀಡಿದ್ದೆವು. ಈವರೆಗೂ ಯಾವುದೇ ಅಹಿತಕರ ಘಟನೆ ಸಂಭವಿಸಿಲ್ಲ ಎಂದರು.

ಈದ್ ಮಿಲಾದ್ ಘರ್ಷಣೆ: ನಾಲ್ವರಿಗೆ ಗಾಯ

ಕೋಲಾರ: ಈದ್ ಮಿಲಾದ್ ಹಬ್ಬದ ಪ್ರಯುಕ್ತ ಎಲ್ಲೆಡೆ ಮೆರವಣಿಗೆ ನಡೆದಿದ್ದು, ಕೋಲಾರದಲ್ಲಿ ಈದ್ ಮಿಲಾದ್ ಮೆರವಣಿಗೆಯಲ್ಲಿ ಘರ್ಷಣೆ ನಡೆದಿದ್ದು ನಾಲ್ವರಿಗೆ ತೀವ್ರ ಗಾಯಗಳಾಗಿವೆ. ಕ್ಲಾಕ್ ಟವರ್‌ಬಳಿ ನಾಲ್ವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ಘಟನೆ ನಡೆದಿದೆ. ಕೋಲಾರ ನಗರದ ಕ್ಲಾಕ್ ಟರ್ವ ಬಳಿ ನಾಲ್ವರ ಮೇಲೆ ಮಾರಕಸ್ತ್ರಗಳಿಂದ ಹಲ್ಲೆ ನಡೆದಿದ್ದು, ಕ್ಷುಲ್ಲಕ ಕಾರಣಕ್ಕೆ ಸೈಯದ್ ಸಲ್ಮಾನ್, ಸಯ್ಯದ್ ಸೈಫ್, ಹುಸೇನ್ ಕಾಶಿಫ್, ಖಾಲಿಲ್ ಅಹ್ಮದ್ ಮೇಲೆ ಹಲ್ಲೆ ನಡೆಸಿದ್ದಾರೆ. ನಾಲ್ವರು ಗಾಯಾಳುಗಳನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸೈಯದ್ ವಸಿಂ ಪಾಷಾ ಹಾಗೂ ತಾಹೀರ್ ಗುಂಪಿನಿಂದ ಈ ಒಂದು ಹಲ್ಲೆ ನಡೆದಿದೆ. ಘಟನೆ ನಂತರ ಸ್ಥಳದಲ್ಲಿ ನೂರಾರು ಜನರು ಜಮಾಯಿಸಿದ್ದರು. ಸ್ಥಳಕ್ಕೆ ಕೋಲಾರ ನಗರ ಠಾಣೆಯ ಪೊಲೀಸರು ಭೇಟಿ ನೀಡಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ.

ಮಸೀದಿ ಮೇಲೆ ಕಲ್ಲು ತೂರಾಟ: 6 ಮಂದಿ ಸೆರೆ

ಸುರತ್ಕಲ್ ಮಸೀದಿ ಮೇಲೆ ಭಾನುವಾರ ರಾತ್ರಿ ಕಲ್ಲು ತೂರಾಟ ನಡೆಸಿದ ಆರೆ ೋಪದ ಮೇಲೆ ಆರು ಮಂದಿಯನ್ನು ಮಂಗಳೂರು ಪೊಲೀಸರು ಬಂಧಿಸಿದ್ದಾರೆ. ಸುರತ್ಕಲ್ ಕಾನಕಟ್ಟ ದ ಭರತ್ ಶೆಟ್ಟಿ, ಚೆನ್ನಪ್ಪ ಶಿವಾನಂದ ಛಲವಾದಿ, ನಿತಿನ್ ಹಡಪದ, ಚೇಳಾರು ನಿವಾಸಿ ಸುಜಿತ್ ಶೆಟ್ಟಿ, ಹೊಸಬೆಟ್ಟು ಗ್ರಾಮದ ಅಣ್ಣಪ್ಪ ಮತ್ತು ಕಾಟಿಪಳ್ಳದ ಪ್ರೀತಂ ಶೆಟ್ಟಿ ಬಂಧಿತರು. ಭಾನುವಾರ ರಾತ್ರಿ ಎರಡು ಬೈಕ್‌ಗಳಲ್ಲಿ ಬಂದ ದುಷ್ಕರ್ಮಿಗಳು ಕಾಟಿಪಳ್ಳದ ಮಜಿದುಲ್ಲಾ ಹುದಾಜುಮ್ಮ ಮಸೀದಿಯ ಕಲ್ಲು ತೂರಿದ್ದರು.

ಆಹಾರ ಸಚಿವ ಮುನಿಯಪ್ಪ ಸ್ಪಷ್ಟನೆ

ಎತ್ತಿನಹೊಳೆ: ವರ್ಷದಲ್ಲಿ ಕೋಲಾರ ಜಿಲ್ಲೆಗೆ ನೀರು

ಕೋಲಾರ: ಎತ್ತಿನಹೊಳೆ ಯೋಜನೆಯಲ್ಲಿ ಕೋಲಾರಕ್ಕೆ ನೂರಕ್ಕೆ ನೂರರಷ್ಟು ನೀರು ಸಿಗುತ್ತದೆ. ಯೋಜನೆಗಾಗಿ ಅನೇಕ ಹೋರಾಟಗಳು ಆಗಿವೆ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎತ್ತಿನಹೊಳೆ ಯೋಜನೆಯಿಂದ 20 ರಿಂದ 24 ಟಿಎಂಸಿ ನೀರು ಸಿಗಲಿದೆ. ಮೊದಲು ಕುಡಿಯುವ ನೀರಿಗೆ ನೀರು ಹರಿಸಿ ಎರಡನೇ ಹಂತದಲ್ಲಿ ಕೆರೆಗಳಿಗೆ ಹರಿಸುವುದಾಗಿ ಸಿಎಂ ಸಹ ಆಶ್ವಾಸನೆ ನೀಡಿದ್ದಾರೆ. ಒಂದು ವರ್ಷದಲ್ಲಿ ಕೋಲಾರದ ನಂಗಲಿಯವರೆಗೂ ನೀರು ಹರಿಯಲಿದೆ ಎಂದರು.

ಕೋಲಾರ-ಚಿಕ್ಕಬಳ್ಳಾಪುರ, ಬೆಂಗ ಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯಲು ನೀರು ಹರಿಸಲಾಗುವುದು. ಹಾಸನದಿಂದ ನಮಗೆ ನೀರು ಹರಿಸಲು 16 ಟಿಎಂಸಿ ನೀರು ಸಾಕು, ಬಯಲುಸೀಮೆಯ 7 ಜಿಲ್ಲೆಗಳಿಗೆ ಮೊದಲು ಕುಡಿಯುವ ನೀರು ಪೂರೈಕೆ, ಉಳಿದ ನೀರು ಕೆರೆಗೆ ಹರಿಸಲಾಗುವುದು, ಹೇಮಾವತಿಯಿಂದ ನೀರು ಆರಂಭ ವಾಗಲಿದ್ದು, ದಾರಿಯಲ್ಲಿ ಸಿಗುವ ಊರುಗಳಿಗೆ ನೀರು ಕೊಡಬೇಕಾಗಿದೆ, ಕೋಲಾರಕ್ಕೆ 3 ರಿಂದ 4 ಟಿಎಂಸಿ ನೀರು ಬರಲಿದೆ ಎಂದರು. ಕೊರಟಗೆರೆ ವರೆಗೂ ಕಾಲುವೆ ಮುಖಾಂತರ ನೀರು ಬರುತ್ತದೆ ಎಂದು ತಿಳಿಸಿದರು.

ಗಲಭೆಗಳಿಗೆ ಬಾಹ್ಯಶಕ್ತಿಗಳೇ ಕಾರಣ : ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ **ಗಂಭೀರ ಆರೋಪ**

ಪ್ಯಾಲೆಸ್ತೀನ್ ಧ್ವಜ: ಸಮಗ್ರ ತನಿಖೆಯಾಗಲಿ

ಮೈಸೂರು: ನಾಗಮಂಗಲ ಘಟನೆಯ ಸಂಪೂರ್ಣ ತನಿಖೆಯನ್ನು ಎನ್‌ಐಎಗೆ ವಹಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗಮಂಗಲದ ಗಲಭೆ ಪ್ರಕರಣದ ಹಿಂದೆ ಹೊರಗಿನ ಶಕ್ತಿ ಕೆಲಸ ಮಾಡಿರುವ ಅನುಮಾನವಿತ್ತು. ಅದರಂತೆ ಕೇರಳದವರ ಹೆಸರು ಬಹಿರಂಗವಾಗುವ ಮೂಲಕ ಇದು ಸಾಬೀತಾಗಿದೆ. ಮಂಡ್ಯದಲ್ಲಿ ಶೇ.90 ಹಿಂದುಗಳಿದ್ದು,ಅಂತಹ ಕಡೆಯಲ್ಲಿ ಈ ರೀತಿ ಕೃತ್ಯ ಎಸಗಿರುವುದು ಪೂರ್ವಯೋಜಿತ ಎಂದು ಆರೋಪಿಸಿದರು.

ಗಲಾಟೆಗಿಂತ ಹೆಚ್ಚಾಗಿ ಭಯದ ವಾತಾವರಣ ನಿರ್ಮಿಸಬೇಕು, ಆತಂಕ ಸೃಷ್ಟಿ ಮಾಡಬೇಕು, ಗಲಭೆ ನಡೆಸಿ ನಷ್ಟವುಂಟು ಮಾಡಬೇಕೆಂಬುದು ಇದರ ಉದ್ದೇಶವಾಗಿದೆ ಎಂದು ಸಿ.ಟಿ.ರವಿ ದೂರಿದರು.

ಟೂಲ್ ಕಿಟ್ ಕೆಲಸ ಮಾಡಿದೆ: ಶಾಸಕ ಮುನಿರತ್ನ ಆಡಿಯೋ ಪ್ರಕರಣದ ಹಿಂದೆ ಟೂಲ್‌ಕಿಟ್ ಕೆಲಸ ಮಾಡಿದ್ದು, ಹನುಮಂತಪ್ಪ ಆಡಿಯೋದಿಂದ ಇದು ಸಾಬೀತಾಗಿದೆ. ಕಾಂಗ್ರೆಸ್ಸಿಗರು ತಮ್ಮ ಪಕ್ಷದವರಿಗೆ ಒಂದು ನ್ಯಾಯ, ಬಿಜೆಪಿಗರಿಗೆ ಒಂದು ನ್ಯಾಯ ಎಂಬ ನೀತಿ ಅನುಸರಿಸುತ್ತಿದ್ದಾರೆ. ಕಾಂಗ್ರೆಸ್ ಶಾಸಕ ಚೆನ್ನರೆಡ್ಡಿ ವಿರುದ್ಧವೂ ಕಿರುಕುಳ ಪ್ರಕರಣ ದಾಖಲಾಗಿದ್ದು, ಆತನನ್ನು ಬಂಧಿಸುವ ಬದಲು ಸಿಎಂ ತಮ್ಮ ಮನೆಯಲ್ಲಿ ಬಿರಿಯಾನಿ ಊಟ ಹಾಕಿಸಿದ್ದಾರೆ. ಸಚಿವ ಚೆಲುವರಾಯಸ್ವಾಮಿ, ಮಾಜಿ ಸಚಿವ ನಾಗೇಂದ್ರ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರ ವಿರುದ್ಧ ದೂರು ದಾಖಲಾಗಿದೆ. ಆದರೆ ಅವರನ್ನು ಬಂಧಿಸುವ ಕೆಲಸ ಮಾಡದೆ, ಶಾಸಕ ಮುನಿರತ್ನ ಅವರನ್ನು ಮಾತ್ರ ಎಫ್‌ಐಆರ್ ದಾಖಲಾದ ದಿನವೇ ಬಂಧಿಸಿದ್ದು, ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಸಿ.ಟಿ. ರವಿ ಕಿಡಿಕಾರಿದರು.

ಪ್ಯಾಲೆಸ್ತೀನ್ ಬಾವುಟ ಹಿಡಿದು ಬೈಕ್ ಸವಾರಿ: ನಾಲ್ವರ ಸೆರೆ

ಚಿಕ್ಕಮಗಳೂರು: ಪ್ಯಾಲೆಸ್ತೀನ್ ಬಾವುಟ ಹಿಡಿದು ಬೈಕ್ ನಲ್ಲಿ ನಗರದಲ್ಲಿ ಓಡಾಡಿದ ಪ್ರಕರಣದಲ್ಲಿ ನಾಲ್ವರು ಅಪ್ರಾಪ್ತ ವಯಸ್ಕರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ. ಬಂಧಿತರ ವಿಚಾರಣೆ ನಡೆಸಲಾಗುತ್ತಿದೆ. ಬಾಲಕರಿಗೆ ಪ್ಯಾಲೆಸ್ತೀನ್ ಧ್ವಜ ಸಿಕ್ಕಿದ್ದು ಹೇಗೆ? ಧ್ವಜ ನೀಡಿ ನಗರದಾದ್ಯಂತ ಓಡಾಟ ನಡೆಸಲು ಸೂಚನೆ ನೀಡಲಾಗಿತ್ತಾ? ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಘಟನೆಯ ವಿಚಾರಣೆಗೆ ಇನ್ಸ್ ಪೆಕ್ಟರ್ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಪ್ಯಾಲೆಸ್ತೀನ್ ಧ್ವಜ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದು, ತನಿಖೆ ನಡೆಸುತ್ತಿದ್ದಾರೆ. ಈದ್ ಮಿಲಾದ್ ಮೆರವಣಿಗೆ ಸಾಗಲಿದ್ದ ನಗರದ ಪ್ರಮುಖ ರಸ್ತೆಗಳಲ್ಲಿ ತೀವ್ರ ನಿಗಾ ವಹಿಸಿದ್ದರು. ಚಿಕ್ಕಮಗಳೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> ಮಂಗಳೂರಿನಲ್ಲಿ ಹಿಂದುಗಳಿಗೆ ಸವಾಲು ಹಾಕಿರುವುದು ದೇಶಕ್ಕೇ ಹಾಕಿದ ಸವಾಲಾಗಿದೆ. ಯುದ್ಧವನ್ನು ನಾವು ಯುದ್ಧವಾಗಿಯೇ ಸ್ವೀಕರಿಸಿ ಉತ್ತರ ಕೊಡುತ್ತೇವೆ. ನಮ್ಮ ಪೂರ್ವಜರು ಕತ್ತಿ ತೋರಿಸಿದಾಗ ಕತ್ತಿಯಿಂದಲೇ ಉತ್ತರ ಕೊಟ್ಟಿದ್ದರು. ನಾವು ಸಹ ಕತ್ತಿಯಿಂದಲೇ ಉತ್ತರ ಕೊಡುತ್ತೇವೆ. ಇಲ್ಲವಾದರೆ ಭಾರತ ಸಹ ಬಾಂಗ್ಲಾದೇಶ, ಪಾಕಿಸ್ತಾನದಂತೆ ಆಗುತ್ತದೆ .
> -**ಸಿ.ಟಿ. ರವಿ,** ಬಿಜೆಪಿ ಶಾಸಕ

ವಿಶ್ವವಾಣಿ

ಸಂಪಾದಕೀಯ

ಜೈಲಲ್ಲಿ ರೌಡಿಗಳ ಕಾರುಬಾರು

ನಟ ದರ್ಶನ್‌ಗೆ ವಿಶೇಷ ಆದರಾತಿಥ್ಯ ನೀಡಿದ ಕಾರಣಕ್ಕೆ ಸುದ್ದಿಯಾದ ಪರಪ್ಪನ ಅಗ್ರಹಾರ ಇದೀಗ ಮತ್ತೆ ಸುದ್ದಿಯಾಗಿದೆ. ಬೆಂಗಳೂರು ಆಗ್ನೇಯ ವಿಭಾಗದ ಪೊಲೀಸರು ಭಾನುವಾರ ಕೇಂದ್ರ ಕಾರಾಗೃಹದ ಮೇಲೆ ದಾಳಿ ನಡೆಸಿದ ವೇಳೆ ರೌಡಿ ವಿಲ್ಸನ್ ಗಾರ್ಡನ್ ನಾಗರಾಜನ ಬಳಿ ಮಾದಕದ್ರವ್ಯ ಪತ್ತೆಯಾಗಿದೆ. ನಾಗರಾಜ್ ಮತ್ತು ಸ್ನೇಹಿತರ ಬಳಗದಿಂದ ಪೊಲೀಸರು ಡ್ರಗ್ಸ್, 15 ಮೊಬೈಲ್‌ಗಳು, ಎಲೆಕ್ಟ್ರಿಕ್ ಸ್ಟವ್, ಮೂರು ಲಾಂಗ್‌ಗಳು, ಬೀಡಿ, ಸಿಗರೇಟ್ ಪ್ಯಾಕ್‌ಗಳು, ಪೆನ್‌ಡ್ರೈವ್ ಸೇರಿದಂತೆ ಅನೇಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಅಂದರೆ ಪರಪ್ಪನ ಅಗ್ರಹಾರ ಜೈಲನ್ನು ಪೊಲೀಸರ ಬದಲು ರೌಡಿಗಳೇ ನಿಯಂತ್ರಿಸುತ್ತಿರುವುದು ಸ್ಪಷ್ಟವಾಗಿದೆ. ಜೈಲು ಆವರಣದಲ್ಲಿ ದರ್ಶನ್ ಕುರ್ಚಿ ಹಾಕಿಕೊಂಡು ಚಹಾ ಮತ್ತು ಸಿಗರೇಟ್ ಸೇವಿಸುತ್ತಾ ಇದ್ದ ಫೋಟೋಗಳು ವೈರಲ್ ಆದಾಗ ವಿಲ್ಸನ್ ಗಾರ್ಡನ್ ನಾಗನ ಫೋಟೋ ಕೂಡ ಬಯಲಾಗಿತ್ತು. ದರ್ಶನ್‌ಗೆ ಆತಿಥ್ಯ ನೀಡುವಲ್ಲಿ ಈತನದೇ ಪ್ರಮುಖ ಪಾತ್ರ ಎನ್ನಲಾಗಿತ್ತು. ಈ ಸಂಬಂಧ ನಾಗನ ವಿರುದ್ಧ ಪ್ರಕರಣ ದಾಖಲಿಸಿ ಎಚ್ಚರಿಕೆ ಯನ್ನೂ ನೀಡಲಾಗಿತ್ತು. ಪ್ರಕರಣದಲ್ಲಿ ಜೈಲು ಅಧೀಕ್ಷಕರು ಸೇರಿ ಹಿರಿಯ ಅಧಿಕಾರಿಗಳ ತಲೆದಂಡವಾಗಿತ್ತು. ಘಟನೆ ನಡೆದು ಎರಡು ವಾರಗಳು ಕಳೆಯುವಷ್ಟರಲ್ಲಿಯೇ ಜೈಲಿನಲ್ಲಿ ಮಾದಕ ದ್ರವ್ಯ, ಮೊಬೈಲ್, ಸ್ಟವ್‌ಗಳು ಪತ್ತೆಯಾಗಿವೆ ಎಂದರೆ ಇಲ್ಲಿ ರೌಡಿಗಳ ಪ್ರಾಬಲ್ಯ ಎಷ್ಟರ ಮಟ್ಟಿಗಿದೆ ಎನ್ನುವುದನ್ನು ಊಹಿಸಬಹುದು. ಕಳೆದ ಮೂರು ತಿಂಗಳಲ್ಲಿ ಪೊಲೀಸರು ಇದೇ ಜೈಲಿನ ಮೇಲೆ ಹಲವು ಬಾರಿ ದಾಳಿ ನಡೆಸಿದ್ದಾರೆ. ಪ್ರತಿ ಬಾರಿ ದಾಳಿ ನಡೆಸುವಾಗಲೂ ಮುಂಚಿತವಾಗಿ ಮಾಹಿತಿ ಸೋರಿಕೆಯಾಗುತ್ತಿದ್ದ ಕಾರಣ ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದೇ ಮೊದಲ ಬಾರಿಗೆ ಮುಂಚಿತವಾಗಿ ಮಾಹಿತಿ ನೀಡದೆ ಕ್ಷಿಪ್ರ ದಾಳಿ ನಡೆಸಿದ ಕಾರಣ ಈ ವಸ್ತುಗಳು ಪತ್ತೆಯಾಗಿವೆ. ದರ್ಶನ್ ಪ್ರಕರಣದಲ್ಲಿ ಜೈಲು ಅಧಿಕಾರಿಗಳ ಎತ್ತಂಗಡಿಯಾದ ಬಳಿಕವೂ ರೌಡಿಗಳ ಪಾಲಿಗೆ ಈ ಜೈಲು ವಿಶ್ರಾಂತಿ ತಾಣವಾಗಿ ಮುಂದುವರಿದಿತ್ತು ಎಂದರೆ ಇನ್ನಷ್ಟು ಅಧಿಕಾರಿಗಳು ಕೈದಿಗಳೊಂದಿಗೆ ಶಾಮೀಲಾಗಿರುವುದು ಸ್ಪಷ್ಟ. ರಾಜ್ಯದ ಎಲ್ಲ ಜೈಲುಗಳಲ್ಲೂ ಇದೇ ರೀತಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ದೂರುಗಳಿವೆ. ಕೃತಕ ಬುದ್ಧಿಮತ್ತೆ, ಸಿಸಿಟಿವಿ ಕಣ್ಗಾವಲು, ಸೆನ್ಸರ್ ವ್ಯವಸ್ಥೆ ಇರುವ ಈ ಆಧುನಿಕ ತಂತ್ರಜ್ಞಾನ ಕಾಲದಲ್ಲೂ ಜೈಲಿನೊಳಗೆ ಅಕ್ರಮ ವಸ್ತುಗಳ ಪೂರೈಕೆ ಸ್ಥಗಿತ ಸಾಧ್ಯವಾಗುತ್ತಿಲ್ಲ ಎನ್ನುವುದು ನಾಚಿಕೆಗೇಡಿನ ಸಂಗತಿ. ಗೃಹ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಿ ರೌಡಿಗಳ ಪಡೆಗೆ ಕಡಿವಾಣ ಹಾಕದೇ ಹೋದರೆ ಇಡೀ ಪೊಲೀಸ್ ವ್ಯವಸ್ಥೆ ನಗೆಪಾಟಲಿಗೀಡಾಗಲಿದೆ. ಪ್ರಾಮಾಣಿಕ ಅಧಿಕಾರಿಗಳ ನೈತಿಕ ಸ್ಥೈರ್ಯ ಕುಸಿಯಲಿದೆ.

ಸೊಂಪಾದಕೀಯ

ರಾಜಿ ಇಲ್ಲ, ಬರೀ ರಾಜೀನಾಮೆ

ದಿಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಕಡೆಗೂ ಜೈಲಿನಿಂದ ಹೊರಗೆ ಬಂದಿದ್ದಾರೆ. ಅಬಕಾರಿ ಭ್ರಷ್ಟಾಚಾರದ ಪ್ರಕರಣದಲ್ಲಿ 6 ತಿಂಗಳ ಸೆರೆವಾಸದಲ್ಲಿದ್ದ ಕೇಜ್ರಿವಾಲ್‌ಗೆ ಬಿಡುಗಡೆಯ ಭಾಗ್ಯ ಸಿಕ್ಕಿದೆ. ಜೈಲಿನಲ್ಲಿದ್ದರೂ ಮೋದಿ ವಿರುದ್ಧ, ಕೇಂದ್ರ ಸರಕಾರದ ವಿರುದ್ಧ ಮಾತಾಡುತ್ತಾ ರಾಜಿ ಆಗುವ ಪ್ರಶ್ನೆಯೇ ಇಲ್ಲ ಅಂತಿದ್ದ ಕೇಜ್ರಿ ಈಗ ರಾಜೀನಾಮೆ ಕೊಡ್ತಾ ಇದ್ದಾರೆ ಅನ್ನೋ ಮಾತು ಕೇಳಿ ಮೋದಿ ಸರಕಾರದ ಬಗ್ಗೆ ಕೇಜ್ರಿ ಅವರಿಗೆ ಭಯ ಬಂದಿದೆ ಅಂತ ಗಾಬರಿ ಆಗಬೇಡಿ. ಜೈಲಿನಲ್ಲಿ ಇಷ್ಟು ದಿನ ಇದ್ದಾಗಲೇ ರಾಜೀನಾಮೆ ನೀಡದ ಕೇಜ್ರಿ, ಈಗ ಹೊರಗೆ ಬಂದ ಮೇಲೆ ಈಗ ಭಯದಿಂದ ರಾಜೀನಾಮೆ ಕೊಟ್ಟಾರೆಯೇ? ಇದು ಕೇಜ್ರಿವಾಲ್ ಅವರ ಹೊಸ ಗೇಮ್‌ಪ್ಲಾನ್. ಅಂದರೆ ಹರುಷದ ಕೂಳನ್ನು ಬಿಟ್ಟು 5 ವರುಷದ ಕೂಳು ಗಿಟ್ಟಿಸಿಕೊಳ್ಳೋ ಕೇಜ್ರಿ ಯೋಜನೆ. ಇನ್ನೆರಡು ದಿನಗಳಲ್ಲಿ ರಾಜೀನಾಮೆ ಕೊಡ್ತೀನಿ ಅಂತ ಡಿಸೈಡ್ ಮಾಡಿರೋ ಕೇಜ್ರಿವಾಲ್ ಮನಸ್ಸಲ್ಲಿ ಬೇರೆಯದ್ದೇ ಯೋಚನೆ ಇದೆ. ಈಗ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಚುನಾವಣೆಗೆ ಹೋಗುವ ತವಕ ಅವರದ್ದು. ಇಷ್ಟು ದಿನ ತಮ್ಮನ್ನು ಜೈಲಿನಲ್ಲಿ ಇಟ್ಟಿದ್ದ ಬಿಜೆಪಿ ಸರಕಾರದ ವಿರುದ್ಧ ಚುನಾವಣಾ ಅಖಾಡದಲ್ಲಿ ತೊಡೆ ತಟ್ಟಿ, ಜನರ ಸಿಂಪಥಿ ಗಿಟ್ಟಿಸಿಕೊಂಡರೆ ಮತ್ತೆ ಮುಖ್ಯಮಂತ್ರಿ ಆಗುವ ಅದೃಷ್ಟ ತಮ್ಮನ್ನು ಅಟ್ಟಿಸಿಕೊಂಡು ಬರುತ್ತದೆ ಅನ್ನೋ ಕಿಲಾಡಿತನ ಕೇಜ್ರಿವಾಲ್‌ದು. ಅದೂ ನಿಜವೇ ಬಿಡಿ. ನಮ್ಮ ಜನ ಅನುಕಂಪಕ್ಕೆ ಸುಲಭವಾಗಿ ಈಡಾಗುತ್ತಾರೆ. ಅದರಲ್ಲೂ ಚುನಾವಣೆಗಳಲ್ಲಿ. 'ಅಯ್ಯೋ ಪಾಪ ಅವರಿಗೆ ಹೀಗಾಗಬಾರದಿತ್ತು, ಅವರ ವಿರುದ್ಧ ಷಡ್ಯಂತ್ರ ನಡೆಸಿದ್ದಾರೆ' ಅಂತ ಯಾರ ಬಗೆಗಾದರೂ ನಮ್ಮ ಜನ ಲೊಚಗುಟ್ಟಿದರು ಅಂದ್ರೆ, ಅದು ಆ ವ್ಯಕ್ತಿಗೆ ಅಧಿಕಾರ ಸಿಗುವ ವಿಷಯದಲ್ಲಿ ಹಲ್ಲಿ ಲೊಚಗುಟ್ಟಿದಂತೆಯೇ ಸರಿ. ಹಾಗಾಗಿ ಸದ್ಯಕ್ಕೆ ಸಿಎಂ ಗಾದಿಯಿಂದ ಇಳಿದು ಬೇರೆ ಯಾರಿಗಾದರೂ ತಾತ್ಕಾಲಿಕವಾಗಿ ಸಿಎಂ ಆಗೋಕೆ ಹಾದಿ ಮಾಡಿಕೊಡಲಿದ್ದಾರೆ ಕೇಜ್ರಿವಾಲ್. ಈ ರಾಜೀನಾಮೆಯನ್ನು ಅವರು ಸೆಪ್ಟೆಂಬರ್ 17ರ ಮೋದಿ ಹುಟ್ಟುಹಬ್ಬದಂದು ಕೊಡಲಿರೋದು ವಿಶೇಷ. ಮೋದಿ ಅವರ ಹುಟ್ಟುಹಬ್ಬದಂದು ರಾಜೀನಾಮೆ ಕೊಟ್ಟರೆ ತನಗೆ ರಾಜಕೀಯದಲ್ಲಿ ಮುಖ್ಯಮಂತ್ರಿ ಆಗಿ ಮರುಹುಟ್ಟು ಸಿಗುತ್ತದೆ ಅನ್ನೋ ನಂಬಿಕೆ ಕೇಜ್ರಿವಾಲ್‌ದು.

ಸಂಪಾದಕರ ಸದ್ಯಶೋಧನೆ

7, ಲೋಕಕಲ್ಯಾಣ ಮಾರ್ಗ

ರಾಜೀವ್ ಗಾಂಧಿ ಪ್ರಧಾನಿಯಾಗುವುದಕ್ಕಿಂತ ಮುನ್ನ, ಭಾರತದ ಪ್ರಧಾನ ಮಂತ್ರಿಗೆ ನಿರ್ದಿಷ್ಟವಾದ ನಿವಾಸವೇ ಇರಲಿಲ್ಲ ಎಂದರೆ ಆಶ್ಚರ್ಯವಾಗಬಹುದು. ಅದಕ್ಕೂ ಮುನ್ನ ಪ್ರಧಾನಿಗಳು ತಾವು ಸಂಸದರು ಅಥವಾ ಮಂತ್ರಿಯಾದಾಗ ನೀಡಿದ್ದ ನಿವಾಸದಲ್ಲಿಯೇ ವಾಸಿಸುತ್ತಿದ್ದರು. ದೇಶದ ಪ್ರಥಮ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗ, ಜವಾಹರಲಾಲ್ ನೆಹರು ಅವರು 'ತೀನ್ ಮೂರ್ತಿ ಭವನ'ವನ್ನು ತಮ್ಮ ಅಧಿಕೃತ ನಿವಾಸವಾಗಿ ಮಾಡಿಕೊಂಡರು. ಅದಕ್ಕೂ ಮುನ್ನ ಆ ಭವನದಲ್ಲಿ ಬ್ರಿಟಿಷ್ ಆಡಳಿತದಲ್ಲಿ ಭಾರತೀಯ ಸೇನೆಯ ಕಮಾಂಡರ್-ಇನ್-ಚೀಫ್ ವಾಸಿಸುತ್ತಿದ್ದರು. ಆಗ ಇದನ್ನು 'ಫ್ಲಾಗ್ ಸ್ಟಾಫ್ ಹೌಸ್' ಎಂದು ಕರೆಯುತ್ತಿದ್ದರು. ನೆಹರು ಆ ನಿವಾಸದಲ್ಲಿ ವಾಸಿಸಲು ಆರಂಭಿಸಿದಾಗ, ತೀನ್ ಮೂರ್ತಿ ಭವನವಾಯಿತು. ಅವರ ನಂತರ ಪ್ರಧಾನಿಯಾದ ಲಾಲ್ ಬಹಾದುರ್ ಶಾಸ್ತ್ರಿ ಅವರು 10, ಜನಪತ್ ಮಾರ್ಗದಲ್ಲಿರುವ ನಿವಾಸವನ್ನು ಆಯ್ದುಕೊಂಡರು. 1964ರಿಂದ ಮುಂದಿನ 2 ವರ್ಷಗಳ ಕಾಲ ಅದು ಅವರ ಅಧಿಕೃತ ನಿವಾಸವಾಗಿತ್ತು. ನಂತರ ಅದನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡಲಾಯಿತು. ಅದರ ಒಂದು ಭಾಗವನ್ನು ಲಾಲ್ ಬಹಾದುರ್ ಶಾಸ್ತ್ರಿ ಅವರ ವಸ್ತು ಸಂಗ್ರಹಾಲಯಕ್ಕೆ ನೀಡಲಾಯಿತು. ಅದನ್ನು 1, ಮೋತಿಲಾಲ್ ನೆಹರು ಮಾರ್ಗದಿಂದಲೂ ಪ್ರವೇಶಿಸಬಹುದು. ಪ್ರಸ್ತುತ 10, ಜನಪತ್‌ನಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು 1989ರಿಂದ ವಾಸಿಸುತ್ತಿದ್ದಾರೆ. ಇಂದಿರಾ ಗಾಂಧಿಯವರು ಪ್ರಧಾನಿಯಾಗಿ 1, ಸಫ್ದರ್‌ಜಂಗ್ ರಸ್ತೆಯಲ್ಲಿರುವ ನಿವಾಸವನ್ನು ತಮ್ಮ ಅಧಿಕೃತ ನಿವಾಸವನ್ನಾಗಿ ಮಾಡಿಕೊಂಡರು. ಈ ನಿವಾಸದಲ್ಲಿಯೇ ಅವರ ಹತ್ಯೆಯಾಯಿತು. ಅನಂತರ ಅದನ್ನು ಇಂದಿರಾ ಗಾಂಧಿ ಮೆಮೋರಿಯಲ್ ಮತ್ತು ಮ್ಯೂಸಿಯಂ ಆಗಿ ಪರಿವರ್ತಿಸಲಾಗಿದೆ. ಇಂದಿರಾ ಗಾಂಧಿಯವರು ಆ ನಿವಾಸದಲ್ಲಿ ಉಳಿಯುವ ಮೊದಲು, ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಸುಧಿ ರಂಜನ್ ದಾಸ್ ಆ ಮನೆಯಲ್ಲಿ ಉಳಿದಿದ್ದರು. ಇಂದಿರಾ ತರುವಾಯ, 1984ರಲ್ಲಿ ಅವರ ಪುತ್ರ ರಾಜೀವ್ ಗಾಂಧಿ ಪ್ರಧಾನಿಯಾದರು. ಅವರು ತಮ್ಮ ಪತ್ನಿ ಸೋನಿಯಾ, ಪುತ್ರ ರಾಹುಲ್ ಮತ್ತು ಪುತ್ರಿ ಪ್ರಿಯಾಂಕಾ ಜತೆ 7, ರೇಸ್ ಕೋರ್ಸ್ ರಸ್ತೆಯ ನಿವಾಸದಲ್ಲಿ ಉಳಿಯಲಾರಂಭಿಸಿದರು. ನಂತರ ವಿಶ್ವನಾಥ್ ಪ್ರತಾಪ್ ಸಿಂಗ್ ಪ್ರಧಾನಿಯಾದಾಗ 7, ರೇಸ್ ಕೋರ್ಸ್ ರಸ್ತೆಯ ನಿವಾಸವನ್ನು 'ಪ್ರಧಾನಿಯ ಅಧಿಕೃತ ನಿವಾಸ' ಎಂದು ಘೋಷಿಸಿದರು. ದೇಶದ ಪ್ರಧಾನಿ ಯಾರೇ ಆಗಲಿ, ಅವರು ಈ ನಿವಾಸದಲ್ಲಿಯೇ ಉಳಿಯಬೇಕು ಎಂಬ ಆದೇಶವನ್ನು ಹೊರಡಿಸಿದರು. ಅದಾದ ಬಳಿಕ ಅದು ಎಲ್ಲ ಪ್ರಧಾನಿಗಳ ಅಧಿಕೃತ ನಿವಾಸವಾಯಿತು. ದೇವೇಗೌಡ, ಐ.ಕೆ.ಗುಜ್ರಾಲ್, ಅಟಲ್ ಬಿಹಾರಿ ವಾಜಪೇಯಿ, ಡಾ.ಮನಮೋಹನ್ ಸಿಂಗ್ ಅದೇ ನಿವಾಸವನ್ನು ಆಯ್ಕೆ ಮಾಡಿಕೊಂಡರು. ಮೋದಿಯವರು ಪ್ರಧಾನಿಯಾದ ಬಳಿಕ, ಡಾ.ಸಿಂಗ್ ಅವರು 7, ರೇಸ್ ಕೋರ್ಸ್ ರಸ್ತೆಯ ನಿವಾಸವನ್ನು ಖಾಲಿಮಾಡಲು ತುಸು ಸಮಯ ತೆಗೆದುಕೊಂಡರು. ಅಲ್ಲಿ ತನಕ ಅವರು 5, ರೇಸ್ ಕೋರ್ಸ್ ರಸ್ತೆಯಲ್ಲಿ ಉಳಿದುಕೊಂಡರು. 7, ರೇಸ್ ಕೋರ್ಸ್ ರಸ್ತೆಯ ನಿವಾಸವನ್ನು ನವೀಕರಣಗೊಳಿಸಿದ ಬಳಿಕ ಅಲ್ಲಿಗೆ ಹೋದರು. 2016ರ ಸೆಪ್ಟೆಂಬರಿನಲ್ಲಿ ಮೋದಿಯವರು 7, ರೇಸ್ ಕೋರ್ಸ್ ರಸ್ತೆಯ ನಿವಾಸವನ್ನು '7, ಲೋಕಕಲ್ಯಾಣ ಮಾರ್ಗ' ಎಂದು ಮರುನಾಮಕರಣ ಮಾಡಿದರು. 12 ಎಕರೆ ಜಾಗದಲ್ಲಿರುವ ಪ್ರಧಾನಿಯವರ ಅಧಿಕೃತ ನಿವಾಸದಲ್ಲಿ ಐದು ಭವ್ಯ ಬಂಗಲೆಗಳಿವೆ. ಪ್ರಧಾನಿಯವರು ಉಳಿಯುವ ಬಂಗಲೆಗೆ 'ಪಂಚವಟಿ' ಎಂದು ಹೆಸರು. ಒಂದು ಬಂಗಲೆಯಲ್ಲಿ ಪ್ರಧಾನಿಯವರ ಭದ್ರತೆಯನ್ನು ನೋಡಿಕೊಳ್ಳುವ ಸ್ಪೆಷಲ್ ಪ್ರೊಟೆಕ್ಷನ್ ಗ್ರೂಪ್ ಅಧಿಕಾರಿಗಳಿರುತ್ತಾರೆ. '7, ಲೋಕಕಲ್ಯಾಣ ಮಾರ್ಗ'ದಲ್ಲಿ ಪ್ರಧಾನಿಯವರ ಅಧಿಕಾರಿಗಳು, ಆಪ್ತ ಸಿಬ್ಬಂದಿ, ಅಡುಗೆ ಭಟ್ಟರು, ಉದ್ಯಾನದ ಸಿಬ್ಬಂದಿ, ಇಲೆಕ್ಟ್ರಿಷಿಯನ್‌ಗಳು ಸೇರಿದಂತೆ, ಸುಮಾರು 200 ಮಂದಿ ಕೆಲಸ ಮಾಡುತ್ತಾರೆ. ಈ ನಿವಾಸದಲ್ಲಿ ನವಿಲುಗಳು ಸೇರಿದಂತೆ 50ಕ್ಕೂ ಹೆಚ್ಚು ಪಕ್ಷಿಗಳು, ದನ-ಕರುಗಳು ಇರುವುದು ವಿಶೇಷ.

ಒಡೆದ ಕನ್ನಡಿಯಾದ ರಾಜ್ಯ ಬಿಜೆಪಿ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ಯಾವುದೇ ಒಂದು ವ್ಯವಸ್ಥೆ ಒಬ್ಬರಿಂದ ನಡೆಯಲು ಸಾಧ್ಯವಿಲ್ಲ. ಭಾರತದಲ್ಲಿರುವ ರಾಜಕೀಯ ವ್ಯವಸ್ಥೆಯಲ್ಲಂತೂ ಇದು ಸಾಧ್ಯವೇ ಇಲ್ಲ ಎನ್ನುವುದು ಪದೇಪದೆ ರುಜುವಾತಾಗುತ್ತದೆ. ಅದರಲ್ಲಿಯೂ ರಾಷ್ಟ್ರೀಯ ಪಕ್ಷಗಳಲ್ಲಿ ಒಗ್ಗಟ್ಟಿನ ಹೋರಾಟ ಅಗತ್ಯ. ಸಂಘಟಿತ ಹೋರಾಟವಿದ್ದರೆ ಏನಾಗುತ್ತದೆ? ಸಂಘಟಿತ ಹೋರಾಟವಿಲ್ಲದೇ 'ಏಕಚಕ್ರಾಧಿಪತ್ಯ'ವೆಂದು ಹೊರಟರೆ ಏನಾಗುತ್ತದೆ ಎನ್ನುವುದಕ್ಕೆ ಸರಳ ಉದಾಹರಣೆಯೆಂದರೆ ರಾಜ್ಯದಲ್ಲಿರುವ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಎಂದರೆ ತಪ್ಪಾಗುವುದಿಲ್ಲ.

ಹೌದು, ಸಂಘಟಿತ ಹೋರಾಟದಿಂದ ಏನು ಸಾಧ್ಯ ಎನ್ನುವುದನ್ನು ರಾಜ್ಯ ಕಾಂಗ್ರೆಸ್ ತೋರಿಸಿದ್ದರೆ, ಸಂಘಟನೆಯಿಲ್ಲದೇ ಪಕ್ಷವೊಂದು ಮೂರು ಬಾಗಿಲಾಗಿದ್ದರೆ, ಅತ್ಯುತ್ತಮ ಸಂಘಟನೆಯನ್ನು ಹೊಂದಿದ್ದರೂ ಪಕ್ಷವೊಂದು ಕೆಲವೇ ವರ್ಷದಲ್ಲಿ ಯಾವ ರೀತಿಯಲ್ಲಿ ಅಧೋಗತಿಗೆ ಹೋಗಲಿದೆ ಎನ್ನುವುದಕ್ಕೆ ರಾಜ್ಯ ಬಿಜೆಪಿ ಸಾಕ್ಷಿಯಾಗಿ ನಿಲ್ಲುತ್ತಿದೆ. ಹಾಗೆ ನೋಡಿದರೆ, ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಇತ್ತೀಚಿನ ತಿಂಗಳಲ್ಲಿ ಕೇಳಿಬಂದಿದ್ದ ಆರೋಪಗಳನ್ನು ಸರಿಯಾಗಿ ಬಳಸಿಕೊಂಡಿದ್ದರೆ ಸರಕಾರವನ್ನು ಒಂಟಿ ಕಾಲಿನಲ್ಲಿ ನಿಲ್ಲಿಸಬಹುದಾಗಿತ್ತು. ಆದರೆ ರಾಜ್ಯ ಬಿಜೆಪಿಯಲ್ಲಿನ 'ಒಳ ಜಗಳ', ಪ್ರತಿಷ್ಠೆಯಿಂದಾಗಿ ಸರಕಾರದ ವಿರುದ್ಧ ಆರೋಪ ಕೇಳಿಬಂದಿದ್ದರೂ ಕಾಂಗ್ರೆಸಿಗರೇ ಬಿಜೆಪಿಗರ ವಿರುದ್ಧ ಸವಾರಿ ಮಾಡುವಂತಾಗುತ್ತಿದೆ.

ಬಿಜೆಪಿಯಲ್ಲಿನ ಹಲವು ಹುಳುಕುಗಳು ವಿವಿಧ ರೀತಿಯಲ್ಲಿ, ಹಲವು ಸನ್ನಿವೇಶದಲ್ಲಿ ಬಹಿರಂಗವಾಗಿದ್ದವು. ಆದರೆ ರಾಜ್ಯ ಬಿಜೆಪಿ ಘಟಕದ ಸಂಘಟನೆಯಲ್ಲಿ ಆಗಿರುವ ಡ್ಯಾಮೇಜ್ ಪ್ರಮಾಣಕ್ಕೆ ಸಾಕ್ಷಿಯಾಗಿದ್ದು, ಭಿನ್ನಮತಕ್ಕೆ ಸಂಬಂಧಿಸಿದಂತೆ ಓಡಾಡುತ್ತಿದ್ದ ಎಲ್ಲ 'ಅಂತೆ-ಕಂತೆ'ಗಳಿಗೆ ಸ್ಪಷ್ಟನೆ ನೀಡಿದ್ದು ಕಳೆದ ವಾರ ಸದಾಶಿವನಗರದ ರಾಷ್ಟ್ರೋತ್ಥಾನದಲ್ಲಿ ನಡೆದ ಸಂಘ ಪರಿವಾರದವರ 'ಮಧ್ಯಸ್ಥಿಕೆ'ಯ ಸಭೆಯಲ್ಲಿ ಎನ್ನುವುದು ಸ್ಪಷ್ಟ.

ವಿಜಯೇಂದ್ರ ಹಾಗೂ ಬಸನಗೌಡ ಪಾಟೀಲ್ ಯತ್ನಾಳ್ ಆ್ಯಂಡ್ ಟೀಂ ವಿರುದ್ಧದ ಮುಸುಕಿನೊಳಗಿನ ಗುದ್ದಾಟ ಇಂದು-ನಿನ್ನೆಯದ್ದಲ್ಲ. ಅವರು ಇವರ ವಿರುದ್ಧ ದೂರು ನೀಡುವುದು, ಇವರು ಅವರ ವಿರುದ್ಧ ದೂರು ನೀಡುವುದು ಕಳೆದೊಂದು ವರ್ಷದಿಂದ ನಡೆಯುತ್ತಲೇ ಬಂದಿತ್ತು. ಆದರೆ ಇದು ತಾರಕಕ್ಕೇರಿದ್ದು, ಪಕ್ಷದ ವರಿಷ್ಠರು ಎಂಟ್ರಿಯಾಗುವಷ್ಟು ಗಂಭೀರವಾಗಿದ್ದು, 'ಪ್ರತ್ಯೇಕ ಪಾದಯಾತ್ರೆ'ಯ ಘೋಷಣೆಯ ಬಳಿಕ. ವಿಜಯೇಂದ್ರ ನೇತೃತ್ವದಲ್ಲಿ ನಡೆದ ಬೆಂಗಳೂರು-ಮೈಸೂರು ಪಾದಯಾತ್ರೆಯು ಮುಗಿಯುವ ಮೊದಲೇ ಯತ್ನಾಳ್, ಅರವಿಂದ ಲಿಂಬಾವಳಿ, ರಮೇಶ್ ಜಾರಕಿಹೊಳಿ ಸೇರಿದಂತೆ ಹಿರಿಯ ಬಿಜೆಪಿಗರೆಲ್ಲ ಸೇರಿ ಬಳ್ಳಾರಿ ಪಾದಯಾತ್ರೆಯನ್ನು ಘೋಷಿಸಿದರು. ಈ ರೀತಿ ಪ್ಯಾರಲಲ್ ಆಗಿ ತೀರ್ಮಾನಗಳನ್ನು ಕೈಗೊಳ್ಳುತ್ತಾ ಹೋದರೆ ಮುಂದಿನ ಚುನಾವಣೆ ವೇಳೆಗೆ ಪಕ್ಷದ ಸಂಘಟನೆ ನೆಲಕಚ್ಚಲಿದೆ ಎನ್ನುವ ಕಾರಣಕ್ಕೆ ಆರ್‌ಎಸ್‌ಎಸ್ ಮಧ್ಯಸ್ಥಿಕೆಯಲ್ಲಿ ಸಂಧಾನ ಸಭೆಯನ್ನು ಕರೆಯಲಾಗಿತ್ತು.

ಸಂಘದ ಮುಕುಂದ್ ಜೀ, ತಿಪ್ಪೇಸ್ವಾಮಿ ಸೇರಿದಂತೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹಾಗೂ ವಿಜಯೇಂದ್ರ ವಿರುದ್ಧ ಧ್ವನಿ ಎತ್ತಿದ್ದ ಯತ್ನಾಳ್, ಲಿಂಬಾವಳಿ, ಸಿದ್ದೇಶ್ವರ್‌ರಂಥ ಪ್ರಮುಖರು ಹಾಗೂ ಬಿಜೆಪಿ ಕೋರ್ ಕಮಿಟಿ ಸದಸ್ಯರು ಸೇರಿದಂತೆ ಒಟ್ಟು 38 ಜನರನ್ನು ಆಹ್ವಾನಿಸಲಾಗಿತ್ತು. ಈ ಸಭೆ ಆಯೋಜನೆಗೊಳ್ಳುತ್ತಿದ್ದಂತೆ, ಇದೊಂದು 'ಸಂಧಾನ ಸಭೆ' ಎಂದೇ ನಿರೀಕ್ಷಿಸಲಾಗಿತ್ತು. ಇನ್ನು ಕೆಲವರು ಸಂಘದ ಮಧ್ಯಸ್ಥಿಕೆಯಿರುವುದರಿಂದ ವಿಜಯೇಂದ್ರ ಟೀಂ ಹಾಗೂ ಯತ್ನಾಳ್ ಟೀಂ ನಡುವಿನ ವೈರತ್ವ ದೂರವಾಗಿ ಸ್ನೇಹ ವೃದ್ಧಿಸಲಿದೆ ಎನ್ನುವ ವ್ಯಾಖ್ಯಾನಗಳು ಕೇಳಿಬಂದಿದ್ದವು. ಆದರೆ ಸುದೀರ್ಘ ಸಭೆಯಲ್ಲಿ ಸ್ನೇಹ ವೃದ್ಧಿಸುವ ಬದಲು ನೇರಾನೇರ ಟೀಕಾಪ್ರಹಾರ ಶುರುವಾಗಿ ವಿಜಯೇಂದ್ರ 'ಟಾರ್ಗೆಟ್' ಆಗಿದ್ದು ಅನೇಕರ ಅಚ್ಚರಿಗೆ ಕಾರಣವಾಯಿತು. ಇದಕ್ಕಿಂತ ಹೆಚ್ಚಿನ ಅಚ್ಚರಿಗೆ ಕಾರಣವಾಗಿದ್ದು, ಸುಮಾರು ಐದು ತಾಸು ನಡೆದ ಸಭೆಯಲ್ಲಿ ವಿಜಯೇಂದ್ರ ವಿರುದ್ಧ ಬಂಡಾಯ ನಾಯಕರು ಮಾತ್ರವಲ್ಲದೇ ಅವರದ್ದೇ ಪದಾಧಿಕಾರಿಗಳ ಪಟ್ಟಿಯಲ್ಲಿರುವ ನಾಯಕರೂ ವಿಜಯೇಂದ್ರ ಕಾರ್ಯವೈಖರಿಯನ್ನು ಪ್ರಶ್ನಿಸಿದ್ದು!

ಸಾಮಾನ್ಯವಾಗಿ ಯಾವುದೇ ಪಕ್ಷದಲ್ಲಾದರೂ ಆಯಕಟ್ಟಿನ ಸ್ಥಾನದಲ್ಲಿರುವವರ ವಿರುದ್ಧ ಆರೋಪ, ಆಕ್ರೋಶವಿರುತ್ತದೆ. ಆದರೆ ಬಹಿರಂಗ ಸಭೆಗಳಲ್ಲಿ, ಪಕ್ಷದ ಮುಖಂಡರ ಸಮ್ಮುಖದಲ್ಲಿ ಈ ರೀತಿ ಬಹಿರಂಗ ಆಕ್ರೋಶಗಳು ವ್ಯಕ್ತವಾಗುವುದು ತೀರಾ ಕಡಿಮೆ. ಅದರಲ್ಲಿಯೂ 'ರಾಜ್ಯಾಧ್ಯಕ್ಷನಾಗುವ ಅರ್ಹತೆ ಏನಿದೆ?' ಎಂದು ಅವರ ಮುಂದೆಯೇ ಕೇಳುವುದು ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದೆ. ಇದಿಷ್ಟೇ ಅಲ್ಲದೇ, ಸಭೆಯಲ್ಲಿ ಭಾಗವಹಿಸಿದ್ದ 38 ಜನರ ಪೈಕಿ 36 ಮಂದಿ ಬಿಜೆಪಿ ರಾಜ್ಯಾಧ್ಯಕ್ಷರ ವಿರುದ್ಧ ಕಿಡಿಕಾರಿದರು. ಇಷ್ಟಾದರೂ, ಸಂಘಪರಿವಾರದ ಯಾವೊಬ್ಬ ನಾಯಕರೂ ತಡೆಯುವ ಪ್ರಯತ್ನವನ್ನು ಮಾಡಿಲ್ಲವಂತೆ. ಅಂದರೆ ಬಂಡಾಯ ನಾಯಕರಾಡುತ್ತಿದ್ದ ಮಾತುಗಳಿಗೆ ಹಿರಿಯ ನಾಯಕರ 'ಪರೋಕ್ಷ' ಸಮ್ಮತಿಯಿದೆ ಎನ್ನುವುದು ಸ್ಪಷ್ಟ.

ಸುದೀರ್ಘ ಐದು ತಾಸಿನ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ವಿರುದ್ಧ ಟೀಕಾಪ್ರಹಾರ ನಡೆಸಿದರೂ ಬಂಡಾಯ ನಾಯಕರಿಗೆ ಏನೂ ಹೇಳದ ಸಂಘ ಪರಿವಾರದವರು 'ನೀವು ಎಲ್ಲವನ್ನೂ ನಿಭಾಯಿಸಬೇಕು. ಈ ಹಂತದಲ್ಲಿ ಸರಿಪಡಿಸುವುದು ಕಷ್ಟದ ಕೆಲಸ. ಆದರೂ ಇರುವಷ್ಟು ದಿನ ಎಲ್ಲರನ್ನೂ ವಿಶ್ವಾಸಕ್ಕೆ ಪಡೆಯಿರಿ' ಎಂದು ವಿಜಯೇಂದ್ರ ಅವರಿಗೆ ಹೇಳಿರುವುದು ಇದೀಗ ಚರ್ಚೆಗೆ ಕಾರಣವಾಗಿದೆ. ಅದರಲ್ಲಿಯೂ 'ಇರುವಷ್ಟು ದಿನ' ಎನ್ನುವುದು ಇದೀಗ ನಾನಾ ರೀತಿಯ ಚರ್ಚೆಗಳಿಗೆ ನಾಂದಿ ಹಾಡಿದೆ. ಕೇವಲ ಇಲ್ಲಿಗೆ ನಿಂತಿಲ್ಲ, ದೆಹಲಿಯಿಂದ ಇದೇ ಸಭೆಗೆಂದು ಆಗಮಿಸಿದ್ದ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು, 'ಪಕ್ಷ ಇದೀಗ ಒಡೆದ ಕನ್ನಡಿಯಾಗಿದೆ. ಈ ಹಂತದಲ್ಲಿ ಸರಿಪಡಿಸುವುದು ಕಷ್ಟ' ಎನ್ನುವ ಮಾತನ್ನು ಹೇಳಿದ್ದಾರೆ.

ಲೋಕಸಭಾ ಚುನಾವಣಾ ಫಲಿತಾಂಶದ ಬಳಿಕ ಬಿಜೆಪಿಯಲ್ಲಿ ಸಂತೋಷ್ ಅವರಿಗೆ ಮತ್ತೆ ಕೆಲ ಜವಾಬ್ದಾರಿಗಳನ್ನು ನೀಡಲಾಗಿದೆ. ವಿಧಾನಸಭಾ ಚುನವಣೆಯ ಬಳಿಕ ಕರ್ನಾಟಕದ ವಿಷಯದಲ್ಲಿ ಸಂತೋಷ್‌ಜೀ ಮಾತು ಕೇಳುತ್ತಿರಲಿಲ್ಲ, ಆದರೆ ಲೋಕಸಭಾ ಚುನಾವಣೆಯಲ್ಲಿ ಪೂರ್ಣ ಬಹುಮತ ಪಡೆಯದೇ ಇರುವುದರಿಂದ ಮತ್ತೆ ಸಂತೋಷ್ ಅವರನ್ನು ಕೇಂದ್ರ ನಾಯಕರು 'ವಿಶ್ವಾಸಕ್ಕೆ ತೆಗೆದುಕೊಳ್ಳುವ' ಪ್ರಯತ್ನ ಮಾಡುತ್ತಿದ್ದಾರೆ.

ಆದ್ದರಿಂದ ಸಂತೋಷ್ ಅವರು ಅಮಿತ್ ಶಾ ಅವರ ಸಂದೇಶವನ್ನು ಹೊತ್ತುಕೊಂಡೇ ಕರ್ನಾಟಕಕ್ಕೆ ಆಗಮಿಸಿದ್ದರು. ಸಭೆಯಲ್ಲಿ ಅವರೇ, 'ಈ ಸಮಯದಲ್ಲಿ ಪಕ್ಷ ಸಂಘಟನೆ ನಿಮ್ಮಿಂದ ಸಾಧ್ಯವಿಲ್ಲ' ಎನ್ನುವ ಸಂದೇಶವನ್ನು ವಿಜಯೇಂದ್ರ ಅವರಿಗೆ ನೀಡಿದ್ದಾರೆ ಎಂದರೆ ಅದು ಬಹುತೇಕ ಪಕ್ಷದ ವರಿಷ್ಠರ ಮಾತು ಎನ್ನುವುದು ಸ್ಪಷ್ಟ. ಆದ್ದರಿಂದ ಒಡೆದ ಮನೆ ಎನ್ನುವ ಮಾತು ವಿಜಯೇಂದ್ರ ಹಾಗೂ ಅವರೊಂದಿಗೆ ಇರುವ ನಾಯಕರಿಗೆ ಆತಂಕ ಮೂಡಿಸಿದೆ.

ಹಾಗೆ ನೋಡಿದರೆ, ವರ್ಷದ ಹಿಂದೆ ಅಧಿಕಾರ ಸ್ವೀಕರಿಸಿರುವ ವಿಜಯೇಂದ್ರ ವಿರುದ್ಧವೇಕೆ ಈ ಪ್ರಮಾಣದ ವಿರೋಧ ಎನ್ನುವ ಪ್ರಶ್ನೆಗಳು ಮೂಡುತ್ತವೆ. ಈಗ ವಿಜಯೇಂದ್ರ ಅವರನ್ನು ವಿರೋಧಿಸುತ್ತಿರುವ ಬಹುತೇಕ ನಾಯಕರಿಗೆ ಇಂದಿನ ಸಿಟ್ಟಲ್ಲ. ಬದಲಿಗೆ ಈ ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ, ಪಕ್ಷದ ರಾಜ್ಯಾಧ್ಯಕ್ಷರಾಗಿದ್ದಾಗ, ವಿಜಯೇಂದ್ರ ಅವರ ಹಸ್ತಕ್ಷೇಪದ ಬಗ್ಗೆಯೇ ಬಹುತೇಕ ಬಿಜೆಪಿಗರು ಕಿಡಿಕಾರಿದ್ದರು. ಆದರೆ ಯಡಿಯೂರಪ್ಪ ಮುಖ ನೋಡಿಕೊಂಡು ಎಲ್ಲವನ್ನೂ 'ಸಂಭಾಳಿಸಿ'ಕೊಂಡು ಹೋಗುತ್ತಿದ್ದರು. ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಇಳಿದ ಬಳಿಕ ವಿಜಯೇಂದ್ರ ಅವರನ್ನು ಸೈಡ್‌ಲೈನ್ ಮಾಡಲು ವ್ಯವಸ್ಥಿತ ಪ್ಲ್ಯಾನ್‌ವೊಂದನ್ನು ಸಿದ್ಧಪಡಿಸಲಾಗಿತ್ತು. ಆದರೂ, ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಮೇಲೆ 'ಯುವ-ಲಿಂಗಾಯತ' ಎನ್ನುವ ಕಾರಣಕ್ಕೆ ಕೂರಿಸಿದ್ದು ಬಹುತೇಕ ಬಿಜೆಪಿಗರ ಕಣ್ಣು ಕೆಂಪಾಗುವಂತೆ ಮಾಡಿತ್ತು ಎಂದರೆ ತಪ್ಪಾಗುವುದಿಲ್ಲ. ರಾಜ್ಯಾಧ್ಯಕ್ಷರಾಗುವ ವೇಳೆಗೆ ಎಲ್ಲವೂ ಸರಿಯಿಲ್ಲ ಎನ್ನುವುದು ವಿಜಯೇಂದ್ರ ಗಮನಕ್ಕೆ ಬಂದರೂ, ತಂದೆಯ ರೀತಿಯಲ್ಲಿ ಎಲ್ಲವನ್ನೂ ಗೆಲ್ಲಬಹುದು ಎನ್ನುವ ಹುಂಬ ತೀರ್ಮಾನಗಳು, ಪಕ್ಷದ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ನೇರ ದೆಹಲಿ ನಾಯಕರ ಸಂಪರ್ಕ, ಬಿಜೆಪಿಯಲ್ಲಿನ ಇಂದಿನ ಈ ಸ್ಥಿತಿಗೆ ಕಾರಣವಾಗಿದೆ.

ಇನ್ನು ಸಭೆಯಲ್ಲಿ ವಿಜಯೇಂದ್ರ ಮಾತನಾಡಲು ಶುರುಮಾಡಿ, ಕಳೆದೊಂದು ವರ್ಷದಲ್ಲಿ ಏನೆಲ್ಲ ಮಾಡಲಾಗಿದೆ ಎನ್ನುವ ಬಗ್ಗೆ 'ಸವಿವರ'ವಾದ ಮಾಹಿತಿ ನೀಡಲು ಮುಂದಾದರು. ಇದರೊಂದಿಗೆ ಎಲ್ಲರನ್ನೂ ವಿಶ್ವಾಸಕ್ಕೆ ಪಡೆಯುವ ಮಾತುಗಳನ್ನು ಆಡಿದ್ದಾರೆ. ಆದರೆ ಈ ಎರಡನ್ನೂ ಮೀರಿ ಒಂದು ಹೆಜ್ಜೆ ಹಿಂದೆ ಹೋಗಿ, ಬಂಡಾಯ ಗುಂಪಿನ ಕೆಲವರನ್ನು ಪದಾಧಿಕಾರಿಗಳನ್ನಾಗಿ ಮಾಡಿಕೊಳ್ಳುವ ಆಫರ್ ನೀಡಿದ್ದಾರೆ. ಆದರೆ ಸಭೆಯಲ್ಲಿನ ಬಹುತೇಕ ನಾಯಕರು ವಿಜಯೇಂದ್ರ ನೀಡಿರುವ ಈ ಆಫರ್ ಅನ್ನು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. ಅದರಲ್ಲಿಯೂ ಬಸನಗೌಡ ಪಾಟೀಲ್ ಯತ್ನಾಳ್, ಸಿದ್ದೇಶ್ವರ್, ಅರವಿಂದ ಲಿಂಬಾವಳಿ ಅಂಥವರಿಗೆ ಯಾವ ರೀತಿಯ ಪೋಸ್ಟ್ ನೀಡಲು ಸಾಧ್ಯ? ವಿಜಯೇಂದ್ರ ಅಧಿಕೃತವಾಗಿ ಬಿಜೆಪಿಯಲ್ಲಿ ಜವಾಬ್ದಾರಿ ವಹಿಸಿಕೊಳ್ಳುವ ದಶಕಗಳ ಮೊದಲೇ, ಈ ಎಲ್ಲರೂ ಆಯಕಟ್ಟಿನ ಸ್ಥಾನದಲ್ಲಿ ಪಕ್ಷಕ್ಕಾಗಿ ದುಡಿದಿದ್ದಾರೆ. ಅವರೀಗ ವಿಜಯೇಂದ್ರ ಕೆಳಗೆ ಕೆಲಸ ಮಾಡಲು ಸಾಧ್ಯವೇ? ಎನ್ನುವ ಪ್ರಶ್ನೆಯನ್ನು ಸಭೆಯಲ್ಲಿದ್ದ ಬಹುತೇಕ ನಾಯಕರು ಮುಂದಿಟ್ಟಿದ್ದಾರೆ. ಇದಕ್ಕೆ ಆಫರ್ ಕೊಟ್ಟ ವಿಜಯೇಂದ್ರ ಬಳಿಯೇ ಉತ್ತರವಿರಲಿಲ್ಲ.

ಶಿಸ್ತಿನ ಪಕ್ಷವಾಗಿರುವ ಬಿಜೆಪಿಯಲ್ಲಿ ಕೆಲವೇ ವರ್ಷಗಳ ಹಿಂದೆ ರಾಜ್ಯಾಧ್ಯಕ್ಷರ ವಿರುದ್ಧ ದೂರು ನೀಡುವುದು ಹೋಗಲಿ, ಬಹಿರಂಗವಾಗಿ ಟೀಕಿಸುವುದು ಬಹುದೊಡ್ಡ ಅಪರಾಧವಾಗಿತ್ತು. ಆದರೆ ಬದಲಾದ ಸನ್ನಿವೇಶದಲ್ಲಿ ಇಂದು ಬಿಜೆಪಿ ರಾಜ್ಯಾಧ್ಯಕ್ಷರ ಎದುರಲ್ಲಿಯೇ, ಅವರ ಕೆಳಗೆ ನೇಮಕವಾಗಿರುವ ಪದಾಧಿಕಾರಿಗಳೇ, ಸಂಘ-ಪರಿವಾರದವರ ಮುಂದೆ ರಾಜ್ಯಾಧ್ಯಕ್ಷರ ಸಮ್ಮುಖದಲ್ಲಿಯೇ ದೂರು ನೀಡುವ ಹಂತಕ್ಕೆ ಬಂದು ನಿಂತಿದೆ.

ರಾಜ್ಯ ಬಿಜೆಪಿಯಲ್ಲಿ ಕಳೆದೊಂದು ವರ್ಷದಿಂದ ಆಗುತ್ತಿದ್ದ ಅಸಮಾಧಾನ, ಬಂಡಾಯವೆಲ್ಲ ಒಂದೇ ಬಾರಿಗೆ ಪಕ್ಷದ ಹಿರಿಯರ ಹಾಗೂ ಸಂಘ ಪರಿವಾರದ ಮುಂದೆ ಪ್ರಕಟವಾಗಿದೆ. ರಾಷ್ಟ್ರೀಯ ನಾಯಕರು ಇನ್ನಾದರೂ ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಿದೆ. ಬಿಜೆಪಿ ರಾಜ್ಯಾಧ್ಯಕ್ಷರನ್ನು ಬದಲಾಯಿಸಲೇಬೇಕು ಎನ್ನುವ ಪಕ್ಷದ ಹಿರಿಯ ನಾಯಕರ ಆಗ್ರಹಕ್ಕೆ ಏಕಾಏಕಿ ಮಣೆ ಹಾಕಲು ಸಾಧ್ಯವಿಲ್ಲವಾದರೂ, ಸಭೆಯ ಬಳಿಕದ ಬೆಳವಣಿಗೆ, ಸಂಘಪರಿವಾರದವರ 'ಬುದ್ಧಿವಾದ' ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದರೆ, ರಾಜ್ಯ ಬಿಜೆಪಿಗೆ ಶೀಘ್ರದಲ್ಲಿಯೇ ಬಹುದೊಡ್ಡ 'ಆಪರೇಷನ್' ಆಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಈ ಆಪರೇಷನ್ ಬದಲಾವಣೆಯ ರೀತಿಯಲ್ಲಿರುವುದೋ ಅಥವಾ ಸೇರ್ಪಡೆಯ ರೀತಿಯಲ್ಲಿರುವುದೋ ಎನ್ನುವ ಪ್ರಶ್ನೆಗೆ ಉತ್ತರವನ್ನು ಬಿಜೆಪಿಯ ದೆಹಲಿಯ ನಾಯಕರು ಮಾತ್ರ ನೀಡಲು ಸಾಧ್ಯ!

ಆಚ್ಛಾದನೆ ಎಂಬ ಪೋಷಕ ಪಾತ್ರಧಾರಿ

ಕೃಷಿರಂಗ

ಬಸವರಾಜ ಶಿವಪ್ಪ ಗಿರಗಾಂವಿ
vveditoped@gmail.com

ಭಾರತದ ಹಲವೆಡೆ ಅವೈಜ್ಞಾನಿಕ ಕೃಷಿ ಪದ್ಧತಿಗಳ ಪರಿಣಾಮದಿಂದಾಗಿ ಮಣ್ಣು ಪ್ರಸ್ತುತ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ಇಂಥ ಸಂದರ್ಭದಲ್ಲಿ ಮಣ್ಣು ಮತ್ತು ಫಸಲಿನ ಆರೋಗ್ಯಕರ ಬೆಳವಣಿಗೆಗೆ 'ಮಲ್ಚಿಂಗ್' ಅಥವಾ ಆಚ್ಛಾದನೆಯು ಬಹಳ ಪರಿಣಾಮಕಾರಿಯಾದ ಕೃಷಿ ಪದ್ಧತಿಯಾಗಿದೆ. ಮಣ್ಣಿನ ಮೇಲ್ಮೈಯನ್ನು ಅವಶ್ಯಕ ವಸ್ತುಗಳ ಪದರದಿಂದ ಮುಚ್ಚುವ ಮೂಲಕ ಮಣ್ಣಿನ ಆರೋಗ್ಯವನ್ನು ಸಂರಕ್ಷಿಸುವ ಪ್ರಕ್ರಿಯೆಗೆ ಆಚ್ಛಾದನೆ (ಹೊದಿಕೆ ಹೊದಿಸುವಿಕೆ) ಎನ್ನಲಾಗುತ್ತದೆ. ಕ್ಯಾಲಿಫೋರ್ನಿಯಾ, ಇಸ್ರೇಲ್, ಚೀನಾದಂಥ ದೇಶಗಳು ಪ್ರತಿಯೊಂದು ಬೆಳೆಗೂ ಕಡಿಮೆ ಖರ್ಚಿನಲ್ಲಿ ಆಚ್ಛಾದನೆ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡು, ಆರೋಗ್ಯಕರ ಮಣ್ಣು ಮತ್ತು ನಿರೀಕ್ಷಿತ ಕೃಷಿ ಆದಾಯದೊಂದಿಗೆ ಅಗಾಧ ಸಾಧನೆ ಮಾಡಿವೆ.

ಈಗ ಆಚ್ಛಾದನೆಯ ಪ್ರಯೋಜನಗಳ ಕಡೆಗೆ ಕೊಂಚ ಗಮನ ಹರಿಸೋಣ. ಆಚ್ಛಾದನೆಯಿಂದಾಗಿ ಮಣ್ಣಿಗೆ ತೇವಾಂಶವು ಲಭ್ಯವಾಗಿ, ಸಸ್ಯಗಳಿಗೆ ಸ್ಥಿರವಾದ ನೀರುಪೂರೈಕೆ ಆಗುತ್ತದೆ. ಅಂತೆಯೇ ಶುಷ್ಕ ಅಥವಾ ಬಿಸಿ ವಾತಾವರಣದಲ್ಲಿ ಫಸಲಿನ ಆರೋಗ್ಯಕರ ಬೆಳವಣಿಗೆಯಾಗುತ್ತದೆ. ಸೂರ್ಯನ ಬೆಳಕು ನೇರವಾಗಿ ಭೂಮಿಗೆ ಮತ್ತು ಕಳೆಬೀಜಗಳಿಗೆ ತಾಗದಿರುವುದರಿಂದ, ಕಳೆ ಬೀಜಗಳು ಮೊಳಕೆಯೊಡೆಯುವುದಿಲ್ಲ. ಮೊಳಕೆಯೊಡೆದ ಕಳೆಗಳ ಎಲೆಗಳಲ್ಲಿ ಬಿಸಿಲಿನ ಕೊರತೆಯಿಂದಾಗಿ ದ್ಯುತಿಸಂಶ್ಲೇಷಣೆ ಕ್ರಿಯೆ ನಡೆಯದಿರುವುದರಿಂದ, ಕಳೆಗಳ ಬೆಳವಣಿಗೆಯಾಗುವುದಿಲ್ಲ. ಆಚ್ಛಾದನೆಯು ಮಣ್ಣಿನ ತಾಪಮಾನದ ನಿರೋಧಕ ಪದರವಾಗಿ ಕಾರ್ಯನಿರ್ವಹಿಸುತ್ತದೆ. ಇದು ಮಣ್ಣನ್ನು ಬಿಸಿ ವಾತಾವರಣದಲ್ಲಿ ತಂಪಾಗಿಸುತ್ತದೆಯಲ್ಲದೆ, ತಂಪಾದ ವಾತಾವರಣದಲ್ಲಿ ಬೆಚ್ಚಗಾಗಿಸುತ್ತದೆ. ಒಟ್ಟಾರೆಯಾಗಿ ಸಸ್ಯದ ಬೆಳವಣಿಗೆಗೆ ಅವಶ್ಯಕವಾದ ವಾತಾವರಣವನ್ನು ಅದು ಸೃಷ್ಟಿಸುತ್ತದೆ.

ಆಚ್ಛಾದನೆಯಿಂದಾಗಿ ಬರಗಾಲದಂಥ ಸನ್ನಿವೇಶಗಳಲ್ಲಿ ಕನಿಷ್ಠ ಶೇ.40ರಷ್ಟು ನೀರಿನ ಉಳಿತಾಯವಾಗುತ್ತದೆ. ಅತಿಯಾದ ಸೂರ್ಯಪ್ರಕಾಶ, ಮಳೆ ಮತ್ತು ಗಾಳಿಯಿಂದ ಆಗಬಹುದಾದ ಮಣ್ಣಿನ ಸವೆತವನ್ನು ಮತ್ತು ಬೆಳೆಹಾನಿಯನ್ನು ತಡೆಯುವ ಆಚ್ಛಾದನೆಯು ಇಳಿಜಾರು ಭೂಮಿಗಳಲ್ಲಿ ಬಹಳ ಪ್ರಯೋಜನಕಾರಿಯಾಗಿದೆ. ಸಾವಯವ ಆಚ್ಛಾದನೆಗಳು ಕ್ರಮೇಣವಾಗಿ ಕೊಳೆತು ಮಣ್ಣಿನಲ್ಲಿ ಸೇರ್ಪಡೆಯಾಗುತ್ತವೆ. ಇದರಿಂದಾಗಿ ಮಣ್ಣಿನಲ್ಲಿ ಪೋಷಕಾಂಶಗಳು, ಸಾವಯವ ಇಂಗಾಲ, ನೀರನ್ನು ಹಿಡಿದಿಡುವ ಸಾಮರ್ಥ್ಯ ಮತ್ತು ಫಲವತ್ತತೆಯು ಹೆಚ್ಚಾಗಿ ಮಣ್ಣಿನ ರಚನೆಯು ಸುಧಾರಿಸುತ್ತದೆ.

ಸುಲಭವಾಗಿ ಕೊಳೆಯುವ ಆಚ್ಛಾದನೆಗಳಿಂದಾಗಿ ಮತ್ತು ಮಣ್ಣಿನಲ್ಲಿ ಅವಶ್ಯಕ ತೇವಾಂಶವಿರುವುದರಿಂದಾಗಿ ನೈಸರ್ಗಿಕವಾಗಿಯೇ ರೈತಸ್ನೇಹಿ ಜೀವಾಣುಗಳು ಸೃಷ್ಟಿಯಾಗುತ್ತವೆ. ಇದರಿಂದಾಗಿ ನೈಸರ್ಗಿಕವಾಗಿ ರಾಸಾಯನಿಕ ಕ್ರಿಯೆಗಳು ನಡೆದು ಮಣ್ಣಿನ ಫಲವತ್ತತೆ ಮತ್ತು ಬೆಳೆಯ ಇಳುವರಿ ಹೆಚ್ಚಾಗುತ್ತವೆ. ನಾಟಿಯಾದ ಬೀಜಕ್ಕೆ ಆರಂಭದಿಂದಲೇ ಅವಶ್ಯಕ ಸಂರಕ್ಷಣೆ ದೊರೆಯುವುದರಿಂದ ಚಿಗುರೊಡೆಯುವ ಪ್ರಮಾಣವು ಹೆಚ್ಚುತ್ತದೆ. ನಾಟಿಯಾದ ತಕ್ಷಣದಿಂದ ಬೀಜಕ್ಕೆ ಸಂಭವಿಸಬಹುದಾದ ಕ್ರಿಮಿ-ಕೀಟಗಳ ಕಾಟ, ಪಕ್ಷಿಗಳ ಉಪಟಳದಿಂದ ರಕ್ಷಣೆಯು ಲಭಿಸುತ್ತದೆ.

ಆಚ್ಛಾದನೆಯಿಂದಾಗಿ ರಸಗೊಬ್ಬರ, ನೀರು, ಕೀಟನಾಶಕ ಮತ್ತು ಕಾರ್ಮಿಕರ ಅವಶ್ಯಕತೆಯು ಕಡಿಮೆಯಾಗುವುದರಿಂದ ಖರ್ಚು ಉಳಿತಾಯವಾಗುತ್ತದೆ. ಬೆಳೆಗೆ ನೀಡಿದ ಪೋಷಕಾಂಶಗಳನ್ನು ಕಳೆಗಳು ಹೀರಿಕೊಂಡು ತೊಂದರೆ ಮಾಡುವುದುಂಟು. ಆದರೆ ಆಚ್ಛಾದನೆಯಿಂದ ಕಳೆಗಳು ನಾಶವಾಗುವುದರಿಂದಾಗಿ ಬೆಳೆಗಳಿಗೆ ಪೋಷಕಾಂಶಗಳು ಅವಶ್ಯಕ ಪ್ರಮಾಣದಲ್ಲಿ ಲಭ್ಯವಾಗಿ ಬೆಳೆಯು ಸಮೃದ್ಧ ಇಳುವರಿಯನ್ನು ನೀಡುತ್ತದೆ.

ನೈಸರ್ಗಿಕ ವಸ್ತುಗಳಾದ ಹುಲ್ಲು, ಬೆಳೆಯುಳಿಕೆಗಳು, ಒಣಗಿರುವ ಎಲೆಗಳು, ಕಬ್ಬು ಹಾಗೂ ಬಾಳೆಯಂಥ ದೀರ್ಘಾವಧಿ ಬೆಳೆಗಳ ಪ್ರತಿ ಕಟಾವಿನ ನಂತರದಲ್ಲಿ ಉಳಿಯುವ ಹಸಿ ಹಾಗೂ ಒಣ ಎಲೆ, ಕಾಂಡಗಳು ಆಚ್ಛಾದನೆಗೆ ಯೋಗ್ಯವಾಗಿವೆ. ಗರಿಕೆ ಮತ್ತು ಜೇಕುಗಳನ್ನು ಹೊರತುಪಡಿಸಿ, ಹೂವಾಗುವ ಮುಂಚೆ ತೆಗೆದುಹಾಕಿರುವ ಇನ್ನಿತರ ಹಸಿ ಕಳೆಗಳೆಲ್ಲವೂ ಮುಖ್ಯ ಬೆಳೆಗೆ ಉತ್ತಮ ಪೋಷಕಾಂಶಗಳನ್ನು ನೀಡುವ ಆಚ್ಛಾದನೆಗಳಾಗಿವೆ. ಇವು ಮುಖ್ಯ ಬೆಳೆಯ ಕಟಾವಿನ ಅವಧಿಯೊಳಗಾಗಿ ಕೊಳೆತು ಸಾವಯವ ಗೊಬ್ಬರವಾಗಿ ಪರಿವರ್ತನೆಯಾಗುತ್ತವೆ. ಇದರಿಂದ ಬೆಳೆಯು ಉತ್ತಮ

ಇಳುವರಿಯೊಂದಿಗೆ, ಗುಣಮಟ್ಟದೊಂದಿಗೆ ಕೂಡಿರುತ್ತದೆ.

ಆಚ್ಛಾದನೆಯಲ್ಲೂ ವರ್ಣವೈವಿಧ್ಯ, ಹಾಗೂ ಪರಿಣಾಮ ವೈವಿಧ್ಯವಿದೆ. ಕಪ್ಪು ಬಣ್ಣದ ಆಚ್ಛಾದನೆಯು ಶಾಖವನ್ನು ಹೀರಿಕೊಂಡು ಮಣ್ಣನ್ನು ಬೆಚ್ಚಗಾಗಿಸುತ್ತದೆ ಹಾಗೂ ಕಳೆಗಳನ್ನು ನಿಗ್ರಹಿಸುತ್ತದೆ. ಇದು ಶೀತ ಸಮಯದಲ್ಲಿನ ಅಲ್ಪಾವಧಿ ಬೆಳೆಗಳಿಗೆ ಸಹಕಾರಿ. ಬೆಳ್ಳಿ ಬಣ್ಣದ ಆಚ್ಛಾದನೆಯು ಬೆಳಕನ್ನು ಪ್ರತಿಫಲಿಸುವುದರೊಂದಿಗೆ ಕೀಟಗಳನ್ನು ಹಿಮ್ಮೆಟ್ಟಿಸಿ ಮಣ್ಣನ್ನು ತಂಪಾಗಿಸುತ್ತದೆ. ಬಿಳಿ ಬಣ್ಣದ ಆಚ್ಛಾದನೆಯು ಸೂರ್ಯನ ಪ್ರಖರ ಬೆಳಕನ್ನು ಪ್ರತಿಫಲಿಸಿ ಮಣ್ಣನ್ನು ತಂಪಾಗಿಸುತ್ತದೆ. ಕೆಂಪು ಬಣ್ಣದ್ದು ಬೆಳಕಿನ ನಿರ್ದಿಷ್ಟ ತರಂಗಾಂತರಗಳನ್ನು ಪ್ರತಿಫಲಿಸುವ ಮೂಲಕ ಇಳುವರಿ ಮತ್ತು ಗುಣಮಟ್ಟವನ್ನು ಹೆಚ್ಚಿಸುತ್ತದೆ. ಇದು ಹಣ್ಣು ಮತ್ತು ತರಕಾರಿಗಳಿಗೆ ಸೂಕ್ತ. ಹಳದಿ ಬಣ್ಣದ ಆಚ್ಛಾದನೆಯು ಕೀಟ ನಿರ್ವಹಣಾ ತಂತ್ರಗಳಿಗೆ ಸೂಕ್ತವಾಗಿದೆ. ಹಸಿರು ಬಣ್ಣದ ಆಚ್ಛಾದನೆಯು ತರಂಗಾಂತರಗಳನ್ನು ಪ್ರತಿಫಲಿಸುವಾಗ ಸ್ವಲ್ಪ ಬೆಳಕನ್ನು ಹೀರಿಕೊಳ್ಳುತ್ತದೆ. ಬೆಳೆಯ ಬೆಳವಣಿಗೆ ಮತ್ತು ದ್ಯುತಿಸಂಶ್ಲೇಷಣಾ ಕ್ರಿಯೆಯನ್ನು ಹೆಚ್ಚಿಸಲು ಇದು ಸಹಕಾರಿಯಾಗುತ್ತದೆ. ನೀಲಿ ಆಚ್ಛಾದನೆಯು ಬೆಳಕನ್ನು ಪ್ರತಿಫಲಿಸುವುದರಿಂದ ಕಲ್ಲಂಗಡಿಯಂಥ ಬೆಳೆಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಕಂದು ಆಚ್ಛಾದನೆಯು ಮಧ್ಯಮ ಶಾಖವನ್ನು ಹೀರಿಕೊಳ್ಳುವುದರಿಂದ ಬೆಳೆಗಳ ಸೌಂದರ್ಯಕ್ಕೆ ಸೂಕ್ತ.

ಕೊಳೆಯದ ವಸ್ತುಗಳನ್ನು ಸಾಧ್ಯವಾದಷ್ಟು ಆಚ್ಛಾದನೆಯಾಗಿ ಬಳಸದಿರುವುದು ಸೂಕ್ತ. ಇವು ರಾಸಾಯನಿಕ ವಸ್ತುಗಳಾಗಿರುವುದರಿಂದ ಮಣ್ಣಿನ ಫಲವತ್ತತೆಗೆ ಹಾನಿಯುಂಟುಮಾಡಬಹುದು. ಕೊಳೆಯದ ಆಚ್ಛಾದನೆಗಳನ್ನು ಬಳಸಿದಲ್ಲಿ ಮುಖ್ಯ ಬೆಳೆಯ ಕಟಾವಿನ ನಂತರ ಜಮೀನಿನಿಂದ ತ್ವರಿತವಾಗಿ ವಿಲೇವಾರಿ ಮಾಡಬೇಕು. ಭೂಮಿಯನ್ನು ಹದಗೊಳಿಸಿದ ನಂತರ ನೀರುಣಿಸುವ ಮತ್ತು ಬಿತ್ತನೆಯ ಪೂರ್ವದಲ್ಲಿ ಆಚ್ಛಾದನೆಯನ್ನು ಕೈಗೊಳ್ಳಬೇಕು. ನಂತರ ಕೈಗೊಂಡಲ್ಲಿ, ಪ್ರಾರಂಭದಿಂದಲೇ ತೇವಾಂಶ ಸಂರಕ್ಷಣೆ ಮತ್ತು ಕಳೆಗಳ ನಿಯಂತ್ರಣ ಸಾಧ್ಯವಾಗುವುದಿಲ್ಲ.

ಬೆಳೆಯ ಬೆಳವಣಿಗೆಯ ಗಾತ್ರವನ್ನು ಅವಲೋಕಿಸಿ, ಬೆಳೆಯ ಸುತ್ತಲೂ ತೇವಾಂಶ ಶೇಖರಣೆ ಮತ್ತು ಸಂಭಾವ್ಯ ಕೊಳೆತವನ್ನು ತಡೆಗಟ್ಟಲು 2-3 ಅಂಗುಲದಷ್ಟು ಸ್ಥಳವನ್ನು ಬಿಟ್ಟು ಉಳಿದೆಲ್ಲ ಸ್ಥಳದಲ್ಲಿ ಆಚ್ಛಾದನೆಯನ್ನು ಕೈಗೊಳ್ಳಬಹುದು. ಆಚ್ಛಾದನೆಯ ಪದರವು ತುಂಬಾ ತೆಳುವಾಗಿದ್ದಲ್ಲಿ ಅದು ಸಮರ್ಪಕ ಫಲಿತಾಂಶವನ್ನು ನೀಡದಿರಬಹುದು. ತುಂಬಾ ದಪ್ಪವಾದ ಆಚ್ಛಾದನೆಯ ಪದರವು ಸಸ್ಯಗಳ ಬೇರುಗಳನ್ನು ಉಸಿರುಗಟ್ಟಿಸಿ ಹಲವು ಸಮಸ್ಯೆಗಳನ್ನು ಸೃಷ್ಟಿಸಬಹುದು. ಆದ್ದರಿಂದ ತಜ್ಞರ ಸಲಹೆಯಂತೆ ಮಣ್ಣು ಮತ್ತು ಬೆಳೆಗೆ ಸೂಕ್ತವಾದ ಆಚ್ಛಾದನೆಯನ್ನು ಅಳವಡಿಸಿಕೊಳ್ಳಬೇಕು.

ಒಟ್ಟಾರೆಯಾಗಿ ಆಚ್ಛಾದನೆ ಕೈಗೊಂಡ ಜಮೀನಿಗೆ ಹನಿ ಅಥವಾ ತುಂತುರು ನೀರಾವರಿ ವ್ಯವಸ್ಥೆಯಿದ್ದಲ್ಲಿ ಮತ್ತಷ್ಟು ಪರಿಣಾಮಕಾರಿಯಾದ ಫಲಿತಾಂಶ ವನ್ನು ಪಡೆಯಬಹುದು. ಕಾಲುವೆ ನೀರಾವರಿ ಪದ್ಧತಿಯಲ್ಲಿ ಆಚ್ಛಾದನೆಯು ಅಷ್ಟೊಂದು ಸೂಕ್ತವಲ್ಲ, ಕಾರಣ ಸಾಲುಗಳಲ್ಲಿ ಆಚ್ಛಾದನೆ ಇರುವುದರಿಂದ ನೀರಿನ ಮುನ್ನಡೆಗೆ ಅಡಚಣೆ ಯಾಗುತ್ತದೆ. ಕಬ್ಬು ಮತ್ತು ಬಾಳೆಯಂಥ ದೀರ್ಘಾವಧಿ ಬೆಳೆಗಳಲ್ಲಿ ಭೂಮಿಯ ತಯಾರಿ ಮಾಡುವಾಗ ಜೋಡಿಸಾಲುಗಳನ್ನು ತಯಾರಿಸಬೇಕು. ಈ ಜೋಡಿಸಾಲುಗಳಲ್ಲಿ ಒಂದನ್ನು ಆಚ್ಛಾದನೆಗೆ, ಇನ್ನೊಂದನ್ನು ಕಾಲುವೆ ನೀರಾವರಿಗೆ ಬಳಸಬಹುದು.

ಆಚ್ಛಾದನೆಯನ್ನು ನಿಯತವಾಗಿ ಪರಿಶೀಲಿಸುತ್ತಿರಬೇಕು. ಅದರ ಪದರದ ಮೂಲಕ ಬೆಳೆಯುವ ಕಳೆಗಳನ್ನು ಗುರುತಿಸಿ ತೆಗೆದುಹಾಕುತ್ತಿರಬೇಕು. ಪಶು-ಪಕ್ಷಿಗಳಿಂದ ಆಚ್ಛಾದನೆಗೆ ತೊಂದರೆ ಉಂಟಾದಲ್ಲಿ ತ್ವರಿತವಾಗಿ ಸರಿಪಡಿಸುತ್ತಿರಬೇಕು. ತಪ್ಪಿದಲ್ಲಿ ಒಟ್ಟಾರೆ ಜಮೀನಿನಲ್ಲಿ ಬೆಳೆಯ ಏಕರೂಪ ಬೆಳವಣಿಗೆಯು ಅಸಾಧ್ಯವಾಗುತ್ತದೆ. ಸಾವಯವ ಆಚ್ಛಾದನೆಗಳ ಮೇಲೆ ಕ್ರಿಮಿ-ಕೀಟಗಳು ದಾಳಿ ಮಾಡಬಹುದು. ಇವುಗಳ ಹತೋಟಿಗಾಗಿ ರಾಸಾಯನಿಕ ಕ್ರಮಗಳ ಬದಲಾಗಿ ಜೈವಿಕ ಹತೋಟಿಯನ್ನು ಕೈಗೊಳ್ಳಬೇಕು. ಕಾರಣ, ಆಚ್ಛಾದನೆಯ ಸ್ಥಳದಲ್ಲಿ ಸದಾ ತೇವಾಂಶವಿರುವುದರಿಂದ ಜೈವಿಕ ಕ್ರಿಯೆಗೆ ತೊಂದರೆಯಾಗುವುದಿಲ್ಲ. ಆಚ್ಛಾದನೆಯು ಸರಳವಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ಕೃಷಿ ಪದ್ಧತಿಯಾಗಿದೆ. ಇದರಿಂದ ಮಣ್ಣಿನ ಆರೋಗ್ಯವು ಸುಧಾರಿಸುವುದಲ್ಲದೆ ಸಸ್ಯಗಳು ಆರೋಗ್ಯದಾಯಕ ಬೆಳವಣಿಗೆಯನ್ನು ಹೊಂದಿ ಉತ್ತಮ ಇಳುವರಿಯನ್ನು ನೀಡುತ್ತವೆ.

(ಲೇಖಕರು ಕೃಷಿತಜ್ಞರು ಹಾಗೂ ಸಹಾಯಕ ಮಹಾಪ್ರಬಂಧಕರು)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪ್ರಶಂಸನೀಯ ಬರಹ

ವಿನಾಯಕ ವೆಂ.ಭಟ್ಟ ಅವರ 'ಹೊಸಚಿಗುರು ಎನ್ನುವುದು ಹಳೆಬೇರಿನ ವ್ಯಾಖ್ಯಾನ ಮಾತ್ರ' ಎಂಬ ಲೇಖನ (ವಿಶ್ವವಾಣಿ ಸೆ.15) ಸೊಗಸಾಗಿತ್ತು. ಇದರಲ್ಲಿ ವ್ಯಕ್ತವಾಗಿರುವ ಚಿಂತನೆ ಶ್ಲಾಘನೀಯವೂ, ಸಾಮಯಿಕ ಎಚ್ಚರಿಕೆಯನ್ನು ನೀಡುವಂಥದ್ದೂ ಆಗಿದೆ. ಪರಂಪರೆಯ ಮೂಲಬೇರುಗಳನ್ನು ಕಳೆದುಕೊಂಡ ಸಮಾಜದ ಅಸ್ಮಿತೆಯು ಅನಾಥವಾಗುತ್ತದೆ. ಒಂದು ಶ್ರೀಮಂತ ಸಾಹಿತ್ಯಕ ಪರಂಪ ರೆಯ ವಿಷಯದಲ್ಲಿ ಇದು ಹೆಚ್ಚು ಸತ್ಯ. ಅವೆಲ್ಲವನ್ನೂ 'ಬೂಸಾ ಸಾಹಿತ್ಯ' ಎಂದು ಸಾರಾಸಗಟಾಗಿ ತಿರಸ್ಕರಿಸುವುದು ಹೊಣೆರಹಿತ ಮಾತಾದೀತು. 'ಈ ಪ್ರಸ್ತುತ ನಿಲುವು ಶಾಶ್ವತ' ಎಂಬ ಭ್ರಮೆಯೇ ಮುಂದಿನ ಪೀಳಿಗೆಯ ದಾರಿ ತಪ್ಪಿಸುತ್ತದೆ. ಹಾಗಾಗದಿರಲಿ ಎಂದೇ ಇನ್ನೂ ಅನೇಕ ಸಾಹಿತ್ಯ ರಚನಾಕಾರ ರಂತೆ ನಾನು ಕೂಡ ಒಂದು ಯತ್ನವನ್ನು ಮಾಡಿದ್ದೇನೆ ಎಂಬ ತೃಪ್ತಿ ಇದೆ. ಅದೆಂದರೆ, 'ದಶಾವತಾರ' ಮಹಾಕಾವ್ಯವನ್ನು ಕನ್ನಡದ ಭಾಮಿನಿ ಷಟ್ಪದಿಯಲ್ಲಿ ರಚಿಸುವ ಯತ್ನ ಮಾಡಿ ದ್ದೇನೆ. ಅದರಲ್ಲಿನ ರಾಮಾವತಾರವು ಸಂಪೂರ್ಣ ವಾಲ್ಮೀಕಿ ರಾಮಾಯಣವನ್ನು ಆಧರಿಸಿದ್ದು 9,000 ಪದ್ಯಗಳನ್ನು ಒಳಗೊಂಡಿದೆ. ಕೃಷ್ಣಾವತಾರವೂ 9,000 ಪದ್ಯಗಳನ್ನು ಹೊಂದಿದೆ. ಅಶ್ವಘೋಷನ 'ಬುದ್ಧಚರಿತ'ವನ್ನು ಆಧರಿಸಿ ಬುದ್ಧಾವತಾರವಿದೆ.

ಸಂಸ್ಕೃತ ತಿಳಿಯದವರಿಗೂ ಮೂಲಸಾಹಿತ್ಯವು ಅಪರಿಚಿತವಾಗಿರುವುದು ಬೇಡ ಎಂದೇ ಇನ್ನೂ ಅನೇಕರಂತೆ ಹೀಗೆ ಮಾಡಲಾಯಿತು ಎನ್ನಬಹುದು. ಸಾಂಸ್ಕೃತಿಕ ಸಮಸ್ಯೆಗೆ ಆ ಸಂಸ್ಕೃತಿಯಲ್ಲೇ ಪರಿಹಾರ ಇರುತ್ತದೆ ಎನ್ನುತ್ತಾರಲ್ಲವೇ? ನನ್ನ ಚಿಂತನೆಗೆ ಇಂಬುಕೊಡುವಂತಿದ್ದ ವಿನಾಯಕ ವೆಂ.ಭಟ್ಟ ಅವರ ಲೇಖನವನ್ನು ಓದಿ ಈ ಪತ್ರವನ್ನು ಬರೆಯುವಂತಾಯಿತು. ಅವರಿಗೂ, ಪತ್ರಿಕೆಗೂ ಧನ್ಯವಾದಗಳು.

- ವಿ.ನರಹರಿ ಹಂದೆ, ಬೆಂಗಳೂರು

ಅಧ್ಯಯನಯೋಗ್ಯ ಲೇಖನ

ಸುರೇಂದ್ರ ಪೈ ಅವರ 'ನೀರಿನ ನಿಯಮವ ಇನ್ನಾ ದರೂ ಕಲಿಯೋಣು ಬಾರಾ' ಎಂಬ ಶೀರ್ಷಿಕೆಯ ಲೇಖನ (ವಿಶ್ವವಾಣಿ ಸೆ.13) ಚೆನ್ನಾಗಿ ಮೂಡಿಬಂದಿದೆ. ನದಿ ಮತ್ತು ಸಮುದ್ರದ ನಡುವಿನ ಸಂಬಂಧದ ಬಗ್ಗೆ ನಮಗೆ ಅಷ್ಟಾಗಿ ಮಾಹಿತಿ ಇರಲಿಲ್ಲ. ಸಮುದ್ರದಿಂದ ಉಪ್ಪು, ಮೀನು ಹಾಗೂ ತೈಲ ಮಾತ್ರ ದೊರಕುತ್ತದೆ ಎಂಬುದಷ್ಟೇ ಗೊತ್ತಿತ್ತು. ಆದರೆ ನದಿಯ ಅಳಿವೆ ಬತ್ತಿಹೋದರೆ ಸಮುದ್ರದ ಉಪ್ಪುನೀರು ಒಳನಾಡಿಗೆ ಹೇಗೆ ಪ್ರವೇಶಿಸುತ್ತದೆ ಎಂಬಿತ್ಯಾದಿ ಮಾಹಿತಿಯನ್ನು ನಿದರ್ಶನಗಳ ಮೂಲಕ ನೀಡಿದ್ದು ಸೂಕ್ತವಾಗಿತ್ತು. ಖಂಡಿತವಾಗಿಯೂ ಇದೊಂದು ಅಧ್ಯಯನ ಯೋಗ್ಯ ಲೇಖನವಾಗಿದ್ದು, ವಿಶೇಷವಾಗಿ ಶಾಲಾ ಮಕ್ಕಳಿಗೆ, ಶಿಕ್ಷಕರಿಗೆ ಪರಿಸರ ಜೀವವ್ಯವಸ್ಥೆಯ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ ಎಂಬ ಭಾವನೆ ನನ್ನದು. ಲೇಖನ ಪ್ರಕಟಿಸಿದ 'ವಿಶ್ವವಾಣಿ' ಬಳಗಕ್ಕೂ ಲೇಖಕರಿಗೂ ವಂದನೆಗಳು.

- ಶ್ವೇತಾ, ಇಳಕಲ್

ಅತ್ಯುತ್ತಮ ಪರಿಕಲ್ಪನೆ

'ಬೀದರಿನಿಂದ ಚಾಮರಾಜನಗರದವರೆಗೆ 2500 ಕಿ.ಮೀ. ಮಾನವ ಸರಪಳಿ' ಅತ್ಯುತ್ತಮ ಪರಿಕಲ್ಪನೆ. ಪ್ರಜಾಪ್ರಭುತ್ವವನ್ನು ಉಳಿಸುವುದು ಈ ಮಾನವ ಸರಪಳಿಯ ಉದ್ದೇಶ ಎಂಬುದು ನಿಜಕ್ಕೂ ಮೆಚ್ಚುವಂಥದ್ದೇ. ಇಂದಿನ ಪರಿಸ್ಥಿತಿಗೆ ಇಂಥ ಉಪಕ್ರಮಗಳ ಅಗತ್ಯವಿದೆ. ದೇಶದಲ್ಲಿ ಪ್ರಜಾಪ್ರಭುತ್ವವೇ ಡೋಲಾಯಮಾನ ಸ್ಥಿತಿಯ ಲ್ಲಿದೆ ಎನ್ನುವವರ ಕಣ್ಣು ತೆರೆಸಲೂ ಇದು ಸಹಾಯಕ. ಇದರೊಟ್ಟಿಗೆ 10 ಲಕ್ಷ ಸಸಿ ನೆಡುವ ಆಲೋಚನೆ ಇನ್ನೂ ಅರ್ಥವತ್ತಾಗಿರುವಂಥದ್ದು. ಕೆಲವೆಡೆ ಮಾನವ ಸರಪಳಿ ಯಲ್ಲೇ ಭಾರತದ ನಕ್ಷೆ ರಚಿಸಿದ್ದು ದೇಶಾಭಿಮಾನದ ಸಂಕೇತ.

ವಿಭಿನ್ನತೆಯಿಂದ ಕೂಡಿದ ವಿಶ್ವದ ಅತಿದೊಡ್ಡ ಪ್ರಜಾ ಪ್ರಭುತ್ವ ನಮ್ಮದು. ಇದನ್ನು ಕಾಪಾಡಿಕೊಂಡು ಬರುವುದು ಪ್ರತಿ ಭಾರತೀಯನ ಕರ್ತವ್ಯ ಎಂಬುದನ್ನು ರಾಜ್ಯ ಸರಕಾರ ಈ ಮೂಲಕ ತಿಳಿಹೇಳಿದೆ. ಅಭಿವೃದ್ಧಿಹೊಂದಿದ ಅನೇಕ ದೇಶಗಳು ಇಂದು ಭಾರತದ ಅಭಿವೃದ್ಧಿಯನ್ನು ಸಹಿಸಿಕೊಳ್ಳ ಲಾಗದೆ ಇಲ್ಲಸಲ್ಲದ ತಗಾದೆ ಮಾಡುತ್ತಿರುವ, ಆರೋಪ ಹೇರುತ್ತಿರುವ ಈ ಸಮಯದಲ್ಲಿ ನಮ್ಮ ಪ್ರಜಾಪ್ರಭುತ್ವದ ಬುನಾದಿಯನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾದ ಅನಿವಾರ್ಯ ತೆಯಿದೆ. ಇದು ಪ್ರಾರಂಭವಷ್ಟೇ. ದೇಶದ ಏಕತೆ, ಅಖಂಡತೆ, ಸಾರ್ವಭೌಮತೆ ಮತ್ತು ಪ್ರಜಾಪ್ರಭುತ್ವವನ್ನು ಮಜಬೂತು ಗೊಳಿಸುವ ಕಾರ್ಯ ಇನ್ನು ಮುಂದೆಯೂ ನಡೆಯುತ್ತಿರಲಿ.

-ಶಂಕರನಾರಾಯಣ ಭಟ್, ಮಾಡಗೇರಿ

ಅನುಮಾನ ಪರಿಹರಿಸಿ

ಬೀದಿನಾಯಿಗಳ ಬಗ್ಗೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ಎಂಥವರಲ್ಲೂ ಅಚ್ಚರಿ ಮೂಡಿಸುವುದರ ಜತೆಗೆ ಹಲವು ಸಂಶಯಗಳಿಗೆ ಎಡೆಮಾಡಿಕೊಡುವಂತಿದೆ. ದೇಶದ ವಿವಿಧೆಡೆ ಬೀದಿನಾಯಿಗಳ ಸಂಖ್ಯೆ, ನಾಯಿ ಕಡಿತದ ಪ್ರಕರಣಗಳ ಹಾಗೂ ಅದರಿಂದ ಮೃತರಾದವರ ಸಂಖ್ಯೆಯೂ ಹೆಚ್ಚುತ್ತಿದೆ. ರಾಜಧಾನಿ ಬೆಂಗಳೂರಿನಲ್ಲಿ ಬೀದಿನಾಯಿಗಳ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ನಂತರ ಅವುಗಳ ಸಂಖ್ಯೆ ಇಳಿಮುಖವಾಗಿದೆಯೆಂದು ವರದಿಯಲ್ಲಿ ತಿಳಿಸಲಾಗಿದೆಯಾದರೂ, ಮಹಾನಗರಿಯ ಬೀದಿಗಳಲ್ಲಿ ನಾಯಿಗಳ ಸಂಖ್ಯೆ ಹೆಚ್ಚುತ್ತಲೇ ಇರುವುದು ವಾಸ್ತವ. ಹೀಗಾಗಿ ಬೆಂಗಳೂರಿನ ಬೀದಿನಾಯಿಗಳ ಸಂಖ್ಯೆಯನ್ನು ತಿಳಿಸುವ ಸಮೀಕ್ಷೆಯನ್ನು ಯಾವ ರೀತಿ ನಡೆಸಲಾಯಿತು ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಬೀದಿನಾಯಿಗಳ ಸಂತಾ ನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಪ್ರತಿವರ್ಷವೂ ಹಲವು ಕೋಟಿ ರುಪಾಯಿಗಳನ್ನು ವಿನಿಯೋಗಿಸುತ್ತಿದ್ದರೂ ಅವುಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ನೋಡಿದರೆ, ನಿಜಕ್ಕೂ ಅಂಥ ಶಸ್ತ್ರಚಿಕಿತ್ಸೆ ಯನ್ನು ನಡೆಸಲಾಗುತ್ತಿದೆಯೇ ಅಥವಾ ದಾಖಲೆಗಳಲ್ಲಿ ಮಾತ್ರವೇ ಅಂಥ ಅಂಕಿ-ಅಂಶಗಳನ್ನು ನಮೂದಿಸಲಾಗಿ ದೆಯೇ ಎಂಬ ಅನುಮಾನ ಮೂಡುತ್ತದೆ.

-ಜಿ.ನಾಗೇಂದ್ರ ಕಾವೂರು, ಸಂಡೂರು

ಇದು ಎಂಟನೆಯ ಅದ್ಭುತ!

ಜಾತಿನಿಂದನೆ ಆರೋಪದ ಮೇಲೆ ಬಂಧಿಸಲ್ಪಟ್ಟಿರುವ ಶಾಸಕ ಮುನಿರತ್ನ ಅವರು ತಮಗೆ ಹೃದಯ ಸಂಬಂಧಿ ಕಾಯಿಲೆ ಹಾಗೂ ಹರ್ನಿಯಾ ಸಮಸ್ಯೆಯಿದೆ ಎಂದು ನ್ಯಾಯಾಧೀಶರ ಎದುರು ಅಳಲು ತೋಡಿಕೊಂಡಿರುವುದು ವರದಿಯಾಗಿದೆ. ಕೆಲ ದಿನಗಳ ಹಿಂದೆ ಪ್ರಕರಣವೊಂದರಲ್ಲಿ ಬಂಧಿತರಾಗಿದ್ದ ಪ್ರಭಾವಿ ರಾಜಕಾರಣಿಯೊಬ್ಬರು ಕೂಡ ಹೀಗೆ ಆರೋಗ್ಯ ಸಂಬಂಧಿತ ಅಳಲನ್ನು ತೋಡಿಕೊಂಡಿದ್ದರು. ಹಿಂದೆ ವಿವಿಧ ಪ್ರಕರಣಗಳಲ್ಲಿ ಬಂಧಿತರಾದ ಚಲನಚಿತ್ರ ನಟ/ನಟಿಯರು, ಪ್ರಭಾವಿಗಳು ಒಂದೇ ಶಾಲೆಯಲ್ಲಿ ಪಾಠ ಕಲಿತವರಂತೆ ಇಂಥದೇ ನೆಪಗಳನ್ನು ಹೇಳಿಕೊಂಡಿದ್ದಿದೆ!

ತೀವ್ರ ಅನಾರೋಗ್ಯಪೀಡಿತರಾಗಿರುವ ಶಾಸಕರು ತಂತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಆರೋಗ್ಯದ ಕಡೆಗೆ ಗಮನ ಹರಿಸುವುದು ಬಿಟ್ಟು ಜನಸೇವೆಗೆ ಕಟಿಬದ್ಧರಾಗಿ ನಿಂತಿರುವುದು ಜಗತ್ತಿನ ಎಂಟನೆಯ ಅದ್ಭುತವೇ ಸರಿ! ಶ್ರೀಸಾಮಾನ್ಯರಾದರೆ ತೀವ್ರ ಅನಾರೋಗ್ಯವಾದಾಗ ಒಂದೆರಡು ತಿಂಗಳು ರಜೆಹಾಕಿ ಚಿಕಿತ್ಸೆ ಪಡೆಯುತ್ತಾರೆ, ಆಗಲೂ ಸರಿಹೋಗದಿದ್ದರೆ ಆರೋಗ್ಯವೇ ಭಾಗ್ಯವೆಂದು ಸ್ವಯಂನಿವೃತ್ತಿ ಪಡೆದು ಚಿಕಿತ್ಸೆ ಪಡೆದು ಮನೆಯಲ್ಲಿ ಚೇತರಿಸಿಕೊಳ್ಳುತ್ತಾರೆ. ಆದರೆ ಪಾಪ ನಮ್ಮ ಜನನಾಯಕರಿಗೆ ಜನಸೇವೆ ಮಾಡುವುದೆಂದರೆ ತಮ್ಮ ಅನಾರೋಗ್ಯವೂ ಲೆಕ್ಕಕ್ಕೆ ಬರುವುದಿಲ್ಲ. ಇಂಥವರನ್ನು ನಾಯಕರನ್ನಾಗಿ ಪಡೆದ ನಾವೇ ಧನ್ಯರು!

-ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಭಟ್ಟರ್ ಸ್ಕಾಚ್

● ವಿನೋದ ಬಿ.ಸಜ್ಜನ, ಹುಬ್ಬಳ್ಳಿ

ಭಟ್ರೇ, ಐಫೋನ್ ಯಾವ ಕಂಪನಿ ಪ್ರಾಡಕ್ಟ್ ಅಂತ ನನ್ನ ಸ್ನೇಹಿತ ಕೇಳ್ತಾನಲ್ಲ?

- ಒಪ್ಪೋ ಕಂಪನಿಯದು ಅಂತ ಅವನಿಗೆ ಗೊತ್ತಿಲ್ವಾ? ಸಜ್ಜನರಿಗೆ ಎಂಥವರ ಸಹವಾಸ ಅಯ್ಯಪ್ಪಪ್ಪ ವಿನೋದ?!

● ಉಮಾ ಭರತ್, ಹರಿಹರ

ಭಟ್ರೇ, ಅತಿ ಹೆಚ್ಚು ಎಂದರೆ ಎಷ್ಟು?

- ಬಿಯರ್ ಮತ್ತು ವಿಸ್ಕಿ ವಿಷಯದಲ್ಲಿ ಹೆಚ್ಚು ಎಂಬುದಿಲ್ಲ!

● ಮಂಜು ಹಿರೇಮಠ, ಗದಗ

ಭಟ್ರೇ, ಮೇಲೇರಿದ್ದು ಕೆಳಕ್ಕೆ ಇಳಿಯಲೇಬೇಕು ಅಂತಾರಲ್ಲ?

- ಹೂಂ.. ಆದರೆ ಈ ಮಾತು ವಯಸ್ಸಿಗೆ ಅನ್ವಯಿಸುವುದಿಲ್ಲ!

● ಗೋಪಾಲ ನಾರಾವಿ, ಬೆಟ್ಟದೂರು

ಭಟ್ರೇ, ಗುಂಡು ಹಾಕಿ ಮೀಟಿಂಗಿಗೆ ಹೋಗಬಹುದಾ?

- ಬೇಸರ ಮಾಡಿಕೊಳ್ಳಬೇಡ, ಗುಂಡು ಹಾಕಿ ಪಾರ್ಟಿಗೆ ಹೋಗಬಹುದು!

● ಭಾನು ಗೆಜ್ಜಿ, (ಇಮೇಲ್ ಮೂಲಕ)

ಭಟ್ರೇ, ದರ್ಶನ್ ಜೈಲಿಗೆ ಹೋಗಿದ್ದನ್ನು ಕಂಡು ಕೆಲವರು ದಿನಾ ಪಾರ್ಟಿ ಮಾಡ್ತಾ ಇದ್ದಾರಂತೆ?

- ಈ ಪ್ರಶ್ನೆಯನ್ನು ಕಿಚ್ಚ ಸುದೀಪ್‌ಗೆ ಫಾರ್ವರ್ಡ್ ಮಾಡಲಾಗಿದೆ!

● ವಿಜಯಾ ನಾಗರಾಜ ಹೆಗಡೆ, ಶಿರಸಿ

ಭಟ್ರೇ, ನನ್ನ ಯಜಮಾನರು ಎಲ್ಲಿ ಕರೆದರೂ ಬರುವುದಿಲ್ಲವಲ್ಲ?

- ಕುಡಿಯೋಣ ಬಾರಾ ಎಂದು ಹೇಳಬೇಕಿತ್ತು!

● ಕೆ.ವೀರಣ್ಣ, ಕೆಂಗೇರಿ

ಭಟ್ರೇ, ಬೌದ್ಧಿಕ ಭಾರದಿಂದ ಕನ್ನಡ ಸಾಹಿತ್ಯ ನರಳುತ್ತಿದೆ ಅಂತಾರಲ್ಲ, ನಿಜಾನಾ?

-ಅದು 'ಬೌದ್ಧಿಕ ದಾರಿದ್ರ್ಯ'ದಿಂದ ಎಂದು ಬದಲಿಸಿಕೊಳ್ಳಬೇಕಿತ್ತು!

● ಎಲ್.ವಿ.ಸತೀಶ್, ಮೈಸೂರು

ಭಟ್ರೇ, ಜಾರುತ್ತದೆ ಅಂತ ಗೊತ್ತಿದ್ದರೂ ಎಲ್ಲರೂ ಬಾತ್‌ರೂಮಿಗೆ ಟೈಲ್ಸ್ ಅನ್ನೇ ಹಾಕಿಸುತ್ತಾರಲ್ಲ?

- ತಾನು ಮಾತ್ರ ಜಾರುವುದಿಲ್ಲ ಎಂಬ ಅತಿಯಾದ ಆತ್ಮವಿಶ್ವಾಸ!

● ರಮೇಶ್, ಸಿಂಗಟಗೆರೆ

ಭಟ್ರೇ, ಹೆಂಡತಿ ಹೆಚ್ಚಾಗಿ ಯಾವ ಕಾರಣಕ್ಕೆ ಸಿಟ್ಟು ಮಾಡಿಕೊಳ್ಳಾಳೆ?

- ಜಲೀಂದ್ರ, ಅದಕ್ಕೂ ಕಾರಣ ಬೇಕಾ?!

● ಕೆ.ಸಿ.ಚಂದ್ರು, ಗುಬ್ಬಿ

ಸರ್, ನಮ್ಮ ಕವಿಗಳೆಲ್ಲ ಸುಮ್ಮನೆ ಮಲಗಿದ್ದಾರಲ್ಲ?

-ಶ್... ಸುಮ್ನಿರು... ಎಬ್ಬಿಸಿ ರಾದ್ಧಾಂತ ಮಾಡಬೇಡ!

ವಲಸೆ ಹಕ್ಕಿಗಳೇ... ದಿಕ್ಕು ತಪ್ಪದಿರಿ!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ವಿದೇಶಕ್ಕೆ ಹೋಗಬೇಕು ಎನ್ನುವ ವ್ಯಾಮೋಹ ಯಾರಿಗಿಲ್ಲ ಹೇಳಿ? ಅದು ತಪ್ಪೇನೂ ಅಲ್ಲವೇ ಅಲ್ಲ. ಕೆಲವರು ಕೇವಲ ಪ್ರವಾಸಿಗರಾಗಿ ಹೋಗಿ ಬರಲು ಇಷ್ಟಪಟ್ಟರೆ, ಇನ್ನು ಹಲವರು ಅಲ್ಲಿ ನೆಲೆಸಬೇಕು ಎನ್ನುವ ಇಚ್ಛೆಯನ್ನು ಹೊಂದಿರುತ್ತಾರೆ. ಕೆಲವರು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ವಿದೇಶಗಳಿಗೆ ತೆರಳಿ ನಂತರ ಅಲ್ಲಿಯೇ ನೆಲೆ ಕಂಡುಕೊಳ್ಳುವ ಬಯಕೆಯನ್ನ ಕೂಡ ಹೊಂದಿರುತ್ತಾರೆ. ಇನ್ನಷ್ಟು ಮಂದಿ ಕೆಲಸದ ಮೇಲೆ ಅಲ್ಲಿಗೆ ಹೋಗಿರುತ್ತಾರೆ. ಭಾರತೀಯ ಸಂಸ್ಥೆಗಳು ವಿದೇಶಕ್ಕೆ ಕೆಲಸದ ನಿಮಿತ್ತ ಕೂಡ ತಮ್ಮ ನೌಕರರನ್ನ ಕಳುಹಿಸುತ್ತವೆ. ಹೀಗೆ ಯಾವುದಾದರೂ ಸಿಲುಕಿದ ಒಂದಷ್ಟು ಜನ 'ವರ್ಕ್ ಪರ್ಮಿಟ್' ಪಡೆದು ವಿದೇಶಗಳನ್ನು ಸೇರುವ ಅವಕಾಶವನ್ನ ಕೂಡ ಹೊಂದಿರುತ್ತಾರೆ. ಹೀಗೆ ಬೇರೆಯವರ ಹೆಚ್ಚಿನ ಸಹಾಯವಿಲ್ಲದೆ ತಮ್ಮ ಪ್ರತಿಭೆ, ವಯಸ್ಸು ಮತ್ತು ವಿದ್ಯಾರ್ಹತೆಯನ್ನ ಮೂಲವನ್ನಾಗಿಸಿಕೊಂಡು ಇದ್ದಲ್ಲಿಂದಲೇ ಸುಲಭವಾಗಿ ಸೇರಬಹುದಾದ ದೇಶವೆಂದರೆ ಅದು ನಿರ್ವಿವಾದವಾಗಿ ಕೆನಡಾ.

ಕೆನಡಾ ಎನ್ನುವ ಈ ದೇಶ ನಿಂತಿರುವುದು ವಲಸಿಗರಿಂದ! ಹಾಗೆ ನೋಡಲು ಹೋದರೆ ಈ ದೇಶವನ್ನು ಕಟ್ಟಿರುವುದು ವಲಸಿಗರು! ವಿದ್ಯಾಭ್ಯಾಸಕ್ಕೆ ಮತ್ತು ಕೆಲಸಕ್ಕೆ ಕೆನಡಾ ಸೇರುವ ಭಾರತೀಯರ ಸಂಖ್ಯೆ ಅಸಂಖ್ಯ. ಕೆನಡಾ ದೇಶದ ಉದ್ಯಮಗಳಲ್ಲಿ ಕಾಣಸಿಗುವ ಭಾರತೀಯರು ಇದಕ್ಕೆ ಸಾಕ್ಷಿ. ದಶಕಗಳ ಹಿಂದೆ ಪಂಜಾಬಿಗಳು ಎನ್ನುವ ಸ್ಥಿತಿಯಿತ್ತು. ಇದೀಗ ಆ ವ್ಯಾಖ್ಯೆ ಕೂಡ ಬದಲಾಗಿದೆ. ಭಾರತದ ಎಲ್ಲಾ ರಾಜ್ಯಗಳಿಂದ ಕೆನಡಾ ದೇಶಕ್ಕೆ ವಲಸೆ ಹೋಗುವುದು ಇಂದಿಗೆ ಸಾಮಾನ್ಯವಾಗಿದೆ. ಬಹಳಷ್ಟು ಜನ ಕೆನಡಾಕ್ಕೆ ಹೋಗುವುದು ಎಂದರೆ ಸ್ವರ್ಗಕ್ಕೆ ಹೋದಂತೆ, ಎಲ್ಲಾ ಸಮಸ್ಯೆಗಳಿಂದ ಮುಕ್ತಿ ಸಿಕ್ಕಂತೆ ಇತ್ಯಾದಿ ಭ್ರಮೆಗಳನ್ನ ಹೊಂದಿದ್ದಾರೆ. ಅಂಥ ಅನೇಕ ಭ್ರಮೆ ಮತ್ತು ಮಿಥ್ಯೆಗಳನ್ನ ದೂರ ಮಾಡುವುದು ಈ ಬರಹದ ಉದ್ದೇಶ. ಇದನ್ನ ಋಣಾತ್ಮಕವಾಗಿ ನೋಡದೆ, ಧನಾತ್ಮಕವಾಗಿ ವಿಶ್ಲೇಷಿಸಿ, ಸರಿ-ತಪ್ಪುಗಳ ತುಲನೆಯ ನಂತರ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ನೆನಪಿರಲಿ, ವ್ಯಕ್ತಿಯಿಂದ ವ್ಯಕ್ತಿಗೆ ಸನ್ನಿವೇಶಗಳು ಬದಲಾಗುತ್ತವೆ. ಹೀಗಾಗಿ ಇದನ್ನ 'ಇದಮಿತ್ಥಂ' ಎಂದುಕೊಳ್ಳದೆ ತೆಗೆದುಕೊಳ್ಳುವ ಅವಶ್ಯಕತೆ ಕೂಡ ಇಲ್ಲ, ಕೆನಡಾಕ್ಕೆ (ಅಥವಾ ಇನ್ನಿತರ ವಿದೇಶಗಳಿಗೆ) ಹೋಗುವ ಮುನ್ನ ಮುಂದೆ ನೀಡಲಾಗಿರುವ ಒಂದಷ್ಟು ಅಂಶಗಳನ್ನ ಗಮನಿಸಬೇಕಾದ ಅವಶ್ಯಕತೆಯಿದೆ:

● ವಿದೇಶದಲ್ಲಿ ಎಲ್ಲವೂ ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿರುವುದಿಲ್ಲ:

ಇದರಲ್ಲಿ ಬಹುಪಾಲು ಸತ್ಯಾಂಶವಿದ್ದರೂ ಪೂರ್ಣವಾಗಿ ನಂಬುವಂತಿಲ್ಲ. ಇಲ್ಲಿ ಹೋದ ಜಗತ್ತಿನ ಎಲ್ಲೆಡೆಯಂತೆ ಇರುವುದು ಅದೇ ಮನುಷ್ಯರು. ಮನುಷ್ಯ ಇದ್ದ ಕಡೆಯಲ್ಲಿ ಇರಬಹುದಾದ ಅವ್ಯವಸ್ಥೆ, ಆಸೆ, ಪ್ರಲೋಭನೆ, ಮೋಸ ಇದ್ದೇ ಇರುತ್ತದೆ. ಹಾಗೆ ನೋಡಲು ಹೋದರೆ ಹೊಸ ವ್ಯವಸ್ಥೆಗೆ ಒಗ್ಗಿಕೊಳ್ಳಲು ಮತ್ತು ಅಲ್ಲಿನ ಖರ್ಚಿಗೆ ತಕ್ಕ ಆದಾಯ ಬರುವ ಕೆಲಸ ಹುಡುಕಿಕೊಳ್ಳುವುದೇ ದೊಡ್ಡ ಸವಾಲು.

● ಬದುಕಿನ ವೆಚ್ಚ ಇಲ್ಲಿ ದುಬಾರಿ:

ಬಹುತೇಕರು ಮಾಡುವ ಸಾಮಾನ್ಯ ತಪ್ಪು, ಕೇವಲ ಆದಾಯವನ್ನ ಲೆಕ್ಕ ಹಾಕುವುದು. ಭಾರತದ ರೂಪಾಯಿಯಲ್ಲಿ ಇಷ್ಟು ಆದಾಯ ಎಂದು ಹೇಳಿ ಖುಷಿ ಪಡುವವರ ಸಂಖ್ಯೆಯೂ ಅಸಂಖ್ಯ. ಆದರೆ ನೆನಪಿರಲಿ, ಅಲ್ಲಿನ ಆದಾಯ ಅಲ್ಲಿನ ಖರ್ಚಿಗೆ ತಕ್ಕಂತೆ ಹೊಂದಿಕೊಂಡಿರುತ್ತದೆ. ಹೀಗಾಗಿ ಕೇವಲ ಆದಾಯವನ್ನ ಲೆಕ್ಕ ಹಾಕದೆ ಖರ್ಚಿನ ಲೆಕ್ಕಾಚಾರ ಕೂಡ ಹಾಕಬೇಕು. ಎಲ್ಲವನ್ನೂ ಕಳೆದು ಉಳಿಸುವುದು ಎಷ್ಟು? ಎನ್ನುವುದನ್ನ ನೋಡಬೇಕು. ಭಾರತ ಬಿಟ್ಟು ಬೇರೆಡೆಗೆ ಹೋಗುವುದಕ್ಕೆ ಸಿಗುತ್ತಿರುವ ಲಾಭಾಂಶ ಸರಿಯಿದೆಯೇ? ಅಂದರೆ ಪಡುತ್ತಿರುವ ಕಷ್ಟಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿದೆಯೇ ಎನ್ನುವುದನ್ನ ಗಮನಿಸಬೇಕು.

● ಟ್ಯಾಕ್ಸ್ ಎನ್ನುವ ಪೆಡಂಭೂತವನ್ನ ಗಣನೆಗೆ ತೆಗೆದುಕೊಳ್ಳಬೇಕು:

ಭಾರತದಲ್ಲಿ ವ್ಯಕ್ತಿಯೊಬ್ಬರ ಆದಾಯದ ಮೇಲೆ 30 ಪ್ರತಿಶತ ಆದಾಯ ತೆರಿಗೆಯಿದೆ. 15 ಲಕ್ಷಕ್ಕೂ ಕಡಿಮೆ ಆದಾಯದ ಮೇಲೆ ಅಷ್ಟೇನೂ ಒತ್ತಡವಿಲ್ಲ. ಕೆನಡಾ ದೇಶದಲ್ಲಿ ಹಾಗಿಲ್ಲ, ನೀವು ಹೆಚ್ಚು ಹಣ ದುಡಿದಷ್ಟೂ ಹೆಚ್ಚು ತೆರಿಗೆಯನ್ನ ನೀಡಬೇಕಾಗುತ್ತದೆ. ಇದು 30ರಿಂದ 50 ಪ್ರತಿಶತದವರೆಗೆ ಹೋಗುತ್ತದೆ. ಹೀಗಾಗಿ ನೀವು ತೀರಾ ಉನ್ನತ ಹುದ್ದೆಗೆ ಹೋಗುವ ಮುನ್ನ ಯೋಚಿಸಬೇಕಾಗುತ್ತದೆ. ಕೆಲವೊಮ್ಮೆ ನಿಮ್ಮ ಆದಾಯದ 50 ಪ್ರತಿಶತ ತೆರಿಗೆಯ ರೂಪದಲ್ಲಿ ಸರಕಾರಕ್ಕೆ ನೀಡಬೇಕಾಗುತ್ತದೆ.

● ನೈಸರ್ಗಿಕ ವಿಕೋಪಗಳಿಗೆ ಸಿದ್ಧರಿರಬೇಕು:

ಕೆನಡಾ ಎನ್ನುವ ದೇಶ ಚಳಿಯಿಂದ ಬಳಲುತ್ತದೆ. ತೀವ್ರ ಹಿಮಪಾತ, ಶೀತಗಾಳಿ ಇವುಗಳಂತೂ ಇಲ್ಲಿ [illegible]. ಹಾಗೆ ನೋಡಲು ಹೋದರೆ ಅತ್ಯಂತ ವಿಶಾಲವಾದ ಈ ದೇಶದಲ್ಲಿ ಅತಿ ಕಡಿಮೆ ಜನಸಂಖ್ಯೆ ಇರುವುದರ ಕಾರಣ ಕೂಡ ಈ ವಾತಾವರಣವೇ. ಮನುಷ್ಯರು ವಾಸಿಸಲು ಯೋಗ್ಯವಲ್ಲದ ಪ್ರದೇಶವಾಗಿರುವ ಕಾರಣ ಇಲ್ಲಿ ಜನಸಂಖ್ಯೆ ಬಹಳ ಕಡಿಮೆ. ನಿತ್ಯ ಮನೆಯ ಮುಂದಿನ ಹಿಮವನ್ನ ಬಾಚುವುದರಲ್ಲಿ ಬೆನ್ನಮೂಳೆ ಮುರಿಯದಿದ್ದರೆ ಅದೇ ಅದೃಷ್ಟ.

● ಒಂಟಿತನ ಎನ್ನುವ ರೋಗಕ್ಕೆ ಸಿದ್ಧರಿರಬೇಕು:

ಇಲ್ಲಿ ಸಾಕಷ್ಟು ಜನರಿದ್ದರೂ ಅವರ ಮಧ್ಯೆ ಒಂಟಿ ಎನ್ನುವ ಭಾವನೆ ಬರುವುದನ್ನ ತಪ್ಪಿಸಲಾಗುವುದಿಲ್ಲ. ಎಲ್ಲವೂ ಇದ್ದು ಏನೂ ಇಲ್ಲದ ಸನ್ನಿವೇಶ ಸೃಷ್ಟಿಯಾಗಿರುತ್ತದೆ. ಎಲ್ಲರಿಗೂ ಅವರದೇ ಆದ ಬದುಕು ಮತ್ತು ಒತ್ತಡ ಇರುವ ಕಾರಣ ಯಾರಿಗೆ ಯಾರೂ ಇಲ್ಲ ಎನ್ನುವ ಮಾತು ಇಲ್ಲಿ ಸತ್ಯ ಎನಿಸತೊಡಗುತ್ತದೆ. ಚಳಿಗಾಲದಲ್ಲಿ ಇದರ ಸಮಸ್ಯೆ ದುಪ್ಪಟ್ಟು.

● ಕುಸಿಯುತ್ತಿರುವ ಮೂಲಭೂತ ವ್ಯವಸ್ಥೆ:

ಕೆನಡಾ ದಶಕದ ಹಿಂದಿನ ಆಕರ್ಷಣೆ ಉಳಿಸಿಕೊಂಡಿಲ್ಲ. ಅದಕ್ಕೆ ಕಾರಣ ಒಂದೇ ಸಮನೆ ಹೆಚ್ಚಾಗುತ್ತಿರುವ ವಲಸೆ ಜನಸಂಖ್ಯೆ. ಭಾರತದಲ್ಲಿ ಎಲ್ಲೆಡೆ ಜನಸಂದಣಿ ನೋಡಿ ಬೇಸತ್ತು ಕೆನಡಾಗೆ ಹೋದವರಿಗೆ ಅಚ್ಚರಿ ಕಾದಿರುತ್ತದೆ. ಏಕೆಂದರೆ ಇಲ್ಲಿಯೂ ಜನಸಂದಣಿ ಕಾಣಬಹುದು. ಎಲ್ಲರಿಗೂ ನಗರದಲ್ಲೇ ವಾಸಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಕೆಲಸಗಳು ಸುಲಭವಾಗಿ ಸಿಗುತ್ತಿಲ್ಲ, ಸಿಕ್ಕರೂ ಅದು ಬಯಸಿ ಹೋದ ಕೆಲಸವಾಗಿರುವುದಿಲ್ಲ. ಜನದಟ್ಟಣೆಗೆ ತಕ್ಕಂತೆ ಮೂಲಭೂತ ಸೌಕರ್ಯಗಳನ್ನ ಸರಕಾರ ನಿರ್ಮಿಸಿಲ್ಲ.

● ಬದಲಾಗುತ್ತಿದೆ ಮೆಡಿಕಲ್ ಕ್ಷೇತ್ರ:

ಜನಸಂಖ್ಯೆಗೆ ತಕ್ಕಂತೆ ಆಸ್ಪತ್ರೆಗಳು ಹೆಚ್ಚಾಗಿಲ್ಲ, ವೈದ್ಯರು ಮತ್ತಿತರ ಸೇವಾ ಸಿಬ್ಬಂದಿ ನೇಮಕವಾಗಿಲ್ಲ, ಹೀಗಾಗಿ ಇರುವ ವ್ಯವಸ್ಥೆಯ ಮೇಲೆ ಇನ್ನಿಲ್ಲದ ಒತ್ತಡ ಬಿದ್ದಿದೆ. ಒತ್ತಡ ತಡೆದುಕೊಳ್ಳಲು ಆಗದೆ ಇರುವ ಸಿಬ್ಬಂದಿ ಕೆಲಸ ಬಿಟ್ಟು ಬೇರೆಡೆ ಹೋಗುವ ಕೆಲಸ ಮಾಡುತ್ತಿದ್ದಾರೆ. ಸಣ್ಣ ಪುಟ್ಟ ನೆಗಡಿ, ಕೆಮ್ಮಿಗೂ ವಾರ ಕಳೆದರೂ ವೈದ್ಯರ ಬಳಿ ಸಮಯ ಸಿಗುವುದಿಲ್ಲ, ಹಾಗೆ ನೋಡಿದರೆ ಇದು ಕೆನಡಾದ ಸಮಸ್ಯೆ ಮಾತ್ರವಲ್ಲ, ಪೂರ್ಣ ಯುರೋಪು ಕೂಡ ಈ ಸಮಸ್ಯೆಯಿಂದ ಬಳಲುತ್ತಿದೆ.

● ಮೂಗಿಗಿಂತ ಮೂಗುತಿ ಭಾರ:

ವಿದ್ಯಾರ್ಥಿಗಳಾಗಿ ಇಲ್ಲಿ ಬಂದವರು ಖರ್ಚಿಗಾಗಿ, ವಿದ್ಯಾಭ್ಯಾಸಕ್ಕಾಗಿ ಸಾಲ ಮಾಡುವುದು ತೀರಾ ಸಹಜ. ಆ ಸಾಲವನ್ನ ಮತ್ತು ತಮ್ಮ ಖರ್ಚನ್ನು ಇಲ್ಲಿನ ಬಡ್ಡಿಯನ್ನ ಕಟ್ಟುವುದರಲ್ಲಿ, ತಾವು ಬಯಸಿದ ಕೆಲಸ ಸಿಗುವವರೆಗೆ 3/4 ವರ್ಷದ ಸಂಘರ್ಷದ ಕಥೆ ಬೇರೆಯ ರೀತಿಯದು. ಕೆಲಸ ಸಿಕ್ಕ ನಂತರ ಮುಗಿಯಿತು ಎನ್ನುವಂತಿಲ್ಲ, ಇಂದಿನ ಅಸ್ಥಿರ ಸಮಾಜದಲ್ಲಿ ಯಾವುದನ್ನೂ ಹೆಚ್ಚು ವೇಳೆ ಸಂಭ್ರಮಿಸಲು ಬಾರದು. ಯಾವ ದೇಶದಲ್ಲಿ ಉತ್ತಮ ಬದುಕಿದೆ ಎಂದು ಹುಡುಕುತ್ತಾ ಹೋಗುತ್ತೇವೆ. ಅಲ್ಲಿನ ಸೌಂದರ್ಯ ಇತ್ಯಾದಿಗಳನ್ನ ಆಸ್ವಾದಿಸುವ ಬದಲು, ಸಾಲದಿಂದ ಹೊರಬರುವುದರಲ್ಲಿ ಜೀವನ ಕಳೆದುಹೋಗುತ್ತದೆ. ಬಾಲ ದೇಹವನ್ನ ಅಲ್ಲಾಡಿಸುವ ದೈತ್ಯ ಸ್ಥಿತಿಗೆ ತಂದು ನಿಲ್ಲಿಸಿ ಬಿಡುತ್ತದೆ. ವಿದೇಶದಲ್ಲಿ 'ಸೆಟಲ್' ಎನ್ನುವ ಬಹುತೇಕರು ಮರಳಿ ಭಾರತಕ್ಕೆ ಬಾರದೆ ಇರಲು ಇದು ಒಂದು ಅತಿದೊಡ್ಡ ಕಾರಣ.

● ಎಲ್ಲೆಡೆ ದುಡಿಯುವ ಸ್ವಾತಂತ್ರ್ಯ ಕೂಡ ಇಲ್ಲ:

ಕೆನಡಾ ದೇಶದ ಕೆಲವು ರಾಜ್ಯಗಳಲ್ಲಿ ಜನಸಂಖ್ಯೆ ಬಹಳ ಹೆಚ್ಚು, ಅಂದರೆ ದಟ್ಟಣೆ ಬಹಳ ಹೆಚ್ಚು, ಕೆಲವು ಕಡೆ ಜನರೇ ಇರುವುದಿಲ್ಲ. ಹೀಗಾಗಿ ವಲಸೆ ಹೋಗಬಯಸುವವರನ್ನ ಮೊದಲಿಗೆ ಇಂಥ ನಗರಗಳಲ್ಲಿ ಮಾತ್ರ ಜೀವಿಸಲು ಸಾಧ್ಯ ಎನ್ನುವ ನಿಬಂಧನೆಯ ಮೇಲೆ ವರ್ಕ್ ಪರ್ಮಿಟ್ ನೀಡಲಾಗುತ್ತದೆ. ಇದರರ್ಥ ನಮೂದಿಸಿರುವ ಪ್ರಾಂತ್ಯದಲ್ಲಿ ಬಿಟ್ಟು ಬೇರೆಡೆ ಕೆಲಸ ಮಾಡಲು ಬರುವುದಿಲ್ಲ. ಒಂದಷ್ಟು ವರ್ಷದ ನಂತರ ಎಲ್ಲಿ ಬೇಕಾದರೂ ಕೆಲಸ ಮಾಡುವ ಪರ್ಮಿಟ್ ಪಡೆದುಕೊಳ್ಳಬೇಕಾಗುತ್ತದೆ. ವಿದೇಶಕ್ಕೆ ಹೋಗಬೇಕೆನ್ನುವ ಆತುರದಲ್ಲಿ ಸರಿಯಾಗಿ ಪರಾಮರ್ಶೆ ಮಾಡದೆ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ.

● ನಮ್ಮ ದೊಡ್ಡ ಶತ್ರು, ನಮ್ಮವರೇ ಆಗಿರುತ್ತಾರೆ:

ಜಗತ್ತಿನ ಎಲ್ಲೆಡೆ ರೇಸಿಸಂ ಎನ್ನುವ ಪಿಡುಗಿದೆ. ಕೆಲವು ದೇಶಗಳಲ್ಲಿ ಇದು ಕಣ್ಣಿಗೆ ಕಾಣುವಂತಿದ್ದರೆ ಕೆಲವು ಕಡೆ ಇದು ಗುಪ್ತವಾಗಿರುತ್ತದೆ. ಪ್ರವಾಸಿಗರ ಕಣ್ಣಿಗೆ ಕಾಣದಿರಬಹುದು, ಆದರೆ ಅಲ್ಲಿ ಜೀವಿಸಲು ಶುರುಮಾಡಿದ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಇದರ ಅನುಭವ ಪಡೆಯುತ್ತಾರೆ. ಕೆನಡಾದಂಥ ವಲಸಿಗರಿಂದಲೇ ಕಟ್ಟಲ್ಪಟ್ಟ ದೇಶದಲ್ಲಿ 2-3 ದಶಕದ ಹಿಂದೆ ನೆಲೆ ಕಂಡುಕೊಂಡ ಭಾರತೀಯರೇ, ಹೊಸ ಭಾರತೀಯ ವಲಸಿಗರನ್ನ ಕೀಳಾಗಿ ಕಾಣುತ್ತಾರೆ. ಇದು ಕೂಡ ಸಣ್ಣ ಭಾರತವಾಗಿದೆ, ಇಲ್ಲಿಯೂ ಭಾಷೆ, ಧರ್ಮ, ಜಾತಿಯ ಆಧಾರದಲ್ಲಿ ಭಾರತೀಯರು ಹಂಚಿ ಹೋಗಿದ್ದಾರೆ. ಭಾರತ ಬಿಟ್ಟರೂ ಬದುಕು ಬದಲಾಗುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ವಿದೇಶಗಳಿಗೆ ಹೆಚ್ಚಿನ ವ್ಯಾಸಂಗಕ್ಕೆ ಹೋಗಿರುವ ಹೊಸ ತಲೆಮಾರಿನ ಹುಡುಗರು ಮುಲಾಜಿಲ್ಲದೆ ಸೋಷಿಯಲ್ ಮೀಡಿಯಾದಲ್ಲಿ ಅಲ್ಲಿ ಆಗುತ್ತಿರುವ ಬವಣೆಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಇದು ನಿಜಕ್ಕೂ ಉತ್ತಮ ಬೆಳವಣಿಗೆ. ಒಂದು ತಲೆಮಾರು ಹಿಂದೆ ವಿದೇಶಕ್ಕೆ ಹೋದವರು ಅಲ್ಲಿನ ನ್ಯೂನತೆಗಳ ಬಗ್ಗೆ ಹೇಳಿದರೆ ಅವರಲ್ಲೇ ಏನೋ ದೋಷವಿದೆ ಎನ್ನುವಂತೆ ಸಮಾಜ ನೋಡುತ್ತಿತ್ತು. ಇಂದಿಗೆ ಸಮಾಜ ಬದಲಾಗಿದೆ. ಭಾರತದಲ್ಲಿ ಕೂಡ ಅವಕಾಶಗಳಿವೆ. ಜತೆಗೆ ಬದುಕು ಕಟ್ಟಿಕೊಳ್ಳಲು ಗುದ್ದಾಟ ಮಾಡುವುದಾದರೆ ಅದು ನಮ್ಮ ನೆಲದಲ್ಲಿ ಆದರೆ ಎಷ್ಟೋ ಮೇಲು ಎನ್ನುವ ಸಾಮಾನ್ಯಜ್ಞಾನ ಕೂಡ ಜನತೆಯಲ್ಲಿ ಹೆಚ್ಚಾಗಿದೆ.

ವಿದೇಶಕ್ಕೆ ಹೋಗಿ ನೆಲೆಸಬೇಕು ಎನ್ನುವವರ ಮನಸ್ಸಿನಲ್ಲಿ ಒಂದಷ್ಟು ಸುಂದರ ಕಲ್ಪನೆಗಳಿರುತ್ತವೆ. ವಿದೇಶ ತಲುಪಿಬಿಟ್ಟರೆ ಎಲ್ಲಾ ಸಮಸ್ಯೆಗಳೂ ಮಾಯ ಎನ್ನುವುದು ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು. ಬದುಕು ಎಲ್ಲೆಡೆ ಅದರದೇ ಆದ ಸವಾಲುಗಳನ್ನ ಒಡ್ಡುತ್ತದೆ. ಅದು ಎಲ್ಲಿಯೂ ಸುಲಭವಲ್ಲ. ಯಾವುದೂ ಸುಲಭವಾಗಿ ಸಿಕ್ಕುವುದಿಲ್ಲ, ಎಲ್ಲಕ್ಕೂ ಏನನ್ನೋ ವಸೂಲಿ ಮಾಡಿಕೊಂಡಿರುತ್ತದೆ. ಎಲ್ಲವನ್ನೂ ಮೆಟ್ಟಿ ಅಲ್ಲಿ ನೆಲೆ ಕಂಡುಕೊಂಡ ನಂತರ ಮುಂದಿನ ಜನಾಂಗದ ಇನ್ನಷ್ಟು ಸಮಸ್ಯೆಗಳು ಎದುರಾಗುತ್ತವೆ. ಸಮಸ್ಯೆಗಳನ್ನ ಎದುರಿಸುವುದೊಂದೇ ದಾರಿ, ಅದಕ್ಕೆ ಬೆನ್ನು ತೋರಿಸಲು ಆಗುವುದಿಲ್ಲ. ಭಾರತವಾದರೂ, ಕೆನಡಾ ಅಥವಾ ಇನ್ನಾವ ದೇಶವಾದರೂ ಇದೇ ಸರಿಯಾದ ದಾರಿ.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ತೇಜಸ್ವಿ ಯಾದವ್ ಹಿಂಗ್ಯಾಕೆ?

ಬಿಹಾರದ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷದ ಅಡ್ಡಾದಿಂದ ಬಂದಿರುವ ಸುದ್ದಿಯಿದು. ಅದೇನಪ್ಪಾ ಅಂದ್ರೆ, ಆರ್‌ಜೆಡಿಯ ನಾಯಕರು, ಪದಾಧಿಕಾರಿಗಳು ಮತ್ತು ಕಾರ್ಯಕರ್ತರೆಲ್ಲಾ ತಮ್ಮ 'ಯುವರಾಜ' ತೇಜಸ್ವಿ ಯಾದವ್ ಬಗ್ಗೆ ಶಾನೆ ಬೇಸರ ಮಾಡಿಕೊಂಡಿದ್ದಾರಂತೆ. ಅದಕ್ಕೆ ಕಾರಣ, ತೇಜಸ್ವಿ ಅವರು ಸೆಪ್ಟೆಂಬರ್ 18ರಿಂದ ಅಕ್ಟೋಬರ್ 8ರವರೆಗೆ ದುಬೈನಲ್ಲಿ ವಿಹರಿಸಲು ಯೋಜಿಸಿರುವುದು! ಈಗಾಗಲೇ ದೆಹಲಿಯ

ನ್ಯಾಯಾಲಯವೊಂದರಲ್ಲಿ, ಭ್ರಷ್ಟಾಚಾರ ಪ್ರಕರಣವೊಂದರ ಸಂಬಂಧ ಆರೋಪವನ್ನು ಎದುರಿಸುತ್ತಿರುವ ತೇಜಸ್ವಿ, ತಮ್ಮ ದುಬೈ ವಿಹಾರಕ್ಕೆ ಆ ನ್ಯಾಯಾಲಯದಿಂದ ಈಗಾಗಲೇ ಅನುಮತಿ ಪಡೆದಿದ್ದಾರಂತೆ. ಅಷ್ಟಕ್ಕೂ ಸೆಪ್ಟೆಂಬರ್ 10ರಿಂದ ಬಿಹಾರ ರಾಜ್ಯ ಪ್ರವಾಸವನ್ನು ಶುರುಮಾಡಿದ್ದ ತೇಜಸ್ವಿಯವರು ಹೀಗೆ ಇದ್ದಕ್ಕಿದ್ದಂತೆ ಈ ಪ್ರವಾಸ ಹಮ್ಮಿಕೊಂಡಿರುವುದನ್ನು ಕಂಡ ಆರ್‌ಜೆಡಿಯ ಹಿರಿಯ ನಾಯಕರೊಬ್ಬರು, 'ತೇಜಸ್ವಿಯವರ ಈ ವರ್ತನೆಯೇ ನಮ್ಮಂಥವರನ್ನು ಚಿಂತೆಗೆ ದೂಡುತ್ತದೆ; ಪಕ್ಷದಲ್ಲಿ ಮತ್ತು ರಾಜ್ಯದಲ್ಲಿ ತಮ್ಮ ಉಪಸ್ಥಿತಿಯ ಅಗತ್ಯ ಹಿಂದೆಂದಿಗಿಂತ ಹೆಚ್ಚಾಗಿದೆ ಎಂಬ ಸೂಕ್ಷ್ಮವನ್ನೂ ಅರಿಯದೆಯೇ ಅವರು ಹೀಗೆ ಏಕಾಏಕಿ ನಾಪತ್ತೆಯಾಗಿಬಿಡುತ್ತಾರೆ; ಬಿಹಾರ ವಿಧಾನಸಭೆಯ ಮಳೆಗಾಲದ ಅಧಿವೇಶನದಲ್ಲಿ ಒಂದೇ ಒಂದು ದಿನವೂ ಅವರು ಪಾಲ್ಗೊಳ್ಳಲಿಲ್ಲ, ಸಾಲದೆಂಬಂತೆ ಈಗ ಹೀಗೆ ಸುದೀರ್ಘ ಪ್ರವಾಸಕ್ಕೆ ಯೋಜಿಸಿದ್ದಾರೆ' ಎಂದು ತಣ್ಣನೆಯ ದನಿಯಲ್ಲಿ ಆಕ್ಷೇಪಿಸಿದರಂತೆ!

ಈ ಆಕ್ಷೇಪಣೆ ಕೇಳಿಸಿಕೊಂಡು ಉತ್ತೇಜಿತರಾದ ಮತ್ತೊಬ್ಬ ಹಿರಿಯ ನಾಯಕರು ತಾವೇಕೆ ಬಾಯಿಗೆ ಬೀಗ ಹಾಕಿಕೊಂಡಿರಬೇಕು ಎಂಬ ಧಾಟಿಯಲ್ಲಿ, ''ಅಲ್ಲಾ ರೀ, ರಾಜ್ಯದ ಜನರ ಕುಂದುಕೊರತೆಗಳ ಬಗ್ಗೆ ಗಮನಹರಿಸಿ ಹೊಣೆಗಾರಿಕೆ ಮೆರೆಯಬೇಕಿದ್ದ ಈ ಮಹಾನುಭಾವರು, ಹೀಗೆ ಹಠಾತ್ತನೆ ತಮ್ಮ ಗಮನವನ್ನು ಐಷಾರಾಮಿ ವಿಹಾರದೆಡೆಗೆ ಹಾಗೂ ಕುಟುಂಬಿಕರೊಂದಿಗೆ ಸಮಯ ಕಳೆಯುವುದರೆಡೆಗೆ ಬದಲಿಸಿಬಿಟ್ಟರೆ ಗತಿಯೇನು? ಬಿಹಾರದಂಥ ಬಡರಾಜ್ಯಕ್ಕೆ ಇಂಥ ಜೀವನಶೈಲಿ ಬಿಲ್‌ಕುಲ್ ಹೊಂದಿಕೊಳ್ಳಲ್ಲ ಕಣ್ರೀ. ತೇಜಸ್ವಿಯವರ ಈ ವರ್ತನೆಯನ್ನು ನೋಡಿ ಬಿಹಾರದ ಆಡಳಿತಾರೂಢ ಮೈತ್ರಿಕೂಟವು ಸುಮ್ಮನೆ ಕೂತಿರುತ್ತಾ? ಅವರ ಈ ವಿದೇಶ ಪ್ರವಾಸದ ಕುರಿತಾಗಿ ಅದು ಹುಯಿಲೆಬ್ಬಿಸದಿದ್ದರೆ ಕೇಳಿ'' ಎಂದು ಪಕ್ಕವಾದ್ಯ ನುಡಿಸಿಬಿಡುವುದೇ?!

ಈ ಇಬ್ಬರು 'ಹಳೇಹುಲಿಗಳ' ಮಾತು ಸೀಸವನ್ನು ಕಾಯಿಸಿ ಕಿವಿಗೆ ಸುರಿದಂಥ ಅನುಭವವನ್ನು ನೀಡುತ್ತಿದ್ದಂತೆಯೇ ತಡಬಡಾಯಿಸಿಕೊಂಡು ಎದ್ದ ತೇಜಸ್ವಿಯವರ ಆಪ್ತವಲಯದವರು, ''ಥೋ ನಿಮ್ಮ, ನಮ್ ತೇಜಸ್ವಿ ಮೋಜು ಮಾಡ್ಕೊಕ್ಕೆ ಅಂತ ದುಬೈಗೆ ಹೋಗ್ತಿಲ್ಲ ಕಣ್ರೀ; ಮುಂದಿನ ವರ್ಷ ಬಿಹಾರ ವಿಧಾನಸಭಾ ಚುನಾವಣೆ ನಡೆಯಲಿದೆಯಲ್ಲಾ, ಅದಕ್ಕೆ ಪೂರ್ವಭಾವಿಯಾಗಿ ತಮ್ಮನ್ನು 'ಕಾಯಕಲ್ಪ'ಕ್ಕೆ ಒಡ್ಡಿಕೊಳ್ಳಲು ಹೀಗೆ ರಜೆಯ ಮೇಲೆ ತೆರಳುತ್ತಿದ್ದಾರಷ್ಟೇ'' ಎಂದು ತಿಪ್ಪೆ ಸಾರಿಸಿದರಂತೆ!!

''ಅಯ್ಯೋ ಬಿಡಿ, 'ಮಾಡಿದ್ದೋರ ಕರ್ಮ ಆಡಿದೋರ ಬಾಯಲ್ಲಿ' ಅನ್ನೋ ಹಾಗೆ ನಮಗ್ಯಾಕೆ ಬೇಕು ಮತ್ತೊಬ್ಬರ ಮನೆ ಸಮಾಚಾರ'' ಅಂತ ಗೊಣಗಿಕೊಳ್ತಿದ್ದೀರಾ? ನಿಮಗಿದು ಬೇಕಿಲ್ಲದಿರಬಹುದು; ಆದರೆ ಇಂಥ ಸುದ್ದಿಗಳಿಲ್ಲದಿದ್ದರೆ 'ಕಲಹಪ್ರಿಯ' ನಾರದರ 'ಗಾಸಿಪ್‌ಗಾರಿಕೆ' ಸೊರಗಿಬಿಡುತ್ತಲ್ಲಾ, ಹಾಗಾಗಿ ಟೇಸ್ಟ್‌ಗಾಗಿ ಒಂದು ತುಣುಕು, ಅಷ್ಟೇ!!

ನಾರಾಯಣ ನಾರಾಯಣ!

'ಸುಮ್ಮನಿರಲಾರದೆ ಇರುವೆ ಬಿಟ್ಕೊಂಡ್ರಂತೆ' ಅನ್ನೋಹಾಗೆ, ಭಾರತವನ್ನು ಸುಮ್‌ಸುಮ್ನೇ ಕೆಣಕಿ ಕಿತಾಪತಿಮಾಡಿ, ದ್ವಿಪಕ್ಷೀಯ ಸಂಬಂಧವನ್ನು ಗಬ್ಬೆಬ್ಬಿಸಿಕೊಂಡ ದ್ವೀಪರಾಷ್ಟ್ರ ಮಾಲ್ಡೀವ್ಸ್, ಈಗ ಚೀನಾದ ಅಪ್ಪುಗೆಗೆ ಹಾತೊರೆದು, ಸೇನಾ ನೆರವು ಸಂಬಂಧವಾಗಿ ಒಪ್ಪಂದವನ್ನೂ ಮಾಡಿಕೊಂಡಿದೆ. ಆದರೆ ಚೀನಾ 'ರಾಷ್ಟ್ರ'ದ್ದು ಅಂತಿಂಥ ಅಪ್ಪುಗೆಯಲ್ಲ, ಅದು 'ಧೃತರಾಷ್ಟ್ರ ಆಲಿಂಗನ' ಎಂಬುದು ಮಾಲ್ಡೀವ್ಸ್‌ಗೆ ಅರ್ಥವಾಗೋದು ಯಾವಾಗ?!

ಸಂವಹನ: ಆಡುಭಾಷೆ-ದೇಹಭಾಷೆಗಳ ರಸಪಾಕ

ನಿಜಕೌಶಲ

ಪ್ರೊ. ಆರ್.ಜಿ.ಹೆಗಡೆ
vveditoped@gmail.com

ಸಂವಹನ ಕಲೆ ಅಥವಾ 'ಕಮ್ಯುನಿಕೇಷನ್ ಸ್ಕಿಲ್' ಎಂದರೇನು, ಅದರ ಮಹತ್ವವೇನು, ಅದರ ಮೇಲೆ ಹೇಗೆ ಪ್ರಭುತ್ವ ಸಾಧಿಸಬೇಕು ಇತ್ಯಾದಿಗಳನ್ನು ತಿಳಿದುಕೊಳ್ಳುವುದಕ್ಕೂ ಮೊದಲು, ಹಾಗೆಂದರೆ ಏನು ಅಲ್ಲ ಎಂಬುದನ್ನು ಅರಿಯಬೇಕು. ಏಕೆಂದರೆ ಈ ಕೌಶಲದ ಕುರಿತು ಸುಶಿಕ್ಷಿತ ಸಮಾಜಕ್ಕೆ ಕೂಡ ತಪ್ಪು ಗ್ರಹಿಕೆಗಳು ಇದ್ದಂತಿವೆ. ಅಂಥ ಕೆಲವು ಹೀಗಿವೆ: ಸಂವಹನ ಕಲೆ ಎಂದರೆ ದಟ್ಟವಾಗಿ ಲಿಪ್‌ಸ್ಟಿಕ್ ಹಚ್ಚಿಕೊಂಡು, ಕೋಟು-ಟೈ ಧರಿಸಿ, ಕೃತಕ ಹಾವಭಾವ ಮಾಡುತ್ತಾ, ಗುಡ್-ಮಾರ್ನಿಂಗ್, ಗುಡ್-ಈವ್ನಿಂಗ್ ಎನ್ನುತ್ತ ಚಟಪಟನೆ ಮಾತನಾಡುವುದು; ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರೇರೇಪಿತವಾದ ಮಾತು ಮತ್ತು ವರ್ತನೆ; ಮಾರಾಟದ ಕಸುಬಿನ ಕಲೆ; ಹೃದಯರಹಿತ ಪ್ರಕ್ರಿಯೆ; ಸುಳ್ಳು ಹೇಳುವ ಕಲೆ; ಆಕ್ರಮಣಕಾರಿ ಮನೋಭಾವದ, ತನ್ನ ಮಾತನ್ನೇ ಕೇಳಿ ಎನ್ನುವ ರೀತಿಯ ಮಾತಿನ ವಿಧಾನ -ಹೀಗೆ ಗ್ರಹಿಕೆಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ನಿಜ ಸಂಗತಿಯೆಂದರೆ ಇದು ಸಂವಹನ ಅಲ್ಲ.

ಸಂವಹನ ಕಲೆಯ ಕುರಿತು ತಕರಾರುಗಳೂ ಇವೆ. ನಮಗೆ ಮಾತನಾಡಲು ಬರುವುದಿಲ್ಲವೇ? ಅದನ್ನು ಬೇರೆಯವರು ಕಲಿಸಬೇಕೇ? ಹೇಳುವುದನ್ನು ನೇರವಾಗಿ ಹೇಳಿದರಾಯಿತು, ಮತ್ತೇನು? ಸುತ್ತುಬಳಸಿ ಹೇಳುವುದೇಕೆ? ಎಂಬ ಪ್ರಶ್ನೆಗಳೂ ಈ ತಕರಾರುಗಳಲ್ಲುಂಟು. 'ಈ ಸಂವಹನ ಕಲೆಯೆಂಬುದು ಅಪ್ರಾಮಾಣಿಕತೆಯ ವ್ಯವಹಾರ; ಡಿಪ್ಲೊಮ್ಯಾಟಿಕ್ ಆಗಿ, ನಾಜೂಕಾಗಿ ಮಾತನಾಡುವವರು ಹಲವೊಮ್ಮೆ ಆಂತರ್ಯದಲ್ಲಿ ಕಳ್ಳರೂ, ದಗಾಕೋರರೂ ಆಗಿರುತ್ತಾರೆ' ಎಂಬ ಅಭಿಪ್ರಾಯವೂ ಇದರಲ್ಲಿ ಸೇರಿದೆ. ಮತ್ತೊಂದೆಡೆ, 'ಸಂವಹನ ಕಲೆ ಕೇವಲ ತೆಳುಮಾತು; ಅದರ ಮೂಲಕ ಗಂಭೀರವಾದದ್ದನ್ನು, ಆಳವಾದದ್ದನ್ನು, ಉನ್ನತ ವಿಚಾರಗಳನ್ನು ಹೇಳಲಾಗುವುದಿಲ್ಲ' ಎಂಬ ವಾದವೂ ಇದೆ.

ಇಂಥ ತಕರಾರುಗಳು, ದೂರುಗಳೆಲ್ಲ ಸಂವಹನ ಕೌಶಲದ ಕುರಿತ ತಿಳಿವಳಿಕೆಯ ಕೊರತೆಯಿಂದ ಹೊಮ್ಮಿದಂಥವು. ಏಕೆಂದರೆ, ಸಂವಹನ ಎಂದರೆ ಕೇವಲ ಮಾತಲ್ಲ; ಕೇಳುವುದೂ ಅದರಲ್ಲಿ ಮಹತ್ವದ ಭಾಗ. ಸಂವಹನ ಕೌಶಲವನ್ನು ಬಳಸಿ ಗಂಭೀರ ವಿಷಯಗಳನ್ನು ಹೇಳಲಾಗುವುದಿಲ್ಲ ಎಂಬುದೂ ತಪ್ಪು ಕಲ್ಪನೆ. ಆ ಕುರಿತು ಮುಂದೆ ಹೇಳುವೆ.

ಸರಳವಾಗಿ ಹೇಳುವುದಾದರೆ, ಸಂವಹನ ಕೌಶಲ ಎಂಬುದು ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು, ಇನ್ನೊಬ್ಬ ವ್ಯಕ್ತಿ ಅಥವಾ ಇನ್ನೊಂದು ಗುಂಪಿಗೆ ಒಂದು ಸಂದೇಶವನ್ನು ಸಲೀಸಾಗಿ, ಸಂಪೂರ್ಣವಾಗಿ, ಅವರು ಅರ್ಥಮಾಡಿಕೊಳ್ಳಬಲ್ಲಂತೆ/ಅರ್ಥಮಾಡಿಕೊಳ್ಳಬೇಕಾದಂತೆ ತಿಳಿಸಬಲ್ಲ ಒಂದು ಪ್ರಕ್ರಿಯೆ. ಇದು ಆಳವಾಗಿ, ಸಮಗ್ರವಾಗಿ ಗ್ರಹಿಸಬಲ್ಲ, ಪರಸ್ಪರ ಅನುಭೂತಿ ಸಾಧಿಸಬಲ್ಲ ಚಟುವಟಿಕೆ; ಗೆಳೆತನವನ್ನು, ಭಾವನೆಗಳನ್ನು ಹಂಚಿಕೊಳ್ಳಬಲ್ಲ ಕ್ರಿಯೆ; ವ್ಯಕ್ತಿಗಳ ಜತೆ, ಸುತ್ತಲಿನ ಸಮಾಜದ ಜತೆ ಹಾಗೂ ವಿಶಾಲ ಮನುಕುಲದ ಜತೆ ಆಳವಾದ ಸಂಬಂಧವನ್ನು ಬೆಳೆಸಿಕೊಳ್ಳುವ-ಉಳಿಸಿಕೊಳ್ಳುವ ಕ್ರಿಯೆ. 'ವ್ಯಕ್ತಿ ವ್ಯಕ್ತಿಗಳ ನಡುವಿನ, ಸಮಾಜದ ನಡುವಿನ ವ್ಯವಹಾರದಲ್ಲಿ ಸಂಬಂಧ ಮತ್ತು ವಿಶ್ವಾಸದ ಅಭಿವೃದ್ಧಿಯೇ ಎಲ್ಲಕ್ಕಿಂತಲೂ ಮುಖ್ಯವಾದುದು; ಉಳಿದೆಲ್ಲವೂ ನಗಣ್ಯ ವಿಷಯಗಳು' ಎಂಬ ಉದ್ಯಮಿ ಧೀರೂಬಾಯಿ ಅಂಬಾನಿ ಅವರ ಮಾತು ಇಲ್ಲಿ ಉಲ್ಲೇಖನೀಯ. ಸಂಬಂಧಗಳು ಆಳವಾದಂತೆ ಸಂತೋಷವು ಮನಸ್ಸನ್ನು ತುಂಬಿಕೊಳ್ಳುತ್ತಾ ಹೋಗುತ್ತದೆ. ವ್ಯಾವಹಾರಿಕವಾಗಿಯೂ ಬದುಕು ಸರಾಗವಾಗುತ್ತದೆ, ಜನರು ಸಹಾಯಕ್ಕೆ ನಿಲ್ಲುತ್ತಾರೆ. ಜತೆಯಲ್ಲಿ ನಗುತ್ತಾರೆ, ಅಳುತ್ತಾರೆ, ಪ್ರೀತಿಸುತ್ತಾರೆ. ಸಂವಹನ ಬಲ್ಲ ವ್ಯಕ್ತಿಯು ಬೇರೆಯವರ ಅರಿವಿಗೇ ಬಾರದಂತೆ ತನ್ನ ಸಮುದಾಯದ ನಾಯಕನಾಗಿಬಿಡುತ್ತಾನೆ.

ಒಟ್ಟಾರೆ ಹೇಳುವುದಾದರೆ, ಹೇಳುಗ ಮತ್ತು ಕೇಳುಗನ ನಡುವೆ ಆಳವಾದ ಮಾನಸಿಕ ಬಾಂಧವ್ಯದ ಸೇತುವೆ ಕಟ್ಟುವುದು ಸಂವಹನ ಕೌಶಲದ ಉದ್ದೇಶ. ಸರಳವೆನಿಸುವ ಸಂವಹನವು ಸಂಕೀರ್ಣವಾಗುವುದೇ ಇಲ್ಲಿ. ಏಕೆಂದರೆ, ಇಲ್ಲಿ ಹಲವು ವಿಷಯಗಳು ಬಂದುಬಿಡುತ್ತವೆ. ತಾನು ಏನನ್ನು ಹೇಳಬೇಕಿದೆ, ಹೇಗೆ ಹೇಳಬೇಕಿದೆ ಎನ್ನುವುದರ ಕುರಿತು ಹೇಳುವವನಿಗೆ ಮೊದಲು ಸ್ಪಷ್ಟತೆ ಇರಬೇಕು. ವಿಷಯವನ್ನು ಚಿಕ್ಕದಾಗಿ ಅಥವಾ ಸವಿಸ್ತಾರವಾಗಿ, ಧ್ವನಿಯನ್ನು ಎಷ್ಟು ಎತ್ತರಿಸಿ ಅಥವಾ ಕುಗ್ಗಿಸಿ ಹೇಳುವುದು, ವಾಕ್ಯದಲ್ಲಿ ವಿರಾಮ ಚಿಹ್ನೆಗಳನ್ನು ನೀಡುವುದು ಹೇಗೆ? ಸಂದೇಶದ ಯಾವ ಭಾಗಕ್ಕೆ ಒತ್ತುಕೊಟ್ಟು ಹೇಳಬೇಕು? ಆಗ ದೇಹಭಾಷೆ ಹೇಗಿರಬೇಕು? ಎಂಬುದೆಲ್ಲಾ ಆತನಿಗೆ ಅರಿವಿರಬೇಕು. ವಿಷಯ ಹೇಳಿ ಮುಗಿದ ನಂತರ ಆತನಿಗೆ, ಕೇಳುಗನ ಪ್ರತಿಕ್ರಿಯೆಯ ಕಡೆ ಲಕ್ಷ್ಯವಿರಬೇಕು. ಕೇಳುಗನ ಹಿನ್ನೆಲೆ, ಮನಸ್ಸು, ಸಂಸ್ಕೃತಿ, ತಾನು ಮಾತಾಡುತ್ತಿರುವ ಸಮಯ-ಸಂದರ್ಭ ಇತ್ಯಾದಿಗಳು ತಿಳಿದಿರಬೇಕು. ಇವೆಲ್ಲದರ ಫಲವಾದ ಸಂವಹನಕ್ಕೆ ಬೆಂಕಿಯಂಥ ಶಕ್ತಿ ಇರುತ್ತದೆ. ಈ ಶಕ್ತಿಯು ಸಂವಹನದಲ್ಲಿ ತೊಡಗಿಕೊಂಡವರನ್ನು ಆಳವಾಗಿ ಹುರಿದುಂಬಿಸುತ್ತದೆ, ಪ್ರಚೋದಿಸುತ್ತದೆ. ಕುರುಕ್ಷೇತ್ರ ಯುದ್ಧದ ವೇಳೆ ಶಸ್ತ್ರಗಳನ್ನು ಕೈಚೆಲ್ಲಿ ಕೂತಿದ್ದ ಅರ್ಜುನನು ಶ್ರೀಕೃಷ್ಣನಿಂದ ಭಗವದ್ಗೀತೆ ಯನ್ನು ಕೇಳಿದ ನಂತರ ಯುದ್ಧದಲ್ಲಿ ತೊಡಗಿಸಿ ಕೊಂಡಿದ್ದು ಹೀಗೆಯೇ. ಸಂವಹನಕ್ಕೆ ಸಾಂತ್ವನ ಹೇಳುವ, ಉಲ್ಲಾಸಗೊಳಿಸುವ, ಮನರಂಜಿಸುವ ಶಕ್ತಿಯಿದೆ, ಸಹಾಯ ಕೇಳುವ/ಪಡೆದುಕೊಳ್ಳುವ, ಕೆಲಸ ಮಾಡಿಸುವ ವ್ಯಾವಹಾರಿಕ ಚಾಕಚಕ್ಯತೆಯೂ ಇದರಲ್ಲಿ ಅಡಗಿದೆ. ಆದರೆ ಒಂದು ವಿಷಯ-ಸಂವಹನಕಾರನ ಪ್ರಾಮಾಣಿಕತೆ ಇಲ್ಲಿ ಮುಖ್ಯವಾಗಿರುತ್ತದೆ. ಆತ ಸುಳ್ಳುಗಾರ/ಮೋಸಗಾರ ಆಗಿರಬಾರದು. ಏಕೆಂದರೆ, ಸಂವಹಿಸುವ ವ್ಯಕ್ತಿ ಎಷ್ಟೇ ಚಂದದ ಮಾತನಾಡಿದರೂ, ಆತ ಸುಳ್ಳುಗಾರ/ಮೋಸಗಾರ ಎಂಬುದು ಕೇಳುಗನಿಗೆ ಗೊತ್ತಾದರೆ, ಅಂಥವನ ಮಾತಿನ ಮೇಲೆ ಯಾರೂ ವಿಶ್ವಾಸವಿಡುವುದಿಲ್ಲ. ಅಂಥವನ ಸಂವಹನ ವಿಫಲವಾಗಿಬಿಡುತ್ತದೆ.

ಸಂವಹನ ಸಾಮರ್ಥ್ಯವು ವಿರಾಟ್ ಸ್ವರೂಪವನ್ನು ತಳೆಯುತ್ತಿದ್ದಂತೆ ವ್ಯಕ್ತಿ ಮಹಾನಾಯಕನಾಗುತ್ತಾನೆ. ಬೃಹತ್ ಮನುಕುಲದೊಂದಿಗೇ ಸಂವಹಿಸುವ ಕಲೆ ಅವನಿಗೆ ಸಿದ್ಧಿಸುತ್ತದೆ. ಇಂದಿರಾ ಗಾಂಧಿ, ವಾಜಪೇಯಿ, ರಾಮಕೃಷ್ಣ ಹೆಗಡೆ ಮುಂತಾದ ಜನನಾಯಕರ ಜನಪ್ರಿಯತೆಯ ಗುಟ್ಟು ಇದು. ಆದರೆ, ಸಂವಹನ ಕೌಶಲವೆಂಬುದು ಎಲ್ಲರನ್ನೂ ಒಂದೇ ರೀತಿಯಲ್ಲಿ ಮಾತನಾಡುವಂತೆ ಸಿದ್ಧಪಡಿಸುವ ಇಟ್ಟಿಗೆಯ ಭಟ್ಟಿ ಅಲ್ಲ; ಸಂವಹನಕಾರನೊಬ್ಬ ತನ್ನ ಒಳವ್ಯಕ್ತಿತ್ವ, ವಿಶಿಷ್ಟ ಭಾಷಾವಿಧಾನ, ಶೈಲಿಯನ್ನು ಇಟ್ಟುಕೊಂಡೇ ಬೆಳೆಯಬೇಕಾಗುತ್ತದೆ; ಬದಲಿಗೆ, ಅನುಕರಿಸುವ ವ್ಯಕ್ತಿ ಸೋಲುತ್ತಾನೆ. ಸಂವಹನಕಾರನ ಶೈಲಿಯು ಮೂಲತಃ ಅವನ

ಉದ್ದೇಶದಿಂದ ನಿರೂಪಿತವಾಗಿರುತ್ತದೆ. ಉದಾಹರಣೆಗೆ, ಗಾಂಧೀಜಿ ಶಾಂತಿದೂತರಾಗಿದ್ದರು. ಹಾಗಾಗಿ ಅವರ ಭಾಷೆ, ದನಿ ಹಾಗೂ ವ್ಯಕ್ತಿತ್ವದಲ್ಲಿ ಶಾಂತಿಯು ತುಂಬಿ ತುಳುಕುತ್ತಿತ್ತು. ಅವರು 'ಪ್ರಚಂಡ' ಮಾತುಗಾರರಾಗಿರಲಿಲ್ಲ. ಆಡುಭಾಷೆ- ದೇಹಭಾಷೆಯನ್ನು ಅವರು ಉದ್ವೇಗಕಾರಿಯಾಗಿ ಬಳಸುತ್ತಲೇ ಇರಲಿಲ್ಲ. ಆದರೆ ಯುದ್ಧಕ್ಕೆ ಪ್ರೇರೇಪಿಸುವುದು, ತನ್ನ ಜನರನ್ನು ಹುರಿದುಂಬಿಸುವುದು ಹಿಟ್ಲರ್‌ನ ಗುರಿಯಾಗಿತ್ತು; ಹಾಗಾಗಿ ಆತ ಆಡುಭಾಷೆ-ದೇಹಭಾಷೆಗಳನ್ನು ವಿಪರೀತ ಸ್ತರದಲ್ಲಿ ಬಳಸುತ್ತಿದ್ದ. ಗಾಂಧಿ ಮತ್ತು ಹಿಟ್ಲರ್ ಒಂದೇ ಕಾಲಘಟ್ಟದಲ್ಲಿದ್ದವರು, ಇಬ್ಬರೂ ತಮ್ಮದೇ ನೆಲೆಯಲ್ಲಿ ಮಹಾನಾಯಕರು, ಕೋಟ್ಯಂತರ ಜನರಿಗೆ ಆರಾಧ್ಯದೈವವಾದವರು. ಆದರೆ ತಮ್ಮ ಸಂವಹನ ಕೌಶಲವನ್ನು ಅವರು ಬಳಸಿದ್ದು ಬೇರೆ ಬೇರೆ ಉದ್ದೇಶಗಳಿಗೆ. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡರೆ, ಸಂವಹನ ಕೌಶಲದ ಹಲವು ಸೂಕ್ಷ್ಮಗಳು ಅರಿವಾಗುತ್ತವೆ.

ಸಂವಹನ ಕೌಶಲದಲ್ಲಿ ವ್ಯಕ್ತಿಗಳ ನಡುವಿನ ಸಂವಹನ, ಗುಂಪು ಸಂವಹನ ಮತ್ತು ಸಾರ್ವಜನಿಕ ಸಂವಹನ ಎಂಬ ವಿಧಗಳಿವೆ ಹಾಗೂ ಆಡುಭಾಷೆ-ದೇಹಭಾಷೆ-ಕೃತಿ ಎಂಬ ಪ್ರಬಲ ಮಾಧ್ಯಮಗಳಿವೆ. ಸಂವಹನದಲ್ಲಿ ಭಾಷೆಯೇ ಎಲ್ಲವೂ ಅಲ್ಲ; ಅಧ್ಯಯನಗಳ ಪ್ರಕಾರ ಒಟ್ಟಾರೆ ಸಂವಹನದಲ್ಲಿ ಅದರ ಪಾತ್ರ ಶೇ.15ರಷ್ಟು ಮಾತ್ರ. ಆದ್ದರಿಂದ, ಸಂವಹನದಲ್ಲಿ ದೇಹಭಾಷೆ, ಚಹರೆ, ಕೃತಿಗಳು ಮಹತ್ತರ ಪಾತ್ರ ವಹಿಸುತ್ತವೆ. ಎದುರಿನವರೊಂದಿಗೆ ಸಂವಹಿಸುವಾಗ ನಮ್ಮ ಬಾಯಿ ಮಾತ್ರವಲ್ಲದೆ, ಕಣ್ಣುಗಳು, ಹುಬ್ಬು, ತುಟಿ, ಕೈಕಾಲುಗಳು ಹೀಗೆ ಶರೀರದ ವಿವಿಧ ಅಂಗಗಳು ಮಾತನಾಡುತ್ತಿರುತ್ತವೆ, ನಮ್ಮ ಮನಸ್ಸಿನ ಮಾತನ್ನು ಅಭಿವ್ಯಕ್ತಿಸುತ್ತಿರುತ್ತವೆ. ಧ್ವನಿಯ ಏರಿಳಿತಕ್ಕೂ ಒಂದು ಭಾಷೆಯಿದ್ದು, ಅದು ಕೂಡ ವಿಷಯಗಳನ್ನು ಹೇಳಿಬಿಡುತ್ತದೆ. ನಮ್ಮ ಮನದಾಳದ ಸಂತಸ, ದುಃಖ ಇತ್ಯಾದಿ ಭಾವನೆಗಳೆಲ್ಲವೂ ಆ ಮೂಲಕ ಮತ್ತೊಬ್ಬರಿಗೆ ಅರ್ಥವಾಗಿಬಿಡುತ್ತವೆ. ಬಹಳ ಸತ್ವಯುತ ಭಾಷೆಯಾಗಿರುವ 'ಕೃತಿ'ಯ ಮೂಲಕವೂ ನಮ್ಮ ಸಂದೇಶ ಮತ್ತು ಭಾವನೆಗಳು ಬೇರೆಯವರಿಗೆ ಅರ್ಥವಾಗಿಬಿಡುತ್ತವೆ; ಇಂದಿನ ಕೆಲ ರಾಜಕಾರಣಿಗಳ ಮಾತು ಟೊಳ್ಳು ಎಂದು ನಮಗೆ ಗೊತ್ತಾಗಲು ಕಾರಣ, ಮಾತಿನ ಜತೆಗೆ 'ಕೃತಿ' ಇಲ್ಲದಿರುವುದು.

ಆಡುಭಾಷೆ-ದೇಹಭಾಷೆ-ಕೃತಿ ಇವು ಒಂದು ಹದವಾಗಿ ಬೆರೆತು ರಸಾಯನವಾದಾಗ ಅದ್ಭುತ ಶಕ್ತಿ ಸೃಷ್ಟಿಯಾಗುತ್ತದೆ. ಅದುವೇ ನಿಜವಾದ ಸಂವಹನ ಕೌಶಲ. ಇಂಥ ಕಲೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಬಯಸುವವನು ಈ ಮೂರೂ ಅಂಶಗಳನ್ನು ಸತತವಾಗಿ ಶ್ರೇಷ್ಠಮಟ್ಟದಲ್ಲಿ ಒಗ್ಗೂಡಿಸಿಟ್ಟುಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ತನ್ನಿಡೀ ವ್ಯಕ್ತಿತ್ವವನ್ನು ಮಾರ್ಪಡಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಸದಾಕಾಲ ಎಚ್ಚರಿಕೆಯಿಂದಿದ್ದು ಮಾತು-ವ್ಯಕ್ತಿತ್ವ-ಕೃತಿಗಳಲ್ಲಿ ಸ್ವಚ್ಛತೆ, ಘನತೆ ಮತ್ತು ಶ್ರೇಷ್ಠತೆಯನ್ನು ಕಾಪಾಡಿಕೊಂಡು ಹೋಗಬೇಕಾಗುತ್ತದೆ. ಇಂಥವರಿಗೆ ಸಂವಹನ ಕಲೆ ಸಿದ್ಧಿಸುತ್ತದೆ. ಇದನ್ನು ಅರಿತಿದ್ದ ಗಾಂಧೀಜಿಯವರು ತಮ್ಮ ಮಾತು-ದೇಹಭಾಷೆ-ಕೃತಿಗಳನ್ನು ಎಚ್ಚರದಿಂದ ನೋಡಿಕೊಳ್ಳುತ್ತಿದ್ದರು. ಹಾಗಾಗಿ ಅವರು ಉಪವಾಸ ಕೂತಿದ್ದು ಕೂಡ ಒಂದು ಭಾಷೆಯಾಗಿ ವಿಷಯಗಳನ್ನು ಜನರಿಗೆ ಹೇಳಿತು. ಅವರ ಸರಳತೆ, ನಡಿಗೆ, ನೂಲು ತೆಗೆಯುವಿಕೆ ಎಲ್ಲವೂ ಭಾಷೆಗಳಾಗಿ ಜನರಿಗೆ ವಿವಿಧ ವಿಷಯಗಳನ್ನು ಬಲವಾಗಿ ಹೇಳಿದವು. ಬರೀ ಮಾತಾಡಿದ್ದರೆ ಪ್ರಾಯಶಃ ಗಾಂಧಿಯವರು ಜೊಳ್ಳಾಗಿ ಹೋಗುತ್ತಿದ್ದರು; ಹೀಗಾಗಿ ಮಾತು ಮತ್ತು ಕೃತಿಗಳ ನಡುವೆ ಅವರು ಸಮನ್ವಯ ಸಾಧಿಸಿ, ಒಂದು ಶ್ರೇಷ್ಠ ವ್ಯಕ್ತಿತ್ವವಾಗಿ ಹೋದರು. ಆಗ ಲಕ್ಷಾಂತರ ಜನರು ಅವರನ್ನು ನಂಬುವಂತಾಯಿತು. ಹಿಟ್ಲರ್ ಬಳಿಯಲ್ಲೂ ಸಂವಹನ ಕೌಶಲವಿತ್ತು, ಆದರೆ ಅದನ್ನು ಆತ ದುರುಪಯೋಗಪಡಿಸಿಕೊಂಡ. ಕೆಲವರು ಎಷ್ಟೇ ಚಂದವಾಗಿ ಮಾತನಾಡಿದರೂ ಯಾರೂ ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ; ಏಕೆಂದರೆ, ಅವರ ಮಾತು ಮತ್ತು ಕೃತಿಗಳ ನಡುವೆ ಅಗಾಧ ವ್ಯತ್ಯಾಸವಿರುತ್ತದೆ. ಆದ್ದರಿಂದ, ಏನು ಹೇಳುತ್ತೇವೋ ಅದನ್ನೇ ಮಾಡುವುದು ಮತ್ತು ಏನು ಮಾಡುತ್ತೇವೆಯೋ ಅದನ್ನಷ್ಟೇ ಹೇಳುವುದು ಸಂವಹನ ಕ್ಷೇತ್ರದಲ್ಲಿ ಬಹು ಮುಖ್ಯ.

(ಲೇಖಕರು ನಿವೃತ್ತ ಪ್ರಾಂಶುಪಾಲರು ಮತ್ತು ಸಂವಹನಾ ಸಮಾಲೋಚಕರು)

ಇವರು ಕೂಡ ಗುರುಗಳೇ, ಗುಲಾಮರಂತೆ ಇದ್ದಾರಷ್ಟೇ!

ಒಡಲಾಳ

ಡಾ. ಸುಧಾಕರ ಹೊಸಳ್ಳಿ
vveditoped@gmail.com

ಸೆಪ್ಟೆಂಬರ್ ತಿಂಗಳು ತನ್ನದೇ ಆದ ಒಂದಷ್ಟು ವಿಶೇಷತೆಗಳನ್ನು ಹೊಂದಿದೆ. ಶಿಕ್ಷಕರ ದಿನಾಚರಣೆ ಅವುಗಳಲ್ಲೊಂದು. ಅಂತೆಯೇ ಇತ್ತೀಚೆಗೆ ಶಿಕ್ಷಕರ ದಿನಾಚರಣೆ ಮುಗಿದುಹೋಯಿತು, ಶಿಕ್ಷಕರು/ಗುರುಗಳು ಸಂಭ್ರಮಿಸಿದರು. ಆದರೆ ಕೆಲ ತಿಂಗಳ ಹಿಂದೆ ಬದುಕಿಗೆ ವಿದಾಯ ಹೇಳಿದ ಚೆಲುವರಾಜು ಎಂಬ ಅತಿಥಿ ಉಪನ್ಯಾಸಕರು ಶಿಕ್ಷಕರ ದಿನವನ್ನು ಮತ್ತೆ ನೆನಪು ಮಾಡುತ್ತಿದ್ದಾರೆ, ಆ ದಿವಸ ಕಹಿಯಾಗಿ ಕಾಡುತ್ತಿದೆ, ಆರ್ತನಾದದ ಭಾವವನ್ನು ಮೂಡಿಸುತ್ತಿದೆ.

ಶಿಕ್ಷಕರ ದಿನಾಚರಣೆಯಂದು ಶೈಕ್ಷಣಿಕ ವಲಯವಷ್ಟೇ ಅಲ್ಲದೆ, ಸಾಧಕರೆಲ್ಲರೂ ತಂತಮ್ಮ ಗುರುಗಳನ್ನು ಹೃದಯಪೂರ್ವಕವಾಗಿ ನೆನೆದು ಸಂಭ್ರಮಿಸುವುದಿದೆ. ತಾವು ಬದುಕು ಕಟ್ಟಿಕೊಳ್ಳುವುದಕ್ಕೆ ಮತ್ತು ತಮ್ಮಿಂದ ಸಾಧನೆ ಹೊಮ್ಮುವುದಕ್ಕೆ ಶಿಕ್ಷಕರು ವಿವಿಧ ಹಂತಗಳಲ್ಲಿ ಒತ್ತಾಸೆಯಾಗಿ ನಿಂತು ಭದ್ರಬುನಾದಿ ಹಾಕಿದ್ದೇ ಕಾರಣ ಎಂದು ಈ ಸಾಧಕರು ಹೇಳಿಕೊಳ್ಳುವುದಕ್ಕೆ ಈ ಸಂದರ್ಭ ಸಾಕ್ಷಿಯಾಗುತ್ತದೆ. ಸರಕಾರಿ ಮಟ್ಟದಲ್ಲಿ ಅಭಿನಂದನಾ ಸಮಾರಂಭಗಳು, 'ಉತ್ತಮ ಶಿಕ್ಷಕ' ಪ್ರಶಸ್ತಿಗಳ ಪ್ರಕಟಣೆ ಮತ್ತು ಪ್ರದಾನ ನಡೆಯುತ್ತವೆ. ವಿವಿಧ ಸಂಘ-ಸಂಸ್ಥೆಗಳು ಅನೇಕಾನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ಶಿಕ್ಷಕರನ್ನು ಸ್ಮರಿಸುತ್ತವೆ, ಸತ್ಕರಿಸುತ್ತವೆ. ಶಾಲಾ-ಕಾಲೇಜುಗಳಲ್ಲಂತೂ ವಿದ್ಯಾರ್ಥಿಗಳು ಶಿಕ್ಷಕರನ್ನು ಭಿನ್ನಮಜಲುಗಳಲ್ಲಿ ಗೌರವಿಸಿ ಸಂಭ್ರಮಿಸುತ್ತಾರೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಭಾವ ಸಮಾಜದಲ್ಲೂ ಮೂಡುತ್ತದೆ.

ಇಷ್ಟೆಲ್ಲ ಸಂಭ್ರಮಗಳ ನಡುವೆಯೂ ಒಂದು ವರ್ಗವು ಸೂತಕದ ಭಾವವನ್ನು ಹೊಂದಿರುತ್ತದೆ- ಅದುವೇ 'ಅತಿಥಿ ಉಪನ್ಯಾಸಕರು' ಎಂಬ ಹಣೆಪಟ್ಟಿಯ ನತದೃಷ್ಟರ ಗುಂಪು. ಮೊನ್ನೆ ಸ್ನೇಹಿತರೊಬ್ಬರು ಕರೆಮಾಡಿ, 'ಅತಿಥಿ ಉಪನ್ಯಾಸಕ ನರಸಿಂಹಣ್ಣ ತೀರಿಹೋದ' ಎಂದು ಹೇಳಿದಾಗ ನನಗೆ ಅಪಾರ ನೋವಾಯಿತು. ಅದಾಗಿಯೂ ಅಚ್ಚರಿಯೇನೂ ಆಗಲಿಲ್ಲ. ಕಾರಣ, ಅತಿಥಿ ಉಪನ್ಯಾಸಕರು ಪ್ರತಿದಿನ ಮಾನಸಿಕವಾಗಿ ಸಾಯುತ್ತಲೇ ಇರುತ್ತಾರೆ; ಅಂದು ಮಾತ್ರ ನರಸಿಂಹಣ್ಣನ ಭೌತಿಕ ಸಾವು ಆಗಿತ್ತಷ್ಟೇ! ಸತ್ತುಹೋದ ನರಸಿಂಹ ಸ್ವಾಮಿ ಸಾಮಾನ್ಯರಾಗಿರಲಿಲ್ಲ; ಎಂಎ, ಎಂಫಿಲ್, ಪಿಎಚ್‌ಡಿ ಮಾಡಿಕೊಂಡು 20 ವರ್ಷಕ್ಕೂ ಹೆಚ್ಚು ಕಾಲ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ತ್ಯಾಗಿ, ಸಂಘಟಕರು ಮತ್ತು ಹೋರಾಟಗಾರರು. ಸಾವಿರಾರು ವಿದ್ಯಾರ್ಥಿಗಳಿಗೆ ಬದುಕು ಕಟ್ಟಿಕೊಟ್ಟ ಈ ಶಿಕ್ಷಕರು ಅಂದು ಅಸುನೀಗಿದಾಗ ಪ್ರಾಯಶಃ ಅವರೊಂದಿಗೆ ಸಾಗಿದ್ದು ಒಂದಷ್ಟು ನೆನಪುಗಳು ಮಾತ್ರ. ಕಾರಣ ಅವರು ಬದುಕಿದ್ದಾಗಲೂ ವೃತ್ತಿ ಭದ್ರತೆ, ಆಧಾರ ಇರಲಿಲ್ಲ. ಮಣ್ಣೊಳಗೆ ಸೇರುವಾಗಲೂ ಅಭದ್ರತೆಯನ್ನೇ ಹೊದ್ದು ಮಲಗಿದ್ದರು. ಹೆಲ್ತ್ ಇಲ್ಲ, ಹೆಲ್ತ್ ಇನ್ಶೂರೆನ್ಸ್ ಇಲ್ಲ. ಪಿಂಚಣಿಯೂ ಇಲ್ಲ, ನವಪಿಂಚಣಿಗೂ ಸೇರಲಿಲ್ಲ. ಸಾಕಷ್ಟು ಓದಿದ್ದರೂ, ಪದವಿ ಇದ್ದರೂ ಅವಿದ್ಯಾವಂತರಂತೆಯೇ ದಿನದೂಡಬೇಕಾಯಿತು!

ಹೌದು, ತಾನು ದಕ್ಕಿಸಿಕೊಂಡಿರುವ ಉನ್ನತ ಜ್ಞಾನದ ಮೂಲಕ ವಿದ್ಯಾರ್ಥಿಗಳ ಬದುಕಿಗೆ ಆಸರೆಯಾಗುವ ಅತಿಥಿ ಉಪನ್ಯಾಸಕ, ಸೆಪ್ಟೆಂಬರ್ 5ರಂದು ಹೆಮ್ಮೆ ಪಡುವಂತೆಯೂ ಇಲ್ಲ, 'ನಾನು ಶಿಕ್ಷಕನಲ್ಲ' ಎಂದು ಹೇಳಿಕೊಳ್ಳುವ ಸ್ಥಿತಿಯಲ್ಲೂ ಇರುವುದಿಲ್ಲ. ವರ್ಷದಲ್ಲಿ 10 ತಿಂಗಳ ಕಾಲ ಮೇಷ್ಟ್ರು ಎನಿಸಿಕೊಂಡರೆ, 2 ತಿಂಗಳ ಕಾಲ ಕಟ್ಟಡ ಕಾರ್ಮಿಕ, ಕಬ್ಬು ಕಡಿಯುವವ, ಮೂಟೆ ಹೊರುವವ, ಸೊಪ್ಪು ಮಾರುವವ ಇತ್ಯಾದಿ ಪಾರ್ಟ್‌ಟೈಮ್ ಕೆಲಸಗಾರನ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕಾದ ಅನಿವಾರ್ಯತೆ ಆತನದ್ದು. ಅತಿಥಿ ಉಪನ್ಯಾಸಕರು ಪಾಠ ಮಾಡುತ್ತಾರೆ, ಮೌಲ್ಯಮಾಪನದಲ್ಲಿ ತೊಡಗಿಸಿಕೊಳ್ಳುತ್ತಾರೆ, ಪ್ರಶ್ನೆಪತ್ರಿಕೆ ಸಿದ್ಧಪಡಿಸುತ್ತಾರೆ; ಇಷ್ಟಾಗಿಯೂ ಎರಡು ತಿಂಗಳು ಮಾತ್ರ ಶಿಕ್ಷಕರಾಗಿ ಉಳಿಯಲು ಸಾಧ್ಯವಿಲ್ಲ. ಇವರಿಗೆ ಬೆನಿಫಿಟ್ ಇಲ್ಲ, ರಿಟೈರ್‌ಮೆಂಟ್ ಇದೆ. ಕೋವಿಡ್ ಸಂದರ್ಭದಲ್ಲಂತೂ ಅನೇಕ ಅತಿಥಿ ಉಪನ್ಯಾಸಕರು ಆತ್ಮಹತ್ಯೆಗೆ ಶರಣಾದರು. ಮೇಲೆ ಉಲ್ಲೇಖಿಸಿದ ನರಸಿಂಹಣ್ಣನದ್ದು ಒಂದು ಉದಾಹರಣೆ ಅಷ್ಟೇ. ವಯೋವೃದ್ಧ ತಂದೆ-ತಾಯಿಗೆ ಸಕಾಲದಲ್ಲಿ ಮಾತ್ರೆ-ಔಷಧಿ ಕೊಡಿಸಲಾಗದ, ಅಕ್ಕ-ತಂಗಿಯರ ಜತೆ ಹಬ್ಬ ಮಾಡಲಾಗದ, ಮಗಳಿಗೆ ಬಳೆ ಕೊಡಿಸಲಾಗದ ಹತಭಾಗ್ಯರು ಬಹುತೇಕ ಅತಿಥಿ ಉಪನ್ಯಾಸಕರು.

ಇಡೀ ರಾಜ್ಯದಲ್ಲಿ ಸುಮಾರು 11 ಸಾವಿರ ಅತಿಥಿ ಉಪನ್ಯಾಸಕರಿದ್ದಾರೆ. ಕೆಲವರಿಗೆ 4 ಗಂಟೆ, ಮತ್ತೆ ಕೆಲವರಿಗೆ 8 ಗಂಟೆ, ಕೆಲವೇ ಕೆಲವರಿಗೆ 15 ಗಂಟೆ ಕೆಲಸ; 4 ಗಂಟೆಗೆ 8 ಸಾವಿರ, 8 ಗಂಟೆಗೆ 20 ಸಾವಿರ, 15 ಗಂಟೆಗೆ 40 ಸಾವಿರ ಸಂಬಳ. ಇವರು ಹೀಗೆ ದಯನೀಯವಾಗಿ ಬದುಕು ಸಾಗಿಸುತ್ತಿರುವುದು ನಮ್ಮ ವ್ಯವಸ್ಥೆಯೇ ತಲೆತಗ್ಗಿಸಬೇಕಾದಂಥ ವಿದ್ಯಮಾನ. ಪಶ್ಚಿಮ ಬಂಗಾಳ, ಹರಿಯಾಣದಂಥ ಕೆಲ ರಾಜ್ಯಗಳಲ್ಲಿ ಇವರಿಗೆ ಒಂದಷ್ಟು ಭದ್ರತೆ ಕೊಟ್ಟು ನಿರಾಳತೆ ಒದಗಿಸಲಾಗಿದೆಯಷ್ಟೇ.

ಸಮಾಜದಲ್ಲಿ ಎಲ್ಲ ವರ್ಗದ ಕಾರ್ಮಿಕ ವಲಯಕ್ಕೂ ಒಂದಿಷ್ಟು ಭದ್ರತೆ ಒದಗಿಸುವ ಕೆಲಸವಾಗುತ್ತಿದೆ, ಸಂವಿಧಾನದ ಆಶಯಗಳ ಅಡಿಯಲ್ಲಿ ಅವರಿಗೆ ಸವಲತ್ತುಗಳನ್ನು ವಿಸ್ತರಿಸಲಾಗುತ್ತದೆ. ಆದರೆ ಅತಿಥಿ ಉಪನ್ಯಾಸಕರಿಗೆ ಮಾತ್ರ ಸಂವಿಧಾನ, ನಿಯಮಗಳು, ಮಾನವೀಯತೆ ಸಹಕರಿಸುತ್ತಿಲ್ಲ. ವೃತ್ತಿಯಲ್ಲೂ 'ಅತಿಥಿ', ಬದುಕಿನಲ್ಲೂ 'ಅತಿಥಿ'ಯಾಗಿಯೇ ಏಗಬೇಕಾದ ಇವರ ಗೋಳು ಕೇಳುವವರಾರು? ಇವರ ಬಾಳಲ್ಲಿ 'ಸೆಪ್ಟೆಂಬರ್ 5' ಬರಲೇಬಾರದಾ? ಅಥವಾ ಮುಂಬರುವ ಸೆಪ್ಟೆಂಬರ್ ಇವರ ಬಾಳಲ್ಲಿ ಬೆಳಕು ತರಬಹುದಾ?

(ಲೇಖಕರು ಸಂವಿಧಾನ ತಜ್ಞರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 266

ಸಮಾಚಾರ ಸಣ್ಣದಲ್ಲ

ಇಂದು ದೆಹಲಿ ಸಿಎಂ ಆಯ್ಕೆ: ಚುನಾವಣೆ ಅವಕಾಶ ದೂರ

ದೆಹಲಿ: ಅರವಿಂದ್ ಕೇಜ್ರಿವಾಲ್ ರಾಜೀನಾಮೆ ನೀಡುವುದಾಗಿ ಘೋಷಿಸಿದ ಬಳಿಕ ಮುಂದಿನ ದೆಹಲಿ ಸಿಎಂ ಯಾರು? ಎಂಬ ಚರ್ಚೆ ಜೋರಾಗಿದೆ. ಮಂಗಳವಾರ ಬೆಳಗ್ಗೆ 11.30ಕ್ಕೆ ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆಗೆಂದೇ ಶಾಸಕಾಂಗ ಪಕ್ಷದ ಸಭೆಯನ್ನು ಕೇಜ್ರಿವಾಲ್ ಕರೆದಿದ್ದಾರೆ. ಕೇಜ್ರಿವಾಲ್ ನಿವಾಸದಲ್ಲಿ ಆಪ್ ರಾಜಕೀಯ ವ್ಯವಹಾರ ಸಮಿತಿ (ಪಿಎಸಿ) ಸದಸ್ಯರ ಸಭೆ ಸೋಮವಾರ ನಡೆದಿದೆ. ಮಂಗಳವಾರ ಸಿಎಂ ಆಯ್ಕೆ ಅಂತಿಮವಾಗಲಿದೆ ಎಂದು ಆಪ್ ನಾಯಕ ಸೌರಬ್ ಭಾರದ್ವಾಜ್ ಮಾಹಿತಿ ನೀಡಿದ್ದಾರೆ.

ಚುನಾವಣೆ ಸದ್ಯಕ್ಕಿಲ್ಲ: ನವೆಂಬರ್‌ನಲ್ಲಿ ಮಹಾರಾಷ್ಟ್ರ ವಿಧಾನಸಭೆ ನಡೆಯುವಾಗಲೇ ದೆಹಲಿ ವಿಧಾನ ಸಭೆಗೂ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಕೇಜ್ರಿವಾಲ್ ಮನವಿ ಮಾಡಿದ್ದರು. ಆದರೆ, ತುರ್ತು ಚುನಾವಣೆ ಅಗತ್ಯವಿಲ್ಲ. ಸರಕಾರ ಭದ್ರವಾಗಿಯೇ ಇದೆ ಎಂದು ಚುನಾವಣಾ ಆಯೋಗ ಪ್ರತಿಕ್ರಿಯಿಸಿದೆ. ವಿಧಾನಸಭೆ ವಿಸರ್ಜನೆಯಾದರೂ ಹಂಗಾಮಿ ಮುಖ್ಯಮಂತ್ರಿ ಮೂಲಕ ಆಡಳಿತ ನಡೆಸಬಹುದು. ದೆಹಲಿ ವಿಧಾನಸಭೆ ಚುನಾವಣೆಗೆ ಬಹಳ ಸಮಯವಿದೆ ಎಂದು ಆಯೋಗ ಹೇಳಿದೆ. ದೆಹಲಿ ವಿಧಾನಸಭೆ ಅವಧಿ 2025ರ ಫೆಬ್ರುವರಿಗೆ ಕೊನೆಗೊಳ್ಳಲಿದೆ.

ಮಣಿಪುರದಲ್ಲೀಗ ಇಂಟರ್ನೆಟ್ ಲಭ್ಯ

ಇಂಫಾಲ: ಹಿಂಸಾತ್ಮಕ ಪ್ರತಿಭಟನೆ ಸಂದರ್ಭದಲ್ಲಿ ವಿಧಿಸಲಾಗಿದ್ದ ಇಂಟರ್ನೆಟ್ ಸಂಪರ್ಕ ನಿಷೇಧ ಕ್ರಮವನ್ನು ರಾಜ್ಯ ಸರಕಾರ ಸೋಮವಾರ ತೆರವುಗೊಳಿಸಿದ್ದು, ರಾಜ್ಯದಲ್ಲೀಗ ಅಂತಾರ್ಜಾಲ ಸೇವೆ ಲಭ್ಯವಾಗುತ್ತಿದೆ. ಸದ್ಯ ಕಾನೂನು-ಸುವ್ಯವಸ್ಥೆ ನಿಯಂತ್ರಣದಲ್ಲಿರುವ ಹಿನ್ನಲೆ ಇಂಟರ್ನೆಟ್ ನಿಷೇಧ ತೆರವುಗೊಳಿಸಲಾಗಿದೆ. ಶಾಲೆಗಳ ಪುನಾರಂಭಕ್ಕೂ ಅನುಮತಿ ನೀಡಲಾಗಿದೆ. ವಿದ್ಯಾರ್ಥಿ ಸಂಘಟನೆಗಳಿಂದ ಹಿಂಸಾತ್ಮಕ ಪ್ರತಿಭಟನೆ ನಡೆದ ಹಿನ್ನೆಲೆ ಇಂಫಾಲ ಪಶ್ಚಿಮ, ಇಂಫಾಲ ಪೂರ್ವ, ತೌಬಲ್, ಬಿಷ್ಣುಪುರ್ ಮತ್ತು ಕಕ್ಚಿಂಗ್ ಭಾಗದಲ್ಲಿ 6 ದಿನಗಳ ಕಾಲ ಶಾಲೆ-ಕಾಲೇಜು ಬಂದ್ ಮಾಡಿಸಿ ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಲಾಗಿತ್ತು. ಪ್ರತಿಭಟನೆಯಲ್ಲಿ ಭದ್ರತಾ ಪಡೆಗಳಲ್ಲೂ ಹಲವರಿಗೆ ಗಾಯಗಳಾಗಿದ್ದವು.

ನಿತ್ಯ ಸ್ನಾನ ಮಾಡದ ಪತಿ, 40 ದಿನಕ್ಕೆ ವಿಚ್ಛೇದನ!

ಆಗ್ರಾ: ಉತ್ತರ ಪ್ರದೇಶದ ಆಗ್ರಾದಲ್ಲಿ ಪತ್ನಿಯೊಬ್ಬಳು ಮದುವೆಯಾದ 40 ದಿನಗಳಿಗೇ ವಿಚ್ಛೇದನಕ್ಕೆ ಮುಂದಾಗಿದ್ದಾಳೆ. ನಿತ್ಯವೂ ಸ್ನಾನ ಮಾಡದ ಗಂಡನ ಜತೆ ಬಾಳಲು ಸಾಧ್ಯವಿಲ್ಲ ಎಂದು ಮಹಿಳೆ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಾಳೆ. ಮದುವೆಯಾದ 40 ದಿನದಲ್ಲಿ ಅದೂ ಒತ್ತಾಯ ಮಾಡಿದ್ದಕ್ಕೆ ಪತಿರಾಯ 6 ಬಾರಿಯಷ್ಟೇ ಸ್ನಾನ ಮಾಡಿದ್ದಾನೆ. ಆತನ ದೇಹದಿಂದ ಬರುವ ಗಬ್ಬು ವಾಸನೆ ಸಹಿಸಲಾಗದು. ಅದೂ ಸಾಲದೆಂದು ಶುದ್ಧಿ ಹೆಸರಲ್ಲಿ ವಾರಕ್ಕೊಮ್ಮೆ ಮೈಮೇಲೆ ಗಂಗಾಜಲ ಸಿಂಪಡಿಸಿಕೊಳ್ಳುತ್ತಾನೆ ಎಂದು ಬೇಸರ ವ್ಯಕ್ತಪಡಿಸಿದ್ದಾಳೆ. ಕೊಳಕು ಗಂಡನ ಜತೆ ಬಾಳಲು ಸಾಧ್ಯವೇ ಇಲ್ಲ ಎಂದು ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿ ಸದ್ಯ ತವರಿಗೆ ತೆರಳಿದ್ದಾಳೆ. ಗಂಡ ಸುಧಾರಿಸಿಕೊಳ್ಳುತ್ತೇನೆ ಎಂದು ಪುಸಲಾಯಿಸಿದರೂ ಆಕೆ ಜತೆಗೆ ಬಾಳಲು ಒಪ್ಪುತ್ತಿಲ್ಲ. ನ್ಯಾಯಾಲಯ ಕೌನ್ಸಿಲಿಂಗ್ ಪಡೆಯಲು ಸೂಚಿಸಿದೆ. ಇದೂ ಸಾಲದೆಂದು ಆಕೆಯ ತವರು ಮನೆಯವರು ಅಳಿಯನ ವಿರುದ್ಧ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದ್ದಾರೆ!

ಗೋಮಾಂಸ: ವಿದ್ಯಾರ್ಥಿ ಹಾಸ್ಟೆಲ್‌ನಿಂದ ಹೊರಕ್ಕೆ

ಬೆಹರಾಂಪುರ: ಒಡಿಶಾದ ಬೆಹರಾಂಪುರ ಜಿಲ್ಲೆಯಲ್ಲಿ ಸರಕಾರಿ ಇಂಜಿನಿಯರಿಂಗ್ ಕಾಲೇಜು ಹಾಸ್ಟೆಲ್‌ನಲ್ಲಿ ಗೋಮಾಂಸ ಅಡುಗೆ ಮಾಡಿ ಸೇವಿಸಿದ್ದ ಏಳು ವಿದ್ಯಾರ್ಥಿಗಳನ್ನು ಹಾಸ್ಟೆಲ್‌ನಿಂದ ಹೊರಹಾಕಲಾಗಿದೆ. ಗೋಮಾಂಸಕ್ಕೆ ಅನುಮತಿ ಇಲ್ಲ ಎಂಬ ನಿಯಮವಿದ್ದರೂ ಪರಾಲಾ ಮಹಾರಾಜ ಇಂಜಿನಿಯರಿಂಗ್ ಕಾಲೇಜಿನ ಹಾಸ್ಟೆಲ್ ಕೊಠಡಿಯಲ್ಲಿ ವಿದ್ಯಾರ್ಥಿಗಳು ಗೋಮಾಂಸ ತಂದು ಅಡುಗೆ ಮಾಡಿ ಸೇವಿಸಿದ್ದಾರೆ. ಹಾಸ್ಟೆಲ್‌ನಿಂದ ಹೊರಹಾಕಿದ್ದಷ್ಟೇ ಅಲ್ಲದೇ, ಪ್ರತಿವಿದ್ಯಾರ್ಥಿಗೂ 2 ಸಾವಿರ ರು. ದಂಡವನ್ನು ಕಾಲೇಜು ಆಡಳಿತ ವಿಧಿಸಿದೆ. ಇಷ್ಟಕ್ಕೇ ಸಮಾಧಾನಗೊಳ್ಳದ ಬಜರಂಗ ದಳ ಮತ್ತು ವಿಶ್ವಹಿಂದೂ ಪರಿಷತ್ ಸಂಘಟನೆಗಳು, 7 ವಿದ್ಯಾರ್ಥಿಗಳ ವಿರುದ್ಧ ಇನ್ನೂ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿವೆ. ಕಾಲೇಜು ಮತ್ತು ಹಾಸ್ಟೆಲ್‌ಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ.

{ಅಮಿತ್ ಶಾ} ಕೇಂದ್ರ ಗೃಹ ಸಚಿವ

ಜಮ್ಮು-ಕಾಶ್ಮೀರದಲ್ಲಿ ಮತ್ತೆ ಭಯೋತ್ಪಾದನೆ ಚಟುವಟಿಕೆ ಹೆಚ್ಚಿಸುವ ಯತ್ನಗಳು ನಡೆಯುತ್ತಿವೆ. ಉಗ್ರರನ್ನು ಬಂಧಮುಕ್ತ ಮಾಡುವ ಭರವಸೆಯನ್ನು ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಚುನಾವಣೆ ಪ್ರಚಾರದಲ್ಲಿ ನೀಡುತ್ತಿವೆ. ಆದರೆ, ಈಗ ಇರುವುದು ಮೋದಿ ಸರಕಾರ. ಭಯೋತ್ಪಾದನೆ ಉತ್ತೇಜಿಸುವ ಧೈರ್ಯ ಯಾರಿಗೂ ಇಲ್ಲ.



2030ಕ್ಕೆ 500 ಗಿಗಾವಾಟ್ ಗ್ರೀನ್ ಎನರ್ಜಿ ಉತ್ಪಾದನೆ ಗುರಿ | ಸುಸ್ಥಿರ ಇಂಧನ ಪಥ ಅಭಿವೃದ್ಧಿಯ ಶಪಥ: ಪ್ರಧಾನಿ ಮೋದಿ

ಸೌರಶಕ್ತಿ, ಪವನವಿದ್ಯುತ್, ಪರಮಾಣು, ಜಲಶಕ್ತಿಯತ್ತ ಚಿತ್ತ | ಜಾಗತಿಕ ನವೀಕರಿಸಬಲ್ಲ ಇಂಧನ ಹೂಡಿಕೆದಾರರ 4ನೇ ಸಭೆ

ಭಾರತದ್ದು ಈಗ ಸೌರಮಾನ ಕಾಲ

ಗಾಂಧಿ ನಗರ: ಭಾರತ ತನ್ನ ಭವಿಷ್ಯವನ್ನು ಸೌರಶಕ್ತಿ, ಪವನ ವಿದ್ಯುತ್, ಪರಮಾಣು, ಜಲಶಕ್ತಿಯ ಆಧಾರದ ಮೇಲೆ ನಿರ್ಮಿಸಲು ನಿರ್ಧರಿಸಿದೆ. ಭಾರತ ಮುಂದಿನ ಒಂದು ಸಾವಿರ ವರ್ಷಗಳಿಗೆ ಸಿದ್ಧವಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಗುಜರಾತ್‌ನ ಗಾಂಧಿನಗರದಲ್ಲಿ ಸೋಮವಾರ ಆರಂಭಗೊಂಡ ನವೀಕರಿಸಬಹುದಾದ ಇಂಧನ ಕ್ಷೇತ್ರದ ಜಾಗತಿಕ ಹೂಡಿಕೆದಾರರ 4ನೇ ಸಭೆಯಲ್ಲಿ (ರೀ-ಇನ್ವೆಸ್ಟ್) ಭಾಗಿಯಾದ ಪ್ರಧಾನಿ ಮೋದಿ, ಸುಸ್ಥಿರ ಇಂಧನ ಪಥದ ಅಭಿವೃದ್ಧಿಗಾಗಿ ಭಾರತ ಶ್ರಮಿಸುತ್ತಿದೆ ಎಂದರು.

ಸಭೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ 'ನಮ್ಮ ಗುರಿ ಅತ್ಯುತ್ತಮ ಸ್ಥಾನಕ್ಕೇರುವುದಲ್ಲ. ಸದಾ ಶ್ರೇಷ್ಠ ಸ್ಥಾನದಲ್ಲಿ ಉಳಿಯುವುದು ಎಂದು ನುಡಿದರು.

> **ಗ್ಲೋಬಲ್ ಫಿನ್‌ಟೆಕ್ ಫೆಸ್ಟ್ ಬಳಿಕ ವಿಶ್ವಾದ್ಯಂತ ಜನರು ಮೊದಲ ಸೋಲಾರ್ ಅಂತಾರಾಷ್ಟ್ರೀಯ ಸಭೆ, ಗ್ಲೋಬಲ್ ಸೆಮಿಕಂಡಕ್ಟರ್ ಸಭೆಯಲ್ಲಿ ಭಾಗಿಯಾಗಿದ್ದರು. ಇಡೀ ವಿಶ್ವವೇ 'ಭಾರತ 21ನೇ ಶತಮಾನದ ಬೆಸ್ಟ್' ಎಂಬ ಭಾವನೆ ಹೊಂದಿದೆ. ಈಗ ಹಸಿರು ಇಂಧನ ಭವಿಷ್ಯದ ಬಗ್ಗೆ ಚರ್ಚೆಯಾಗುತ್ತಿದೆ.**
> **-ನರೇಂದ್ರ ಮೋದಿ** ಪ್ರಧಾನಿ

ಪ್ರಮುಖಾಂಶ

- ಇಂದಿನ ಭಾರತದಿಂದ ಮುಂದಿನ 1000 ವರ್ಷಗಳಿಗೆ ಅಡಿಪಾಯ
- 21ನೇ ಶತಮಾನದಲ್ಲಿ ಭಾರತವೇ ಬೆಸ್ಟ್ ಎಂಬುದು ವಿಶ್ವದ ನಂಬಿಕೆ
- ಹಸಿರು ಭವಿಷ್ಯ, ನೆಟ್ ಜೀರೋ ಭಾರತದ ಅಗತ್ಯ ಮತ್ತು ಬದ್ಧತೆ
- ಭಾರತ 3ನೇ ಅತಿದೊಡ್ಡ ಆರ್ಥಿಕತೆಗಾಗಿ 140 ಕೋಟಿ ಜನರ ಶ್ರಮ
- ಅಭಿವೃದ್ಧಿ ಕಂಡ ದೇಶ ಮಾಡಗದ ಸಾಧನೆಯನ್ನು ಭಾರತ ಮಾಡಿದೆ
- 1.30 ಕೋಟಿ ಮನೆಗಳು ಸೂರ್ಯ ಘರ್ ಯೋಜನೆಗೆ ನೋಂದಣಿ
- ಹಸಿರು ಹೈಡ್ರೋಜನ್ ಕ್ಷೇತ್ರದಲ್ಲಿ ಜಾಗತಿಕ ನಾಯಕನಾಗಲು ಯತ್ನ
- ವಿದ್ಯುಚ್ಛಕ್ತಿ ವಾಹನಗಳಿಗೆ ಉತ್ತೇಜನ; 'ಸೌರಶಕ್ತಿ' ನಗರ ಅಯೋಧ್ಯೆ

ಭಾರತದ ನೆಲದಾಳದಲ್ಲಿ ಹೆಚ್ಚು ಕಚ್ಚಾತೈಲ ಮತ್ತು ಅನಿಲ ಸಂಗ್ರಹವೇನೂ ಇಲ್ಲ. ನಾವು ಇಂಧನ ಉತ್ಪಾದಕರೂ ಅಲ್ಲ. ಹೀಗಾಗಿ ಭವಿಷ್ಯವನ್ನು ಭದ್ರಗೊಳಿಸಲು ನಾವು ಸೌರ ಶಕ್ತಿ, ಪವನ ವಿದ್ಯುತ್, ಜಲಶಕ್ತಿ ಹಾಗೂ ಪರಮಾಣು ಶಕ್ತಿಯನ್ನು ಅವಲಂಬಿಸಿದ್ದೇವೆ. ಪ್ರಧಾನ ಮಂತ್ರಿ ಸೂರ್ಯ ಘರ್ ಯೋಜನೆಯಡಿ ಪ್ರತಿ ಮನೆಯೂ ಛಾವಣಿಯಲ್ಲಿ ಸೌರ ವಿದ್ಯುತ್ ಉತ್ಪಾದಿಸಬಹುದು. ನವೀಕರಿಸಬಹುದಾದ ಇಂಧನದ ಮೂಲಕ 2030ರೊಳಗೆ ಭಾರತ 500 ಗಿಗಾ ವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಗುರಿ ಹೊಂದಿದೆ ಎಂದು ಪ್ರಧಾನಿ ಹೇಳಿದರು.

ಜಿ-20ರಲ್ಲಿ ಭಾರತ ಮುಂದೆ: ಜಿ 20 ರಾಷ್ಟ್ರಗಳ ಪೈಕಿ ಸುಸ್ಥಿರ ಇಂಧನ ಅಭಿವೃದ್ಧಿಯಲ್ಲಿ ಭಾರತ ಮುನ್ನಡೆ ಸಾಧಿಸಿದೆ. ಈ ಮೊದಲು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ನಿಲ್ಲಲು ಸಾಧ್ಯವಾಗದ ಭಾರತ ಈಗ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿಯೇ ವಿಶ್ವಕ್ಕೆ ಮಾದರಿಯಾಗಿದೆ. ರೀ ಇನ್ವೆಸ್ಟ್ ಸಭೆ 2047ರಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ದೊಡ್ಡ ಯೋಜನೆಯ ಭಾಗವಾಗಿದೆ ಎಂದು ಮೋದಿ ಹೇಳಿದರು. ಮೂರನೇ ಅವಧಿ ಆಡಳಿತದ 100 ದಿನಗಳ ಪ್ರಗತಿ ಬಗ್ಗೆ ಮಾತನಾಡಿದ ಪ್ರಧಾನಿ ಮೋದಿ ಸರಕಾರ ಹಸಿರು ಇಂಧನ ಬೆಂಬಲಿಸುವ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ವೈಬ್ರಂಟ್ ಗ್ಯಾಸ್ ಫಂಡಿಗ್ ಯೋಜನೆ ಅಡಿಯಲ್ಲಿ 7 ಸಾವಿರ ಕೋಟಿ ವೆಚ್ಚದಲ್ಲಿ ಆಫ್‌ಶೋರ್ ಗ್ರೀನ್ ಎನರ್ಜಿ ಪಾಲಿಸಿ ಆರಂಭಿಸಲಾಗಿದೆ. 12 ಸಾವಿರ ಕೋಟಿ ವೆಚ್ಚದಲ್ಲಿ 31 ಸಾವಿರ ಮೆ.ವ್ಯಾ ಜಲವಿದ್ಯುತ್ ಉತ್ಪಾದನೆಯ ಗುರಿ ಹೊಂದಿದೆ ಎಂದು ಮೋದಿ ಹೇಳಿದ್ದಾರೆ.

ಶೂನ್ಯ ಮಾಲಿನ್ಯ ವಿಶ್ವಾಸ: ಭಾರತ 2070ರೊಳಗೆ ಹೊಗೆ ಹೊರಸೂಸುವುದನ್ನು ಪೂರ್ಣ ತಗ್ಗಿಸಿ ಶೂನ್ಯ ಮಾಲಿನ್ಯ (ಎಮಿಶನ್) ಸಾಧಿಸಲಿದೆ ಎಂದು ಪ್ರಧಾನಿ ಮೋದಿ ಪುನರುಚ್ಚರಿಸಿದರು. 'ಹಸಿರು ಭವಿಷ್ಯ, ನೆಟ್ ಜೀರೊ' ಹೇಳಿಕೆಗಳಷ್ಟೇ ಅಲ್ಲ, ಭಾರತದ ಪ್ರತಿ ರಾಜ್ಯ ಸರಕಾರದ ಅಗತ್ಯ ಮತ್ತು ಬದ್ಧತೆ. ಅಯೋಧ್ಯೆಯನ್ನು ಮಾದರಿ ಸೌರ ನಗರವಾಗಿಸುವ ಗುರಿ ಕೇಂದ್ರ ಸರಕಾರದ್ದಾಗಿದೆ. 17 ನಗರಗಳನ್ನು ಈ ಯೋಜನೆಗೆ ಗುರುತಿಸಲಾಗಿದೆ ಎಂದರು.

ಭಾಗಿಯಾಗಿದ್ದ ದೇಶ: ಆಸ್ಟ್ರೇಲಿಯ, ಡೆನ್‌ಮಾರ್ಕ್, ಜರ್ಮನಿ, ನಾರ್ವೆ ದೇಶದ ಪ್ರತಿನಿಧಿಗಳು ಸಭೆಯಲ್ಲಿದ್ದರು. ಅಮೆರಿಕ, ಬ್ರಿಟನ್, ಬೆಲ್ಜಿಯಂ, ಯುರೋಪ್ ಒಕ್ಕೂಟ, ಓಮನ್, ಯುಎಇ, ಸಿಂಗಾಪುರ ಮತ್ತು ಹಾಂಗ್‌ಕಾಂಗ್‌ನ ಗಣ್ಯರು ಆಗಮಿಸಿದ್ದರು. ಮೊದಲ ಸಭೆ (2015ರ ಫೆಬ್ರುವರಿ) ದೆಹಲಿಯಲ್ಲಿ ನಡೆದಿತ್ತು.

ಗ್ರೀನ್ ಎನರ್ಜಿಗೆ 4.70 ಲಕ್ಷ ಕೋಟಿ ರು. ಹೂಡಿಕೆ

ಕೇಂದ್ರದ ನವೀಕೃತ-ನವ ಇಂಧನಗಳ ಸಚಿವ ಪ್ರಹ್ಲಾದ್ ಜೋಶಿ ಕಾರ್ಯಕ್ರಮದಲ್ಲಿ ಮಾತನಾಡಿ, ಹಸಿರು ಇಂಧನ ಕ್ಷೇತ್ರಕ್ಕೆ ಹೂಡಿಕೆ ಮಾಡುವಂತೆ ಹೂಡಿಕೆದಾರರನ್ನು ಆಹ್ವಾನಿಸಿದರು. ಬ್ಯಾಂಕ್, ಹಣಕಾಸು ಸಂಸ್ಥೆಗಳು 32.45 ಲಕ್ಷ ಕೋಟಿ ರು. ಹೂಡಿಕೆ ಮಾಡುವ ಭರವಸೆ ನೀಡಿರುವುದಾಗಿ ತಿಳಿಸಿದರು. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ 4.06 ಲಕ್ಷ ಕೋಟಿ ಹೂಡಿಕೆ ಮಾಡಲು ಬದ್ಧವಾಗಿದೆ ಎಂದು ಅದಾನಿ ಸಮೂಹ ತಿಳಿಸಿದೆ. ಅದಾನಿ ಗ್ರೀನ್ ಎನರ್ಜಿ ಲಿ., ಅದಾನಿ ನ್ಯೂ ಇಂಡಸ್ಟ್ರೀಸ್ ಲಿ. ಹೂಡಿಕೆ ಬದ್ಧತೆ ಪತ್ರ ಸಲ್ಲಿಸಿವೆ. 10 ಗಿಗಾವಾಟ್ ಸಾಮರ್ಥ್ಯದ ಸೌರ ಶಕ್ತಿ ಉತ್ಪಾದನೆ ಘಟಕ, 5 ಗಿಗಾವಾಟ್ ಪವನ ವಿದ್ಯುತ್ ಘಟಕ, 10 ಗಿಗಾವಾಟ್ ಗ್ರೀನ್ ಹೈಡ್ರೋಜನ್ ಉತ್ಪಾದನೆ, 5 ಗಿಗಾವಾಟ್ ಎಲೆಕ್ಟ್ರೋಲೈಸರ್ ಉತ್ಪಾದನೆ ಬಗ್ಗೆ ಭರವಸೆ ನೀಡಿವೆ. 64 ಸಾವಿರ ಕೋಟಿ ರು. ಹೂಡಿಕೆ ಮಾಡುವುದಾಗಿ ಟೊರೆಂಟ್ ಪವರ್ ತಿಳಿಸಿದೆ. ಇದರಿಂದ 26 ಸಾವಿರ ಉದ್ಯೋಗ ಸೃಷ್ಟಿ ಭರವಸೆ ನೀಡಿದೆ.

ಸೂರ್ಯಘರ್ ಯೋಜನೆ

'ಪ್ರಧಾನ ಮಂತ್ರಿ ಸೂರ್ಯಘರ್ ಯೋಜನೆ ಬಗ್ಗೆ ವಿವರ ನೀಡಿದ ಪ್ರಧಾನಿ ಮೋದಿ, ಪ್ರತಿ ತಿಂಗಳಿಗೆ 250 ಯುನಿಟ್ ವಿದ್ಯುತ್ ಬಳಸುವ ಸಣ್ಣ ಕುಟುಂಬ ಸೂರ್ಯಘರ್ ಯೋಜನೆ ಮೂಲಕ 100 ಯುನಿಟ್ ವಿದ್ಯುತ್ ಉತ್ಪಾದಿಸಿ ಗ್ರಿಡ್‌ಗೆ ಮಾರಬಹುದು. ಇದರಿಂದ ಜನರಿಗೆ ವಿದ್ಯುತ್ ಬಿಲ್‌ನಲ್ಲಿ ವಾರ್ಷಿಕ 25 ಸಾವಿರ ರು.ವರೆಗೂ ಲಾಭ ಸಿಗಲಿದೆ. ಈ ಹಣವನ್ನು ಪಬ್ಲಿಕ್ ಪ್ರಾವಿಡೆಂಟ್ ಫಂಡ್‌ನಲ್ಲಿ 20 ವರ್ಷದ ಅವಧಿಗೆ ಹೂಡಿಕೆ ಮಾಡಿದರೆ ಕೊನೆಗೆ 10 ಲಕ್ಷ ರು. ಸಿಗುತ್ತದೆ ಎಂದು ಹೇಗೆ ಪ್ರತಿ ಮನೆಯೂ ಹಣ ಉಳಿತಾಯ ಮಾಡಬಹುದು ಎಂಬುದನ್ನು ವಿವರಿಸಿದರು. ಈ ಯೋಜನೆಗಾಗಿಯೇ ಸರಕಾರ 3 ಲಕ್ಷ ಯುವಕರಿಗೆ ತರಬೇತಿ ನೀಡಲಿದೆ. ಅದರಿಂದ ಪರಿಸರ ರಕ್ಷಣೆ ಜತೆಗೆ 20 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಪ್ರತಿ 3 ಕಿ.ವ್ಯಾ ಸೌರ ವಿದ್ಯುತ್ 50-60 ಟನ್ ಇಂಗಾಲ ಡೈಆಕ್ಸೈಡ್ ಗಾಳಿಗೆ ಸೇರುವುದನ್ನು ತಡೆಯುತ್ತದೆ. ಹೀಗೆ ಪ್ರತಿ ಕುಟುಂಬ ಮಾಲಿನ್ಯ ನಿಯಂತ್ರಣಕ್ಕೆ ಕೊಡುಗೆ ನೀಡಬಹುದು ಎಂದರು. ಕಳೆದ ದಶಕದಲ್ಲಿ ಭಾರತ ಪರಮಾಣು ಶಕ್ತಿಯಿಂದ ಶೇ. 35ರಷ್ಟು ಅಧಿಕ ವಿದ್ಯುತ್ ಉತ್ಪಾದಿಸಿದೆ. ಗ್ರೀನ್ ಹೈಡ್ರೋಜನ್ ವಿಚಾರದಲ್ಲಿ ಭಾರತ ಜಾಗತಿಕ ನಾಯಕನಾಗಲು ಹೊರಟಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ಪೇಸ್ ಎಕ್ಸ್ ಯಾನ ಯಶಸ್ವಿ: ನಾಲ್ಕು ಯಾತ್ರಿಕರು ವಾಪಸ್



ಮ್ಯಾಕ್ಸಿಕೊ: ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಒಡೆತನದ 'ಸ್ಪೇಸ್ ಎಕ್ಸ್' ಕಂಪನಿ ಸಹ ಯೋಗದಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದ ಟೆಕ್ನಾಲಜಿ ಕ್ಷೇತ್ರದ ಉದ್ಯಮಿ, ಮಾಜಿ ಪೈಲಟ್, ಸ್ಪೇಸ್ ಎಕ್ಸ್‌ನ ಇಬ್ಬರು ತಂತ್ರಜ್ಞರು ಯಶಸ್ವಿಯಾಗಿ ಬಾಹ್ಯಾಕಾಶ ನಡಿಗೆ ಪೂರೈಸಿ ಭಾನುವಾರ ಸಂಜೆ ಸುರಕ್ಷಿತವಾಗಿ ಭೂಮಿಗೆ ಬಂದಿಳಿದರು. ಖಾಸಗಿ ಗಗನಯಾತ್ರಿಗಳ ಬಾಹ್ಯಾಕಾಶ ಪ್ರವಾಸ ಇದೇ ಮೊದಲು!

ಗಗನಯಾತ್ರಿಗಳಿದ್ದ 'ಕ್ಯಾಪ್ಸುಲ್' ಭಾನುವಾರ ಸಂಜೆ ಫ್ಲೋರಿಡಾ ಬಳಿಯ ಮ್ಯಾಕ್ಸಿಕೊ ಕೊಲ್ಲಿಯಲ್ಲಿ ಬಂದಿಳಿದಿದೆ. ಶಿಫ್ಟ್ 4 ಕ್ರೆಡಿಟ್ ಕಾರ್ಡ್ ಪ್ರೊಸೆಸಿಂಗ್ ಕಂಪನಿ ಸಂಸ್ಥಾಪಕ ಉದ್ಯಮಿ ಜರೆಡ್ ಐಸಾಕ್‌ಮನ್, 'ಸ್ಪೇಸ್ ಎಕ್ಸ್' ಕಂಪನಿಯ ಇಬ್ಬರು ಎಂಜಿನಿಯರ್‌ಗಳು, ಏರ್‌ಫೋರ್ಸ್ ಥಂಡರ್‌ಬರ್ಡ್‌ನ ಮಾಜಿ ಪೈಲಟ್ 5 ದಿನಗಳ ಬಾಹ್ಯಾಕಾಶ ಪ್ರವಾಸ ಕೈಗೊಂಡಿದ್ದರು. ಭೂಮಿಯಿಂದ 740 ಕಿ.ಮೀ ಎತ್ತರದಲ್ಲಿ 2 ಗಂಟೆ ಕಾಲ ಬಾಹ್ಯಾಕಾಶ ನಡಿಗೆಯನ್ನೂ ಕೈಗೊಂಡರು. 1965ರಲ್ಲಿ ರಷ್ಯಾದ ಅಲೆಕ್ಸಿ ಲಿಯೋನೊವ್ ಮೊದಲ ಬಾರಿಗೆ ಬಾಹ್ಯಾಕಾಶ ನಡಿಗೆ ನಡೆಸಿದ್ದಾರೆ. ಈವರೆಗೆ 12 ದೇಶಗಳ 263 ಮಂದಿ ಬಾಹ್ಯಾಕಾಶ ನಡಿಗೆ ನಡೆಸಿದ್ದಾರೆ.

ಮುಸ್ಲಿಂ ವೇಷದಲ್ಲಿ ಗಣೇಶ-ಜನಾಕ್ರೋಶ

ಹೈದರಾಬಾದ್: ತೆಲಂಗಾಣದಲ್ಲಿ ಗಣೇಶ ಮೂರ್ತಿಗೆ 'ಬಾಜಿರಾವ್ ಮಸ್ತಾನಿ' ಶೀರ್ಷಿಕೆಯಡಿ ಕಪ್ಪುವಸ್ತ್ರ ತೊಡಿಸಿರುವುದು ಭಾರೀ ವಿವಾದಕ್ಕೆ, ಹಿಂದೂಗಳ ಆಕ್ರೋಶಕ್ಕೆ ಕಾರಣವಾಗಿದೆ. 'ಯಂಗ್ ಲಿಯೋಸ್ ಯೂತ್ ಅಸೋಸಿಯೇಷನ್' ಸ್ಥಾಪಿಸಿರುವ ಗಣೇಶ ಮೂರ್ತಿಗೆ ತೊಡಿಸಿರುವುದು ಮುಸ್ಲಿಮರ ಧಾರ್ಮಿಕ ವಸ್ತ್ರದಂತಿದೆ. ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ ಎಂದು ಹಿಂದೂಗಳು ಖಂಡಿಸಿದ್ದಾರೆ. ಯಾರ ಭಾವನೆ ಧಕ್ಕೆ ತರಲು ಇಚ್ಛಿಸುವುದಿಲ್ಲ. ವಸ್ತ್ರವಿನ್ಯಾಸಕಾರ ಮತ್ತು ಗಣೇಶ ಮಂಡಲ ಸದಸ್ಯರ ತಪ್ಪು ಸಂವಹನವೇ ಇದಕ್ಕೆ ಕಾರಣ. ಬಾಜಿರಾವ್ ಮಸ್ತಾನಿ ಸಿನಿಮಾದಲ್ಲಿ ನಟ ರಣವೀರ್ ಸಿಂಗ್ ಧರಿಸಿದ್ದ ಉಡುಪಿನಿಂದ ಸ್ಫೂರ್ತಿ ಪಡೆದು ವಿಗ್ರಹ ರಚಿಸಲಾಗಿದೆ ಎಂದು ಸಂಘಟಕರು ಸಮಜಾಯಿಷಿ ನೀಡಿದರೂ ಜನತೆ ಸಮಾಧಾನಗೊಂಡಿಲ್ಲ.

ನ.2ನೇ ವಾರ ಮಹಾ ಚುನಾವಣೆ: ಶಿಂದೆ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ದಿನಾಂಕ ಕುರಿತು ಮುಖ್ಯಮಂತ್ರಿ ಏಕನಾಥ್ ಶಿಂದೆ ಸೋಮವಾರ ಸುಳಿವು ನೀಡಿದ್ದಾರೆ. ನವೆಂಬರ್ 2ನೇ ವಾರದಲ್ಲಿ ಚುನಾವಣೆ ನಡೆಯುವ ನಿರೀಕ್ಷೆ ಇದೆ ಎಂದಿದ್ದಾರೆ. 2 ಹಂತಗಳಲ್ಲಿ ಚುನಾವಣೆ ನಡೆಸಿದರೆ ಉತ್ತಮ ಎಂದೂ ಆಶಿಸಿದ್ದಾರೆ. ಬಿಜೆಪಿ, ಶಿವಸೇನೆ (ಶಿಂದೆ ಬಣ), ಎನ್‌ಸಿಪಿ(ಅಜಿತ್ ಬಣ) ಸೇರಿಕೊಂಡು ರಚಿಸಿರುವ 'ಮಹಾಯುತಿ' ಮೈತ್ರಿಕೂಟದ ಸೀಟು ಹಂಚಿಕೆ ಪ್ರಕ್ರಿಯೆ ಮಾತುಕತೆ 8-10 ದಿನದಲ್ಲಿ ಪೂರ್ಣಗೊಳ್ಳಲಿದೆ ಎಂದು ಶಿಂದೆ ಹೇಳಿದ್ದಾರೆ.

ಕಾಂಗ್ರೆಸ್, ಶಿವಸೇನೆ (ಉದ್ಧವ್ ಬಣ), ಎನ್‌ಸಿಪಿ(ಶರದ್ ಬಣ) ಒಳಗೊಂಡ ಪ್ರತಿಪಕ್ಷಗಳ 'ಮಹಾವಿಕಾಸ್ ಅಘಾಡಿ' ಒಕ್ಕೂಟ ಹಾಗೂ ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟದ ನಡುವೆ ನೇರ ಹಣಾಹಣಿ ನಡೆಯಲಿದೆ. ಮಹಾವಿಕಾಸ್ ಅಘಾಡಿ ಒಕ್ಕೂಟ ಈಗಾಗಲೇ 125 ಕ್ಷೇತ್ರಗಳ ಹಂಚಿಕೆ ಕುರಿತು ಅಂತಿಮ ತೀರ್ಮಾನ ಕೈಗೊಂಡಿದೆ ಎಂದು ಕಾಂಗ್ರೆಸ್ ಹೇಳಿಕೊಂಡಿದೆ. ಇತ್ತೀಚಿನ ಲೋಕಸಭೆ ಚುನಾವಣೆಯಲ್ಲಿ ರಾಜ್ಯದ 48 ಲೋಕಸಭಾ ಕ್ಷೇತ್ರಗಳಲ್ಲಿ 'ಮಹಾವಿಕಾಸ್ ಅಘಾಡಿ' ಒಕ್ಕೂಟ 30 ಸೀಟುಗಳಲ್ಲಿ ಜಯ ಗಳಿಸಿದೆ. ವಿಧಾನಸಭೆ ಚುನಾವಣೆ ಮೇಲೆಯೂ ಇದು ಪ್ರಭಾವ ಬೀರಲಿದೆಯೇ ಎಂಬ ಪ್ರಶ್ನೆ ಹಲವರದ್ದಾಗಿದೆ. 228 ಕ್ಷೇತ್ರಗಳ ರಾಜ್ಯ ವಿಧಾನಸಭೆಯಲ್ಲಿ ಅಧಿಕಾರ ಹಿಡಿಯಲು 115 ಸ್ಥಾನಗಳ ಅಗತ್ಯವಿದೆ. ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ 'ಮಹಾ ವಿಕಾಸ್ ಅಘಾಡಿ' ಒಕ್ಕೂಟ ಗೆಲುವು ಸಾಧಿಸಲಿದೆ ಎಂದು ಚುನಾವಣಾ ಪೂರ್ವ ಸಮೀಕ್ಷೆಗಳು ಅಂದಾಜು ಮಾಡಿವೆ. ಹಾಗಾಗಿ, ಅಘಾಡಿ ಮೈತ್ರಿ ಪಕ್ಷಗಳಲ್ಲಿ ಉತ್ಸಾಹ ಹೆಚ್ಚಿದೆ.

ಟ್ರಂಪ್ ಮೇಲೆ ಮತ್ತೆ ದಾಳಿ: ಆರೋಪಿ ಸೆರೆ



ವಾಷಿಂಗ್ಟನ್: ಅಮೆರಿಕ ಮಾಜಿ ಅಧ್ಯಕ್ಷ, ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೋನಾಲ್ಡ್ ಟ್ರಂಪ್ ಮೇಲೆ ಭಾನುವಾರ ಮತ್ತೆ ಗುಂಡಿನ ದಾಳಿ ನಡೆದಿದೆ. ಚುನಾವಣೆ ಘೋಷಣೆ ಬಳಿಕ 2ನೇ ಬಾರಿ ಟ್ರಂಪ್ ಹತ್ಯಾಯತ್ನ ನಡೆದಿದೆ. ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್ ಕ್ಲಬ್‌ನಲ್ಲಿ ಭಾನುವಾರ ಗಾಲ್ಫ್ ಕೋರ್ಟ್‌ನಲ್ಲಿ ಆಡುತ್ತಿದ್ದಾಗ ಟ್ರಂಪ್ ಮೇಲೆ ಗುಂಡು ಹಾರಿಸಲಾಗಿದೆ. ಆರೋಪಿ 90 ಮೀಟರ್ ದೂರದಿಂದ ಎಕೆ-47 ಬಂದೂಕು ಬಳಸಿ ಗುಂಡು ಹಾರಿಸಿದ್ದ. ಗುಂಡು ಗುರಿ ತಲುಪದೇ ಇದ್ದುದರಿಂದ ಟ್ರಂಪ್ ಪಾರಾದರು. ಅವರು ಯಾವುದೇ ಹಾನಿ ಆಗಿಲ್ಲ. ದಾಳಿ ನಡೆಸಿದ ಬಳಿಕ ಕಾರಿನಲ್ಲಿ ಪರಾರಿಯಾಗಿದ್ದ ಆರೋಪಿ ರ್‍ಯಾನ್ ರುತ್ (58) ಎಂಬಾತನನ್ನು ಎಫ್‌ಬಿಐ ಬಂಧಿಸಿದೆ.

ಹತ್ಯೆಗೆ ಯತ್ನಿಸಿದ ರ್‍ಯಾನ್ ವೆಸ್ಲೀ ರುತ್: ಟ್ರಂಪ್ ಹತ್ಯಾಯತ್ನದ ಆರೋಪಿ ರ್‍ಯಾನ್ ರುತ್, ಹುವಾಯಿ ನಿವಾಸಿ. ಡೆಮಾಕ್ರೆಟಿಕ್ ಪಕ್ಷಕ್ಕೆ ಹಾಗೂ ಸಾಮಾಜಿಕ ಕಳಕಳಿಯ ವಿಚಾರಕ್ಕೆ ದೇಣಿಗೆ ಕೂಡಾ ನೀಡಿದ್ದಾನೆ. ಜತೆಗೆ ಜನರ ಒಳಿತಿಗಾಗಿ ಕೆಲಸ ಮಾಡುವ ಕುರಿತು ಪೋಸ್ಟ್‌ಗಳನ್ನು ಹಂಚಿಕೊಂಡಿದ್ದಾನೆ. ಲಿಂಕ್ಡ್ ಇನ್ ಮಾಹಿತಿ ಪ್ರಕಾರ ಉತ್ತರ ಕೆರೊಲಿನಾದ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ವಿದ್ಯಾರ್ಥಿ. 2018ರಲ್ಲಿ ಹುವಾಯಿಗೆ ಬಂದು ನೆಲೆಸಿದ್ದಾನೆ. ಸೇನೆಯ ಅನುಭವ, ತರಬೇತಿ ಇಲ್ಲದಿದ್ದರೂ ಉಕ್ರೇನ್ ಪರ ಹೋರಾಡುವ ಇಚ್ಛೆ ಕುರಿತು ಬರೆದುಕೊಂಡಿದ್ದಾನೆ. ಮಾಹಿತಿ ಪ್ರಕಾರ ರ್‍ಯಾನ್ ಹೆಸರಿನಲ್ಲಿ 2001-02ರಲ್ಲಿ 12ಕ್ಕೂ ಅಧಿಕ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಜತೆಗೆ 2002ರಲ್ಲಿ ದೊಡ್ಡ ಮಟ್ಟದಲ್ಲಿ ಹಾನಿ ಉಂಟು ಮಾಡಬಲ್ಲ ಶಸ್ತ್ರಾಸ್ತ್ರ ಹೊಂದಿದ್ದ ಆರೋಪದಡಿ ಬಂಧನಕ್ಕೊಳಗಾಗಿದ್ದ.

ರಾಹುಲ್ ನಾಲಿಗೆ ಕತ್ತರಿಸಿದರೆ 11 ಲಕ್ಷ ರು.

ಬುಲ್ಡಾನ: ಮೀಸಲಾತಿ ವಿಚಾರದಲ್ಲಿ ನಕಾರಾತ್ಮಕ ಪ್ರತಿಕ್ರಿಯೆ ನೀಡಿರುವ ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ನಾಲಿಗೆ ಕತ್ತರಿಸಿದವರಿಗೆ 11 ಲಕ್ಷ ರು ನೀಡುವುದಾಗಿ ಮಹಾರಾಷ್ಟ್ರದ ಶಿವಸೇನೆ ಶಾಸಕ ಸಂಜಯ್ ಗಾಯಕ್ವಾಡ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಮಾಧ್ಯಮದ ಜತೆ ಮಾತನಾಡಿದ ಸಂಜಯ್, ರಾಹುಲ್ ಗಾಂಧಿ ಹೇಳಿಕೆ ಕಾಂಗ್ರೆಸ್‌ನ ನೈಜ ಮನಸ್ಥಿತಿ ತೋರುತ್ತದೆ. ಲೋಕಸಭಾ ಚುನಾವಣೆ ಸಂದರ್ಭ ಕಾಂಗ್ರೆಸ್ ಸುಳ್ಳು ಮಾಹಿತಿ ಹಂಚಿತ್ತು. ಬಿಜೆಪಿ ಸಂವಿಧಾನ ಬದಲಿಸಲಿದೆ, ಸಂವಿಧಾನ ಸುರಕ್ಷಿತವಾಗಿಲ್ಲ ಎಂದು ಸುದ್ದಿ ಹಬ್ಬಿಸಿ ಕಾಂಗ್ರೆಸ್ ಮತ ಪಡೆಯಿತು. ಈಗ ಅಮೆರಿಕದಲ್ಲಿ ಅಂಬೇಡ್ಕರ್ ಘೋಷಿಸಿದ ಮೀಸಲಾತಿಯನ್ನೇ ರದ್ದು ಮಾಡುವುದಾಗಿ ಕಾಂಗ್ರೆಸ್ ಮುಖಂಡ ಮಾತನಾಡುತ್ತಿದ್ದಾರೆ. ರಾಹುಲ್ ನಾಲಿಗೆ ಕತ್ತರಿಸಿದವರಿಗೆ 11 ಲಕ್ಷ ರು. ಕೊಡುತ್ತೇನೆ ಎಂದು ಗಾಯಕ್ವಾಡ್ ಕಿಡಿಕಾರಿದ್ದರು. ಅಮೆರಿಕದಲ್ಲಿ ಭಾರತೀಯ ಸಮುದಾಯದ ಜತೆ ನಡೆದ ಚರ್ಚೆಯಲ್ಲಿ ರಾಹುಲ್ ಗಾಂಧಿ, 'ಭಾರತದಲ್ಲಿ ಸಮಾನತೆ ಇಲ್ಲ, ಸಮಾನತೆ ಮೂಡಿದಾಗ ಮೀಸಲಾತಿ ರದ್ದು ಮಾಡುವ ಬಗ್ಗೆ ಕಾಂಗ್ರೆಸ್ ಚಿಂತಿಸಲಿದೆ. ಸದ್ಯಕ್ಕೆ ಅಂತಹ ಸಂದರ್ಭ ಬಂದಿಲ್ಲ' ಎಂದು ಹೇಳಿದ್ದರು.

400 ವರ್ಷ ಪುರಾತನ ದೇಗುಲದಲ್ಲಿ ಶಾಸ್ತ್ರೋಕ್ತ ವಿವಾಹ

ಸಿದ್ಧಾರ್ಥ-ಅದಿತಿ ವಿವಾಹ ಸಂಪನ್ನ



ಚೆನ್ನೈ: ತಮಿಳುನಾಡು ಮೂಲದ ಬಹು ಭಾಷಾ ಚಿತ್ರನಟ ಸಿದ್ಧಾರ್ಥ್ ಮತ್ತು ಚಿತ್ರನಟಿ, ರಾಜವಂಶದ ಅದಿತಿ ರಾವ್ ಹೈದರಿ 400 ವರ್ಷ ಪುರಾತನ 'ವನಪರ್ತಿ' ದೇವಸ್ಥಾನದಲ್ಲಿ ಸರಳವಾಗಿ ವಿವಾಹವಾದರು. ಹಲವು ವರ್ಷಗಳ ಪ್ರೀತಿಗೆ ಇಂದು ಸಿದ್ಧಾರ್ಥ್-ಅದಿತಿ ರಾವ್ ಮದುವೆಯ ಮುದ್ರೆ ಒತ್ತಿದರು. ದಂಪತಿ ಶಾಸ್ತ್ರೋಕ್ತವಾಗಿ ದಾಂಪತ್ಯ ಜೀವನಕ್ಕೆ ಸೋಮವಾರ ಕಾಲಿರಿಸಿದ ಸಂಭ್ರಮದ ಕ್ಷಣಗಳ ಚಿತ್ರಗಳನ್ನು 'ಅದಿತಿ ರಾವ್ ಹೈದರಿ ಅಂಡ್ ವರ್ಲ್ಡ್ ಆಫ್ ಸಿದ್ಧಾರ್ಥ್' ಇನ್‌ಸ್ಟಾಗ್ರಾಂ ಪುಟದಲ್ಲಿ ಹಂಚಿಕೊಳ್ಳಲಾಗಿದೆ. 'ನೀನೇ ನನ್ನ ಸೂರ್ಯ, ನೀನೇ ನನ್ನ ಚಂದ್ರ ಮತ್ತು ನನ್ನ ಎಲ್ಲಾ ನಕ್ಷತ್ರಗಳು. ಶಾಶ್ವತ ಪ್ರೀತಿ, ಬೆಳಕು, ಮ್ಯಾಜಿಕ್ ಪ್ರಾರಂಭ' ಎಂದು ಅದಿತಿ ಇನ್‌ಸ್ಟಾಗ್ರಾಂನಲ್ಲಿ ಬರೆದಿದ್ದಾರೆ. ಇಬ್ಬರಿಗೂ ಇದು 2ನೇ ಮದುವೆ. ಮೊದಲ ವಿವಾಹ ಸಂಬಂಧಕ್ಕೆ ವಿಚ್ಛೇದನ ನೀಡಿದ ಬಳಿಕ ಸಿನಿಮಾ ಚಿತ್ರೀಕರಣ ಸಂದರ್ಭ ಪ್ರೀತಿ ಚಿಗುರಿ ಮದುವೆ ಆಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ 3.0

ಆಡಳಿತಕ್ಕೆ ಶತದಿನ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ 3ನೇ ಅವಧಿಯ ಎನ್‌ಡಿಎ ಸರಕಾರ 100 ದಿನಗಳ ಆಡಳಿತ ಪೂರ್ಣಗೊಳಿಸಿದೆ. ಈ ಅವಧಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಆದ್ಯತೆ ಮೇರೆಗೆ ಕಾರ್ಯಗತಗೊಳಿಸಿದೆ. ಮಹಾರಾಷ್ಟ್ರದ ವಾಧವನ್ ಮೆಗಾ ಪೋರ್ಟ್‌ನಂತಹ ಅನೇಕ ಯೋಜನೆಗಳಿಗೆ ಅನುಮೋದನೆ ನೀಡಿದೆ. ರಸ್ತೆ, ರೈಲ್ವೆ, ಬಂದರು, ವಾಯುಮಾರ್ಗ ಅಭಿವೃದ್ಧಿಗೆ ಗಮನ ಕೇಂದ್ರೀಕರಿಸಿ 3 ಲಕ್ಷ ಕೋಟಿ ರು.ಗಳ ಯೋಜನೆಗಳಿಗೆ ಚಾಲನೆ ನೀಡಿದೆ ಪ್ರಮುಖ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

100 ದಿನಗಳಲ್ಲಿ ಏನು ಸಾಧಿಸಿದ್ದೇವೆಯೋ ಅದು ಮುಂಬರುವ ವರ್ಷಗಳಲ್ಲಿ ಇತರೆ ಯೋಜನೆಗಳಿಗೆ ಅಡಿಪಾಯವಾಗಲು ಸಹಾಯ ಮಾಡುತ್ತದೆ. ಹಿಮಾಚಲ ಪ್ರದೇಶದೊಂದಿಗೆ ಲಡಾಖ್ ಸಂಪರ್ಕಿಸುವ ಶಿಂಖುನ್-ಲಾ ಸುರಂಗ, 4.42 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಸುವ 8 ಹೊಸ ರೈಲು ಮಾರ್ಗ ನಿರ್ಮಾಣ ಯೋಜನೆಗಳಿಗೆ ಸರ್ಕಾರ ಅನುಮೋದನೆ ನೀಡಿದೆ ಎಂದಿದ್ದಾರೆ.

ಯು ಟರ್ನ್: ಕಾಂಗ್ರೆಸ್ ಟೀಕೆ

ದೆಹಲಿ: ಹಲವು ಯೋಜನೆಗಳಲ್ಲಿ ನಿರ್ಧಾರ ಬದಲಿಸುವ ಮೂಲಕ ಮೋದಿ 3.0 ಅವಧಿ 'ಯು ಟರ್ನ್ ಸರಕಾರ'ವಾಗಿದೆ ಎಂದು ಪ್ರತಿಪಕ್ಷ ಕಾಂಗ್ರೆಸ್ ಟೀಕಿಸಿದೆ. ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾತೆ ಮಂಗಳವಾರ ಸುದ್ದಿಗೋಷ್ಠಿ ನಡೆಸಿ, ಮೋದಿ ಸರಕಾರದ 'ಅಹಂಕಾರ' ಇನ್ನು ನಡೆಯುವುದಿಲ್ಲ. ಜನಾಹಿತಾಸಕ್ತಿಗೆ ವಿರುದ್ಧವಾದ ನಿರ್ಧಾರಗಳನ್ನು ತೆಗೆದುಕೊಂಡರೆ 'ಯು ಟರ್ನ್' ಅನಿವಾರ್ಯ. ಸರಕಾರದ ತಪ್ಪು ನಿರ್ಧಾರ ಜನರ ಮೇಲೆ ಋಣಾತ್ಮಕ ಪರಿಣಾಮ ಬೀರಿದರೆ ಅಂಥ ನಿರ್ಧಾರಗಳನ್ನು ಹಿಂಪಡೆಯಲೇಬೇಕಾಗುತ್ತದೆ. ಇಂತಹ ಯು ಟರ್ನ್ ಮುಂಬರುವ ದಿನಗಳಲ್ಲೂ ನಡೆಯಲಿವೆ ಎಂದು ವ್ಯಂಗ್ಯವಾಡಿದರು.

ಮೀಸಲು ಕಡೆಗಣಿಸಿದ್ದ ಲ್ಯಾಟರಲ್ ಎಂಟ್ರಿ, ಪತ್ರಕರ್ತರಿಗೆ ನಿರ್ಬಂಧ ಹೇರುವ ಪ್ರಸಾರ ಕಾಯಿದೆ, ಒಪಿಎಸ್‌ಗಿಂತ ಎನ್‌ಪಿಎಸ್ ಉತ್ತಮ ಎನ್ನುತ್ತಿದ್ದ ಸರಕಾರ ಒಪಿಎಸ್‌ಗೆ ವಾಪಸ್ಸಾಗಿದ್ದು, ವಕ್ಫ್ ಮಂಡಳಿ ಮಸೂದೆ ಜೆಪಿಸಿ ಪರಿಶೀಲನೆಗೆ ನೀಡಿದ್ದು ಎಲ್ಲವೂ ಸರಕಾರ ಯು ಟರ್ನ್‌ಗೆ ಕಾರಣವಾಗಿವೆ ಎಂದರು.

ನರೇಂದ್ರ ಮೋದಿ ಬೆಳಿಗ್ಗೆ ಕಾಶಿ, ಮಧ್ಯಾಹ್ನ ಭುವನೇಶ್ವರ, ಸಂಜೆ ನಾಗಪುರ

ದೇಶಾದ್ಯಂತ 15 ದಿನ ಸೇವಾಪರ್ವ, ರೆಡ್‌ಕ್ರಾಸ್ ಜತೆಗೂಡಿ ರಕ್ತದಾನ ಶಿಬಿರ

ಇಂದು ನಮೋ 73ನೇ ಜನ್ಮದಿನ ಸಂಭ್ರಮ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಮಂಗಳವಾರ 74ನೇ ವರ್ಷಕ್ಕೆ ಕಾಲಿಡಲಿದ್ದು, ಬಿಜೆಪಿ ವತಿಯಿಂದ ಅವರ ಜನ್ಮದಿನ ವಿಶೇಷವಾಗಿ ಆಚರಣೆ ಆಗಲಿದೆ.

ಜನ್ಮದಿನದಂದು ಮತ್ತು ನಂತರ, ಭಾರತೀಯ ರೆಡ್ ಕ್ರಾಸ್ ಸೊಸೈಟಿ ಸಹಯೋಗದಲ್ಲಿ ಬಿಜೆಪಿ ರಾಷ್ಟ್ರವ್ಯಾಪಿ ರಕ್ತದಾನ ಶಿಬಿರ ಆಯೋಜಿಸಿದೆ. ಅಲ್ಲದೇ, ಮುಂದಿನ 15 ದಿನಗಳ ಕಾಲ ದೇಶಾದ್ಯಂತ 'ಸೇವಾ ಪಖ್ವಾರಾ'(ಸೇವಾ ಪರ್ವ) ಆಚರಿಸಲಾಗುವುದು. ಸೆ.18ರಿಂದ ಜಿಲ್ಲಾ ಮಟ್ಟದಲ್ಲಿ ಆಸ್ಪತ್ರೆಗಳು ಮತ್ತು ಶಾಲೆಗಳಲ್ಲಿ ಬಿಜೆಪಿ ಸ್ವಚ್ಛತಾ ಅಭಿಯಾನ ಕೈಗೊಳ್ಳಲಿದೆ.

ಜನ್ಮದಿನದಂದೂ ಪ್ರಧಾನಿ ಮೋದಿ ವಿವಿಧ ಕಾರ್ಯಕ್ರಮಗಳಲ್ಲಿ, ಪ್ರವಾಸದಲ್ಲಿ ಪೂರ್ಣ ತೊಡಗಿಸಿಕೊಳ್ಳಲಿದ್ದಾರೆ. ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ಮೋದಿ ಜನ್ಮದಿನದಂದು ಗಂಗೆಯಲ್ಲಿ ಪವಿತ್ರ ಸ್ನಾನ ಮಾಡಿ ಕಾಶಿ ವಿಶ್ವನಾಥನಿಗೆ ಪೂಜೆ-ಪ್ರಾರ್ಥನೆ ಸಲ್ಲಿಸಲಿದ್ದಾರೆ. ಮಧ್ಯಾಹ್ನ ಒಡಿಶಾಗೆ ತೆರಳಿ ಭುವನೇಶ್ವರದಲ್ಲಿ ಮಹಿಳೆಯರಿಗೆ ಸುಭದ್ರಾ ಯೋಜನೆಯ ಮೊದಲ ಕಂತಿನ ಹಣ ಹಸ್ತಾಂತರಿಸುವರು. 21 ರಿಂದ 60 ವರ್ಷದ ಒಡಿಶಾ ರಾಜ್ಯದ 1 ಕೋಟಿ ಮಹಿಳೆಯರು ಮುಂದಿನ 5 ವರ್ಷ ಸುಭದ್ರಾ ಯೋಜನೆಯಡಿ ವಾರ್ಷಿಕ 10,000 ರು. ಆರ್ಥಿಕ ನೆರವು ಪಡೆಯುವರು. ಈ ಯೋಜನೆಗೆ ಪುರಿ ಜಗನ್ನಾಥ ಭಗವಾನರ ಸೋದರಿ 'ಸುಭದ್ರಾ' ಹೆಸರಿಡಲಾಗಿದೆ. ಆ ಬಳಿಕ ಸಂಜೆ ಮಹಾರಾಷ್ಟ್ರದ ನಾಗಪುರಕ್ಕೆ ತೆರಳಲಿದ್ದಾರೆ. ಆಗ ಆರ್‌ಎಸ್‌ಎಸ್ ಪ್ರಧಾನ ಕಚೇರಿ ಭೇಟಿ ನೀಡುವರೇ ಎಂಬುದು ಸ್ಪಷ್ಟವಾಗಿಲ್ಲ.

ಇದಕ್ಕೂ ಮುನ್ನ ಏಪ್ರಿಲ್‌ನಲ್ಲಿ ಲೋಕಸಭೆ ಚುನಾವಣಾ ಪ್ರಚಾರ ವೇಳೆ ಮೋದಿ ನಾಗಪುರಕ್ಕೆ ಭೇಟಿ ನೀಡಿದ್ದರು.

'ಪಿಎಂ ವಿಶ್ವಕರ್ಮ ಯೋಜನೆ' ವರ್ಷಾಚರಣೆಗೆ 'ಎಂಎಸ್‌ಎಂಇ' ಆಯೋಜಿಸಿರುವ ಕಾರ್ಯಕ್ರಮ ಉದ್ಘಾಟಿಸಲು ಪ್ರಧಾನಿ ಮೋದಿ ನಾಗಪುರ ಮಾರ್ಗವಾಗಿ ವಾರ್ಧಾಗೆ ತೆರಳಲಿದ್ದಾರೆ.

ಚೆನ್ನೈನ ವೆಲಮ್ಮಾಳ್ ಖಾಸಗಿ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ, 13ರ ಹರೆಯದ ಪ್ರಿಸ್ಲೀ ಶಕಿನಾ ವಿವಿಧ ಬಗೆಯ 800 ಕೆ.ಜಿ. ಧಾನ್ಯಗಳನ್ನು ಬಳಸಿ, ನಿರಂತರ 12 ಗಂಟೆ ಶ್ರಮಿಸಿ 600 ಚದರಡಿ ವಿಸ್ತಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾವಚಿತ್ರ ರಚಿಸುವ ಮೂಲಕ ವಿಶ್ವದಾಖಲೆ ನಿರ್ಮಿಸಿದ್ದಾಳೆ. ಮಂಗಳವಾರ ಪ್ರಧಾನಿ ಮೋದಿ ಜನ್ಮದಿನ ಸಂದರ್ಭ ವಿಶ್ವದ ಅತಿದೊಡ್ಡ ಧಾನ್ಯಗಳ ಚಿತ್ರ ಅನಾವರಣಗೊಳಿಸಿದ್ದಾಳೆ. ಪ್ರಿಸ್ಲೀ ಪ್ರತಾಪ್ ಸೆಲ್ವಂ-ಸಂಕೀರಾಣಿ ದಂಪತಿ ಪುತ್ರಿ, ಚೆನ್ನೈನ ಕೊಲಪಾಕ್ಕಂ ನಿವಾಸಿ.

ಸಮಾಚಾರ ಸಣ್ಣದಲ್ಲ

ಜಾನಿ ಮಾಸ್ಟರ್ ವಿರುದ್ಧ ಲೈಂಗಿಕ ಕಿರುಕುಳ ದೂರು

ಹೈದರಾಬಾದ್: ವಿಕ್ರಾಂತ್ ರೋಣ ಚಿತ್ರದ 'ರಾ ರಾ ರಕ್ಕಮ್ಮ'... ಹಾಡಿನ ನೃತ್ಯ ಸಂಯೋಜಕ ಜಾನಿ ಮಾಸ್ಟರ್ ವಿರುದ್ಧ ಲೈಂಗಿಕ ಕಿರುಕುಳ ದೂರು ದಾಖಲಾಗಿದೆ. 21 ವರ್ಷದ ನೃತ್ಯ ಸಂಯೋಜಕಿ ಹೈದರಾಬಾದ್‌ನ ರಾಯ ದುರ್ಗಮ್ ಪೊಲೀಸ್ ಠಾಣೆಯಲ್ಲಿ ಜೀರೋ ಎಫ್ಐಆರ್ ದಾಖಲಾಗಿದೆ. ಜಾನಿ ಮಾಸ್ಟರ್ ಎಂದೇ ಖ್ಯಾತ ರಾದ ಶೇಖ್ ಜಾನಿ ಬಾಷಾ ಹೊರಾಂಗಣ ಚಿತ್ರೀಕರಣ ವೇಳೆ ಲೈಂಗಿಕ ಕಿರುಕುಳ ನೀಡಿದ್ದು , ಚೆನ್ನೈ, ಹೈದರಾ ಬಾದ್ ಮತ್ತು ಮುಂಬೈನಲ್ಲಿ ಕೂಡ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ನರಸಿಂಗಿಯಲ್ಲಿರುವ ಮನೆಗೂ ಬಂದು ಹಲವು ಬಾರಿ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಯುವತಿ ಆರೋಪಿಸಿದ್ದಾರೆ. ಯುವತಿ ಮನೆ ನರಸಿಂಗಿಯಲ್ಲಿರುವ ಕಾರಣ ರಾಯದುರ್ಗಂ ಠಾಣೆ ಪೊಲೀಸರು ಪ್ರಕರಣವನ್ನು ವರ್ಗಾಯಿಸಿದ್ದಾರೆ.

ಹಿಂದೆಯೂ ದೂರು: ಕಳೆದ ಜೂನ್‌ನಲ್ಲಿ ಡ್ಯಾನ್ಸರ್ ಸತೀಶ್ ಎನ್ನುವವರು ಜಾನಿ ಮಾಸ್ಟರ್ ವಿರುದ್ಧ ಠಾಣೆ ಮೆಟ್ಟಿಲೇರಿದ್ದರು. ಕೆಲಸ ಸಿಗದಂತೆ ಜಾನಿ ಮಾಸ್ಟರ್ ತಡೆಯುತ್ತಿದ್ದಾರೆ ಎಂದು ಆರೋಪಿಸಲಾಗಿತ್ತು. ಅಲ್ಲದೆ 2015ರಲ್ಲಿ ಕಾಲೇಜೊಂದರಲ್ಲಿ ನಡೆದ ಗಲಾಟೆಯ ಹಿನ್ನೆಲೆಯಲ್ಲಿ ಜಾನಿ ಮಾಸ್ಟರ್‌ಗೆ ಹೈದರಾಬಾದ್‌ನ ಮೆಡ್ಚಲ್‌ನ ಸ್ಥಳೀಯ ನ್ಯಾಯಾಲಯವು 2019ರಲ್ಲಿ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿತ್ತು.

ಹಣದುಬ್ಬರ ಆಧರಿಸಿ ದರ ಕಡಿತ: ಆರ್‌ಬಿಐ

ದೆಹಲಿ: ಬಡ್ಡಿದರದ ಇಳಿಕೆಯ ನಿರ್ಧಾರವು ದೀರ್ಘಾವಧಿಯ ಹಣದುಬ್ಬರವನ್ನು ಆಧರಿಸಿದೆಯೇ ಹೊರತು, ಮಾಸಿಕ ಅಂಕಿ-ಅಂಶಗಳ ಮೇಲಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದ್ದಾರೆ. ಹೆಚ್ಚಿನ ಹಣದುಬ್ಬರದಿಂದ ಆರ್‌ಬಿಐ 9ನೇ ಬಾರಿಯೂ ರೆಪೊ ದರದಲ್ಲಿ (ಶೇ.6.5) ಯಥಾಸ್ಥಿತಿ ಕಾಯ್ದುಕೊಂಡಿದೆ. ಜುಲೈನಲ್ಲಿ ಹಣದುಬ್ಬರ ಶೇ.3.6ರಷ್ಟಿತ್ತು. ಆಗಸ್ಟ್‌ನಲ್ಲಿ ಶೇ.3.7ಕ್ಕೆ ಏರಿಕೆಯಾಗಿದೆ. ಮುಂದಿನ ಆರು ತಿಂಗಳು ಇಲ್ಲವೇ ಒಂದು ವರ್ಷ ಹಣದುಬ್ಬರದ ವರದಿಯನ್ನು ನೋಡಲಾಗುವುದು. ಇದರ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಅಕ್ಟೋಬರ್ 7ರಿಂದ 9ರ ವರೆಗೆ ಆರ್‌ಬಿಐ ಗವರ್ನರ್ ಅಧ್ಯಕ್ಷತೆಯಲ್ಲಿ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆ ನಡೆಯಲಿದೆ.

ಅದಾನಿ ಸಮೂಹದಿಂದ ₹4 ಲಕ್ಷ ಕೋಟಿ ಹೂಡಿಕೆ

ಗಾಂಧಿನಗರ: ಸೌರ, ಪವನ ಮತ್ತು ಹಸಿರು ಇಂಧನ ವಲಯದ ಯೋಜನೆಗಳಲ್ಲಿ ₹4 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಅದಾನಿ ಸಮೂಹವು ರೀ-ಇನ್ವೆಸ್ಟ್-2024 ಕಾರ್ಯಕ್ರಮದಲ್ಲಿ ಘೋಷಿಸಿದೆ. ದೇಶದ ಅತಿದೊಡ್ಡ ನವೀಕರಿಸಬಹುದಾದ ಇಂಧನ ಕಂಪನಿಯಾದ ಅದಾನಿ ಗ್ರೀನ್ ಎನರ್ಜಿ, ಪ್ರಸ್ತುತ 11.2 ಗಿಗಾವಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಹೊಂದಿದ್ದು, 2030ರ ವೇಳೆಗೆ 50 ಗಿಗಾವಾಟ್ಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ಹೂಡಿಕೆಯಿಂದ 70 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ಕಂಪನಿ ತಿಳಿಸಿದೆ.

ನ್ಯಾಕ್ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ನಾಗರಬಾವಿಯ ನ್ಯಾಕ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಎಸ್-ವ್ಯಾಸ್ ವಿವಿ ಕುಲಪತಿ ಪದ್ಮಶ್ರೀ ಡಾ.ಎಚ್. ಆರ್. ನಾಗೇಂದ್ರ ಗುರೂಜಿ ಹಾಗೂ ನ್ಯಾಕ್ ಅಧ್ಯಕ್ಷ ಅನಿಲ್ ಸಹಸ್ರಬುದ್ಧೆ ಸನ್ಮಾನಿಸಿದರು.

ಪಟಾಕಿ ಘಟಕ ಸ್ಫೋಟ, 14 ಮಂದಿಗೆ ಗಾಯ

ಅಮರಾವತಿ: ಆಂಧ್ರಪ್ರದೇಶದ ಅಂಬೇಡ್ಕರ್ ಕೊಣಸೀಮಾ ಜಿಲ್ಲೆಯ ಅಮಲಾಪುರ ನಗರದಲ್ಲಿ ಅಕ್ರಮವಾಗಿ ವಸತಿ ಕಟ್ಟಡದಲ್ಲೇ ನಡೆಸುತ್ತಿದ್ದ ಪಟಾಕಿ ಕಾರ್ಖಾನೆಯಲ್ಲಿ ಸೋಮವಾರ ಸ್ಫೋಟ ಸಂಭವಿಸಿ 14 ಕಾರ್ಮಿಕರು ಗಾಯಗೊಂಡಿದ್ದಾರೆ. ಒಬ್ಬ ಕಾರ್ಮಿಕನ ಸ್ಥಿತಿ ಚಿಂತಾಜನಕವಾಗಿದೆ. ಸ್ಫೋಟದ ತೀವ್ರತೆಗೆ 2 ಅಂತಸ್ತಿನ ಕಟ್ಟಡಕ್ಕೆ ಭಾರಿ ಹಾನಿಯಾಗಿದೆ. ಸ್ಥಳೀಯರು ಗಾಯಾಳುಗಳನ್ನು ಅಮಲಾಪುರ ನಗರದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸ್ಫೋಟಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ.

{ಆರ್.ವಿ.ದೇಶಪಾಂಡೆ} ಶಾಸಕ

ಸಿದ್ದರಾಮಯ್ಯ ಯಾಕೆ ರಾಜೀನಾಮೆ ಕೊಡಬೇಕು? ಏನು ಕಾರಣವಿದೆ? ಏನು ತಪ್ಪು ಮಾಡಿದ್ದಾರೆ? ಉದ್ದೇಶಪೂರ್ವಕವಾಗಿ ಬಿಜೆಪಿಯವರು ಸತ್ಯಕ್ಕೆ ದೂರವಾದ ಆರೋಪ ಸೃಷ್ಟಿಸಿ ಗೊಂದಲ ಉಂಟು ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಯಾವ ತಪ್ಪೂ ಮಾಡಿಲ್ಲ. ಅವರೇ ಐದು ವರ್ಷ ಸಿಎಂ ಆಗಿರುತ್ತಾರೆ.



ಖಾದ್ಯತೈಲದ ದರ ಲೀಟರ್ ಗೆ 20-25 ರು. ಏರಿಕೆ | ಸುಂಕ ಏರಿಕೆಯಿಂದ ಬೆಲೆ ಹೆಚ್ಚಳ | ಆಮದಿನಿಂದ ದೇಶೀಯ ಘಟಕಗಳಿಗೆ ತೊಂದರೆ

ಅಡುಗೆಎಣ್ಣೆ ದರ ಹೆಚ್ಚಳ: ಗ್ರಾಹಕರಿಗೆ ಸಂಕಷ್ಟ

ಹೂವಪ್ಪ ಐ. ಎಚ್. ಬೆಂಗಳೂರು

ಈರುಳ್ಳಿ ಬೆಲೆ ಏರಿಕೆ ಬೆನ್ನಲ್ಲೇ ಸಾಲ ಸಾಲು ಹಬ್ಬಗಳ ನಡುವೆ ಅಡುಗೆಎಣ್ಣೆ ಬೆಲೆ ಏರಿಕೆ ಗ್ರಹಕರನ್ನು ಬೆಚ್ಚಿ ಬೀಳಿಸಿದೆ.

ಕೇಂದ್ರ ಸರ್ಕಾರ ಕಚ್ಚಾ ಮತ್ತು ರಿಫೈನ್ಡ್ ಸೋಯಾಬೀನ್, ಸೂರ್ಯಕಾಂತಿ ಹಾಗೂ ತಾಳೆ ಎಣ್ಣೆ ಮೇಲಿನ ಆಮದು ಸುಂಕವನ್ನು ಹೆಚ್ಚಿಸಿದೆ. ಇದರಿಂದ ಇಲ್ಲಿನ ಎಣ್ಣೆಕಾಳು ಬೆಳೆಗಾರರಿಗೆ ಅನುಕೂಲವಾಗಲಿದ್ದು, ಗ್ರಾಹಕರ ಜೇಬಿಗೆ ಮಾತ್ರ ಕತ್ತರಿ ಬಿದ್ದಿದೆ. ಸೆಪ್ಟೆಂಬರ್ 14ರಿಂದಲೇ ಈ ಏರಿಕೆ ಅನ್ವಯವಾಗಿದೆ. ಎಣ್ಣೆಕಾಳುಗಳ ಬೆಲೆ ಕುಸಿತದಿಂದ ರೈತರನ್ನು ಪಾರುಮಾಡಲು ಕೇಂದ್ರ ಸರ್ಕಾರ ಈ ಮಹತ್ವದ ತೀರ್ಮಾನ ತೆಗೆದುಕೊಂಡಿದೆ. ಸರ್ಕಾರದ ಅಂಕಿ -ಅಂಶಗಳ ಪ್ರಕಾರ ಕಳೆದ 18 ತಿಂಗಳಿನಿಂದ ರಿಫೈನ್ಡ್ ಎಣ್ಣೆಯ ದರ ಇಳಿಕೆಯ ಹಾದಿಯಲ್ಲಿತ್ತು. ಅದರಲ್ಲೂ ಜುಲೈ, ಆಗಸ್ಟ್‌ನಲ್ಲಿ ಶೇ. 4.6ರಷ್ಟು ಕುಸಿತ ಕಂಡಿತ್ತು.

ಸೆಪ್ಟೆಂಬರ್ 13ರಂದು ಹಣಕಾಸು ಇಲಾಖೆ ಹೊರಡಿಸಿದ ಅಧಿಸೂಚನೆ ಪ್ರಕಾರ ಕಚ್ಚಾ ಸೋಯಾಬೀನ್, ಸೂರ್ಯಕಾಂತಿ ಹಾಗೂ ತಾಳೆ ಎಣ್ಣೆ ಮೇಲಿನ ಮೂಲ ಆಮದು ಸುಂಕವನ್ನು ಶೂನ್ಯದಿಂದ ಶೇ.20ಕ್ಕೆ ಹೆಚ್ಚಿಸಲಾಗಿದೆ. ಇದೇ ವೇಳೆ ರಿಫೈನ್ಡ್ ಎಣ್ಣೆಗಳ ಮೇಲಿನ ಮೂಲ ಆಮದು ಸುಂಕವನ್ನು ಶೇ. 12.5ರಿಂದ ಶೇ. 32.5ಕ್ಕೆ ಏರಿಸಲಾಗಿದೆ.

ಆಮದು ಹೆಚ್ಚಳ: ಈ ಹಿಂದೆ ತಾಳೆಎಣ್ಣೆ ಬೆಲೆ ಅಗ್ಗವಾಗಿದ್ದರಿಂದ ಆಮದು ಏರಿಕೆ ಕಂಡಿತ್ತು. 2024ರ ಮೊದಲಾರ್ಧದಲ್ಲಿ ಭಾರತದ ತಾಳೆಎಣ್ಣೆ ಆಮದು ಶೇ. 30ರಷ್ಟು ಹೆಚ್ಚಳವಾಗಿತ್ತು. ಇದೇ ರೀತಿ ಸೂರ್ಯಕಾಂತಿ ಬೀಜ, ಸೂರ್ಯಕಾಂತಿ ಹಾಗೂ ಹತ್ತಿಬೀಜ ಎಣ್ಣೆಗಳ ಆಮದು ಶೇ. 55ರಷ್ಟು ಏರಿಕೆ

ಕಂಡಿತ್ತು.

ಇದರಿಂದ ಇದೀಗ ಕಚ್ಚಾ ಅಡುಗೆಎಣ್ಣೆಗಳ ಮೇಲಿನ ಆಮದು ಸುಂಕ ಶೇ. 27.5ಕ್ಕೆ ತಲುಪಿದೆ. ಹಾಗೂ ರಿಫೈನ್ಡ್ ಎಣ್ಣೆಗಳ ಮೇಲಿನ ಆಮದು ಸುಂಕ ಶೇ. 35.75ಕ್ಕೆ ಮುಟ್ಟಿದೆ. ಇದು ಈ ಹಿಂದೆ ಕ್ರಮವಾಗಿ ಶೇ. 5.5 ಮತ್ತು ಶೇ. 13.75ರಷ್ಟು ಇತ್ತು.

ನಮ್ಮ ದೇಶ, 70ರಷ್ಟು ಆಮದಿನ ಖಾದ್ಯತೈಲದ ಮೇಲೆಯೇ ಅವಲಂಬಿತವಾಗಿದೆ. ಈ ಹಿಂದೆ ಜಾಗತಿಕ ಮಟ್ಟದಲ್ಲಿ ಸರಕುಗಳ ಬೆಲೆ ಏರಿಕೆ ಕಾಣುತ್ತಿದ್ದ ಸಂದರ್ಭದಲ್ಲಿ ಗ್ರಾಹಕರನ್ನು ಖುಷಿಪಡಿಸಲು ಆಮದು ಸುಂಕ ಇಳಿಸಲಾಗಿತ್ತು. ಇದೀಗ ದೇಶೀಯ ರೈತರ ಮೇಲೆ ಇದು ಬೀರುತ್ತಿರುವ ಪರಿಣಾಮ ಕೊನೆಗಾಣಿಸಲು ಪುನಃ ಆಮದು ಸುಂಕವನ್ನು ಹೆಚ್ಚಿಸಲಾಗಿದೆ.

ಆಮದಿನಿಂದ ದೇಶೀಯ ಘಟಕಗಳಿಗೆ ಹೊಡೆತ: ಅಗ್ಗದ ಆಮದು ಖಾದ್ಯತೈಲದಿಂದ ದೇಶದಲ್ಲಿ ಅಡುಗೆ ಎಣ್ಣೆ ಉತ್ಪಾದನಾ ಘಟಕಗಳು ಅಂದಾಜು

ಶೇಂಗಾ, ಸೂರ್ಯಕಾಂತಿ ಸೋಯಾ ಕುಸಿಭಿ ಹೀಗೆ ಎಲ್ಲಾ ಎಣ್ಣೆ ಬೀಜಗಳನ್ನು ನೂರಾರು ಕ್ವಿಂಟಲ್ ಬೆಳೆಯುತ್ತಿದ್ದೆವು ಇತ್ತೀಚಿನ ವರ್ಷಗಳಲ್ಲಿ ಎಣ್ಣೆ ಕಾಳಿಗೆ ದರ ಸಿಗದ ಕಾರಣ ನಿಲ್ಲಿಸಿ ಮೆಕ್ಕೆಜೋಳ, ಹತ್ತಿ, ಮೆಣಸಿನಕಾಯಿ, ಬೆಳೆಯಲು ಆರಂಭಿದ್ದೆವು ಮುಂದೆ ಹೆಚ್ಚು ಬೆಲೆ ಸಿಗುವುದಾದರೆ ಎಣ್ಣೆ ಬೆಳೆಗಳ ಕಡೆ ಹೆಚ್ಚು ಗಮನ ಹರಿಸುತ್ತೇವೆ.

ಮಾಲತೇಶ, ರೈತ ಹಾವೇರಿ

ಇನ್ನೇನು ಎಣ್ಣೆ ಕಾಳು ಬೆಳೆ ಕಟಾವು ಮಾಡುವ ಸಮಯ ಬರಲಿದೆ. ಕೇಂದ್ರ ಸರಕಾರದ ಸುಂಕ ಹೆಚ್ಚಳದಿಂದ ರೈತರಿಗೆ ಉತ್ತಮ ಬೆಲೆ ಸಿಗುತ್ತದೆ. ಇದರಿಂದ ರೈತರು ಎಣ್ಣೆ ಕಾಳು ಬೆಳೆಯಲು ಆಸಕ್ತರಾಗುತ್ತಾರೆ.

-ರಾಧಾಕೃಷ್ಣ, ಆಯಿಲ್ ಮಿಲ್ಸ್ ಮಾಲೀಕರು, ಬೆಂಗಳೂರು

ಈಗಾಗಲೇ ಅಕ್ಕಿ, ಬೇಳೆಕಾಳು, ರಾಗಿ, ಈರುಳ್ಳಿ ಬೆಳ್ಳುಳ್ಳಿ, ಬೆಲೆ ಗಗನಕ್ಕೇರಿಯಾಗಿವೆ. ಮುಂದೆ ಸಾಲುಸಾಲು ಹಬ್ಬಗಳು ಬರುತ್ತಿವೆ. ಇಂಥ ಸಂದರ್ಭದಲ್ಲೇ ಅಡುಗೆ ಎಣ್ಣೆ ಬೆಲೆ ಏರಿಕೆ ಗಾಯದ ಮೇಲೆ ಬರೆಹಾಕುತ್ತಿದೆ.

- ಶಿಲ್ಪಾ ಪಿ., ಗ್ರಾಹಕಿ

ಶೇ. 70 ರಷ್ಟು ಸ್ಥಗಿತಗೊಂಡು ದಶಕಗಳೇ ಕಳೆದಿವೆ. ಹೀಗಾಗಿ ಎಣ್ಣೆಕಾಳು ರೈತರು ಬೆಳೆದರೂ ಬೆಲೆ ಸಿಗುತ್ತಾ ಇರಲಿಲ್ಲ ಪರಿಣಾಮ ಪ್ರಸ್ತುತ ಶುಂಕ ಏರಿಕೆ ರೈತರಿಗೆ ಉತ್ತಮ ಬೆಲೆ ಸಿಗುವ ಆಶಾಭಾವನೆ ಬರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ ಎಪಿಎಂಸಿ ಖಾದ್ಯ ತೈಲ ಪೂರೈಕೆದಾರರು ರಾಜಶೇಖರ.

ಸುಂಕ ಏರಿಕೆಯಿಂದ ಬೆಲೆ ಹೆಚ್ಚಳ: ಕೇಂದ್ರಸರಕಾರ ಸುಂಕ ಏರಿಕೆಯ ಪರಿಣಾಮ ಸ್ಥಳೀಯ ಸಗಟು ಮಾರುಕಟ್ಟೆ ಹಾಗೂ ಚಿಲ್ಲರೆ ಮಾರುಕಟ್ಟೆಗಳಲ್ಲಿ ಖಾದ್ಯತೈಲ ಬೆಲೆ ಏರಿಕೆ ಕಂಡಿದೆ. ನವೆಂಬರ್ 2023-ಜುಲೈ 2024 ರ ಅವಧಿಯಲ್ಲಿ ಅಡುಗೆ ಎಣ್ಣೆಯ ಆಮದು 1,19,35,227 ಟನ್‌ಗಳು. ಅದೇ 2022-23 ಮಾರುಕಟ್ಟೆ ವರ್ಷದಲ್ಲಿ 1,21,22,711 ಟನ್‌ಗಳಾಗಿವೆ.

ಅಡುಗೆ ಎಣ್ಣೆಗಳ ಮಾರುಕಟ್ಟೆ ವರ್ಷವು ನವೆಂಬರ್‌ನಿಂದ ಅಕ್ಟೋಬರ್ ವರೆಗೆ ಇರುತ್ತದೆ. ಭಾರತದ ಅಡುಗೆ ಎಣ್ಣೆಯ ಬೇಡಿಕೆಯ ಶೇಕಡಾ 50 ಕ್ಕಿಂತ ಹೆಚ್ಚು ಆಮದುಗಳ ಮೂಲಕ ಪೂರೈಸಲಾಗುತ್ತದೆ. ಎಸ್‌ಇಎ ಮಾಹಿತಿಯ ಪ್ರಕಾರ, ಖಾದ್ಯವಲ್ಲದ ತೈಲಗಳ ಆಮದು 1,32,242 ಟನ್‌ಗಳಿಂದ 1,88,955 ಟನ್‌ಗಳಿಗೆ ಏರಿದೆ. ಪ್ರಸಕ್ತ ವರ್ಷದ ಮೊದಲ ಒಂಬತ್ತು ತಿಂಗಳ ಅವಧಿಯಲ್ಲಿ ಸಸ್ಯಜನ್ಯ ಎಣ್ಣೆಗಳ (ಖಾದ್ಯ ಮತ್ತು ಖಾದ್ಯೇತರ ತೈಲಗಳು) ಒಟ್ಟು ಆಮದು 121.24 ಲಕ್ಷ ಟನ್‌ಗಳು.

ಹಿಂದಿನ ವರ್ಷಕ್ಕೆ ಹೋಲಿಸಿದರೆ 122.55 ಲಕ್ಷ ಟನ್‌ಗಳಿಗೆ ಹೋಲಿಸಿದರೆ ಶೇ. 2023-24 ತೈಲ ವರ್ಷದ ಮೊದಲ ಒಂಬತ್ತು ತಿಂಗಳಲ್ಲಿ (ನವೆಂಬರ್ 2023-ಜುಲೈ 2024) ಭಾರತವು 15,18,671 ಟನ್‌ಗಳಷ್ಟು ಸಂಸ್ಕರಿಸಿದ ಖಾದ್ಯತೈಲವನ್ನು ಆಮದು ಮಾಡಿಕೊಂಡಿದೆ.

ದರ ಪಟ್ಟಿ ಲೀ. ಗೆ

ಸಗಟು	ಹಿಂದಿನ ದರ	ಪ್ರಸ್ತುತ ದರ
ಸೂರ್ಯಕಾಂತಿ	112	130
ತಾಳೆಎಣ್ಣೆ	90	112
ಕಡಲೆಕಾಯಿ	140	150
ಸೋಯಾ	100	110
ದೀಪದ ಎಣ್ಣೆ	110	120

ಬೆಲೆ ಏರುಪೇರು ವಿವರ: ಬಡ ಗ್ರಾಹಕರು ಸಣ್ಣ ಹೋಟೆಲ್, ಬೋಂಡಾ ಬಜ್ಜಿ ವ್ಯಾಪಾರಿಗಳು ಉಪಯೋಗಿಸುವ ತಾಳೆ ಎಣ್ಣೆ ಕೇವಲ 3-4 ದಿನಗಳ ಹಿಂದೆ ಸಗಟು ದರ 1 ಲೀ, ನ 10 ಪ್ಯಾಕೆಟ್ ತುಂಬಿದ ಒಂದು ಬಾಕ್ಸ್ ಬೆಲೆ 900 ಇದ್ದ ಬೆಲೆ ಈಗ 1120 ಏರಿಕೆಯಾಗಿದೆ 15 ಕೆಜಿ ತುಬಿದ 1 ಟಿನ್ 1700 ಇದ್ದದ್ದು , 1970 ರು. ಗೆ ಹೆಚ್ಚಳ ಕಂಡಿದೆ. ಅಂದರೆ ಒಂದು ಲೀ, ಗೆ ಸಗಟು ದರ ಹೆಚ್ಚು ಕಡಿಮೆ 20-22 ರು. ನಷ್ಟು ಗ್ರಾಹಕರಿಗೆ ಹೆಚ್ಚಳವಾಗುತ್ತದೆ. ಇನ್ನು ಸಾಮಾನ್ಯವಾಗಿ ಎಲ್ಲಾ ಗ್ರಾಹಕರು ಬಳಸುವ ಶುದ್ದೀಕರಿಸಿದ ಸೂರ್ಯಕಾಂತಿ ಎಣ್ಣೆ 1 ಲೀ, ನ 10 ಪಾಕೆಟ್ ತುಂಬಿದ ಒಂದು ಬಾಕ್ಸ್ 1100-1120 ಇತ್ತು ಈಗ ಬೆಲೆ 1250-1300 ರು.. ಜಿಗಿದಿದೆ.15 ಕೆಜಿ ತುಬಿದ 1 ಟಿನ್ ಬೆಲೆ 1700 ಇದ್ದದ್ದು , 1970 ರು.. ಗೆ ಅಧಿಕವಾಗಿದೆ. ಲೀ, ಗೆ 15-20 ರು. ನಷ್ಟು ಏರಿಕೆಯಾಗಿದೆ. ಇನ್ನು ಕಡಲೆಕಾಯಿ ಎಣ್ಣೆ, ಸೋಯಾ ಎಣ್ಣೆ ದೀಪದ ಎಣ್ಣೆ ತಲಾ 10 ರಿಂದ 15 ರು. ನಷ್ಟು ಏರಿಕೆಯಾಗಿವೆ.

ಚಿಲ್ಲರೆ ಅಂಗಡಿಕಾರರ ಕನಿಷ್ಟ 5 ರೂ. ಲಾಭ ಮಾಂಸ ಸೇರಿಸಿದರೆ ಲೀ ಗೆ 20-25 ರೂ. ಹೊರೆಬೀಳುತ್ತಿದೆ. ಜೊತೆಗೆ ಈರುಳ್ಳಿ, ಬೆಳ್ಳುಳ್ಳಿ, ಅಕ್ಕಿ ರಾಗಿಬೆಳೆ ಕಾಳು ಹೀಗೆ ಎಲ್ಲಾ ಅಗತ್ಯ ವಾಸುಗಳು ಗಗನಮುಖಿಯಾಗಿವೆ ಒಟ್ಟಿನಲ್ಲಿ ಬಡ ಗ್ರಾಹಕರು ಜೀವನ ದುಸ್ತ ರವಾಗಿದೆ. ಇನ್ನು ಪೂಜೆಗೆ ಬಳಸುವ ದೀಪದ ಎಣ್ಣೆಯನ್ನು 110ರಿಂದ 120 ರೂ.ಗೆ ಹೆಚ್ಚಿಸಿ ವ್ಯಾಪಾರಸ್ಥರು ಮಾರಾಟ ಮಾಡುತ್ತಿದ್ದಾರೆ. ನಗರಗಳು ಮತ್ತು ಪಟ್ಟಣಗಳಲ್ಲಿ, ಅಂಗಡಿಗಳು ಮತ್ತು ಆನ್‌ಲೈನ್ ಮಾರಾಟ ಕಂಪನಿಗಳು ಸಹ ಬೆಲೆಗಳನ್ನು ಹೆಚ್ಚಿಸುತ್ತಿವೆ.

ಸಿನಿಮಾ ನಿರಾಸಕ್ತಿಗೆ ವ್ಯವಸ್ಥೆ ಹೊಣೆ: ಗಿರೀಶ್ ಕಾಸರವಳ್ಳಿ

ಶಿವಮೊಗ್ಗ: ಏಳೆಂಟು ವರ್ಷಗಳ ಬಳಿಕ ಮತ್ತೊಂದು ಸಿನೆಮಾ ನಿರ್ದೇಶನ ಮಾಡಲು ಮುಂದಾಗಿದ್ದೇನೆ. ಬಹುತೇಕ ಸೆಪ್ಟೆಂಬರ್ 23 ರಿಂದ ಚಿತ್ರೀಕರಣ ಆರಂಭ ಆಗಲಿದೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ತಿಳಿಸಿದರು.

ಗಿರೀಶ್ ಕಾಸರವಳ್ಳಿಯವರ ಚಲನಚಿತ್ರಗಳ ಕುರಿತು ಶನಿವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸದ್ಯ ಒಂದು ಸಿನಿಮಾ ಮಾಡುತ್ತಿದ್ದೇನೆ. ಅನಂತಮೂರ್ತಿ ಅವರ ಆಕಾಶ ಮತ್ತು ಬೆಕ್ಕು ಕೃತಿ ಆಧಾರಿತ. ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಂವಾದದಲ್ಲಿ ಭೂಮಿಕಾ ಅವರ ಕೂರ್ಮಾವತಾರದಲ್ಲಿ ಹಲವು ಸಂಕೇತಗಳ ಒಳತಿರುಳು ಏನು ಎಂಬುದಕ್ಕೆ ಕಾಸರವಳ್ಳಿ ಉತ್ತರಿಸಿ, ಸಿನೆಮಾದಲ್ಲಿ ಸಂಕೇತ ಎಂಬುದು ಮುಜುಗರ ಸಂಗತಿ. 1970 ರಲ್ಲಿ ಹೊಸ ಸಿನಿಮಾ ಬಂದಾಗ ಹೊಸ ಅಲೆ ಅಂತ ಕರೆದರು. ಸಿನಿಮಾ ಮೊದಲು ಅನುಭವಿಸೋಣ. ಯಾವ ದೃಶ್ಯ ಸಾಂದ್ರತೆ ಹೆಚ್ಚು ಮಾಡುತ್ತೆ ಅನ್ನುವುದು ಮುಖ್ಯ. ದಿನ ನಿತ್ಯದ ವ್ಯವಹಾರದಲ್ಲಿ ನೋಡಿರದ ಸಂಗತಿ ಸಿನೆಮಾಗಳಲ್ಲಿ ಕಾಣಬಹುದು ಎಂದರು.

ಕಲೆಯಲ್ಲಿ ಸಮಾನಂತರ ಇರಲಿ: ನಿಮ್ಮ ದೃಷ್ಟಿಯಿಂದ ಸಿನಿಮಾ ಸಂದೇಶವೇ, ವ್ಯಾಪಾರವೇ ಎಂಬುದಕ್ಕೆ ಪ್ರತಿಕ್ರಿಯಿಸಿ, ನಾನು ನಿರ್ದೇಶಕ. ನಾನು ಉಪದೇಶ ಮಾಡುವವ ಅಲ್ಲ. ಮೇಷ್ಟ್ರು ಮಕ್ಕಳಿಗೆ ಪಾಠ ಮಾಡುತ್ತಾರೆ. ಕಲೆಯಲ್ಲಿ ಯಾವತ್ತೂ ಸಮಾನಾಂತರ ಇರಬೇಕು. ಪ್ರೇಕ್ಷಕರು ಯಾವತ್ತೂ ದಡ್ಡರಲ್ಲ. ಹಾಗಾಗಿ ನಿರ್ದೇಶಕ ಜಾಣ ಎಂಬ ಅರ್ಥದಲ್ಲಿ ಚಿತ್ರ ತೆಗೆಯಬಾರದು ಎಂದರು. ಈಗ ಎಲ್ಲರೂ ಮಾರುಕಟ್ಟೆ ಸಂಸ್ಕೃತಿಯ ಕೂಸುಗಳು. ನನ್ನ ಸಿನೆಮಾವೂ ಕಮರ್ಷಿಯಲ್. ಆದರೆ ಅದು ಓಡಲ್ಲ ನಾನೇನು ಮಾಡಲಿ. ಎಲ್ಲರೂ ಹಾಕಿದ ಬಂಡವಾಳ ಬರಲಿ ಎಂದೇ ನಿರೀಕ್ಷೆ ಮಾಡುತ್ತಾರೆ. ಕೊಲೆ, ಹಿಂಸೆ, ಅತ್ಯಾಚಾರ ಬಂಡವಾಳ ಮಾಡಿಕೊಳ್ಳುವ ಮಾರುಕಟ್ಟೆ ಸಂಸ್ಕೃತಿಯನ್ನು ನಾನು ಒಪ್ಪಲ್ಲ ಎಂದರು. ಕಲಾತ್ಮಕ ಚಿತ್ರ ಸಾಮಾನ್ಯ ಜನರನ್ನು ಮುಟ್ಟುವಲ್ಲಿ ವಿಫಲ ಆಗಿರುವುದು ಯಾಕೆ ಎಂಬ ಪ್ರಶ್ನೆಗೆ, ಸಾಮಾನ್ಯ ಜನರು ಯಾರು? ದೋಷ ನನ್ನಲ್ಲಿ ಇಲ್ಲ. ಕೇರಳದಲ್ಲಿ ಈ ತರಹ ಸಿನಿಮಾ ಓಡುತ್ತೆ. ಅವರಿಗೆ ಅದರ ಮಹತ್ವ ಗೊತ್ತಿದೆ. ಆದರೆ ಬೆಂಗಳೂರಿನಲ್ಲಿ ಓಡುವುದಿಲ್ಲ. ಒಳ್ಳೆಯ ಕಲೆ ಅನುಭವಿಸುವ ಶಿಕ್ಷಣ ಅವರಿಗೆ ಕೊಟ್ಟಿಲ್ಲ ಅಷ್ಟೇ. ಸಿನಿಮಾದಲ್ಲಿ ಸಮಸ್ಯೆ ಇಲ್ಲ ಎಂದು ಗಿರೀಶ್ ಕಾಸರವಳ್ಳಿ ನುಡಿದರು.

ಶಿವಮೊಗ್ಗದಲ್ಲಿ ಸೋಮವಾರ ತಮ್ಮ ಚಲನಚಿತ್ರಗಳ ಕುರಿತ ಸಂವಾದದಲ್ಲಿ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಪಾಲ್ಗೊಂಡರು.

ಮಕ್ಕಳ ಪ್ರತಿಭೆ ಹೊರಹಾಕಲು ಸಿನಿಮಾ ಮಾಧ್ಯಮ ಅವಶ್ಯ

ಬೆಂಗಳೂರು: ಶಿಕ್ಷಣದ ಜತೆಗೆ ಸಿನಿಮಾ ಆಸಕ್ತಿಯನ್ನು ಮಕ್ಕಳು ಚಿಕ್ಕವರಾಗಿದ್ದಾಗಲೇ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ದಿ ಗ್ರೀನ್ ಸ್ಕೂಲ್ ಬೆಂಗಳೂರು ಪ್ರಾಂಶುಪಾಲರು ಮತ್ತು ನಿರ್ದೇಶಕಿ ಉಷಾ ಅಯ್ಯರ್ ತಿಳಿಸಿದರು.

ವಿಶ್ವದಲ್ಲಿಯೇ ಮೊಟ್ಟಮೊದಲ ಚಿಕ್ಕ ಮಕ್ಕಳಿಗೆ ಸಿನಿಮಾ ತಯಾರಿಕೆ ಬಗ್ಗೆ ಕಲಿಸಿಕೊಡುವ ಕೋರ್ಸ್ ಆರಂಭಿಸಿರುವುದು ಹೆಮ್ಮೆಯ ಸಂಗತಿ. ಮುಂದಿನ ಭವಿಷ್ಯದ ಹಿನ್ನೆಲೆಯಲ್ಲಿ ಮಕ್ಕಳಿಗೆ ಆಟ, ಪಾಠದ ಜತೆ ಸಿನಿಮಾ ಕ್ಷೇತ್ರವನ್ನು ಪರಿಚಯಿಸುವ ಕೆಲಸವನ್ನು ಮಾಡಲು ಒಂದು ಚಿಕ್ಕ ಪ್ರಯತ್ನವಾಗಿದೆ. ಸಿನಿಮಾ ಮೂಲಕವೂ ಸಹ ಮಕ್ಕಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳವ ಅವಕಾಶ ಇರುತ್ತದೆ. ಕಲೆಯನ್ನು ಆರಾಧಿಸುವ ಮನೋಭಾವ ಮಕ್ಕಳು ಬೆಳಸಿಕೊಳ್ಳಬೇಕು. ಕೇವಲ ಒಂದು ಕ್ಷೇತ್ರದಲ್ಲಿ ಸಾಧನೆ ಸೀಮಿತವಾಗದೆ ಬಹುಪ್ರತಿಭೆಯನ್ನು ಇಟ್ಟುಕೊಂಡು ಸಿನಿಮಾ ಉಳಿಸುವ ಬೆಳೆಸುವ ಕಾರ್ಯವನ್ನು ಯುವಪೀಳಿಗೆ ಮಾಡಬೇಕುತ್ತದೆ. ಖ್ಯಾತ ಸಿನಿಮಾ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರು ಚಿತ್ರರಂಗದಲ್ಲಿ ದಶಕಗಳ ಕಾಲ ಮಾಡಿರುವ ಸಾಧನೆಯು ನಮ್ಮ ಮಕ್ಕಳಿಗೆ ಸ್ಫೂರ್ತಿಯಾಗಲಿ ಎಂದರು.

ಮಕ್ಕಳಿಗೆ ಸಿನಿಮಾ ತಯಾರಿಕೆ ಕೋರ್ಸ್ ಉದ್ಘಾಟನೆಯಲ್ಲಿ ಉಷಾ ಅಯ್ಯರ್, ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು.

ಸಿನಿಮಾ ಬಗ್ಗೆ ಕುಗ್ಗಿದ ಆಸಕ್ತಿ: ಚಿತ್ರ ಸಾಹಿತಿ ನಾಗೇಂದ್ರ ಪ್ರಸಾದ್ ಮಾತನಾಡಿ, ಜನರಲ್ಲಿ ಸಿನಿಮಾಗಳ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ. ಆದ್ದರಿಂದ ಸಿನಿಮಾ ನಿರ್ಮಾಣ ಮಾಡುವವರಿಗೆ ಪ್ರೋತ್ಸಾಹ ದೊರೆಯುತ್ತಿಲ್ಲ. ರಾಜ್ಯದಲ್ಲಿ ಕನ್ನಡ ಸಿನಿಮಾಗಳನ್ನು ನೋಡುವುದಿಲ್ಲಾ ಎಂದು ಬೊಬ್ಬೆ ಹೊಡೆಯುತ್ತಿರುವ ಸಂದರ್ಭದಲ್ಲಿ ಒಳ್ಳೆ ಸಿನಿಮಾಗಳನ್ನು ತೆಗೆಯಲು ಅವಕಾಶ ಕೊಡಿ. ಅದರಲ್ಲೂ ಶಾಲೆಗಳಲ್ಲಿ ಸಿನಿಮಾ ನಿರ್ಮಾಣದ ಕೋರ್ಸ್ ಗಳನ್ನು ಆರಂಭ ಮಾಡುವುದರಿಂದ ಮಕ್ಕಳಲ್ಲಿ ಸಿನಿಮಾ ಬಗ್ಗೆ ಹೆಚ್ಚು ಆಸಕ್ತಿ ಮೂಡಬೇಕು ಎಂದರು.

ರಾಜೀನಾಮೆ ಪತ್ರ ಸಲ್ಲಿಕೆ ಸಾಧ್ಯತೆ | ಸಿಎಂ ರೇಸ್‌ನಲ್ಲಿ ಮೊದಲ ಸಾಲಿನಲ್ಲಿ ಸಚಿವೆ ಅತಿಶಿ

ಲೆ.ಗವರ್ನರ್ ಭೇಟಿಗೆ ಸಮಯ ಕೇಳಿದ ಕೇಜ್ರಿವಾಲ್

ದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಲೆಫ್ಟಿನೆಂಟ್ ಗವರ್ನರ್ ವಿ.ಕೆ ಸಕ್ಸೇನಾ ಅವರನ್ನು ಭೇಟಿ ಮಾಡಲು ಮಂಗಳವಾರ ಸಮಯ ಕೇಳಿದ್ದು, ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ದೆಹಲಿ ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ, ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐನಿಂದ ಬಂಧಿತರಾಗಿದ್ದ ಕೇಜ್ರಿವಾಲ್ ಸುಪ್ರೀಂಕೋರ್ಟ್‌ನಿಂದ ಷರತ್ತಿನ ಜತೆಗೇ ಮಧ್ಯಂತರ ಜಾಮೀನು ಪಡೆದು ಶುಕ್ರವಾರ ಜೈಲಿನಿಂದ ಬಿಡುಗಡೆ ಆಗಿದ್ದರು. ಬಳಿಕ ಇನ್ನೆರಡು ದಿನದಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡುವೆ. ಪಕ್ಷದ ನಾಯಕರೊಬ್ಬರು ಮುಖ್ಯಮಂತ್ರಿ ಅಧಿಕಾರ ಸ್ವೀಕರಿಸುತ್ತಾರೆ ಎಂದು ಭಾನುವಾರ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಹೇಳಿದ್ದರು. ದೆಹಲಿ ಸರಕಾರದಲ್ಲಿ ಶಿಕ್ಷಣ, ಲೋಕೋಪಯೋಗಿ ಸೇರಿದಂತೆ ಹಲವು ಪ್ರಮುಖ ಖಾತೆ ನಿಭಾಯಿಸುತ್ತಿರುವ ಸಚಿವೆ ಅತಿಶಿ ಸಿಎಂ ಸ್ಥಾನದ ರೇಸ್‌ನಲ್ಲಿ ಮೊದಲ ಸಾಲಿನಲ್ಲಿದ್ದಾರೆ. ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಚಿವ ಸೌರಭ್ ಭಾರದ್ವಾಜ್, ರಾಜ್ಯಸಭಾ ಸದಸ್ಯರಾದ ರಾಘವ್ ಚಡ್ಡಾ, ಸಂಜಯ್ ಸಿಂಗ್, ಹಿರಿಯ ಮುಖಂಡ ಕೈಲಾಶ್ ಗೆಹ್ಲೋಟ್ ಕೂಡ ಸಿಎಂ ಪಟ್ಟದ ರೇಸ್‌ನಲ್ಲಿದ್ದಾರೆ. ಜೈಲಿನಲ್ಲಿದ್ದಾಗ ಸಿಎಂ ರಾಜೀನಾಮೆಗೆ ಒತ್ತಾಯ ಕೇಳಿಬಂದಿದ್ದರೂ ಕೇಜ್ರಿವಾಲ್ ಆಗ ಮಣಿದಿರಲಿಲ್ಲ. ಆದರೆ ಈಗ ದೆಹಲಿ ವಿಧಾನಸಭೆಗೆ ಚುನಾವಣೆಗೆ 5 ತಿಂಗಳಷ್ಟೇ ಇರುವಾಗ ರಾಜೀನಾಮೆ ತೀರ್ಮಾನ ಪ್ರಕಟಿಸಿರುವುದು ಕುತೂಹಲ ಮೂಡಿಸಿದೆ.

ಚುನಾವಣೆಗೆ ತುರ್ತು ಇಲ್ಲ: ಅರವಿಂದ್ ಕೇಜ್ರಿವಾಲ್ ಅವರು ನವೆಂಬರ್‌ನಲ್ಲಿ ಮಹಾರಾಷ್ಟ್ರ ಜತೆಗೆ ದೆಹಲಿಗೂ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದರು. ಕೇಜ್ರಿವಾಲ್ ಮನವಿಗೆ ಪ್ರತಿಕ್ರಿಯಿಸಿದ ಚುನಾವಣಾ ಆಯೋಗ, ತುರ್ತು ಚುನಾವಣೆ ನಡೆಸುವ ಅಗತ್ಯವಿಲ್ಲ. ಸರಕಾರ ಭದ್ರವಾಗಿದೆ. ಒಂದು ವೇಳೆ ವಿಧಾನಸಭೆ ವಿಸರ್ಜನೆಯಾದರೂ ಹಂಗಾಮಿ ಮುಖ್ಯಮಂತ್ರಿ ಮೂಲಕ ಆಡಳಿತ ನಡೆಸಬಹುದು. ಚುನಾವಣೆಗೆ ಸಮಯಾವಕಾಶ ಇದೆ ಎಂದು ಚುನಾವಣಾ ಆಯೋಗ ಹೇಳಿದೆ.

ರಾಜೀನಾಮೆಗೆ ಕಾರಣವೇನಿರಬಹುದು?

- ದೆಹಲಿ ಅಬಕಾರಿ ನೀತಿ ಹಗರಣದ ಭ್ರಷ್ಟಾಚಾರ ಪ್ರಕರಣದಲ್ಲಿ ಕೇಜ್ರಿವಾಲ್‌ಗೆ ಜಾಮೀನು ಸಿಕ್ಕಿದ್ದರೂ ನ್ಯಾಯಾಲಯ, 'ಆಡಳಿತದಲ್ಲಿ ಕೈಯಾಡಿಸಬಾರದು, ಸಿಎಂ ಕಚೇರಿ ಪ್ರವೇಶಿಸಬಾರದು' ಎಂಬ ಷರತ್ತು ವಿಧಿಸಿದೆ. ಪರಿಣಾಮ ಕೇಜ್ರಿವಾಲ್ ಅವರು ಸದ್ಯ ದಾಖಲೆಯಲ್ಲಷ್ಟೇ ಸಿಎಂ ಆಗಿರುತ್ತಾರೆ. ಅಧಿಕಾರವಿಲ್ಲದ ಕುರ್ಚಿ ಮೇಲೆ ಕುಳಿತುಕೊಳ್ಳುವುದಕ್ಕಿಂತ ರಾಜೀನಾಮೆ ನೀಡುವುದೇ ಒಳ್ಳೆಯದು ಎಂಬ ನಿರ್ಧಾರಕ್ಕೆ ಬಂದಿರಬಹುದು.
- ಕಳೆದ ಎರಡು ಚುನಾವಣೆಗಳಲ್ಲಿ ಎಎಪಿ ಭ್ರಷ್ಟಾಚಾರ ವಿರೋಧಿ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದಿತ್ತು. ಆದರೆ 9 ವರ್ಷಗಳಲ್ಲಿ ಎಎಪಿ ಸರಕಾರದ ವಿರುದ್ಧ ಹಲವು ಭ್ರಷ್ಟಾಚಾರ ಆರೋಪಗಳು ಕೇಳಿಬಂದಿವೆ. ಹಾಗಾಗಿ, ತಾನು ಭ್ರಷ್ಟಾಚಾರಿಯಲ್ಲ, ಅಧಿಕಾರದಾಹಿಯೂ ಅಲ್ಲ ಎಂದು ತೋರಿಸಿಕೊಳ್ಳುವುದಕ್ಕಾಗಿ ರಾಜೀನಾಮೆ ನಿರ್ಧಾರಕ್ಕೆ ಬಂದಿರಬಹುದು.
- ಫೆಬ್ರವರಿಯಲ್ಲಿ ದೆಹಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಅಷ್ಟರೊಳಗೆ ಕೇಂದ್ರ ಸರಕಾರ ತಮಗೆ ಇನ್ನಿಲ್ಲದ ಕಿರುಕುಳ ನೀಡಿದೆ ಎಂದು ಹೇಳುತ್ತಾ, ಜೈಲುವಾಸ ನಂತರ ತಮ್ಮ ಪರ ಸೃಷ್ಟಿಯಾಗಿರುವ ಅನುಕಂಪದ ಅಲೆಯನ್ನು ರಾಜಕೀಯವಾಗಿ ಬಳಸಿಕೊಂಡು ಚುನಾವಣೆ ಎದುರಿಸುವುದಕ್ಕಾಗಿ ರಾಜೀನಾಮೆ ನಿರ್ಧಾರ ಕೈಗೊಂಡಿರಬಹುದು.

ಅಮೆರಿಕ ಮೊರೀಸ್ವಿಲ್ ಮೇಯರ್‌ರಿಂದ ಗೌರವ | ಕರ್ನಾಟಕ ಕಲಾಶ್ರೀ, ನೃತ್ಯ ಗುರು, ಕ್ರಿಕೆಟ್ ಪೋಷಕಿ, ಸಮಾಜ ಸೇವಕಿಯಾಗಿರುವ ಸುಪ್ರಿಯಾ ದೇಸಾಯಿ

ಅಮೆರಿಕದಲ್ಲಿ ಸುಪ್ರಿಯಾ ದೇಸಾಯಿಗೆ ಸನ್ಮಾನ

ಬೆಂಕಿ ಬಸಣ್ಣ ನ್ಯೂಯಾರ್ಕ್



ನೃತ್ಯ, ಸಮಾಜ ಸೇವೆ ಹಾಗೂ ಅಮೆರಿಕದಲ್ಲಿ ಕ್ರಿಕೆಟ್ ಪೋಷಣೆಯ ಮೂಲಕ ಹೆಸರಾಗಿ ರುವ ಕರ್ನಾಟಕ ಕಲಾಶ್ರೀ ಸುಪ್ರಿಯಾ ದೇಸಾಯಿ ಅವರಿಗೆ ಅಮೆರಿಕದ ಮೊರೀಸ್ವಿಲ್‌ನ ಮೇಯರ್ ಟಿ.ಕೆ.ಕಾಲಿ ಅವರು ಗೌರವಿಸಿರುವ ಸನ್ಮಾಸಿದರು.

ಕೆಲದಿನಗಳ ಹಿಂದೆ ನಡೆದ ಕಾರ್ಯಕ್ರಮ ದಲ್ಲಿ ಅಮೆರಿಕದ ಉತ್ತರ ಕ್ಯಾರೋಲಿನಾದ ಮೊರೀಸ್ವಿಲ್ ನಗರದ ಮೇಯರ್ ಟಿ.ಜೆ. ಕಾಲಿ ಅವರು ಸುಪ್ರಿಯಾ ಅವರನ್ನು ಗೌರವಿಸಿದರು. ಕರ್ನಾಟಕ ಕಲಾಶ್ರೀಯಾಗಿರುವ ಸುಪ್ರಿಯಾ ದೇಸಾಯಿ ಅವರು, ಕಳೆದ ಮೂರು ದಶಕ ಗಳಿಂದ ನೃತ್ಯಗುರುವಾಗಿ, ಕ್ರಿಕೆಟ್ ಪೋಷಕಿ, ಸಮಾಜ ಸೇವಕಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ವಿಶಿಷ್ಟ ಸೇವೆಯನ್ನು ಗುರುತಿಸಿ ಮೇಯರ್ ಕಾಲಿ ಅವರು, ಪ್ರತಿಷ್ಠಿತ ಮಾನ್ಯತಾ ಪತ್ರವನ್ನು ನೀಡಿ ಸನ್ಮಾನಿಸಿದರು.

ಸುಪ್ರಿಯಾ ಅವರು ಮೂಲತಃ ಬೆಂಗಳೂ ರಿನ ವರು. ರಾಜಧಾನಿ ಬೆಂಗಳೂರಿನಲ್ಲಿ ಜನಿಸಿದ ಅವರು, 33 ವರ್ಷಗಳ ಹಿಂದೆ ಉತ್ತರ ಕ್ಯಾರೋಲಿನಾದ ರಿಸರ್ಚ್ ಟ್ರೈ ಆಂಗಲ್ ಪ್ರದೇಶಕ್ಕೆ ವಲಸೆ ಹೋಗಿ, ಅಪಾರ ಸಾಧನೆಗಳನ್ನು ಮತ್ತು ಸಮಾಜ ಸೇವೆಯನ್ನು ಮಾಡಿದ್ದಾರೆ. ಭರತನಾಟ್ಯ ಮತ್ತು ಕುಚಿಪುಡಿ ನೃತ್ಯಗುರು ಸುಪ್ರಿಯಾ ದೇಸಾಯಿ ಯವರು 1993ರಲ್ಲಿ ತಮ್ಮ ನೃತ್ಯಶಾಲೆ 'ಪಾಯಲ್ ಡಾನ್ಸ್ ಅಕಾಡೆಮಿ'ಯನ್ನು ಸ್ಥಾಪಿಸಿ ಸಾವಿರಾರು ಮಕ್ಕಳಿಗೆ ನೃತ್ಯ ಕಲಿಸಿದ್ದಾರೆ. ಕೆಲ ವರ್ಷಗಳ ಹಿಂದೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಇವರಿಗೆ ಕರ್ನಾಟಕ ಕಲಾಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಪ್ರಶಸ್ತಿ ಪ್ರದಾನ: ಅಂತಾರಾಷ್ಟ್ರೀಯ ವೇದಿಕೆ ಯಲ್ಲಿ ಕ್ರಿಕೆಟ್ ಪ್ರಚಾರ ಮಾಡುವಲ್ಲಿ, ಬರಹಗಾರರಾಗಿ ಮತ್ತು ಕ್ರೀಡಾ ವಕ್ತಾರರಾಗಿ ಇವರು ವಹಿಸಿರುವ ಪಾತ್ರ ಅಪಾರವಾಗಿದೆ. ಮೊರೀಸ್ವಿಲ್ ನಗರವನ್ನು ದೇಶೀಯ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್ ಕೇಂದ್ರವನ್ನಾಗಿ ರೂಪಿಸಲು ಹಗಲಿರಲು ದುಡಿದಿದ್ದಾರೆ. ಈ ಎಲ್ಲ ಸಾಧನೆಯನ್ನು ಗಮನಿಸಿ, ಮೊರಿಸ್ವಿಲ್ಲ್ ನಗರ ಆಗಸ್ಟ್ 13ರಂದು ಸನ್ಮಾನ ಪದಕ ಘೋಷಣೆ ಮಾಡಿತ್ತು ಮತ್ತು ಸೆ.7ರಂದು ನಡೆದ ಸುಂದರ ಸಮಾರಂಭದಲ್ಲಿ ಮೇಯರ್ ಟಿ.ಜೆ. ಕಾಲಿ ಸುಪ್ರಿಯಾ ದೇಸಾಯಿರ ಸಾಧನೆಗಳನ್ನು ಹಾಡಿ ಹೊಗಳಿ, ಪ್ರಶಸ್ತಿ ಪ್ರದಾನ ಮಾಡಿದರು.

ಸಹಾಯಕ್ಕೆ ಸಿದ್ಧ

ಕೇವಲ ನೃತ್ಯ ಮಾತ್ರವಲ್ಲದೇ ಅತ್ಯುತ್ತಮ ನಾಯಕತ್ವ ಗುಣ ವನ್ನು ಹೊಂದಿರುವ ಇವರಿಗೆ ಸಮಾಜ ಸೇವೆಯಲ್ಲಿ ವಿಶೇಷ ಆಸಕ್ತಿ. ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಸಿದ್ಧರಿರುತ್ತಾರೆ. ಉತ್ತರ ಕ್ಯಾರೋಲಿನಾ ರಾಜ್ಯದ 'ಸಂಪಿಗೆ' ಕನ್ನಡ ಸಂಘದ ಸಂಸ್ಥಾಪಕರಲ್ಲಿ ಒಬ್ಬರಾಗಿ ಮತ್ತು ಪ್ರಥಮ ಅಧ್ಯಕ್ಷೆಯಾಗಿ ಕನ್ನಡ ಸೇವೆಯನ್ನು ಮಾಡಿದ್ದಾರೆ. ಕನ್ನಡ ಸೇವೆಗಾಗಿ ತಮ್ಮ ಜೀವವನ್ನೇ ಮುಡಿಪಾಗಿಗಿಟ್ಟಿರುವ ಸುಪ್ರಿಯಾ ಅವರು ಅಕ್ಕ(ಅಮೆರಿಕನ್ ಕನ್ನಡ ಕೂಟಗಳ ಆಗರ) ಸಂಸ್ಥೆಯ ಸಂಸ್ಥಾಪಕ ಸದಸ್ಯೆ ಹಾಗೂ ಮೊದಲ ಖಜಾಂಚಿ. ಅಕ್ಕ ವಿಶ್ವ ಕನ್ನಡ ಸಮ್ಮೇಳನಗಳನ್ನು ಯಶಸ್ವಿಯಾಗಿ ಆಯೋಜಿಸುವಲ್ಲಿ ವಿವಿಧ ಕಮಿಟಿಗಳ ನಾಯಕತ್ವ ವಹಿಸಿದ್ದಾರೆ.

ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ ಸಭೆಯಲ್ಲಿ ಶಾಸಕ ಎಸ್. ಆರ್. ವಿಶ್ವನಾಥ್ ಪ್ರತಿಪಾದನೆ

ಸಹಕಾರ ಸಂಘಗಳಿಂದ ಜನತೆಗೆ ನೆರವು

ರೈತರ ಸೇವಾ ಸಹಕಾರ ಸಂಘ(ನಿ.)ದ 2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಶಾಸಕ ಎಸ್.ಆರ್. ವಿಶ್ವನಾಥ್ ಉದ್ಘಾಟಿಸಿದರು. ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ನಿರ್ದೇಶಕ ಎಸ್.ಕೆ.ನಾಗರಾಜರೆಡ್ಡಿ, ಎಂ.ಮಂಜುನಾಥ್, ಮುನಿಯಪ್ಪ(ಕೂರ್ಲಪ್ಪ) ಇದ್ದರು.

ಬೆಂಗಳೂರು: ಸಹಕಾರ ಸಂಘಗಳು ಶೀಘ್ರ ರೀತಿಯಲ್ಲಿ ಸ್ಪಂದಿಸಿ, ನೆರವು ನೀಡುವ ಮೂಲಕ ಬಡ ಮತ್ತು ಮಧ್ಯಮ ವರ್ಗದ ಜನತೆಯ ಪಾಲಿಗೆ ಭರವಸೆಯ ಬೆಳಕಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಶಾಸಕ ಎಸ್. ಆರ್. ವಿಶ್ವನಾಥ್ ಅಭಿಪ್ರಾಯಪಟ್ಟರು.

ಯಲಹಂಕ ಕ್ಷೇತ್ರದ ಸಿಂಗನಾಯಕನಹಳ್ಳಿಯ ಪುನೀತ್ ರಾಜ್‌ಕುಮಾರ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ 2023-24ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತರೆ ಬ್ಯಾಂಕ್‌ಗಳಲ್ಲಿ ಬಡ ಮತ್ತು ಮಧ್ಯಮ ವರ್ಗದ ಜನತೆ ಸಾಲ ಪಡೆಯಲು ಹಲವು ಕಠಿಣ ನಿಯಮಾವಳಿಗಳು ಇರುತ್ತವೆ. ಅವುಗಳನ್ನು ಪೂರ್ಣಗೊಳಿಸಿ ಸಾಲ ಪಡೆಯುವ ವೇಳೆಗೆ ಹೈರಾಣಾಗಿ ಬಿಡುವ ವಾತಾವರಣ ವಿರುತ್ತದೆ. ಹಾಗೆಂದ ಮಾತ್ರಕ್ಕೆ ಸಹಕಾರ ಸಂಘಗಳಲ್ಲಿ ನಿಯಮಾ ವಳಿಗಳಿಲ್ಲ ಎಂದರ್ಥವಲ್ಲ, ಆದರೆ ನಿಯಮಗಳಲ್ಲಿ ಸರಳತೆ, ಸಡಿಲತೆ ಇರುವ ಕಾರಣದಿಂದ ಸಾಲ ಸುಲಭವಾಗಿ ಮತ್ತು ಸಕಾಲಕ್ಕೆ ಸರಿಯಾಗಿ ದೊರೆಯುತ್ತದೆ. ಅಲ್ಲದೆ ಸಹಕಾರ ಸಂಘಗಳು ಜನತೆಯ ವಿಶ್ವಾಸದೊಂದಿಗೆ ಕಾರ್ಯನಿರ್ವಹಿಸುವ ಮೂಲಕ ನಮ್ಮ ಸಹಕಾರ ಸಂಘ ಎಂಬ ಭಾವನೆ ಮೂಡುವಂತೆ ಕಾರ್ಯ ನಿರ್ವಹಿಸುತ್ತವೆ ಎಂದರು.

ತ್ವರಿತಗತಿಯ ಸಾಲ ವಿತರಣೆ: ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್ ಮಾತನಾಡಿ, ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದಲ್ಲಿ 7120 ಜನ ಸದಸ್ಯರಿದ್ದು, ಈ ಭಾಗದ ರೈತರು, ಕಾರ್ಮಿಕರು ಮತ್ತು ಮಹಿಳೆಯರ ಜೀವನಾಡಿಯಾಗಿ ಕೆಲಸ ಮಾಡುತ್ತಿದೆ. ಬಡ ಮತ್ತು ಮಧ್ಯಮ ವರ್ಗದ ಜನತೆಗೆ ತ್ವರಿತ ಸಾಲದ ನೆರವು ನೀಡುವ ಮೂಲಕ ಅವರ ಬದುಕು ರೂಪಿಸುವ ಕಾರ್ಯವನ್ನು ಶ್ರದ್ಧೆಯಿಂದ ಮಾಡುತ್ತಿದೆ ಎಂದರು. ಪ್ರಸಕ್ತ ವರ್ಷದಲ್ಲಿ 190 ಕೋಟಿ ಠೇವಣಿ ಸಂಗ್ರಹವಾಗಿದ್ದು, 6 ಕೋಟಿ 12 ಲಕ್ಷ ರು.ಗಳಿಗೂ ಹೆಚ್ಚು ಲಾಭಾಂಶ ಬಂದಿದೆ ಎಂದರು.

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಮಂಗಳವಾರ
17 | 09 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ನೀವೂ ಬರೆಯಬಹುದು
ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ
ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಆಯುರ್ವೇದ ಕ್ಷೇತ್ರದಲ್ಲಿ ಭರವಸೆಯ ಬೆಳಕು

'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಗೆ ಭಾಜನರಾಗಿರುವ ಡಾ. ಲೇಖನಾ ಪಂಡಿತ್ ಅವರು, ಆಯುರ್ವೇದ ಕ್ಷೇತ್ರದಲ್ಲಿ ಉನ್ನತ ಅಧ್ಯಯನ ಮಾಡಿದ್ದಾರೆ. ಎಂಡಿ ಪದವಿ ಪಡೆದಿರುವ ಡಾ. ಲೇಖನಾ ಪಂಡಿತ್ ಅವರು, ಆಯುರ್ವೇದವನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದು, ಪಂಚಕರ್ಮ ಚಿಕಿತ್ಸೆಯಲ್ಲಿ ವಿಶೇಷ ಪರಿಣತಿ ಸಾಧಿಸಿದ್ದಾರೆ. ಇವರು ಹಲವು ವರ್ಷಗಳ ಅನುಭವದ ಮೂಲಕ ರೂಢಿಸಿಕೊಂಡಿರುವ ಚಿಕಿತ್ಸೆಯಲ್ಲಿ ಒಬೆಸಿಡಿ (ಬೊಜ್ಜು) ಕಡಿಮೆ ಮಾಡಲು, ಮುಖದ ಮೇಲಿನ ಚರ್ಮದ ಕಲೆಗಳನ್ನು ಹೋಗಲಾಡಿಸಲು ರೂಪಿಸಿರುವ ಚಿಕಿತ್ಸಾ ವಿಧಾನವೂ ಸೇರಿದೆ. ಬೆಂಗಳೂರಿನಲ್ಲಿ ಆಯುರ್ವೇದ ಚಿಕಿತ್ಸೆ ನೀಡುತ್ತಿರುವ ಡಾ. ಲೇಖನಾ ಪಂಡಿತ್ ಅವರು ವಿದೇಶಗಳಲ್ಲೂ ಕನ್ಸಲ್ಟಂಟ್ ವೈದ್ಯರಾಗಿ ಚಿಕಿತ್ಸೆ ನೀಡಿದ ಅನುಭವ ಹೊಂದಿದ್ದಾರೆ.

• ಅಜಯ್ ಅಂಚೆಪಾಳ್ಯ

ನಮ್ಮ ದೇಶದ ಪುರಾತನ ವೈದ್ಯಕೀಯ ಪದ್ಧತಿಯಾದ ಆಯುರ್ವೇದವು ಇಂದಿನ ಆಧುನಿಕ ತಲೆಮಾರಿನ ಜನರನ್ನೂ ಆಕರ್ಷಿಸುತ್ತಿರುವುದು ಬಹು ವಿಶೇಷ ಎನಿಸಿದೆ. ಇಂದಿನ ತಲೆಮಾರಿನ ಪ್ರತಿಭಾವಂತ ವೈದ್ಯೆಯಾದ ಡಾ. ಲೇಖನಾ ಪಂಡಿತ್ ಅವರು, ಆಯುರ್ವೇದ ಪದ್ಧತಿಯನ್ನು ಕಲಿತು, ಉನ್ನತ ವಿದ್ಯಾಭ್ಯಾಸವನ್ನೂ ಪಡೆದು, ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ, ಈ ಚಿಕಿತ್ಸೆಯನ್ನು ಇನ್ನಷ್ಟು ಪರಿಣಾಮಕಾರಿಯನ್ನಾಗಿಸಿದ್ದಾರೆ. ಅದೇ ವೇಳೆ, ನಮ್ಮ ದೇಶದ ಪುರಾತನ ಪದ್ಧತಿಯ ಕುರಿತು ಹೆಮ್ಮೆಯನ್ನೂ ಹೊಂದಿದ್ದು, ಆಯುರ್ವೇದದ ಮಹತ್ವವನ್ನು ಇತರರಿಗೂ ತಿಳಿಸುತ್ತಾ, ದೇಶಾಭಿಮಾನವನ್ನು ಮೆರೆದಿದ್ದಾರೆ.

ಡಾ. ಲೇಖನಾ ಪಂಡಿತ್ ಅವರ ಕುಟುಂಬವೇ ಆಯುರ್ವೇದ ಪದ್ಧತಿಯಲ್ಲಿ ತೊಡಗಿಸಿಕೊಂಡಿರುವುದು ವಿಶೇಷ. ತುಮಕೂರು ಜಿಲ್ಲೆಯ ನಿಟ್ಟೂರಿನಲ್ಲಿ ನೆಲೆಸಿದ್ದ ಆಯುರ್ವೇದ ವೈದ್ಯ ಮತ್ತು ಪಂಡಿತರಾಗಿದ್ದ ಶ್ರೀನಿವಾಸ ಪಂಡಿತರು ಡಾ. ಲೇಖನಾ ಪಂಡಿತ್ ಅವರ ತಾತನವರಾಗಿದ್ದರು; ತಮ್ಮ ಮನೆಯಲ್ಲೇ ಚಿಕಿತ್ಸೆ ನೀಡುತ್ತಿದ್ದ ಇವರು, ಆಗಿನ ದಿನಗಳಲ್ಲಿ ತುರ್ತು ಸಂದರ್ಭಗಳಲ್ಲಿ ರೋಗಿಗಳನ್ನು ತಮ್ಮ ಮನೆಯಲ್ಲಿ ಕೆಲವು ದಿನ ಇರುವಂತೆ ಮಾಡಿ, ವೈಯಕ್ತಿಕ ಚಿಕಿತ್ಸೆ ನೀಡಿ, ಕಾಯಿಲೆ ವಾಸಿ ಮಾಡುತ್ತಿದ್ದರು. ಡಾ. ಲೇಖನಾ ಪಂಡಿತ್ ಅವರ ತಂದೆ ಡಾ. ಲಕ್ಷ್ಮೀನಾರಾಯಣ ಪಂಡಿತರು ಸಹ ಹೆಸರಾಂತ ಆಯುರ್ವೇದ ವೈದ್ಯರು.

ಉನ್ನತ ಅಧ್ಯಯನ

ಡಾ. ಲೇಖನಾ ಪಂಡಿತ್ ಅವರಿಗೆ ಮೊದಲಿನಿಂದಲೂ ಆಯುರ್ವೇದ ಎಂದರೆ ಅಪಾರ ಆಸಕ್ತಿ, ಗೌರವ. ಇವರ ಕುಟುಂಬದ ಹಿರಿಯ ಸದಸ್ಯರು ಇದೇ ಕ್ಷೇತ್ರದಲ್ಲಿ ಸೇವೆ ಮಾಡಿದ ವಿಚಾರವೂ ಅವರಿಗೆ ಸ್ಫೂರ್ತಿ; ಅದ್ದರಿಂದ

ಆಯುರ್ವೇದ ಶಿಕ್ಷಣದಲ್ಲಿ ಅಪಾರ ಪಾಂಡಿತ್ಯ ಪಡೆಯುವ ಅವರ ಹಂಬಲವು ಸದಾ ಅವರನ್ನು ಮುನ್ನಡೆಸುತ್ತಿದೆ. ಮೈಸೂರಿನ ಜೆ.ಎಸ್.ಎಸ್.ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲ ಬಿಎಎಂಎಸ್ ಪದವಿ ಪಡೆದ ಡಾ. ಲೇಖನಾ ಪಂಡಿತ್ ಅವರು, ತುಮಕೂರಿನ ಅಶ್ವಿನಿ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಎಂಡಿ (ಆಯುರ್ವೇದ) ಪದವಿ ಪಡೆದು, ಪಂಚಕರ್ಮ ಚಿಕಿತ್ಸೆಯ ಕ್ಷೇತ್ರದಲ್ಲಿ ವಿಶೇಷ ಅಧ್ಯಯನ ನಡೆಸಿ, ಆ ಕ್ಷೇತ್ರದ ವಿಷಯ ತಜ್ಞರಾಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಮೂಲಕ ಪಿಜಿ ಡಿಪ್ಲೊಮಾ ಇನ್ ನ್ಯೂಟ್ರಿಶನ್ ಅಂಡ್ ಡಯಟ್ ಡಿಪ್ಲೊಮಾ ಪಡೆದಿದ್ದು, ಇದರಿಂದಾಗಿ, ಆಹಾರ ಕ್ಷೇತ್ರದಲ್ಲಿ ಹೆಚ್ಚಿನ ಸಲಹೆಯನ್ನು ನೀಡಲು ಇವರಿಂದ ಸಾಧ್ಯ ಎನಿಸಿದೆ. ಜತೆಯಲ್ಲೇ ಇವರು ಫೆಲೊ ಆಫ್ ಇಂಟರ್‌ನ್ಯಾಷನಲ್ ಕೌನ್ಸಿಲ್ ಆಫ್ ಆಯುರ್ವೇದ ಸಹ ಆಗಿದ್ದಾರೆ.

ಪಂಚಕರ್ಮ ಚಿಕಿತ್ಸೆಯಲ್ಲಿ ವಿಶೇಷ ಪರಿಣಿತಿ

ವಿದೇಶಗಳಲ್ಲಿ ಆಯುರ್ವೇದದ ಕುರಿತು ಇರುವ ಅಪಾರ ಆಸಕ್ತಿಯು ಡಾ. ಲೇಖನಾ ಪಂಡಿತ್ ಅವರನ್ನು ಬೆರಗುಗೊಳಿಸಿದೆ. ಪಂಚಕರ್ಮ ಚಿಕಿತ್ಸೆಯಲ್ಲಿ ವಿಶೇಷ ಪರಿಣತಿ ಸಾಧಿಸಿರುವ ಇವರ ಬಳಿ ಈ ಚಿಕಿತ್ಸೆಯಲ್ಲಿ ಮಾರ್ಗದರ್ಶನ ಪಡೆಯಲು ವಿದೇಶಗಳಿಂದ ಆಸಕ್ತರು ಬರುತ್ತಿರುವುದು ಗಮನಾರ್ಹ. ಪಂಚಕರ್ಮ ಕುರಿತು ಮೂರು ತಿಂಗಳು ತರಬೇತಿ ಪಡೆದು ತಮ್ಮ ದೇಶಕ್ಕೆ ವಾಪಸಾದ ವಿದೇಶಿ ಮಹಿಳೆಯ ಉದಾಹರಣೆ ನೀಡಿದ ಡಾ. ಲೇಖನಾ ಪಂಡಿತ್ ಅವರು 'ವಿದೇಶಗಳಲ್ಲಿ ನಮ್ಮ ನೆಲದ ವೈದ್ಯಕೀಯ ಪದ್ಧತಿಯಾದ ಆಯುರ್ವೇದ ಮತ್ತು ಪಂಚಕರ್ಮ ಚಿಕಿತ್ಸೆಯು ಜನಪ್ರಿಯಗೊಂಡಿರುವುದು ಮತ್ತು ಅಲ್ಲಿನ ಜನರಿಗೆ ರೋಗವನ್ನು ವಾಸಿ ಮಾಡಲು ಅನುಕೂಲವಾಗಿರುವುದು ನಿಜಕ್ಕೂ ಹೆಮ್ಮೆ' ಎಂದರು.

ಬೆಂಗಳೂರಿನಲ್ಲಿ ಎರಡು ಚಿಕಿತ್ಸಾಲಯವನ್ನು ಹೊಂದಿರುವ ಡಾ. ಲೇಖನಾ ಪಂಡಿತ್ ಅವರು, ನುರಿತ ಸಿಬ್ಬಂದಿಯ ಸಹಾಯವನ್ನೂ ಬಳಸಿಕೊಂಡು, ವಿವಿಧ ರೀತಿಯ ಆಯುರ್ವೇದ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ವಿಶೇಷವಾಗಿ ಪಂಚಕರ್ಮ ಚಿಕಿತ್ಸೆಯನ್ನು ಬಳಸಿ, ವಿವಿಧ ಆರೋಗ್ಯ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತಿರುವ ಇವರ ಸೇವೆಯನ್ನು ಬಹಳಷ್ಟು ಮಂದಿ ಪ್ರಶಂಸಿಸಿದ್ದಾರೆ. ಒಬೆಸಿಟಿ ಮತ್ತು ಕಾಸ್ಮೆಟಾಲಜಿ ಕ್ಷೇತ್ರದ ಇವರ ಚಿಕಿತ್ಸೆಯು ಹೆಚ್ಚು ಜನಪ್ರಿಯ ಎನಿಸಿದೆ.

ಪ್ರತಿಷ್ಠಿತ ಗೌರವ

ನಮ್ಮ ರಾಜ್ಯದ ಆಯುರ್ವೇದ ಯುನಾನಿ ಮಂಡಳಿಗೆ ಡಾ. ಲೇಖನಾ ಪಂಡಿತ್ ಅವರನ್ನು ನಾಮನಿರ್ದೇಶಿತ ಸದಸ್ಯರನ್ನಾಗಿ ಆಯ್ಕೆ ಮಾಡುವ ಮೂಲಕ, ಸರಕಾರವು ಇವರ ಜನಸೇವೆಗೆ ಮತ್ತು ಸೇವಾ ಮನೋಭಾವಕ್ಕೆ ಸೂಕ್ತ ಗೌರವ ನೀಡಿದೆ. ಆಯುರ್ವೇದ ಕ್ಷೇತ್ರದಲ್ಲಿ ಇವರು ನೀಡಿದ ಸೇವೆ ಮತ್ತು ಅನುಭವವನ್ನು ಗುರುತಿಸಿ, ರಾಜ್ಯ ಸರಕಾರವು ಅವರನ್ನು ಮಂಡಳಿಯ ನಾಮನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಿದೆ.

ಆಯುರ್ವೇದವು ನಮ್ಮ ನೆಲದ ವೈದ್ಯಕೀಯ ಪದ್ಧತಿ. ಸಾವಿರಾರು ವರ್ಷಗಳಿಂದ ನಮ್ಮ ದೇಶದ ವಾತಾವರಣವನ್ನು ಅಧ್ಯಯನ ಮಾಡಿ, ಇಲ್ಲಿನ ಜನರಿಗೆ ಸರಿಹೊಂದುವ ಚಿಕಿತ್ಸಾ ಪದ್ಧತಿಯನ್ನು ಋಷಿಗಳು, ಮೇಧಾವಿಗಳು ಸಿದ್ಧಪಡಿಸಿದ್ದಾರೆ. ಇದನ್ನು ಸಾಂಪ್ರದಾಯಿಕ ಪದ್ಧತಿಯಲ್ಲೇ ಬಳಸುವುದನ್ನು ನಾನು ಇಷ್ಟಪಡುತ್ತೇನೆ. ಇತರ ವೈದ್ಯಕೀಯ ಪದ್ಧತಿಯನ್ನು ಇದರ ಜತೆ ಮಿಶ್ರಣಗೊಳಿಸದೇ, ಆಯುರ್ವೇದವನ್ನು ಪೂರ್ತಿಯಾಗಿ ಪಾಲಿಸಿದರೆ, ನಿರೋಗಿಯಾಗಿ ಜೀವಮಾನವನ್ನು ಕಳೆದು, ಸಾರ್ಥಕವಾಗಿ ಬದುಕಲು ಸಾಧ್ಯ ಎಂದೇ ನನ್ನ ನಂಬಿಕೆ.

– ಡಾ. ಲೇಖನಾ ಪಂಡಿತ್

ವಿದೇಶಗಳಿಗೆ ಭೇಟಿ

ಡಾ. ಲೇಖನಾ ಪಂಡಿತ್ ಅವರು ವಿದೇಶಗಳಲ್ಲೂ ಆಯುರ್ವೇದ ಚಿಕಿತ್ಸೆ ನೀಡಿದ್ದಾರೆ.

ಕನ್ಸಲ್ಟೆಂಟ್ ಆಯುರ್ವೇದ ಫಿಜಿಸಿಯನ್ ಆಗಿ, ಸಿಂಗಪುರ, ದುಬೈ, ಮಲೇಷ್ಯ ಮೊದಲಾದ ದೇಶಗಳಿಗೆ ಭೇಟಿ ನೀಡಿದ್ದಾರೆ. ಇವರ ಚಿಕಿತ್ಸೆಯನ್ನು ಮೆಚ್ಚಿದ ಅಲ್ಲಿನವರು, ಇವರನ್ನು ಆಗಾಗ ಅಲ್ಲಿಗೆ ಆಹ್ವಾನಿಸುವ ಮೂಲಕ, ನಮ್ಮ ದೇಶದ ಹೆಮ್ಮೆ ಎನಿಸಿದ ಆಯುರ್ವೇದವನ್ನು ಮೆಚ್ಚಿಕೊಂಡಿದ್ದಾರೆ. ವಿದೇಶಗಳಲ್ಲೂ ಆಯುರ್ವೇದವನ್ನು ಜನಪ್ರಿಯಗೊಳಿಸುವಲ್ಲಿ ಡಾ. ಲೇಖನಾ ಪಂಡಿತ್ ಅವರು ಕೊಡುಗೆ ಗಮನಾರ್ಹ.

ಸಂಪರ್ಕ

ಡಾ. ಲೇಖನಾ ಪಂಡಿತ್, ರಾಜೇಶ್ವರಿ ಆಯುರ್ಧಾಮ, ಹೆಸರಘಟ್ಟ ಮೈನ್ ರೋಡ್
ಉತ್ಪಲಾ ಆಯುರ್ಧಾಮ, ನ್ಯೂ ಬಿ.ಇ.ಎಲ್. ರೋಡ್, ಬೆಂಗಳೂರು
ಫೋನ್ : 94829 88524

ಮುಖದ ಸೌಂದರ್ಯಕ್ಕೆ ಆಯುರ್ವೇದ!

ಮುಖದಲ್ಲಿ ಮೂಡುವ ಮೊಡವೆ, ಇತರ ಕಲೆಗಳನ್ನು ದೂರಮಾಡಲು, ಆಯುರ್ವೇದ ಚಿಕಿತ್ಸೆಯನ್ನು ಸೂಕ್ತವಾಗಿ ಬಳಸುವ ಮೂಲಕ, ಆ ಕ್ಷೇತ್ರದಲ್ಲಿ ಡಾ. ಲೇಖನಾ ಪಂಡಿತ್ ಅವರು ಪರಿಣತಿ ಸಾಧಿಸಿದ್ದಾರೆ. ಪಂಚಕರ್ಮ ಚಿಕಿತ್ಸೆ ಮತ್ತು ಇತರ ಸೂಕ್ತ ಆಯುರ್ವೇದ ಚಿಕಿತ್ಸೆಯ ಮೂಲಕ, ಮುಖದ ಮೇಲಿನ ಕಲೆಗಳನ್ನು ದೂರ ಮಾಡಬಹುದು; ಇದಕ್ಕಾಗಿ, ಆಲೋವೆರಾ, ಅರಶಿನ ಮತ್ತಿತರ ಮೂಲದ ದ್ರವ್ಯಗಳನ್ನು ಬಳಸಲಾಗುತ್ತಿದ್ದು, ಇದು ಚರ್ಮದ ಆಳದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು,ಸೂಕ್ತ ಯಂತ್ರಗಳನ್ನು ಸಹ ಬಳಸಲಾಗುತ್ತದೆ ಎಂದು ಡಾ. ಲೇಖನಾ ಪಂಡಿತ್ ಹೇಳಿದರು.

ಒಬೆಸಿಟಿ (ಬೊಜ್ಜು) ಚಿಕಿತ್ಸೆ

ಮನುಷ್ಯನಿಗೆ ಹಲವು ಕಾಯಿಲೆಗಳನ್ನು ತಂದೊಡ್ಡಬಲ್ಲ ಒಬೆಸಿಟಿ ಅಥವಾ ಬೊಜ್ಜು ಒಂದು ದೀರ್ಘಕಾಲೀನ ಸಮಸ್ಯೆ ಎನಿಸಬಲ್ಲದು. ವಿಶೇಷವೆಂದರೆ, ಒಬೆಸಿಟಿ ತಡೆಗೆ, ಆಯುರ್ವೇದದಲ್ಲಿ ಚಿಕಿತ್ಸೆ ಇದೆ! ಡಾ. ಲೇಖನಾ ಪಂಡಿತ್ ಅವರು ಪರಿಣತಿ ಸಾಧಿಸಿರುವ 'ಪಂಚಕರ್ಮ ಚಿಕಿತ್ಸೆ'ಯಲ್ಲಿ, ಒಬೆಸಿಟಿ ಅಥವಾ ಬೊಜ್ಜು ಇರುವವರು 21 ದಿನ ಚಿಕಿತ್ಸೆ ಪಡೆದರೆ, ದೇಹದ ತೂಕವನ್ನು ವೈಜ್ಞಾನಿಕವಾಗಿ ಕಡಿಮೆ ಮಾಡಲು ಸಾಧ್ಯ. ಅದರಲ್ಲೂ ಮುಖ್ಯವಾಗಿ ವಿರೇಚನ ಚಿಕಿತ್ಸೆಯು, ಯಾವುದೇ ಅಡ್ಡ ಪರಿಣಾಮಗಳಿಲ್ಲದೇ, ದೇಹದ ತೂಕವನ್ನ ಕಡಿಮೆ ಮಾಡುತ್ತದೆ. ಒಬೆಸಿಟಿಯನ್ನು ಕಡಿಮೆ ಮಾಡುವ ಈ ಪಂಚಕರ್ಮ ಚಿಕಿತ್ಸೆಯು, ಮಧುಮೇಹ ರೋಗಿಗಳಿಗೂ ಅನುಕೂಲವಾಗಬಲ್ಲದು ಎನ್ನುತ್ತಾರೆ, ಡಾ. ಲೇಖನಾ ಪಂಡಿತ್.

ಚಿತ್ತ ವಿಹಾರ

ಅದೃಷ್ಟವೇ ಅಂತಿಮವಲ್ಲ

ನಮ್ಮ ನಿರೀಕ್ಷೆಗೆ ವಿರುದ್ಧವಾದ ಸಂಗತಿಗಳು ನಮ್ಮ ಬದುಕಿನಲ್ಲಿ ಘಟಿಸಿದ ಬಹುತೇಕ ಸಂದರ್ಭಗಳಲ್ಲಿ 'ನಾನು ಅದೃಷ್ಟಹೀನ. ನಾನು ಪಡೆದುಕೊಂಡು ಬಂದದ್ದೆ ಇಷ್ಟು. ಎಲ್ಲವೂ ನನ್ನ ಹಣೆಬರಹ' ಎಂದು ಕೈಚೆಲ್ಲಿ ಕುಳಿತು ಬಿಡುತ್ತೇವೆ. ಯಾವುದೇ ಪ್ರಯತ್ನ ಮಾಡದೇ ಸೋಲನ್ನು ಒಪ್ಪಿಕೊಳ್ಳುತ್ತೇವೆ. ನಮ್ಮ ಕೈಲಿ ಏನಿದೆ, ಎಲ್ಲವೂ ದೈವಲೀಲೆ, ಅದಕ್ಕೂ ಅದೃಷ್ಟ ಬೇಕು ಎಂದು ನಮ್ಮನ್ನು ನಾವು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತವೆ. ನಮಗೆ ಎದುರಾದ ಅಹಿತಕರ ಸನ್ನಿವೇಶಗಳನ್ನು ಇಂತಹದೊಂದು ಅತಾರ್ಕಿಕ ನಿಲುವಿನಲ್ಲಿಯೇ ನಮ್ಮನ್ನು ನಾವು ಸಮಾಧಾನಿಸಲು ಮುಂದಾಗುತ್ತೇವೆ. ನಮ್ಮ ಉತ್ತಮ ಭವಿಷ್ಯದ ಹತ್ತು ಹಲವು ನಾವೇ ಬಾಗಿಲುಗಳನ್ನು ಮುಚ್ಚಿಬಿಡುತ್ತೇವೆ.

ಗುರುಗಳೊಬ್ಬರು ತಮ್ಮ ಶಿಷ್ಯನ ಮನೆಯಿಂದ ಹೊರಡುವಾಗ ನಿನಗೆ ಬರಲಿರುವ ದಿನಗಳಲ್ಲಿ ಅದೃಷ್ಟದ ಬಾಗಿಲು ತೆರೆಯಲಿದೆ. ನಿನಗೆ ಲಜ್ಞಟರಿ ಹೊಡೆಯಲಿದೆ. ಇದರಿಂದ ನೀನು ಶ್ರೀಮಂತನಾಗುವ ಕಾಲ ಸನ್ನಿಹಿತವಾಗಿದೆ ಎಂದು ಹೇಳಿದರು. ನಿನಗೆ ಒಳ್ಳೆಯದಾಗಲಿ ಎಂದು ಹರಸಿದರು. ಶಿಷ್ಯ ಅತ್ಯಂತ ಸಂತಸಪಟ್ಟ, ಅದೇ ಸಂಭ್ರಮದಲ್ಲಿ, ಕೆಲ ಕಾಲ ಉರುಳಿ ಹೋಯಿತು. ಯಾವುದೇ ಲಾಟರಿ ಶಿಷ್ಯನಿಗೆ ಹೊಡೆಯಲೇ ಇಲ್ಲ. ಒಂದೊಮ್ಮೆ ಗುರುಗಳನ್ನು ಭೇಟಿಯಾಗಿ ಶಿಷ್ಯ ಗುರುಗಳೇ ತಾವು ನನಗೆ ಲಾಟರಿ ಹೊಡೆಯಲಿದೆ. ಇದರಿಂದ ಬಹುಬೇಗ ಶ್ರೀಮಂತನಾಗುವೆ ಎಂದು ಹೇಳಿದ್ದೀರಿ. ಆದರೆ ಅದಾವುದು ಜರುಗಲೇ ಇಲ್ಲ ಎಂದ. ಹೌದಾ ನಿನಗೆ ಲಾಟರಿ ಹೊಡೆಯಲೇ ಬೇಕಿತ್ತು ಅದು ಹೇಗೆ ತಪ್ಪಲು ಸಾಧ್ಯ? ಸರಿ ನೀನು ಖರೀದಿಸಿದ ಲಾಟರಿ ಟಿಕೇಟ್ ತೋರಿಸು ಎಂದಾಗ ಅಯ್ಯೋ ನೀವು ಹೇಳಿದ ಖುಷಿಯಲ್ಲಿ ಲಾಟರಿ ಟಿಕೇಟ್ ಖರೀದಿಸುವುದನ್ನೇ ಮರೆತು ಬಿಟ್ಟಿರುವೆ ಎಂದನಂತೆ.

ಒಂಚೂರು ಪ್ರಯತ್ನವನ್ನೂ ಮಾಡದೇ ನಮ್ಮ ಅದೃಷ್ಟವನ್ನು ಹಳಿದುಕೊಳ್ಳುವುದು ಖಂಡಿತವಾಗಿಯೂ ಸಮರ್ಥನೀಯವಲ್ಲದ ನಡೆಯಾಗಿದೆ. ಅದೃಷ್ಟವೆಂಬುದು ವಾಸ್ತವದಲ್ಲಿ ಅವಕಾಶಗಳನ್ನು, ಮತ್ತು ಅವುಗಳನ್ನು ಬಳಸಿಕೊಳ್ಳಬಲ್ಲ ನಮ್ಮ ಜಾಣತನ, ಪ್ರಯತ್ನಗಳನ್ನು ಸಂಧಿಸಬಲ್ಲ ಒಂದು ವಿದ್ಯಮಾನ ಮಾತ್ರವೇ ಆಗಿದೆ. ಅದೃಷ್ಟದ ಬಾಗಿಲು ತೆರೆಯಬೇಕಾದರೆ ಅದಕ್ಕೆ ಕಠಿಣ ಪರಿಶ್ರಮ ಕೂಡ ಬೇಕಾಗುತ್ತದೆ. ನಿರಂತರ ಪ್ರಯತ್ನ, ಸಮಯೋಚಿತ ನಿರ್ಧಾರಗಳು, ನಮ್ಮ ಕೆಲಸದ ಕುರಿತಾಗಿ ಧ್ಯಾನಸ್ಥ ಮನೋಭಾವ, ಪ್ರಬಲ ಇಚ್ಛಾಶಕ್ತಿಗಳು ನಮ್ಮ ಅದೃಷ್ಟದ ದಾರಿಯನ್ನು ಸುಗಮಗೊಳಿಸುತ್ತದೆ. ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ನಮ್ಮ ಕರ್ತವ್ಯವನ್ನು ನಾವು ಬದ್ಧತೆಯಿಂದ ಮಾಡಬೇಕು. ಅದು ನಮ್ಮ ಬದುಕಿನ ಬಹು ಮೊದಲ ಆದ್ಯತೆಯಾಗಬೇಕು.

• ಮಹಾದೇವ ಬಸರಕೋಡ

ಧೈರ್ಯಂ ಸರ್ವತ್ರ ಸಾಧನಂ

ಮನುಷ್ಯ ಅನೇಕ ಬಗೆಯ ಸದ್ಗುಣ, ದುರ್ಗುಣಗಳ ಗಣಿ. ಪ್ರತಿಯೊಬ್ಬರಲ್ಲಿ ಸಿಗುವ ಅತಿವಿರಳ ಹಾಗೂ ಅತಿ ಅಮೂಲ್ಯವಾದ ಸಂಪತ್ತೆಂದರೆ ಧೈರ್ಯವೇ ಆಗಿದೆ. ಇದರಿಂದ ಎಲ್ಲರ ಅಚ್ಚುಮೆಚ್ಚಿನ ವ್ಯಕ್ತಿತ್ವದ ಜೊತೆಗೆ ಪ್ರೀತಿ, ವಿಶ್ವಾಸಗಳನ್ನು ಗಳಿಸಿಕೊಳ್ಳಬಹುದು. ಧೈರ್ಯಮಾಡಿ ಮುನ್ನಡೆದರೆ ಎಲ್ಲರೂ ನಮ್ಮವರಾಗುತ್ತಾರೆ, ಮೇಲಾಗಿ ಎಲ್ಲವೂ ನಮ್ಮದಾಗುತ್ತದೆ. ಮೊದಲು ನಮ್ಮೊಳಗಿನ ನಮ್ಮನ್ನು ನಾವು ಗೆದ್ದುಕೊಂಡರೆ ಧೈರ್ಯವು ತನ್ನಿಂದಾನೆ ಹೆಮ್ಮರದಂತೆ ಬೆಳೆದು ನಿಲ್ಲುತ್ತದೆ. ಧೈರ್ಯವೆಂದರೆ 'ಏನು ಇದೆಯೋ' ಅದಕ್ಕೆ ಬಲಿಯಾಗದೆ ಅದರ ಜೊತೆಗೆ 'ಇರುವ' ಸ್ಥಿತಿ. ಧೈರ್ಯದ ಅಪಾರ ಶಕ್ತಿಯ ಎದುರು ಕಲ್ಲಿನಂತಹ ಜಟಿಲವಾದ ಇಕ್ಕಟ್ಟುಗಳು ಕೂಡ ಪುಡಿ ಪುಡಿಯಾಗಿ ಹೋಗುತ್ತವೆ. ಯಾವುದೇ ರೀತಿಯ ಸಂದಿಗ್ಧ ಪರಿಸ್ಥಿತಿಗಳಲ್ಲಿ ಧೈರ್ಯದಿಂದ ಹೆಜ್ಜೆ ಹಾಕಿದರೆ ಯಶಸ್ಸು ಕಟ್ಟಿಟ್ಟಬುತ್ತಿ. ಇಂತಹ ಸಮಯ,ಸಂದರ್ಭಗಳಲ್ಲಿ ಮನುಷ್ಯನಿಗೆ ವಿಶೇಷ ಮೆರುಗು ಹಾಗೂ ಘನತೆಯನ್ನು ತಂದುಕೊಡುವ ಏಕಮಾತ್ರ ಸಾಧನವೇ ಧೈರ್ಯವಾಗಿದೆ. ಧೈರ್ಯವೆಂಬುದು ನಮ್ಮೊಳಗಿದ್ದರೆ ಅದುವೇ ನಮ್ಮ ವ್ಯಕ್ತಿತ್ವದ ಬಹುದೊಡ್ಡ ಆಸ್ತಿ. ಧೈರ್ಯವೊಂದಿದ್ದರೆ ಸಾಲು ಸಾಲಾಗಿ ಬಂದೊದಗುವ ಎಲ್ಲ ಸೋಲುಗಳನ್ನು, ಗೆಲುವನ್ನಾಗಿ ಪರಿವರ್ತಿಸಿ ವಿಜಯದ ಪತಾಕೆ ಎತ್ತಿ ಹಿಡಿಯಬಹುದು. ಎದೆ ತುಂಬ ಎದೆಗಾರಿಕೆ ಇರುವವರಿಗೆ ಆಪತ್ತುಗಳು ಹೆದರಿದವುಗಳಂತೆ ದೂರಕ್ಕೆ ಸರಿಯುತ್ತವೆ. ಅದೇ ಹೇಡಿಗಳಿಗೆ ಯಾವುದೇ ಕೆಲಸ,ಕಾರ್ಯಗಳತ್ತ ಕಿಂಚಿತ್ತೂ ಯೋಚನೆಯೇ ಇರದು. ಹೇಡಿಯಿಂದ ಸಾಹಸಮಯ ಕೆಲಸಗಳು ನಡೆದು ಯಶಸ್ಸು ಕಂಡ ಉದಾಹರಣೆಗಳು ಇತಿಹಾಸದ ಪುಟಗಳಲಿ ಎಲ್ಲಿಯೂ ಕಾಣಸಿಗದು.ಧೈರ್ಯಶಾಲಿ ಎಲ್ಲದಕ್ಕೂ ಮುಂದೆ ಹೋಗುತ್ತಾನೆ. ಹೇಡಿ ಹಿಂದೆ ಉಳಿಯುತ್ತಾನೆ. ಧೈರ್ಯವೇ ವ್ಯಕ್ತಿಯ ಬದುಕಿನ ಟಾನಿಕ್ ಎಂದರೂ ತಪ್ಪಾಗಲಾರದು. 'ಧೈರ್ಯಂ ಸರ್ವತ್ರ ಸಾಧನಂ' ಅಂದರೆ ನಮ್ಮೊಳಗೆ ಧೈರ್ಯವಿದ್ದರೆ ಎಂತಹ ಸಮಸ್ಯೆಗಳಿಂದಲೂ ಪಾರಾಗಿ ಬರಬಹುದು. ಎಲ್ಲಕ್ಕಿಂತ ಮೊದಲು ನಾವು ನಿರ್ಭೀತರಾಗಬೇಕು, ಆಗಲೇ ನಮ್ಮ ಬದುಕು ಪರಿಪೂರ್ಣವಾಗುವುದು. ಧೈರ್ಯವೊಂದಿದ್ದರೆ ಬದುಕಿನ ಅರ್ಧ ಯುದ್ಧವನ್ನು ಗೆದ್ದಂತೆ.ಇನ್ನಾದರೂ ನಾವು, ನೀವೆಲ್ಲ ಧೈರ್ಯದಿಂದ ಇರೋಣ, ಎಲ್ಲದರಲ್ಲೂ ಸಾಹಸಿಗಳಾಗಿ ಮುನ್ನಡೆಯೋಣ.

• ರಂಗನಾಥ್ ಗುಡಿಮನಿ

ಕಪ್ಪು ಬಿಳಿ ರೆಕ್ಕೆಯ ಮರಗಾಲು ಹಕ್ಕಿ

• ಜಿ. ಆರ್. ಪಂಡಿತ್, ಸಾಗರ

ಕಪ್ಪು ರೆಕ್ಕೆಯ ಮರಗಾಲು ಹಕ್ಕಿ (ಬ್ಲಾಕ್ ವಿಂಗ್‌ಡ್ ಸ್ಟಿಲ್ಟ್) ಸಾಮಾನ್ಯವಾಗಿ ಜೌಗು ಪ್ರದೇಶಗಳಲ್ಲಿ ಗುಂಪು ಗುಂಪಾಗಿ ವಾಸಿಸುವ ಆಕರ್ಷಕವಾದ ವಲಸೆ ಪಕ್ಷಿಗಳ ಒಂದು ಪ್ರಭೇದ. ಕಪ್ಪು ಮತ್ತು ಬಿಳಿ ಬಣ್ಣದ ರೆಕ್ಕೆಗಳು, ಚೂಪಾದ ಸೂಜಿಯಂತಹ ಕಪ್ಪನೆಯ ಉದ್ದವಾದ ಕೊಕ್ಕು, ಮರಗಾಲು ಹಕ್ಕಿ ಎಂದು ಹೆಸರು ಪಡೆಯಲು ಕಾರಣವಾದ, ಅದರ ಅತಿ ಉದ್ದದ ಹೊಳೆಯುವ ಗುಲಾಬಿ ಬಣ್ಣದ ಕಾಲುಗಳು ಈ ಹಕ್ಕಿಯ ವಿಶೇಷತೆಗಳು. ಗಂಡು ಹಕ್ಕಿ ಹೊಳಪು ಗರಿಗಳನ್ನು ಹೊಂದಿರುತ್ತದಲ್ಲದೇ ಎರಡೂ ಕಣ್ಣಿನ ಮೇಲೆ ಬಿಳಿ ಚುಕ್ಕಿಗಳಿಂದ ಕೂಡಿರುತ್ತದೆ. ಹೆಣ್ಣು ಕಪ್ಪು-ಕಂದು ಬಣ್ಣದ ಗರಿಗಳನ್ನು ಹೊಂದಿರುತ್ತದೆ. ವಯಸ್ಕ ಹಕ್ಕಿಯ ಉದ್ದ ಸುಮಾರು 14 ಇಂಚುಗಳು. ತೇವ ಭೂಮಿಗಳಲ್ಲಿ, ಆಳವಿಲ್ಲದ ಸರೋವರಗಳಲ್ಲಿ, ಅಲ್ಲಲ್ಲಿ ನೀರು ನಿಂತ ಹುಲ್ಲಿನ ಜವುಗು ಪ್ರದೇಶಗಳಲ್ಲಿ ಇವುಗಳನ್ನು ಹೆಚ್ಚಾಗಿ ಕಾಣಬಹುದು. ರಿಕರ್ವಿರೋಸ್ಟ್ರಿಡೆ ಕುಟುಂಬಕ್ಕೆ ಸೇರಿದ ಈ ಹಕ್ಕಿಯ ವೈಜ್ಞಾನಿಕ ಹೆಸರು ಹಿಮಾಂಟೋಪಸ್



ಸಣ್ಣ ಬೀಜಗಳು, ನೊಣಗಳು, ಸೀಗಡಿ, ಬಸವನ ಹುಳು, ಮೀನು, ಗೊದಮೊಟ್ಟೆಗಳು ಇವುಗಳ ಮುಖ್ಯ ಆಹಾರ. ಸಾಮಾನ್ಯವಾಗಿ ಗುಂಪು ಗುಂಪಾಗಿ ಹತ್ತಿಪ್ಪತ್ತು ಪಕ್ಷಿಗಳು ಒಟ್ಟಾಗಿ ಕಾಣಸಿಗುತ್ತವೆ. ವಲಸೆ ಹೋಗುವಾಗ ಸಾವಿರಾರು ಪಕ್ಷಿಗಳು ಒಟ್ಟಿಗೆ ಪ್ರಯಾಣಿಸುತ್ತವೆ. ಹಗಲಿನಲ್ಲಿ ಸಕ್ರಿಯವಾಗಿ ಬೇಟೆಯಾಡುವ ಈ ಹಕ್ಕಿಗಳಿಗೆ ರಾತ್ರಿ ಹೊತ್ತಿನಲ್ಲೂ ಕಣ್ಣು ಚನ್ನಾಗಿ ಕಾಣಿಸುತ್ತವೆ. ಬೆಳದಿಂಗಳಿಲ್ಲದ ರಾತ್ರಿಯಲ್ಲೂ ತಮ್ಮ ಆಹಾರ ಹುಡುಕಿ ತಿನ್ನಬಲ್ಲವು. ಅದರ ಉದ್ದನೆಯ ಕಾಳುಗಳು ಮತ್ತು ಉದ್ದವಾದ ಚೂಪಾದ ಕೊಕ್ಕು ಕೇಸರಿನ ನೀರಿನಲ್ಲಿಯೂ ಆಹಾರ ಹುಡುಕಲು ಸಹಕರಿಸುತ್ತವೆ.

ಜೂನ್ ನಿಂದ ಆಗಸ್ಟ್ ವರೆಗೆ ಇವುಗಳ ಸಂತಾನೋತ್ಪತ್ತಿಯ ಸಮಯ. ಒಮ್ಮೆ ಎರಡರಿಂದ ನಾಲ್ಕು ಮೊಟ್ಟೆಗಳನ್ನಿಡು ತ್ತವೆ. ವಿಶೇಷ ಗೂಡು ಕಟ್ಟದೇ, ಕೊಳದ ಬಳಿಯ ತೆರೆದ ಪ್ರದೇಶದಲ್ಲಿ, ಕಲ್ಲು ಬಂಡೆಗಳ ಮೇಲೆ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಗಂಡು ಮತ್ತು ಹೆಣ್ಣು ಹಕ್ಕಿಗಳು ಸಮನಾಗಿ ಮೊಟ್ಟೆ-ಮರಿಗಳ ಪೋಷಣೆ ಮಾಡುತ್ತವೆ. ಇಪ್ಪತ್ತೆರಡರಿಂದ ಇಪ್ಪತ್ತಾರು ದಿನಗಳವರೆಗೆ ಕಾವು ಕೊಟ್ಟ ನಂತರ ಮರಿಗಳು ಹೊರಬರುತ್ತವೆ. ವೈಮಾನಿಕ ಕುಶಲತೆಗಳನ್ನು ಬಳಸಿ ಪರಭಕ್ಷಕಗಳಿಂದ ತಮ್ಮ ಮರಿಗಳನ್ನು ರಕ್ಷಿಸಿಕೊಳ್ಳುತ್ತವೆ. ಪೈಪಿಂಗ್ ಶಬ್ದಗಳ ಸರಣಿಯನ್ನು ಬಳಸಿ ಪರಸ್ಪರ ಸಂವಹನ ನಡೆಸುತ್ತವೆ. ಬಿಸಿಲಿನ ವಾತಾವರಣದಲ್ಲಿ ತಮ್ಮನ್ನು, ಮೊಟ್ಟೆ-ಮರಿಗಳನ್ನು ತಂಪಾಗಿಸಲು ಮತ್ತು ಮೊಟ್ಟೆ ಇಟ್ಟ ಜಾಗವನ್ನು ಆರ್ದ್ರವಾಗಿರಿಸಲು ನೀರಿಗೆ ಧುಮುಕಿ ತಮ್ಮ ಹೊಟ್ಟೆ ಭಾಗವನ್ನು ನೆನೆಸಿ ಮೊಟ್ಟೆಗಳ ಮೇಲೆ, ಮರಿಗಳ ಮೇಲೆ ಕುಳಿತುಕೊಳ್ಳುತ್ತವೆ. ದಿನವೊಂದರಲ್ಲಿ ನೂರಾರು ಬಾರಿ ಈ ಕ್ರಮವನ್ನು ಅನುಸರಿಸುತ್ತವೆ.

ಈ ಹಕ್ಕಿಯ ಜೀವಿತಾವಧಿ ಸುಮಾರು ಐದು ವರ್ಷಗಳು. ಭಾರತದಲ್ಲಿ ಗುಜರಾತಿನ ಪ್ರಸಿದ್ಧ ನಲ್ ಸರೋವರ, ಗ್ರೇಟ್ ರಣ್ ಆಫ್ ಕಚ್, ರಾಜಸ್ಥಾನದ ಭರತ್ ಪುರ ಪಕ್ಷಿಧಾಮ ಅಲ್ಲದೇ ಚಿಲಿಕಾ ಸರೋವರಗಳು ಈ ಪಕ್ಷಿಯ ಪ್ರಮುಖ ಆವಾಸ ಸ್ಥಾನಗಳು. ಜೌವುಗು ಪ್ರದೇಶಗಳ ಅವನತಿ, ಮಾಲಿನ್ಯಕಾರಕ ಜಲಮೂಲಗಳು, ಕೆರೆ-ಕೊಳಗಳಲ್ಲಿ ದೋಣಿ ವಿಹಾರವೇ ಮೊದಲಾದ ಪ್ರವಾಸೋದ್ಯಮ ಚಟುವಟಿಕೆಗಳು ಈ ಪಕ್ಷಿ ಸಂಕುಲಕ್ಕೆ ಮಾರಕವಾಗುತ್ತಿದೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
17.09.2024 ಮಂಗಳವಾರ
vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಶುಕ್ಲ ಪಕ್ಷ, ಚತುರ್ದಶಿ ತಿಥಿ, ಶತಬ್ಬಿಶ ನಕ್ಷತ್ರ, ಧೃತಿ ಯೋಗ, ವಾಣಿಜ ಕರಣ, ದ್ರಿಕ್ ಋತು ವರ್ಷ, ದ್ರಿಕ್ ಅಯನ ದಕ್ಷಿಣಾಯನ, ವಿಕ್ರಮ ಶಕೆ ಸಂವತ್ಸರ, ಕ್ರೋಧೀನಾಮ ಸಂವತ್ಸರ

ಮನೆಮದ್ದು

ಕುಕ್ಕರ್ ಅಥವಾ ಸ್ಟೀಮ್‌ನಿಂದ ನಿಮ್ಮ ಕೈ ಸುಟ್ಟುಹೋದರೆ, ತಕ್ಷಣವೇ ಆ ಜಾಗದಲ್ಲಿ ಅಲೋವೆರಾ ಜೆಲ್ ಅನ್ನು ಹಚ್ಚಿರಿ. ಅಲೋವೆರಾ ಜೆಲ್ ಕಿರಿಕಿರಿಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಅಲೋವೆರಾ ಸಸ್ಯದ ಎಲೆಯಿಂದ ತೆಗೆದ ಜೆಲ್ ಅನ್ನು ನೇರವಾಗಿ ಪೀಡಿತ ಪ್ರದೇಶದ ಮೇಲೆ ಹಚ್ಚಿರಿ. ಅಲೋವೆರಾದ ಎಲೆಯನ್ನು ತೆಗೆದು ಅದರ ಜೆಲ್ ಅನ್ನು ಹಚ್ಚುವುದು ಒಳ್ಳೆಯದು.

ಸೌಂದರ್ಯ ಸೂತ್ರ

ಮೊಡವೆಗಳ ಮೇಲೆ ಐಸ್ ಕ್ಯೂಬ್ ಮಸಾಜ್ ಮಾಡುವುದು ಎಲ್ಲಕ್ಕಿಂತ ಸರಳವಾದ ಮತ್ತು ಉತ್ತಮವಾದ ಪರಿಹಾರವಾಗಿದೆ. ಆದರೆ ಇದನ್ನು ಮಾಡುವಷ್ಟು ತಾಳ್ಮೆ ಎಲ್ಲರಲ್ಲೂ ಇರುವುದಿಲ್ಲ. ದಿನಕ್ಕೆ ಎರಡು ಬಾರಿ ಐಸ್ ಕ್ಯೂಬ್ನಿಂದ ಮಸಾಜ್ ಮಾಡಿದರೆ ಮೊಡವೆಯನ್ನು ಕಡಿಮೆಮಾಡಲು ಇದು ಸಹಾಯ ಮಾಡುತ್ತದೆ.

ದಿನ ಭವಿಷ್ಯ

ಮೇಷ: ಸಂಗಾತಿಯೊಡನೆ ಉತ್ತಮ ತಿಳುವಳಿಕೆ ಮನೆಯಲ್ಲಿ ಸಂತೊಷ ಮತ್ತು ಸಮೃದ್ಧಿ ತರುತ್ತದೆ. ಸಂತೊಷಕ್ಕಾಗಿ ಹೊಸ ಸಂಬಂಧವನ್ನು ಎದುರು ನೊಡಬಹುದು

ವೃಷಭ: ಮನಸ್ಸಿನಲ್ಲಿ ಸಂದಿಗ್ಧತೆ ಉಳಿದಿರುತ್ತದೆ. ಇಂದು ಬಿಡುವಿನ ವೇಳೆ ಆಧ್ಯಾತ್ಮಿಕ ಪುಸ್ತಕಗಳ ಅಧ್ಯಯನ ಮಾಡಬೇಕು.

ಮಿಥುನ: ಇಂದು ಮನೆಯ ಸದಸ್ಯರೊಂದಿಗೆ ಮಾತನಾಡುವ ಸಮಯದಲ್ಲಿ, ಮನೆಯ ಯಾರಾದೂ ಕೋಪಗೊಳ್ಳುವಂತಹ ಮಾತು ಬರಬಹುದು.

ಕಟಕ: ವೃತ್ತಿಪರ ವಿಷಯಗಳನ್ನು ಆರಾಮವಾಗಿ ಬಗೆಹರಿಸಲು ಅನುಭವವನ್ನು ಬಳಸಿ. ಸಮಯಕ್ಕೆ ಸರಿಯಾಗಿ ಕೆಲಸ ಮುಗಿಸುವುದು ಉತ್ತಮ.

ಸಿಂಹ: ಸಾಮಾಜಿಕ ಕಾರ್ಯಗಳು ಮತ್ತು ಸಮಾರಂಭಗಳಲ್ಲಿ ಭಾಗವಹಿಸಿದಲ್ಲಿ ಸ್ನೇಹಿತರು ಮತ್ತು ಹೊಸ ಪರಿಚಯಸ್ಥರನ್ನು ಪಡೆಯುತ್ತೀರಿ.

ಕನ್ಯಾ: ಯುವಕರು ಶಾಲಾ ಯೋಜನೆಗಳಲ್ಲಿ ಕೆಲವು ಸಲಹೆ ಪಡೆಯಬಹುದು. ಹಠಾತ್ ಪ್ರಣಯ ಪ್ರಸಂಗಗಳು ಗೊಂದಲಕ್ಕೀಡು ಮಾಡಬಹುದು.

ತುಲಾ: ಇಂದು ಸುಂದರವಾದ ಪ್ರಣಯಭರಿತ ದಿನವನ್ನು ಹೊಂದುತ್ತೀರಾದರೂ, ಕೆಲವು ಆರೋಗ್ಯ ಸಮಸ್ಯೆಗಳನ್ನು ಅನುಭವಿಸಬಹುದು.

ವೃಶ್ಚಿಕ: ಮನೆಯ ವಿಷಯದಿಂದಾಗಿ ಕೆಲಸದ ಸ್ಥಳದಲ್ಲಿ ಉತ್ಸಾಹ ಕಡಿಮೆಯಾಗಿರುತ್ತದೆ. ವ್ಯಾಪಾರಿಗಳು ಪಾಲುದಾರರ ಮೇಲೆ ನಿಗಾ ಅಗತ್ಯ.

ಧನು: ದೂರದ ಸ್ಥಳದ ಸಂಬಂಧಿಗಳು ಇಂದು ಸಂಪರ್ಕಿಸಬಹುದು. ಪ್ರಣಯಕ್ಕೆ ಒಳ್ಳೆಯ ದಿನ. ಕೆಲಸಕ್ಕೆ ಮೆಚ್ಚುಗೆ ದೊರಕಲಿದೆ.

ಮಕರ: ಜ್ಞಾನದಾಹ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ. ಪ್ರೀತಿಯಲ್ಲಿ ನಿರಾಶೆ ನಿಮ್ಮನ್ನು ಕಂಗೆಡಿಸುವುದಿಲ್ಲ.

ಕುಂಭ: ಹೆಚ್ಚಿನ ಸಾಧನೆ ಮತ್ತು ಪ್ರೊಫೈಲ್ ಹೆಚ್ಚಿಸಿಕೊಳ್ಳಲು ಒಳ್ಳೆಯ ದಿನ. ಅನಗತ್ಯ ಕೆಲಸಕ್ಕಾಗಿ ಉಚಿತ ಸಮಯವನ್ನು ಹಾಳು ಮಾಡಬಹುದು.

ಮೀನ: ಪ್ರಿಯತಮೆ ದೇವತೆಯಾಗಿ ಕಾಣಿಸಬಹುದು. ಮೆಚ್ಚುಗೆ ಪಡೆಯುವ ಯಾವುದಾದರೊಂದು ದೊಡ್ಡ ಯೋಜನೆಯ ಭಾಗವಾಗಿರುತ್ತೀರಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- ಪ್ರಧಾನ ಮಂತ್ರಿ, ನರೇಂದ್ರ ಮೋದಿ ಹುಟ್ಟುಹಬ್ಬ
- 1879: ದ್ರಾವಿಡ ಹೋರಾಟದ ಮುಂಚೂಣಿ ನಾಯಕ ಪೆರಿಯಾರ್ ರಾಮಸ್ವಾಮಿ ಹುಟ್ಟಿದರು
- 1948: ಹೈದರಾಬಾದ್ ವಿಮೋಚನಾ ದಿನ
- ತೆಲಂಗಾಣದಲ್ಲಿ ಪ್ರಜಾಪಾಲನ ದಿನ ಆಚರಣೆ

ಚಿತ್ರಸ್ಫೂರ್ತಿ

ಹಾರುವ ನಾವೆಲ್ಲರೂ!

ಅಜ್ಜಿ ಮಾಡಿದ ಮೀನಿನ ಪಲ್ಯ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೂರಲ್ಲಿ ಒಬ್ಬ ಅಜ್ಜಿ ಇದ್ದಳು. ಅಜ್ಜಿಗೆ ಒಬ್ಬ ಮೊಮ್ಮಗ ಇದ್ದ. ಅವನ ಹೆಸರು ಪುಟ್ಟ. ಅಜ್ಜಿಗೆ ಪುಟ್ಟನನ್ನು ಕಂಡರೆ ಬಹಳ ಅಕ್ಕರೆ, ಪುಟ್ಟ, ಪಾಪು ಇದ್ದಾಗಿನಿಂದಲೂ ಮುದ್ದಾಗಿ ಬೆಳೆಸಿದ್ದಳು. ವಯಸ್ಸಿಗೆ ಬಂದಾಗ ಸುತ್ತಾಲಕ್ಕು ಹಳ್ಳಿಲೆಲ್ಲಾ ಹುಡುಕಿ ಚಂದದ ಹುಡುಗಿ ತಂದು ಮದುವೆ ಮಾಡಿದಳು. ಮನೆ ತುಂಬಿಸಿಕೊಂಡ ಸೊಸೆಯನ್ನು, ಮೊಮ್ಮಗನನ್ನು ನೋಡಿಕೊಂಡಷ್ಟೆ ಚೆನ್ನಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದಳು. ಹೀಗಾಗಿ ಸೊಸೆಗೆ ಅಜ್ಜಿಯನ್ನು ಕಂಡರೆ ತುಂಬಾ ಅಂದರೆ ತುಂಬಾ ಇಷ್ಟ. ಇವರ ಸಂಸಾರ ಕಂಡು ಊರೇ ಸಂತೋಷ ಪಟ್ಟಿತು.

ಎರಡು ಮೂರು ವರ್ಷ ಕಳೆಯಿತು. ಸೊಸೆ ಬಸುರಿಯಾದಳು. ಅಜ್ಜಿ ಹಿಗ್ಗಿ ಹೀರೇಕಾಯಿಯಾದಳು ಅವಳಿಗೆ ದಿನಕೊಂದು ಅಡಿಗೆ ಮಾಡಿ ಪಡಿಸಿ ಉಪಚಾರ ಮಾಡಿದಳು. ಮುದ್ದು ಸೊಸೆ, ಒಂದು ದಿನ ಅಜ್ಜಿ ನನಗೆ ಮೀನಿನ ಪಲ್ಯ ಬೇಕು ಎಂದಳು. ಅಜ್ಜಿಗೆ ಜಂಘಾಬಲವೇ ಉಡುಗಿ ಹೋಯಿತು. ಅಜ್ಜಿ ನಿಧಾನವಾಗಿ ಅದೆಲ್ಲ ಇಲ್ಲಿ ಸಿಗುವುದಿಲ್ಲ. ನಿನಗೆ ಬದನೆಕಾಯಿ, ಹಲಸಿನಕಾಯಿ ಪಲ್ಯ ಮಾಡಿಕೊಡುವೆ ಎಂದರೆ, ಅದೆಲ್ಲಾ ನನಗೆ ಬೇಡ, ಪುಟ್ಟ ಪುಟ್ಟ ಮೀನಿನ ಪಲ್ಯ ತಿನ್ನುವ ಆಸೆಯಾಗಿದೆ. ಅಜ್ಜಿಗೆ ಉತ್ತರ ಕೊಡಲಾಗದೆ, ಆಯ್ತು ಸಿಕ್ಕರೆ ಮಾಡುತ್ತೇನೆ ಎಂದು ಹೇಳಿದ್ದಾಯಿತು.

ಏನು ಮಾಡುವುದೆಂದು ಅಜ್ಜಿ ಯೋಚಿಸುತ್ತಾ, ಹಿತ್ತಲಲ್ಲಿ ನೋಡಿದರೆ ದುಂಡು ಮಲ್ಲಿಗೆ, ಮೈಸೂರು ಮಲ್ಲಿಗೆ ಹೂವಿನ ಮೊಗ್ಗುಗಳು ಆಗಿದ್ದವು. ಮಲ್ಲಿಗೆ ಬಳ್ಳಿ ಹಬ್ಬಿದ ಹಾಲುವಾಣ ಮರದ ಮೇಲೆ ಹಾಲುವಾಣ ಹೂವಿನ ಮೊಗ್ಗುಗಳು ಗೊಂಚಲು ಗೊಂಚಲು ಕಂಡವು. ಅಜ್ಜಿ ಗಮನಿಸಿ ನೋಡಿದಾಗ ಅವುಗಳೆಲ್ಲ ಪುಟ್ಟಪುಟ್ಟ ಮೀನಿನಂತೆ ಇತ್ತು. ಭಾರೀ ಎತ್ತರದ ಮರವೇನು ಅಲ್ಲ. ಒಂದು ಕ್ಷಣ ಯೋಚಿಸಿ ಅಜ್ಜಿ ಪುಟ್ಟ ಏಣಿಯನ್ನು ಮರಕ್ಕೆ ಒರಗಿಸಿ, ಏಣಿ ಹತ್ತಿ ಹಾಲವಾಣ ಹೂವಿನ ಮೊಗ್ಗುಗಳನ್ನು ಗೊಂಚಲು ಸಮೇತ ಕಿತ್ತುಕೊಂಡಳು. ಕೆಳಗೆ ಇಳಿದು ನೋಡಿದಾಗ ಮೀನಿನ ಮರಿಗಳಂತೆ ಇದ್ದವು. ಖುಷಿಯಾಯಿತು ಅಜ್ಜಿಗೆ.

ಮರುದಿನ ಹಾಲುವಾಣ ಮೊಗ್ಗಿನ ಪಲ್ಯವನ್ನು ಮಾಡಿ ಸೊಸೆಗೆ ಬಡಿಸಿದಳು. ಸೊಸೆ ಅದನ್ನು ಕಣ್ಣರಳಿಸಿ ನೋಡಿ ಮೀನಿನ ಮರಿಗಳಂತೆ ಇದ್ದವು. ಅಜ್ಜಿ ಮೀನಿನ ಪಲ್ಯ ತುಂಬಾ ಚೆನ್ನಾಗಿದೆ ಎಂದು ಊಟಮಾಡಿದಳು. ಅಜ್ಜಿಗೆ ಸೊಸೆಯ ಬಯಕೆ ಪೂರೈಸಿದೆ ಎಂಬ ತೃಪ್ತಿಯಾಯಿತು. ಸೊಸೆಗೆ ಮೀನಿನ ಪಲ್ಯ ತಿಂದ ಸಂತೋಷ. ಅಜ್ಜಿ ಅಂದುಕೊಂಡಂತೆ, ಸೊಸೆಗೆ ಮೊಗ್ಗಿನ ಜಡೆ ಹಾಕಿ, ಹೊಸ ಸೀರೆ ಉಡಿಸಿ, ಆಭರಣ ಹಾಕಿ, ನೆರೆಹೊರೆಯವರನ್ನು ಕರೆದು ಆರತಿ ಮಾಡಿ ಸಿಹಿ ಹಂಚಿದಳು. ಸೊಸೆ ಕೆಲವೇ ದಿನಗಳಲ್ಲಿ ಮುದ್ದಾದ ಗಂಡು ಮಗುವಿನ ತಾಯಿಯಾದಳು, ಬಾಣಂತಿತನ ಮುಗಿಸಿ, ಮಗು ಸ್ವಲ್ಪ ದೊಡ್ಡ ಆದನಂತರ ಸೊಸೆಗೆ, ಹಿಂದಿನಿಂದ ಮನೆಯಲ್ಲಿ ಆಚರಿಸಿಕೊಂಡು ಬಂದ ಪದ್ಧತಿ, ಸಂಸ್ಕಾರ,ನಡೆ, ನುಡಿ, ಬಂದು ಬಳಗ ,ಹಬ್ಬ-ಹುಣ್ಣಿಮೆ, ಊರಿನವರು, ಅಡಿಗೆ ತಿಂಡಿ ಎಲ್ಲವನ್ನು ಕಲಿಸಿಕೊಟ್ಟಳು. ಮಗುವಿನ ತಾಯಿಯಾದ ಸೊಸೆಗೆ ಎಲ್ಲ ಅರ್ಥವಾಗಿ ಚೆನ್ನಾಗಿ ಕಲಿತು ಕೊಂಡು ಅದೇ ರೀತಿ ನಡೆದುಕೊಂಡಳು.

ಅಜ್ಜಿಯ ಒಳ್ಳೆತನಕ್ಕೆ, ಹೊಸತಾಗಿ ಬಂದ ಸೊಸೆಗೆ ನಿಧಾನವಾಗಿ , ಎಲ್ಲವನ್ನು ಕಲಿಸಿದ ಕ್ರಮ, ಊರಿಗೆ ಮಾದರಿಯಾಯಿತು. ಯಾವುದೇ ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಗೆ ಬಂದಾಗ ತವರು ಮನೆಯ ಪದ್ಧತಿಗಿಂತ ಅತ್ತೆ ಮನೆಯ ಪದ್ಧತಿಗಳು ಬಹಳ ಭಿನ್ನವಾಗಿರುತ್ತವೆ. ಅವಳು ಬೆಳದ ರೀತಿಯೂ ಕೂಡ ಬೇರೆಯೇ . ಅಂತೆಯೇ ಆ ಹೆಣ್ಣು ಮಗಳಿಗೆ ಸ್ವಲ್ಪ ಸಮಯಾವಕಾಶ ಕೊಟ್ಟು ನಮ್ಮ ಮನೆಯ ಪದ್ಧತಿಗಳನ್ನು ನಿಧಾನವಾಗಿ ತಿಳಿಸಿ ಮತ್ತೆ ಅವಳ ಮನೆಯ ಒಳ್ಳೆಯ ಪದ್ಧತಿಗಳನ್ನು ನಾವು ಕೂಡ ಅಳವಡಿಸಿಕೊಂಡಾಗ ಅಲ್ಲಿ ಒಂದು ಸೌಹಾರ್ದ ಕುಟುಂಬ ನೆಲೆಗೊಳ್ಳುತ್ತದೆ. ಯಾವುದು ಒಂದು ದಿನ ಒಂದು ವರ್ಷದಲ್ಲಿ ಆಗುವಂಥದ್ದು ಅಲ್ಲ. ಎಲ್ಲಕ್ಕೂ ಸಮಯ ಕೊಡಬೇಕು. ಕಾಲಾಯ ತಸ್ಮೈ ನಮಃ.

ಪದಬಂಧ



ಎಡದಿಂದ ಬಲಕ್ಕೆ

1. ತಾನಾಗಿಯೇ ಹೊಡೆಯುವುದು (3)
3. ಸತತ ಅಥವಾ ನಿರಂತರವಾದುದು (4)
6. ಮರದ ಕೊಂಬೆ (2)
7. ನಾಲಗೆ ತಿಳಿಸುವ ಸ್ವಾದ (2)
9. ಹಿಂದಿನ ಘಟನೆಗಳ ಸ್ಮರಣೆ (3)
11. ತಿಳಿಯಾಗಿದ್ದುದನ್ನು ಕಲಕು (3)
13. ಚೆಲುವೆ ಅಥವಾ ಹೆಂಡತಿ ಮಣಿಯೊಂದಿಗೆ ಬಂದಿದ್ದಾಳೆ (3)
15. ವಿರುದ್ಧವಾದುದು (3)
16. ಮರದ ಮೆಟ್ಟು (3)
18. ಮನಸ್ಸುಗಳ ವೈಮನಸ್ಯ (3)
20. ಅಸ್ತವ್ಯಸ್ತವಾಗಿರುವ ಆಶ್ರಯ (3)
22. ಚಿನ್ನ, ಬೆಳ್ಳಿ ಮುಂತಾದುವುಗಳನ್ನು ಕರಗಿಸಲು ಬಳಸುವ ಸಾಧನ ತಿರುಗಿದೆ (2)
24. ಜೀವ ತೆಗೆಯಬಲ್ಲ ನಂಜು (2)
25. ಚಿನ್ನ ಅಥವಾ ಸಂಪತ್ತು (4)
26. ಸರಿಸಮಾನನಾದವನು ತಿರುಗಿ ಬಂದಿದ್ದಾನೆ (3)

ಎಡದಿಂದ ಬಲಕ್ಕೆ

1. ಇದು ಬರಿಯ ಹಂಗಾಮಿ (4)
2. ಹಾಸ್ಯಾಸ್ಪದವಾಗುವಿಕೆ (4)
4. ನಿಯಮ ಅಥವಾ ರೀತಿ (3)
5. ಮತ್ತೊಂದು ಮರ (2)
8. ಹೋಗೆ ಹೋಗಲೆಂದಿರುವ ನಳಿಕೆ (3)
9. ತಲೆಕೆಳಗಾಗಿ ಬಂದಿರುವ ಪರಾಮರ್ಶೆ (5)
10. ಎರಡಕ್ಷರದ ಪಟ್ಟಣ (2)
12. ಕೆಲಸ ಮಾಡಿ ಆದ ಆಯಾಸ (3)
14. ಮತ್ತೊಬ್ಬರನ್ನು ಕಂಡರೆ ಹೊಟ್ಟೆಕಿಚ್ಚು (3)
16. ನೀರಿನಲ್ಲಿ ಕಾಣುವ ಪಾಚಿ (3)
17. ರೇಖೆಗೆ ಮತ್ತೊಂದು ಹೆಸರು (2)
18. ನಾಟಕದಲ್ಲಿ ಬರುವ ಹಾಸ್ಯಗಾರ (4)
19. ಇದು ಸೂಕ್ತವಾದುದು (4)
21. ಶಬ್ದ ಅಥವಾ ಸದ್ದು (3)
23. ಮಾತು ಬಾರದವನು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 3. ತಲೆತಿರುಗು 6. ಸಭಾಪತಿ 7. ಭಿಕಾರಿ 9. ಅಧಿಪ 11. ಸಾರ 12. ವರಾತ 13. ಉಗಿ 14. ಕವಣೆ 16. ಆನಕ 18. ಸಮಾರೋಪ 19. ಯಜ್ಞೋಪವೀತ

ಮೇಲಿನಿಂದ ಕೆಳಕ್ಕೆ: 1. ಬೇಸರ 2. ಅಪರಾಧಿ 4. ತಿಜೋರಿ 5. ಗುರುತರ 8. ಕಾಲಾಂತಕ 9. ಅರ್ಧಾಂಗಿ 10. ಪವಮಾನ 11. ಸಾಗಣೆ 13. ಉತ್ತರೀಯ 15. ವರ್ಧಮಾನ 16. ಆರೋಪ 17. ಉಪಮೆ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಮೊಸಳೆಗೆ ದೇಹವೇ ಶಕ್ತಿ

ಮೊಸಳೆಗೆ ಅದರ ವಿಶಿಷ್ಟ ರೀತಿಯಲ್ಲಿ ರೂಪುಗೊಂಡಿರುವ ದೇಹವೇ ಶಕ್ತಿಯಾಗಿದೆ. ಅದರ ಬಾಲಗಳಲ್ಲಿ ಅತೀವ ಸಾಮರ್ಥ್ಯವಿದೆ. ಕಾಲ್ಬೆರಳುಗಳು ಒಂದು ಪದರದಿಂದ ಮೆತ್ತಿಕೊಂಡಿದ್ದು, ಮೈ ಹೊರಳಿಸುವಂತೆ ಮಾಡುತ್ತದೆ.

ಮೊಸಳೆಯ ಬಾಯಲ್ಲಿ ಹೊಟ್ಟೆಯನ್ನು ಬಾಯಿಯಿಂದ ಬೇರೆ ಮಾಡುವ ನೀರ್ಬಾಗಿಲಿದೆ. ಈ ನೀರುಬಾಗಿಲು ಮೊಸಳೆಯ ಬಾಯಿಂದ ನೀರು ಹೊಟ್ಟೆಗೆ ಸೇರದಂತೆ ತಡೆಯುತ್ತದೆ ಮತ್ತು ಬೇಟೆ ನುಂಗುವಾಗ ತೆರೆದುಕೊಳ್ಳುತ್ತದೆ. ಮೊಸಳೆ, ಹುಲಿ ಸಿಂಹಗಳ ಹಾಗೆ ಮೆಲ್ಲುವದಿಲ್ಲ, ಜಿಂಕೆ ಎಮ್ಮೆಗಳ ಹಾಗೆ ದವಡೆಯಲ್ಲಿ ಅರೆಯುವುದಿಲ್ಲ, ಮೆಲುಕು ಹಾಕುವುದೂ ಇಲ್ಲ. ತನ್ನ ಬೇಟೆಯನ್ನು ಕಚ್ಚಿ ಹರಿದು ನುಂಗಿ ಬಿಡುತ್ತದೆ. ಇದರ ಬೆನ್ನಿನ ಪದರ ತುಂಬಾ ಬಿರುಸಾಗಿದ್ದು ಗೆರೆಗೆರೆಯಾಗಿಯೂ, ದಪ್ಪನೆಯ ಬುಗುಟೆಗಳನ್ನು ಹೊಂದಿದೆ. ಮೊಸಳೆ ಮೈದೊಗಲು ಎಣ್ಣೆಯನ್ನು ಸ್ರವಿಸುತ್ತದೆ ಇದರಿಂದ ಮೊಸಳೆಯ ಮೈಗೆ ಕೆಸರು ಅಂಟಿಕೊಳ್ಳದು

ಪುಸ್ತಕ ಲೋಕ

ಊರುಕೇರಿ

ಕವಿ ಮತ್ತು ಸಾಮಾಜಿಕ ಹೋರಾಟಗಾರ ಡಾ. ಸಿದ್ದಲಿಂಗಯ್ಯನವರ ಆತ್ಮಕಥಾನಕ 'ಊರುಕೇರಿ'. ತುಂಬಾ ಸರಳ ಮಾತುಗಳಲ್ಲಿ ತಮ್ಮ ಬಾಲ್ಯ, ವಿದ್ಯಾಭ್ಯಾಸ, ತಮ್ಮ ಬಡತನ, ತಾವು ಪಟ್ಟ ಕಷ್ಟಗಳನ್ನು ಅವರು ಈ ಕೃತಿಯಲ್ಲಿ ಬಿಡಿಸಿಟ್ಟಿದ್ದಾರೆ. ಈ ಆತ್ಮಕಥೆಯಲ್ಲಿ ದಲಿತ ಲೇಖಕರ ಕೃತಿಗಳಲ್ಲಿ ನಾವು ನಿರೀಕ್ಷಿಸಬಹುದಾದ ಅನೇಕ ಅಂಶಗಳಿವೆ. ಬಡತನ, ರೊಚ್ಚು, ಅವಮಾನ ಇತ್ಯಾದಿಗಳೆಲ್ಲ ಇವೆ. ಈ ಕೃತಿಯ ವಸ್ತು ದಲಿತಕೃತಿಗಳಿಗೆ ಸಾಮಾನ್ಯವಾದದ್ದು, ಸಹಜವಾದದ್ದು, ಆದರೆ, ಈ ವಸ್ತುವನ್ನು ನಿರ್ವಹಿಸುವ ಧ್ವನಿ ಭಿನ್ನವಾದದ್ದು, ಚೇತೋಹಾರಿಯಾದುದು. ತಮ್ಮ ಬದುಕಿನಲ್ಲಿನ ಹಸಿವು, ಅವಮಾನಗಳನ್ನು ಕೊಂಚ ವಕೀಕರಣ ಗೊಳಿಸುವ ಮೂಲಕ ಕವಿ ಸಿದ್ದಲಿಂಗಯ್ಯ, ಅವನ್ನು ದಾಟುವ ಮಾರ್ಗಗಳನ್ನು ತೋರಿಸುತ್ತಾರೆ.

ಟ್ವೀಟ್‌ಮೆಂಟ್

ಮನು ಜೋಸೆಫ್: ಉತ್ತರ ಭಾರತದಲ್ಲಿರುವ ಎಲ್ಲ ಮಳಿಯಾಳಿಗರ ಪರವಾಗಿ, ಚಳಿಗಾಲದ ಶುರುವನ್ನು ಘೋಷಣೆ ಮಾಡಲು ಹೊರಟಿದ್ದೆ. ಕೊಬ್ಬರಿ ಎಣ್ಣೆ ಆಗಲೆ ಹೆಪ್ಪುಗಟ್ಟಿತ್ತು .

ವಿಷ್ಣು ಕಾರ್ತಿಕ್: ನಿನ್ನ ತಲೇಲಿ ಕೂದಲೇ ಇಲ್ಲ. ಕೊಬ್ಬರಿ ಎಣ್ಣೆ ಏನಕ್ಕೆ ಬಳಸ್ತಿಯಾ?

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಲೋಕಿಮೋನ್ ನಂಬಿಕೆಯು ಯಾವ ಭಾರತೀಯ ರಾಜ್ಯದೊಂದಿಗೆ ಸಂಬಂಧಿಸಿದೆ?

- ಎ. ಗೋವಾ.
- ಬಿ. ಕೇರಳ.
- ಸಿ. ಅಸ್ಸಾಂ.
- ಡಿ. ಉತ್ತರಾಖಂಡ್.

ಉತ್ತರ: ಸಿ. ಅಸ್ಸಾಂ.

ಮಾಹಿತಿ

ಕುರುಸರ್ ಲೋಖಾನ್ ಎಂಗ್ಟಿ ಹನ್ಸೆಕ್ ಸ್ಥಾಪಿಸಿದ ಲೋಕಿಮೋನ್ ನಂಬಿಕೆಯು ಸುಧಾರಣೆಯ ತತ್ವಗಳ ಸುತ್ತ ಸುತ್ತುತ್ತದೆ. ಇದು, ಅಹಿಂಸೆ, ಸಂಯಮ, ಶಾಂತಿ, ಸ್ನೇಹ, ನಂಬಿಕೆ, ಭಕ್ತಿ ಮತ್ತು ಪರಿಶುದ್ಧತೆಗೆ ಒತ್ತು ನೀಡುತ್ತದೆ. ಇತ್ತೀಚೆಗೆ ಕರ್ಬಿ ಅಂಗ್ಲಾಂಗ್ ಅನ್ನು ಪ್ರವಾಸಿ ತಾಣವನ್ನಾಗಿ ಪರಿವರ್ತಿಸಲು, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಡೋಲಮಾರಾ, ಕಾರ್ಬಿ ಅಂಗ್ಲಾಂಗ್‌ನಲ್ಲಿ 5 ಕೋಟಿ ರೂಪಾಯಿಗಳ ಬಜೆಟ್‌ನೊಂದಿಗೆ ಲೋಕಿಮೋನ್ ದೇವಾಲಯವನ್ನು ನಿರ್ಮಿಸುವುದಾಗಿ ಘೋಷಿಸಿದರು.

ಆದರ್ಶ ಬಿತ್ತಿ ಹೋದ ಪಿಕಳಾರ ಹಕ್ಕಿಗಳು...

• ವೀರಣ್ಣ ಕಲಕೇರಿ

ನೆರೆಹೊರೆಯವರಾಗಿಯೂ ಹೊರೆಯಾಗದಂತೆ ಬದುಕಿನ ಹದವರಿತು ಮುದದಿಂದ ಆದರ್ಶವಾಗಿ ಬದುಕಿ, ಆಗಾಗ ಮನಸು ಹಗುರಗೊಳಿಸುತ್ತಿದ್ದ ಆ ನವ ಜೋಡಿಗಳು ಬರುವಾಗ ದಂಪತಿಗಳು ಇಬ್ಬರೆ ಇದ್ದರು. ಹೋಗುವಾಗ ಇಬ್ಬರು ಮಕ್ಕಳು ಜತೆಗೂಡಿ ಹೋದರು. ಯಾರಿಂದಲೂ ಯಾವ ನಿರೀಕ್ಷೆಯಿಲ್ಲದೆ ತಮ್ಮಷ್ಟಕ್ಕೆ ತಾವು ಸ್ವತಂತ್ರ ಸ್ವಚ್ಛಂದವಾಗಿ ಬದುಕಿ, ಬದುಕಿನ ಆದರ್ಶ ಬಿತ್ತಿ ಹೋದ ಆ ಬುಲ್ಬುಲ್ ಹಕ್ಕಿಗಳು.

ನಮ್ಮ ಮನೆಯ ವರಾಂಡವೆ ಹಾಗಿದೆ. ಅದು ಮನೆಯೊಳಗಿನ ಚಿಕ್ಕ ಓಪನ್ ಪ್ಲೇಸ್. ಇಷ್ಟರಲ್ಲೆ ಒಂದು ಮಿನಿ ವನ ನಮ್ಮದು. ಈ ವನದ ಮಧ್ಯದಲ್ಲಿಯೇ ನಮ್ಮ ನಿತ್ಯ ಓಡಾಟ. ಬ್ರಹ್ಮ ಕಣಗಲ, ಶಂಕಪುಷ್ಪ, ದುಂಡು ಮಲ್ಲಿಗೆ, ಮಲ್ಲಿಗೆ, ದಾಸವಾಳ, ಕಸ್ತೂರಿ, ಸಾಲದ್ದಕ್ಕೆ ನಾಲ್ಕಾರು ಕುಂಡದೊಳಗಿನ ಸಸಿ. ಹೀಗೆ ಸುಮಾರು ಹತ್ತಾರು ತರಹದ ಗಿಡಬಳ್ಳಿಗಳು ಇಷ್ಟರಲ್ಲಿಯೇ ದಟ್ಟವಾಗಿ ಬೆಳೆದು ನಿಂತಿವೆ. ಇವೆಲ್ಲವೂ ನಮಗೆ ಹೊರಗೆ ಹೋಗುವಾಗು ಬೀಳ್ಕೊಟ್ಟಂತೆ, ತಿರುಗಿ ಮನೆಗೆ ಬಂದಾಗ ಸ್ವಾಗತಿಸಿದಂತ ಅನುಭೂತಿ ನಮ್ಮದು. ಇಷ್ಟು ವಿಧಗಳು ಇವೆ ಎಂಬುದು ಇದೀಗ ಬರೆಯುತ್ತಿರುವಾಗ ಇವತ್ತೆ ನನ್ನ ಗಮನಕ್ಕೂ ಬಂದದ್ದು. ಇದೆ ಕಾರಣಕ್ಕಾಗಿಯೆ ಯಾವಾಗಲೂ ಅಪರೂಪದ ಅತೀಥಿಗಳ ಆಗಮನ ನಮ್ಮ ಮನೆಗೆ ಆಗಾಗ ಒಂದೆರಡು ತಿಂಗಳು ಅಂತರದಲ್ಲಿ ಸಹಜ ಇರುತ್ತದೆ, ಹೀಗೆ ಬಂದಂತಹ ಅತೀಥಿಗಳಿಗೆ ನಾವೇನು ವಿಶೇಷ ವ್ಯವಸ್ಥೆ ಕಲ್ಪಿಸುವುದಿಲ್ಲವೆಂದರೂ, ಅವರೆ ಸೂಕ್ತ ಸುರಕ್ಷಿತವೆಂದರಿತೇ ಬರುವರು.

ಕಲ್ಲು ಗುಬ್ಬಚ್ಚಿಗಳು, ಪರ್ಪಲ್ ಹಕ್ಕಿ, ಕರಿ ಗುಬ್ಬಚ್ಚಿ, ಮೈನಾ ಹೀಗೆ ಹಲವು ಬಗೆಯ ಹಕ್ಕಿಗಳು ಜೊತೆ ಜೊತೆಯಾಗಿ ಬಂದು ತಿಂಗಳೆರಡು ತಿಂಗಳು ಠಿಕಾಣಿ ಹಾಕುವುದುಬ ಸರ್ವೆ ಸಾಮಾನ್ಯ. ಇತ್ತೀಚೆ ಹೊಸದಾಗಿ ಬಂದ ಜೊಡಿ ಎಂದರೆ? ಅದು ಬುಲ್ಬುಲ್ (ಪಿಕಳಾರ) ಹಕ್ಕಿಗಳು, ಪರ್ಪಲ್ ಹಕ್ಕಿಗಳು ಹೋದವು ಎನ್ನುವಷ್ಟರಲ್ಲಿ, ಇವುಗಳ ಆಗಮನ. ಸುಮಾರು ಒಂದುವರೆ ಎರಡು ತಿಂಗಳ ಹಿಂದೆ ಬಂದವು ಎನ್ನಿ, ಯಾವಾಗ ಎಂಟ್ರಿ ಕೊಟ್ಟವೋ ಆವಾಗನಿಂದ ಆ ಕಲರವ, ಇಂಚರ ನಿತ್ಯ ಕೇಳುವ ಸಂಭ್ರಮ ನಮಗಾದರೆ, ಅವುಗಳಿಗೂ ಕೂಡ ಸಂಭ್ರಮ, ಆರಂಭಿಕ ಬದುಕು ಹೊಸ ಸಂಸಾರ ಬೇರೆ, ಆಶ್ರಯಕ್ಕೆ ಸುಭದ್ರ ಮನೆ ಕಟ್ಟಿಕೊಳ್ಳುವ ಸಂಭ್ರಮ.

ಮನೆಯಂಗಳದ ದಾಸವಾಳದ ಬಳ್ಳಿಯೊಳಗೆ ಸೂಕ್ತ ಸ್ಥಳದ ಆಯ್ಕೆ, ಸೂರ್ಯೋದಯಕ್ಕೆ ರವಿಕಿರಣ ಯಾವುದೆ ಅಡೆತಡೆ ಇಲ್ಲದೆ ಅವುಗಳ ಮನೆಯಂಗಳಕ್ಕೆ ಹಾಯಬೇಕು. ಮಳೆ ಬಂದರೂ ಒಂದನಿ ಬೀಳಬಾರದು ಹಿಗೆ ಎಲ್ಲ ರೀತಿಯ ಭವಿಶ್ಯದ ಆಲೋಚನೆಯೊಂದಿಗೆ ಹಕ್ಕಿಗಳೆರಡು ನೋಡ ನೋಡುತ್ತಲೆ ವಾರ್ಹತ್ತು ದಿನಗಳಲ್ಲಿ ಗೂಡು ಕಟ್ಟಿಯೇ ಬಿಟ್ಟವು. ನಮಗಂತು ಹಕ್ಕಿಗಳು ಯಾವ ಕಡ್ಡಿ ತಂದವು, ಕೊಕ್ಕಿನಲ್ಲಿ ತಂದ ವಸ್ತು ಯಾವ ತರಹದು ಗೂಡು ಯಾವಾಗ ಮುಗಿಯುತ್ತೆ ದಿನದಿಂದ ದಿನಕ್ಕೆ ಹಕ್ಕಿಗಳು ಗೂಡು ಕಟ್ಟಲು ಆರಂಭಿಸಿ ಹೊರಗಿನಿಂದ ಕಸ ಕಡ್ಡಿ ತಂದು ಗೂಡು ಕಟ್ಟುವುದನ್ನು ನೋಡುವುದೆ ನಮಗೆಲ್ಲಾ ಅಚ್ಚರಿ ಕುತುಹಲ ಜತೆಗೆ ವಿಸ್ಮಯ ಎಲ್ಲವೂ ಒಟ್ಟುಗೂಡಿದಂತಿತ್ತು.

ಅಂತೂ ಗೂಡು ಕಟ್ಟಿಯೂ ಆಯಿತು, ಮೊಟ್ಟೆ ಇಟ್ಟು ಕಾವು ಕೊಡುವ ಸಂದರ್ಭ, ಅಬ್ಬಾ ಅದೇನು ಬಾಂಧವ್ಯ ಎರಡೂ ಹಕ್ಕಿಗಳದ್ದು ಅದೂ ಕೂಡ ಪಾಠವೆ ಮನುಷ್ಯನಿಗೆ. ಆರಂಭದಲ್ಲಿ ಗೂಡಿನ ಪಕ್ಕದಲ್ಲಿ ಹಾದುಹೊಗುವಾಗ ಪುರ್ರನೆ ಹಾರಿ ನಮ್ಮನ್ನೆ ಹೆದರಿಸುವಂತೆ ತೋರುತ್ತಾ ಮತ್ತೆ ಬಂದು ಕೂರುತ್ತಿದ್ದ ಹಕ್ಕಿ, ಬರಬರುತ್ತಾ ಪರಿಚಯ ವಾಯ್ತಲ್ಲ ಹಾಗಾಗಿ ನಮ್ಮಿಂದ ಏನೂ ಅಪಾಯವಿಲ್ಲವೆಂದರಿತು ಗೂಡು ಬಿಟ್ಟು ಹಾರಿಹೋಗುವದನ್ನು ನಿಲ್ಲಿಸಿತು. ಗೂಡಿನ ಮುಂದೆ ಜಾಸ್ತಿ ಇಲ್ಲವೆಂದರೂ ತುಸು ಹೊತ್ತು ನಿಂತು ನೋಡುವಷ್ಟು ಅವಕಾಶನೂ ಸಿಕ್ಕಿತು ಎನ್ನಿ ಆ ಮಟ್ಟಕ್ಕೆ ಪರಿಚಯ ವಾಯಿತು.

ಹಕ್ಕಿಗಳು ಮನೆಯಂಗಳಕ್ಕೆ ಬಂದು ಒಂದು ವಾರ ಟಿಕಾಣಿ ನಿರ್ಮಾಣ, ನಂತರ ಮೊಟ್ಟೆ ಇಟ್ಟು ಹೆಚ್ಚುಕಮ್ಮಿ ವಾರಾಂತರದೋಳು ಮರಿಗಳು ಹೊರಬಂದು, ಮುಂದೆ ನಾಲ್ಕಾರು ದಿನಗಳಲ್ಲಿ ರೆಕ್ಕೆ ಬಿಚ್ಚಿದವು ಬಲಿತ ಮರಿಗಳು ಗೂಡಿನಿಂದ ಇಣಕಿ ನೋಡುವುದು ಇವೆಲ್ಲವೂ ಸೌರಭವೆ ನಮಗೆಲ್ಲ.

ಆರಂಭದ ಮೌಂಸದ ಮುದ್ದೆಯಂತಿದ ಮರಿಗಳಿಗೆ ತಾಯಿ ಹಕ್ಕಿ ಅದೇ ಮಾಂಸದ ಮುದ್ದೆಯಂತ ಕೀಟಗಳು ಅಂದರೆ ಮಳೆ ಹುಳು, ಕಂಬಳಿ ಹುಳುಗಳಂತ ಮೆತ್ತನೆ ಅಂಗರಚನೆ ಕೀಟಗಳನ್ನು ತಿನುಸುವುದು ಬಲಿತ ನಂತರ ಮಿಡತೆಯಂತ ಕೀಟಗಳು, ಅವುಗಳ ದೇಹದ ಬಿಡಿ ಬಾಗಗಳನ್ನು ತಂದು ಮರಿಗಳ ಬಾಯಿಗೆ ಇಡುವುದು. ಇದೆಲ್ಲವನ್ನು ಆಗಾಗ ನಾವೂ ದೂರ ಕೂತು ನೋಡುವುದು ಹೀಗೆಯೇ ಎಲ್ಲವೂ ಒಂದ್ಹದಿನೈದು ದಿನ ಏನೋ ಒಂದು ರೀತಿಯ ಜಗ ಮರೆತು ಮನಸು ಮುದಗೊಂಡು ಅವುಗಳ ಬದುಕಿನ ಮಧುರತೆಯಲ್ಲಿ ತೇಲುತ್ತಿರುವಾಗ..

ಹಕ್ಕಿಗಳು ಮನೆ ಕಟ್ಟಿದವು ಮನೆಯಲ್ಲಿ ಹತ್ತಾರು

ದಿನ ವಾಸವೂ ಮಾಡಿ, ಮಕ್ಕಳೂ ಮಾಡಿದವು. ಮಕ್ಕಳ ಪೋಷಣೆಯೂ ಆಯಿತು, ನಮ್ಮಂತೆ ಮನೆಯಲ್ಲೆ ಊಟ ನಿದ್ದೆ ಎಲ್ಲವೂ ಆಯಿತು. ಮನೆಯಲ್ಲಿ ತಂದೆ ತಾಯಿ ಮಕ್ಕಳು ಪ್ರೀತಿ ವಾತ್ಸಲ್ಯಕ್ಕೇನು ಕೊರತೆಯಿರಲಿಲ್ಲ. ವಾತ್ಸಲ್ಯ ಪ್ರೀತಿ ತುಂಬಿ ತುಳುಕುತ್ತಿತ್ತು. ನೋಡಬೇಕು ಆ ಎರಡ್ಹಕ್ಕಿಗಳು ಮುರಿಗಳಿಗೆ ಆಹಾರ ತಿನಿಸಿದ ನಂತರ ಗೂಡಿನಲ್ಲಿ ಕಳೆಯುವ ಸಂತಸದ ಕ್ಷಣ, ಮರಿಹಕ್ಕಿಗಳನ್ನು ಮುದ್ದಿಸುತ್ತಾ ಜೋಡಿ ಹಕ್ಕಿಗಳ ಸಂಭಾಷಣೆ, ಮತ್ತೆ ಎರಡು ಹಕ್ಕಿಗಳು ಮರಿ ಹಕ್ಕಿಗಳಿಗಳಿಗೆ ಏನೋ ಕಿವಿಮಾತು ಹೇಳಿದಂತೆ, ಮತ್ತೆ ಒಂದಕ್ಕೊಂದು ಮಾತನಾಡಕೊಂಡು ಆಹಾರ ಅರಸಿ ಪುರ್ರೆಂದು ಹಾರಿ ಬೆನ್ನಿಂದೆ ಒಂದೆರಡು ನಿಮಿಷದಲ್ಲಿ ಕೊಕ್ಕಿನಲ್ಲಿ ಕೀಟವಿಡಿದು ಚೀಂವ್ ಚೀಂವ್ ಶಬ್ದ ಮಾಡುತ್ತಾ ನಿಶ್ಯಬ್ದದೋಳು ಮತ್ತೆ ಕಲರವ ಮತ್ತೆ ಅದೇ ಆನಂದ ಅದೇ ಖುಷಿ.

ಅವುಗಳದ್ದು ಸಂಗ್ರಹ ಶೂನ್ಯ ಮನೆ. ಹಾಗಾಗಿಯೇ ಮನೆ ಬಿಟ್ಟು ಹೊರಡುವಾಗ ಅವರಲ್ಲಿ ಯಾವುದೆ ದುಃಖ, ವ್ಯಥೆ ಕಾಣಲೇ ಇಲ್ಲ. ಏಕೆಂದರೆ ಹಕ್ಕಿಗಳು ಮನುಷ್ಯನಂತೆ ಮನಸಿನೊಳಗೆ ಮನೆ ಕಟ್ಟಲಿಲ್ಲ. ಮನಸು ಬಿಟ್ಟು ಹೊರಗೆ ಕಟ್ಟಿದವು. ಅದಕ್ಕಾಗಿಯೇ ಅವು ಮನೆ ಬಿಟ್ಟು ಹೋಗುವಾಗ ಮನೆಯ ಮೇಲಿನ ಮೋಹ ಚೂರೂ ತೋರಲಿಲ್ಲ. ಹಕ್ಕಿಗಳಿಗೆ ಗೊತ್ತು, ಇದು ಖಾಲಿ ಮನೆಯಂತ, ಚಿಕ್ಕ ಖಾಲಿ ಮನೆಯಲ್ಲಿ ಕಾಲ ಕಳೆಯುವುದಕ್ಕಿಂತ ಜಗದ ಮನೆಯಂಗಳದಲ್ಲಿಯೆ ಸ್ವಚ್ಛಂದವಾಗಿರೋಣ ಹಾಡೋಣ ಹಾರೋಣವೆಂದು ಎಲ್ಲವೂ ನಮ್ಮದೇ ಎಂಬ ಸಮಷ್ಠಿ ಭಾವದೊಂದಿಗೆ ಮಕ್ಕಳಿಗೂ ಅದೇ ಅಭಿನ್ನ ಸಂಸ್ಕಾರ ಬಿತ್ತಿ ಅಣಿಗೊಳಿಸಿ ದಿಗಂತದತ್ತ ನಡೆದವು.. ಹಾರಿದವು, ಹಾರಿದವು.. ಹಾಡುತ್ತ ಹಾರಿದವು. ಆ ಪಿಕಳಾರಗಳು ಮತ್ತೆ ಬರುತ್ತವೆ ಎಂಬ ನಂಬಿಕೆಯಲ್ಲಿ ನಾವೀಗ.

ಸಮಾಚಾರ ಸಣ್ಣದಲ್ಲ

ವೆಲ್ಲಾಳಗೆ ಐಸಿಸಿ ತಿಂಗಳ ಪ್ರಶಸ್ತಿ

ದುಬೈ: ಶ್ರೀಲಂಕಾ ತಂಡದ ದುನಿತ್ ವೆಲ್ಲಾಳ ಮತ್ತು ಹರ್ಷಿತಾ ಸಮರವಿಕ್ರಮ ಅವರು ಕ್ರಮವಾಗಿ ಐಸಿಸಿ ತಿಂಗಳ ಆಟಗಾರ ಮತ್ತು ಆಟಗಾರ್ತಿ ಗೌರವಕ್ಕೆ ಭಾಜನರಾಗಿದ್ದಾರೆ. ಭಾರತ ವಿರುದ್ಧದ ಸ್ವದೇಶಿ ಏಕದಿನ ಸರಣಿ ಗೆಲುವಿನಲ್ಲಿ ಸ್ಪಿನ್ನರ್ ವೆಲ್ಲಾಳಗೆ ನಿರ್ಣಾಯಕ ಪಾತ್ರ ವಹಿಸಿದ್ದರು. ಹರ್ಷಿತಾ ಅವರು ಐರ್ಲೆಂಡ್ ಪ್ರವಾಸದ ವೇಳೆ ಬ್ಯಾಟಿಂಗ್‌ನಲ್ಲಿ ಮಿಂಚಿದ್ದರು. ಒಂದೇ ದೇಶದ ಇಬ್ಬರು ಈ ಪ್ರಶಸ್ತಿಗೆ ಆಯ್ಕೆಯಾ ಗುತ್ತಿರುವುದು ಇದು ಎರಡನೇ ಉದಾಹರಣೆಯಾಗಿದೆ. ಈ ಮೊದಲು ಜೂನ್‌ನಲ್ಲಿ ಭಾರತದ ಜಸ್ಪ್ರೀತ್ ಬೂಮ್ರಾ ಮತ್ತು ಸ್ಮೃತಿ ಮಂದಾನ ತಿಂಗಳ ಗೌರವಕ್ಕೆ ಪಾತ್ರವಾಗಿದ್ದರು.

ಮಹಿಳಾ ಟಿ20: ರಾಜ್ಯ ತಂಡ ಆಯ್ಕೆ

ಬೆಂಗಳೂರು: ಆಲ್‌ರೌಂಡರ್ ಮಿಥಿಲಾ ವಿನೋದ್ ಅವರು ಬಿಸಿಸಿಐ 19 ವರ್ಷದೊಳಗಿನವರ ಮಹಿಳಾ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ತಂಡಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಟೂರ್ನಿಯು ಚೆನ್ನೈನಲ್ಲಿ ಅಕ್ಟೋಬರ್ 1ರಿಂದ 8ರವರೆಗೆ ನಡೆಯಲಿದೆ. ಸೋಮವಾರ 15 ಮಂದಿ ಆಟಗಾರ್ತಿಯರ ತಂಡ ಪ್ರಕಟಿಸಲಾಗಿದೆ.

ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿ: ಸೆಮಿಸ್‌ನಲ್ಲಿ ಸೋತು ಮನೆಗೆ ಮರಳಿದ ಪಾಕಿಸ್ತಾನ
ಭಾರತಕ್ಕೆ ಕೊರಿಯಾ ಎದುರು ಭರ್ಜರಿ ಗೆಲುವು, ಇಂದು ಚೀನಾ ಜತೆ ಫೈನಲ್ ಪಂದ್ಯ

ಫೈನಲ್‌ಗೆ ಲಗ್ಗೆ ಇಟ್ಟ ಇಂಡಿಯಾ

ಮೋಕಿ (ಚೀನಾ): ಇಲ್ಲಿ ನಡೆಯುತ್ತಿರುವ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿಯ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಕೊರಿಯಾ ವಿರುದ್ಧ 4-1 ಗೋಲುಗಳಿಂದ ಜಯಿಸುವ ಮೂಲಕ ಹಾಲಿ ಚಾಂಪಿಯನ್ ಭಾರತ ದಾಖಲೆಯ ಐದನೇ ಬಾರಿಗೆ ಫೈನಲ್ ತಲುಪಿದೆ.

ರೋಚಕ ಪಂದ್ಯದಲ್ಲಿ ವಿಶ್ವದ 14ನೇ ಶ್ರೇಯಾಂಕದ ಭಾರತ ತಂಡ, ದಕ್ಷಿಣ ಕೊರಿಯಾವನ್ನು ಯಾವುದೇ ಹಂತದಲ್ಲಿ ಮುನ್ನುಗ್ಗಲು ಅವಕಾಶ ನೀಡಲಿಲ್ಲ. ಟೀಂ ಇಂಡಿಯಾ ಪರ ಉತ್ತಮ್ ಸಿಂಗ್ (13ನೇ ನಿಮಿಷ), ಹರ್ಮನ್‌ಪ್ರೀತ್ ಸಿಂಗ್ (19, 45ನೇ ನಿಮಿಷ), ಜರ್ಮನ್‌ಪ್ರೀತ್ ಸಿಂಗ್ (32 ನೇ ನಿಮಿಷ) ಗೋಲು ಗಳಿಸಿದರು. ಕೊರಿಯಾ ಪರ ಯಾಂಗ್ ಜಿಹುನ್ (33ನೇ ನಿಮಿಷ) ಏಕೈಕ ಗೋಲು ಮಾತ್ರ ಗಳಿಸಿದರು.

ಕೊರಿಯಾ ವಿರುದ್ಧ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಲಿ ಚಾಂಪಿಯನ್ ಭಾರತ,ಗೋಲು ಗಳಿಸಲು ಸತತ ಪ್ರಯತ್ನ ನಡೆಸಿತು. ಕೊರಿಯಾ ಕೂಡ ರಕ್ಷಣಾ ವಿಭಾಗದಲ್ಲಿ ಉತ್ತಮ ಆಟವಾಡಿತು. ಪ್ರಥಮಾರ್ಧದ 13ನೇ ನಿಮಿಷದಲ್ಲಿ ಭಾರತದ ಸ್ಟಾರ್ ಆಟಗಾರ ಉತ್ತಮ್ ಸಿಂಗ್ ಕೊರಿಯಾದ ಕೋಟೆ ಭೇದಿಸಿ ಅದ್ಭುತವಾದ ಫೀಲ್ಡ್ ಗೋಲು ಬಾರಿಸಿ ತಂಡಕ್ಕೆ 1-0 ಮುನ್ನಡೆ ತಂದರು.

6 ನಿಮಿಷ ಕಳೆಯುವಷ್ಟರಲ್ಲಿ (19ನೇ ನಿಮಿಷ) ಕೊರಿಯಾ ಮಾಡಿದ ಎಡವಟ್ಟಿನಿಂದ ಭಾರತಕ್ಕೆ ಪೆನಾಲ್ಟಿ ಕಾರ್ನರ್ ಅವಕಾಶ ಸಿಕ್ಕಿತು. ತಂಡದ ನಾಯಕ, ಪೆನಾಲ್ಟಿ ಕಾರ್ನರ್ ತಜ್ಞ ಹರ್ಮನ್‌ಪ್ರೀತ್ ಸಿಂಗ್ ಚೆಂಡನ್ನು ಗೋಲ್ ಪೋಸ್ಟ್‌ಗೆ ತಳ್ಳುವ ಮೂಲಕ ಅಂಕವನ್ನು 2 ಕ್ಕೆ ಹಿಗ್ಗಿಸಿದರು. ಈ ಅವಧಿಯಲ್ಲಿ ಕೊರಿಯಾ ತಂಡ ಕೂಡ ಉತ್ತಮ ಆಟವಾಡಿದರೂ, ಅವಕಾಶಗಳನ್ನು ಬಳಸಿಕೊಳ್ಳುವಲ್ಲಿ ವಿಫಲವಾಯಿತು. ವಿರಾಮದ ವೇಳೆಗೆ ಟೀಂ ಇಂಡಿಯಾ 2-0 ಗೋಲುಗಳಿಂದ ಮುನ್ನಡೆಯಲ್ಲಿತ್ತು.

ದ್ವಿತೀಯಾರ್ಧದಲ್ಲಿ ಭರ್ಜರಿ ಆಟ: ದ್ವಿತೀಯಾರ್ಧದಲ್ಲಿ ಇತ್ತಂಡಗಳು ಭರ್ಜರಿ ಆಟಕ್ಕಿಳಿದವು. ಗೋಲು ಬಾರಿಸಲು ನಡೆದ ಯತ್ನದಲ್ಲಿ ಭಾರತ ತಂಡದ ಸ್ಟಾರ್ ಪ್ಲೇಯರ್ ಜರ್ಮನ್‌ಪ್ರೀತ್ ಸಿಂಗ್ 32ನೇ ನಿಮಿಷದಲ್ಲಿ ಅದ್ಭುತ ಫೀಲ್ಡ್ ಗೋಲು ಗಳಿಸಿ ಮುನ್ನಡೆಯನ್ನು 3-0ಗೆ ಹೆಚ್ಚಿಸಿದರು. ಆದರೆ, ಮರು ನಿಮಿಷದಲ್ಲಿ ಕೊರಿಯಾಗೆ ಪೆನಾಲ್ಟಿ ಕಾರ್ನರ್ ಸಿಕ್ಕಿತು. ಯಾಂಗ್ ಜಿಹುನ್ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ಗೋಲು ಬಾರಿಸಿದರು. ಇದರಿಂದ ಅಂತರ 3-1 ಕ್ಕೆ ತಗ್ಗಿತು. ಇದೇ ವೇಳೆ 45 ನೇ ನಿಮಿಷದಲ್ಲಿ ಕೊರಿಯಾದ ಗೋಲ್‌ಕೀಪರ್‌ಗೆ ಹಳದಿ ಕಾರ್ಡ್ ನೀಡಲಾಯಿತು. ಈ ಮೂಲಕ ಭಾರತಕ್ಕೆ ಮತ್ತೊಂದು ಪೆನಾಲ್ಟಿ ಕಾರ್ನರ್ ಸಿಕ್ಕಿತು. ತಂಡದ 'ಸರಪಂಚ್' ಖ್ಯಾತಿಯ ಹರ್ಮನ್‌ಪ್ರೀತ್ ಸಿಂಗ್ ಅದ್ಭುತ ಗೋಲು ಬಾರಿಸಿದರು. ಕೊನೆಯಲ್ಲಿ ಭಾರತ 4-1 ರಿಂದ ಪಂದ್ಯ ಗೆದ್ದು ಐದನೇ ಬಾರಿಗೆ ಫೈನಲ್ ತಲುಪಿತು.

ಪಾಕಿಸ್ತಾನಕ್ಕೆ ಮುಖಭಂಗ

ಮೋಕಿ: ಕ್ರಿಕೆಟ್‌ನಲ್ಲಿ ಸೋತು ಸುಣ್ಣವಾಗಿರುವ ಪಾಕಿಸ್ತಾನ ಇದೀಗ ಹಾಕಿಯಲ್ಲೂ ನೀರಸ ಪ್ರದರ್ಶನವಿತ್ತು ಸ್ವದೇಶಕ್ಕೆ ಮರಳುವಂತಾಗಿದೆ. ಭಾರತ- ಕೊರಿಯಾ ಪಂದ್ಯಕ್ಕೆ ಮುನ್ನ ನಡೆದ ಮೊದಲ ಪ್ರಥಮ ಸೆಮಿಫೈನಲ್ ಪಂದ್ಯದಲ್ಲಿ ಆತಿಥೇಯ ಚೀನಾ ಪಾಕಿಸ್ತಾನವನ್ನು ಬಗ್ಗುಬಡಿಯುವ ಮೂಲಕ ಇದೇ ಮೊದಲ ಬಾರಿಗೆ ಫೈನಲ್ ತಲುಪಿದೆ. ಮೊದಲು 1-1 ರಲ್ಲಿ ಸಮಬಲಗೊಂಡಿದ್ದ ಪಂದ್ಯದಲ್ಲಿ ಶೂಟೌಟ್ ಮೂಲಕ ಗೆದ್ದ ಚೀನಾ, ಬಲಿಷ್ಠ ಭಾರತದ ವಿರುದ್ಧ ಮೊದಲ ಪ್ರಶಸ್ತಿ ಎತ್ತಿಹಿಡಿಯುವ ಕನಸು ಕಂಡಿದೆ. 4 ಬಾರಿಯ ಏಷ್ಯನ್ ಹಾಕಿ ಟ್ರೋಫಿಯ ಚಾಂಪಿಯನ್ ಆಗಿರುವ ಭಾರತ ಐದನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದೆ. ಆತಿಥೇಯ ಚೀನಾ ನೆಲದಲ್ಲಿ ಅದೇ ತಂಡವನ್ನು ಎದುರಿಸಲಿದೆ.

45ನೇ ಚೆಸ್ ಒಲಿಂಪಿಯಾಡ್‌ನ ವಿಭಾಗದ 5ನೇ ಸುತ್ತು

ಭಾರತಕ್ಕೆ ಮಣಿದ ಅಜರ್‌ಬೈಜಾನ್

45ನೇ ಚೆಸ್ ಒಲಿಂಪಿಯಾಡ್‌ನ ವಿಭಾಗದ ಐದನೇ ಸುತ್ತಿನಲ್ಲಿ ವಿದಿತ್ ಎಸ್.ಗುಜರಾತಿ ಅವರು ಅಜರ್‌ಬೈಜಾನ್‌ನ ಶಖ್ರಿಯಾರ್ ಮೆಮೆಡ್ಯರೋವ್ ಜತೆ ಆಡಿದರು.

ಬುಡಾಪೆಸ್ಟ್: ಅಮೋಘ ಲಯದಲ್ಲಿರುವ ಡಿ.ಗುಕೇಶ್ ಮತ್ತು ಅರ್ಜುನ್ ಎರಿಗೈಸಿ ಅವರ ನೆರವಿನಿಂದ ಅಮೋಘ ಆಟದಿಂದ ಭಾರತ ತಂಡ 45ನೇ ಚೆಸ್ ಒಲಿಂಪಿಯಾಡ್‌ನ ವಿಭಾಗದ ಐದನೇ ಸುತ್ತಿನಲ್ಲಿ 3-1 ರಿಂದ 11ನೇ ಶ್ರೇಯಾಂಕದ ಅಜರ್‌ಬೈಜಾನ್ ತಂಡವನ್ನು ಸೋಲಿಸಿತು.

ಹಾಲಿ ಒಲಿಂಪಿಯಾಡ್‌ನಲ್ಲಿ ಇವರಿಬ್ಬರ ನಿಷ್ಕಳಂಕ ಆಟ ಗಮನಸೆಳೆದಿದೆ. ವಿಶ್ವ ಚಾಂಪಿಯನ್ ಪಟ್ಟದ ಚಾಲೆಂಜರ್ ಆಗಿರುವ ಗುಕೇಶ್, ಐಯ್ದಿನ್ ಸುಲೇಮಾನ್ಲಿ ಅವರನ್ನು ಸೋಲಿಸಿದರೆ, ಅರ್ಜುನ್ ಅವರು ರವೂಫ್ ಮೆಮೆಡೊವ್ ಮೇಲೆ ಗೆಲುವನ್ನು ಸಾಧಿಸಿದರು. ಇಬ್ಬರೂ ಬಿಳಿ ಕಾಯಿಗಳಲ್ಲಿ ಆಡುವ ಅವಕಾಶ ಪಡೆದಿದ್ದರು.

ಪ್ರಜ್ಞಾನಂದ ರಮೇಶಬಾಬು ಅವರು ಎರಡನೇ ಬೋರ್ಡ್‌ನಲ್ಲಿ ಪ್ರಬಲ ಆಟಗಾರ ನಿಜತ್ ಅಬಸೋವ್ ವಿರುದ್ಧ ಡ್ರಾ ಮಾಡಿಕೊಂಡು ಭಾರತದ ಗೆಲುವನ್ನು ಖಚಿತಪಡಿಸಿದರು. ವಿದಿತ್ ಎಸ್.ಗುಜರಾತಿ ಕೂಡ ಶಖ್ರಿಯಾರ್ ಮೆಮೆಡ್ಯರೋವ್ ಜತೆ ಸುದೀರ್ಘ ಆಟದ ನಂತರ ಪಾಯಿಂಟ್ ಹಂಚಿಕೊಂಡರು. ಭಾರತ ಪುರುಷರ ತಂಡ ಸತತ ಐದನೇ ಗೆಲುವಿನೊಡನೆ ವಿಯೆಟ್ನಾಂ, ಚೀನಾ, ಹಂಗರಿ ಜತೆ ಅಗ್ರಸ್ಥಾನವನ್ನು ಹಂಚಿಕೊಂಡಿದೆ. ಸ್ಫೂರ್ತಿಯುತ ಆಟವಾಡುತ್ತಿರುವ ವಿಯೆಟ್ನಾಂ ಐದನೇ ಸುತ್ತಿನಲ್ಲಿ ಪೋಲೆಂಡ್ ತಂಡವನ್ನು 2.5-1.5 ರಿಂದ ಮಣಿಸಿತು. ಚೀನಾ ಮತ್ತು ಹಂಗರಿ ತಂಡಗಳು ಕ್ರಮವಾಗಿ ಸ್ಪೇನ್ ಮತ್ತು ಉಕ್ರೇನ್ ತಂಡಗಳನ್ನು 2.5-1.5 ಸಮಾನ ಅಂತರದಿಂದ ಸೋಲಿಸಿ ದವು. ಇನ್ನು ಆರು ಸುತ್ತಿನ ಪಂದ್ಯಗಳು ಉಳಿದಿವೆ.

ಫುಟ್‌ಬಾಲ್ ಚಾಂಪಿಯನ್‌ಶಿಪ್ ಗುಜರಾತ್ ಮಣಿಸಿದ ಮಣಿಪುರ

ಬೆಂಗಳೂರು: ನಗರದಲ್ಲಿ ನಡೆಯುತ್ತಿರುವ 13 ವರ್ಷದೊಳಗಿನ ಬಾಲಕರ ಸಬ್ ಜೂನಿಯರ್ (ಟಿಯರ್1) ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಮಣಿಪುರ ತಂಡವು 8-0 ಯಿಂದ ಗುಜರಾತ್ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಮಣಿಪುರ ತಂಡದ ಪರ ಕೇಶಾಮ್ ಬಿಕೇಶ್ ಸಿಂಗ್ (29ನೇ, 52ನೇ, 60ನೇ ಮತ್ತು 62ನೇ ನಿಮಿಷ) ಗೋಲುಗಳ ಸುರಿಮಳೆಗೈದರು. ಉಳಿದಂತೆ ಲೈಶ್ರಾಮ್ ಮಹೇಶ್ ಸಿಂಗ್ (8ನೇ), ಡೆನ್ನಿಸನ್ ಪುಖ್ರಂಬಮ್ (26ನೇ), ಸುಸಾನ್ ವೈಖೋಮ್ (75ನೇ) ಮತ್ತು ಸಾಪ್ ಸರ್ಜಿತ್ ಸಿಂಗ್ (85ನೇ) ಅವರು ತಲಾ ಒಂದು ಗೋಲು ಗಳಿಸಿದರು.

ಬಿ ಗುಂಪಿನ ಮತ್ತೊಂದು ಪಂದ್ಯದಲ್ಲಿ ಕೇರಳ ತಂಡವು 3-0 ಗೋಲುಗಳಿಂದ ಜಾರ್ಖಂಡ್ ತಂಡವನ್ನು ಸೋಲಿಸಿತು. ಕೇರಳದ ಪರ ಎ.ಎಂ.ಆರ್. ಅಜೀಂ ಎಂ. (45ನೇ), ಜಗನ್ ಕೃಷ್ಣ ಕೆ. (76ನೇ) ಮತ್ತು ಅಲೇಖ್ ಕೆ.ವಿ. (86ನೇ) ತಲಾ ಒಂದು ಗೋಲು ತಂದಿತ್ತರು.

ಡಿ ಗುಂಪಿನ ಪಂದ್ಯದಲ್ಲಿ ಪಶ್ಚಿಮ ಬಂಗಾಳ ತಂಡವು 5-1ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತು. ಪಶ್ಚಿಮ ಬಂಗಾಳ ಪರ ಅಂಶು ರೈ (13ನೇ, 56ನೇ, 69ನೇ) ಹ್ಯಾಟ್ರಿಕ್ ಗೋಲು ಗಳಿಸಿದರು. ಅಂಕಿತ್ ಸ್ವರ್(10ನೇ) ಮತ್ತು ಸೂರ್ಯ ಬಿಸ್ವಾಸ್ (44ನೇ) ತಲಾ ಒಂದು ಗೋಲು ತಂದಿತ್ತರು. ಮಹಾರಾಷ್ಟ್ರದ ಪರ ಏಕೈಕ ಗೋಲನ್ನು ದೀಪಕ್ ಕನೌಜಿಯಾ (40ನೇ) ದಾಖಲಿಸಿದರು.

ಗುಂಪಿನ ಮತ್ತೊಂದು ಹಣಾಹಣಿಯಲ್ಲಿ ಗೋವಾ ತಂಡವು 4-0ಯಿಂದ ಉತ್ತರ ಪ್ರದೇಶ ತಂಡವನ್ನು ಸೋಲಿಸಿತು. ಗೋವಾ ತಂಡದ ಜೋಸೆಫ್ ಡಿಕಾಸ್ಟಾ (45ನೇ, 58ನೇ, 83ನೇ) ಹ್ಯಾಟ್ರಿಕ್ ಗೋಲು ದಾಖಲಿಸಿದರೆ, ಅನೋಶ್ ಫ್ರೆನೋಯ್ ವಾಜ್ (72ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಸೆಬಾಸ್ಟಿಯನ್ ಕೊಗೆ ಕೊವೆಂಟ್ರಿ, ಲೆಪರ್ಟಿಯಂಟ್ ಪ್ರಬಲ ಪೈಪೋಟಿ

ಒಲಿಂಪಿಕ್ ಸಮಿತಿ ಅಧ್ಯಕ್ಷ ರೇಸ್‌ನಲ್ಲಿ 7 ಮಂದಿ

ಲುಸಾನ್: ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ (ಐಒಸಿ) ಮುಖ್ಯಸ್ಥ ಸೆಬಾಸ್ಟಿಯನ್ ಕೊ ಸೇರಿದಂತೆ ಏಳು ಮಂದಿ ಅಭ್ಯರ್ಥಿಗಳು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಸ್ಥಾನದ ಸ್ಪರ್ಧೆಗೆ ಬಿಡ್ ಸಲ್ಲಿಸಿದ್ದಾರೆ.

ಐಒಸಿ ಹಾಲಿ ಅಧ್ಯಕ್ಷರಾಗಿರುವ ಜರ್ಮನಿಯ ಥಾಮಸ್ ಬಾಕ್ ಅವರ ಅವಧಿ ಮುಗಿದಿದ್ದು, ಮತ್ತೆ ಕಣಕ್ಕಿಳಿಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. 70 ವರ್ಷದ ಬಾಕ್ ಅವರು 12 ವರ್ಷ ಅಧಿಕಾರಾವಧಿ ಮುಗಿಸಿದ್ದಾರೆ.

1,500 ಮೀ. ಓಟದಲ್ಲಿ ಎರಡು ಬಾರಿ ಒಲಿಂಪಿಕ್ ಚಾಂಪಿಯನ್ ಆಗಿರುವ ಬ್ರಿಟನ್‌ನ ಕೊ ಅವರಿಗೆ ಕಿರ್ಸ್ಟಿ ಕೊವೆಂಟ್ರಿ ಮತ್ತು ವಿಶ್ವ ಸೈಕ್ಲಿಂಗ್ ಮುಖ್ಯಸ್ಥ ಡೇವಿಡ್ ಲೆಪರ್ಟಿಯಂಟ್ ಅವರಿಂದ ಪ್ರಬಲ ಪೈಪೋಟಿ ಎದುರಾಗುವ ಸಾಧ್ಯತೆಯಿದೆ. 200 ಮೀ. ಬ್ರೆಸ್ಟ್‌ಸ್ಟ್ರೋಕ್ ಈಜಿನಲ್ಲಿ ವಿಶ್ವದಾಖಲೆ ಹೊಂದಿದ್ದ ಒಲಿಂಪಿಯನ್, ಜಿಂಬಾಬ್ವೆಯ ಕೊವೆಂಟ್ರಿ ಅವರು ಒಂದೊಮ್ಮೆ ಆಯ್ಕೆಯಾದಲ್ಲಿ ಈ ಹುದ್ದೆಗೇರಲಿರುವ ಆಫ್ರಿಕದ ಮೊದಲ ಮಹಿಳೆ ಎನಿಸಲಿದ್ದಾರೆ. ಸದ್ಯ ಅವರು ಜಿಂಬಾಬ್ವೆಯ ಕ್ರೀಡಾ ಸಚಿವೆಯಾಗಿದ್ದಾರೆ.

ಜೋರ್ಡಾನ್‌ನ ಪ್ರಿನ್ಸ್ ಫೈಸಲ್ ಅಲ್-ಹುಸೇನ್, ಜಿಮ್ನಾಸ್ಟಿಕ್ಸ್ ಮುಖ್ಯಸ್ಥ ಮೊರಿನಾರಿ ವತಾನೆ, ಜುವಾನ್ ಅಂಟೋನಿಯೊ ಸಮರಾನ್ ಜೂನಿಯರ್, ಸ್ಕಿ ಫೆಡರೇಷನ್ ಮುಖ್ಯಸ್ಥ ಜೊಹಾನ್ ಎಲಿಯಾಷ್ ಕಣದಲ್ಲಿರುವ ಇತರರು.

ಸೆಬಾಸ್ಟಿಯನ್‌ಗೆ ನಿಯಮ ಅಡ್ಡಿ

ಕಳೆದ ವಾರ ಐಒಸಿ ಎತಿಕ್ಸ್ ಕಮಿಷನ್ ನಿಗದಿಪಡಿಸಿರುವ ನಿಯಮಗಳು ಕೊ ಅವರಿಗೆ ಸವಾಲು ಒಡ್ಡಿವೆ. ಸೆ.29ರಂದು 68ಕ್ಕೆ ಕಾಲಿಡಲಿರುವ ಕೊ ಅವರು ಒಂದೊಮ್ಮೆ ಆಯ್ಕೆಯಾದಲ್ಲಿ ಎಂಟು ವರ್ಷಗಳ ಅವಧಿ ಮುಗಿಸುವಾಗ ಅವರಿಗೆ 76 ವರ್ಷ ಆಗಲಿದೆ. ಈಗ ಐಒಸಿ ಸದಸ್ಯರು ಮತ್ತು ಅಧ್ಯಕ್ಷರ ನಿವೃತ್ತಿ ವಯೋಮಿತಿಯನ್ನು 74ರವರೆಗೆ ಹೆಚ್ಚಿಸಲು ಮಾತ್ರ ಅವಕಾಶವಿದೆ.

ಸ್ಪರ್ಧೆಯಲ್ಲಿ ಯಾರ್ಯಾರು?

- ಸೆಬಾಸ್ಟಿಯನ್ ಕೊ
- ಕಿರ್ಸ್ಟಿ ಕೊವೆಂಟ್ರಿ
- ಡೇವಿಡ್ ಲೆಪರ್ಟಿಯಂಟ್
- ಫೈಸಲ್ ಅಲ್-ಹುಸೇನ್
- ಮೊರಿನಾರಿ ವತಾನೆ
- ಜುವಾನ್ ಅಂಟೊನಿಯೊ ಸಮರಾನ್ ಜೂನಿಯರ್
- ಜೊಹಾನ್ ಎಲಿಯಾಷ್

ನವರಾತ್ರಿಗೆ ಭೈರಾದೇವಿ ದರ್ಶನ

ಬಹುದಿನಳ ಬಳಿಕ ರಾಧಿಕಾ ಕುಮಾರಸ್ವಾಮಿ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಭೈರಾದೇವಿಯ ಅವತಾರ ತಾಳಿರುವ ರಾಧಿಕಾ, ನವರಾತ್ರಿಗೆ ದರ್ಶನ ಕೊಡಲಿದ್ದಾರೆ. ಶ್ರೀಜೈ ನಿರ್ದೇಶನದ ಈ ಚಿತ್ರವನ್ನು ಶಮಿಕಾ ಎಂಟರ್‌ಪ್ರೈಸಸ್ ಲಾಂಛನದಲ್ಲಿ ರಾಧಿಕಾ ಕುಮಾರ ಸ್ವಾಮಿ ಅವರೇ ನಿರ್ಮಿಸಿ ದ್ದಾರೆ. ಭೈರಾದೇವಿ ಅಕ್ಟೋಬರ್ 3 ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ನಾಡಹಬ್ಬ ನವರಾತ್ರಿಯ ಮೊದಲ ದಿನವೇ ಈ ಚಿತ್ರ ಬಿಡುಗಡೆಯಾಗುತ್ತಿರುವುದು ವಿಶೇಷ. ರಾಧಿಕಾ ಕುಮಾರಸ್ವಾಮಿ ತಾವೇ ಆಟೋ ಚಾಲನೆ ಮಾಡುವ ಮೂಲಕ ಚಿತ್ರದ ಪ್ರಚಾರ ಕಾರ್ಯ ಆರಂಭಿಸಿದರು. ಭೈರಾದೇವಿ ಚಿಕತ್ರದಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಕಥೆಯ ಜತೆಗೆ ಹಾರರ್ ಅಂಶವೂ ಬೆರೆತಿದೆ. ರಮೇಶ್ ಅರವಿಂದ್ ನಾಯಕನಾಗಿ ನಟಿಸಿದ್ದು, ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ರವಿಶಂಕರ್, ರಂಗಾಯಣ ರಘು ಮುಂತಾದವರು ತಾರಾಗಣದಲ್ಲಿದ್ದಾರೆ. ಜೆ.ಎಸ್.ವಾಲಿ ಛಾಯಾಗ್ರಹಣ, ಕೆ.ಕೆ. ಸೆಂಥಿಲ್ ಪ್ರಸಾದ್ ಸಂಗೀತ ನಿರ್ದೇಶನ ಹಾಗೂ ರವಿಚಂದ್ರನ್ ಸಂಕಲನ ಭೈರಾದೇವಿ ಚಿತ್ರಕ್ಕಿದೆ.

ಶೂಟಿಂಗ್ ಮುಗಿಸಿದ ನಿಮ್ದೆ ಕಥೆ

ನಿರ್ದೇಶಕ ರಾಘವೇಂದ್ರ, ನಿಮ್ದೆ ಕಥೆ ಹೇಳಲು ಬರುತ್ತಿದ್ದಾರೆ. ಪ್ರೇಕ್ಷಕರಿಗೆ ಕನೆಕ್ಟ್ ಆಗುವ ಸ್ಟೋರಿಯ ನಿಮ್ದೆ ಕಥೆ ಸಿನಿಮಾವನ್ನು ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಶ್ರೀನಿವಾಸ ರೆಡ್ಡಿ ಮತ್ತು ಅರವಿಂದ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಅಭಿಲಾಷ ಧಳಪತಿ ಮತ್ತು ರಾಷಿಕಾ ಶೆಟ್ಟಿ ಮುಖ್ಯ ಭೂಮಿಕೆಯಲ್ಲಿ ನಟಿಸಿ ಜೊತೆಗೆ ಸಿಹಿ ಕಹಿ ಚಂದ್ರು, ಕಾಮಿಡಿ ಕಿಲಾಡಿಯ ಕೋಳಿ ಕಳ್ಳ ಮನೋಹರ್ ಗೌಡ, ಕೆ ವಿ ಮಂಜಯ್ಯ, ಜ್ಯೋತಿ ಮರೂರ್ ಹಾಗೂ ಮುಂತಾದವರು ಈ ಚಿತ್ರದಲ್ಲಿ ನಟಿಸಿದಾರೆ. ಹಾಸ್ಯದ ಜತೆಗೆ ಎಮೋಷನ್ ಕೂಡ ಚಿತ್ರದಲ್ಲಿ ಬೆರೆತಿದೆ. ಪ್ರವೀಣ್ ನಿಕೇತನ್ ಸಂಗೀತ ನಿರ್ದೇಶನ, ಪ್ರಶಾಂತ್ ಸಾಗರ್ ಛಾಯಾ ಗ್ರಹಣ, ಸುನಿಲ್ ಸಂಕಲನ ಈ ಚಿತ್ರಕ್ಕಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿ ರುವ ನಿಮ್ದೆ ಕಥೆ ನವೆಂಬರ್ ನಲ್ಲಿ ತೆರೆಗೆ ಬರಲಿದೆ. ಮೈಸೂರು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಬಿಡುಗಡೆಗೂ ಮುನ್ನವೇ ಚಿತ್ರದ ಆಡಿಯೊ ರೈಟ್ಸ್ ಭಾರೀ ಬೆಲೆ ಮಾರಾಟವಾಗಿದೆ. ಇದು ಚಿತ್ರದ ಬಗೆಗಿನ ಕುತೂಹಲವನ್ನು ಹೆಚ್ಚಿಸಿದೆ.

ಆತ್ಮಗಳ ಅರಸಿ ಹೊರಟ ಮಾಂತ್ರಿಕ

ಆತ್ಮಗಳ ಹುಡುಕ ಹೊರಟ ಮಾಂತ್ರಿಕನ ಟೀಸರ್ ರಿಲೀಸ್ ಆಗಿದೆ. ವ್ಯಾನವರ್ಣ ಜಮ್ಮುಲ ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಪ್ರಮುಖ ಪಾತ್ರದಲ್ಲೂ ನಟಿಸಿದ್ದರೆ. ಘೋಸ್ಟ್ ಹಂಟರ್ ಸುತ್ತ ಚಿತ್ರದ ಕಥೆ ಸಾಗುತ್ತದೆ. ಅದಕ್ಕೆ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಮೂಢನಂಬಿಕೆಗಳಿಂದ ಮೂಢರಾಗಬೇಡಿ, ಅದರ ಹಿಂದಿನ ಸತ್ಯಾಂಶ ಪರಮಾರ್ಶಿಸಿ ಎಂಬುದನ್ನು ಇಲ್ಲಿ ಹೇಳಲಾಗಿದೆ. ರಾಧಿಕಾ ಮಾಲಿ ಪಾಟೀಲ ಹಾಗೂ ಮೈಥಿಲಿ ನಾಯಕ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ವ್ಯಾನವರ್ಣ ಘೋಸ್ಟ್ ಹಂಟರ್ ಕೃಷ್ಣನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೃಷ್ಣ ಸಂಕುಲ ಬ್ರಾಂಡಿಂಗ್ ಪಿಕ್ಚರ್ಸ್ ಲಾಂಛನದಲ್ಲಿ ಚಿತ್ರ ನಿರ್ಮಾಣವಾಗಿದೆ. ಸ್ಟಾಲಿನ್ ಸಂಗೀತ ನಿರ್ದೇಶನ ಅನಿಲ್ ಆಂಟೋನಿ ಹಾಗೂ ರಮೇಶ್ ಮರ್ರಿಪಲ್ಲಿ ಛಾಯಾಗ್ರಹಣ, ಲಯನ್ ಜಿ.ಗಂಗರಾಜು ಸಾಹಸ ನಿರ್ದೇಶವನ ಈ ಚಿತ್ರಕ್ಕಿದೆ. ಬೆಂಗಳೂರು, ಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಮಾಂತ್ರಿಕನಿಗೆ ಸೆನ್ಸಾರ್ ಅಸ್ತು ಎಂದಿದ್ದು ಯು/ಎ ಪ್ರಮಾಣಪತ್ರ ನೀಡಿದೆ. ಮುಂದಿನ ತಿಂಗಳು ಮಾಂತ್ರಿಕ ತೆರೆ ಯಲ್ಲಿ ಪ್ರತ್ಯಕ್ಷವಾಗ ಲಿದ್ದಾನೆ.

ಕೆಲವರು ದೆವ್ವದ ಭಯದಲ್ಲಿಯೇ ದಿನದೂಡುತ್ತಾರೆ. ದೆವ್ವ ಇದೆಯೋ, ಇಲ್ಲವೊ, ಇದ್ದರೆ ಅದು ಹೇಗಿರುತ್ತದೆ. ಇದು ಬರೀ ಮನಸಿನ ಭ್ರಮೆಯೋ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಇಲ್ಲಿ ಘೋಸ್ಟ್ ಹಂಟರ್ ವಿಚಾರವನ್ನು ಮನರಂಜನೆ ಬೆರೆಸಿ ಕಟ್ಟಿಕೊಡಲಾಗಿದೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಸಿನಿಮಾವಾಗಿದೆ.

-ವ್ಯಾನವರ್ಣ ಜಮ್ಮುಲ ನಿರ್ದೇಶಕ

ಅಸಲಿ ಬಣ್ಣ ಕಳಚಿದ ಇಶಾನಿ

ಬಿಗ್ ಬಾಸ್ ಖ್ಯಾತಿಯ ಇಶಾನಿ, ಅಸಲಿ ಬಣ್ಣ ಆಲ್ಬಂ ಸಾಂಗ್‌ನಲ್ಲಿ ನಟಿಸಿದ್ದು, ಹಾಡಿನಲ್ಲಿ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಕನ್ನಡದಲ್ಲಿ ಮಹಿಳೆಯರ ಹಿಪಾಪ್ ಸಾಂಗ್ ಎಂದರೆ ನೆನಪಿಗೆ ಬರೋದು ಇಶಾನಿ. ಸೋಷಿಯಲ್ ಮೀಡಿಯಾದಲ್ಲಿ ಸದಾ ಆಕ್ಟಿವ್ ಆಗಿರುವ ಇವರ ಪೋಸ್ಟ್‌ಗಳಿಗೆ ಕೆಲವರು ಕೆಟ್ಟದಾಗಿ ಕಮೆಂಟ್ ಮಾಡುತ್ತಾರೆ. ಯುವತಿಯರು ಮಾಡ್ರನ್ ಡ್ರೆಸ್ ಹಾಕೋದು, ಬೋಲ್ಡ್ ಆಗಿರುವುದು ತಪ್ಪೇ, ನನ್ನ ಇಷ್ಟದಂತೆ ನಾನಿರೋದನ್ನು ಯಾಕೆ ಸಹಿಸಲ್ಲ ಎನ್ನುವುದು ಇವರ ಪ್ರಶ್ನೆ. ಅಂಥವರಿಗೆ ಅಸಲಿ ಬಣ್ಣ ಎಂಬ ಈ ಹಿಪಪ್ ಸಾಂಗ್ ಮೂಲಕ ಇಶಾನಿ ತಿರುಗೇಟು ಕೊಟ್ಟಿದ್ದಾರೆ. ಈ ಗೀತೆಗೆ ಇಶಾನಿ ಅವರೇ ದನಿಯಾಗಿದ್ದಾರೆ. ಅವರ ಒಂದಷ್ಟು ಸ್ನೇಹಿತರೇ ಸೇರಿ ಈ ಹಾಡನ್ನು ನಿರ್ಮಿಸಿದ್ದಾರೆ. ಗಿರಿಗೌಡ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಹಾಡಿಗೆ ಮಾರ್ಟಿನ್ ಸಾಹಿತ್ಯ, ಕೀರ್ತನ್ ಪೂಜಾರಿ ಛಾಯಾಗ್ರಹಣ, ಡಿಜೆ ಲೆಥಲ್ ಸಂಗೀತ ಸಂಯೋಜಿಸಿದ್ದಾರೆ. ಇದು ಎಲ್ಲರಿಗೂ ಹಿಡಿಸುವ ಹಾಡಾಗಿದ್ದು ಬೆಂಗಳೂರಿನ ಏರ್ ಪೋರ್ಟ್ ರಸ್ತೆಯಲ್ಲಿ ಒಂದೇ ದಿನದಲ್ಲಿ ಚಿತ್ರೀಕರಿಸಿದ್ದೇವೆ ಎಂದು ನಿರ್ದೇಶಕ ಗಿರಿಗೌಡ ಹೇಳಿದರು. ಹಿಪ್‌ಹಾಪ್ ಶೈಲಿಯಲ್ಲಿ ಈ ಹಾಡು ಮೂಡಿಬಂದಿದೆ.

ಶೋಷಣೆಗೆ ಒಳಗಾದ ಹೆಣ್ಣು ಮಕ್ಕಳಿಗೆ ಶಕ್ತಿತುಂಬುವುದೇ ಈ ಹಾಡಿನ ಉದ್ದೇಶ. ಬಿಗ್‌ಬಾಸ್ ಮನೆಯಲ್ಲಿರುವಾಗಲೇ ಈ ಹಾಡು ನನಗೆ ಹೊಳೆದಿತ್ತು. ನನಗನಿಸಿದ್ದನ್ನು ಹೇಳಿಕೊಳ್ಳಲು ಇದು ಸೂಕ್ತ ಅನ್ನಿಸಿತು. ಈ ಹಾಡಿಗೆ ಮಾರ್ಟಿನ್ ಸಾಹಿತ್ಯದ ಮೂಲಕ ಹೊಸತನ ತಂದಿದ್ದಾರೆ.

-ಇಶಾನಿ ನಟಿ

ಜಾಂಟಿ ಸನ್ ಆಫ್ ಜಯರಾಜನ ಟ್ರೇಲರ್

ವಿಭಿನ್ನ ಶೀರ್ಷಿಕೆಯ ಜಾಂಟಿ ಸನ್ ಆಫ್ ಜಯರಾಜ್ ಚಿತ್ರದ ಟೀಸರ್ ಹಾಗೂ ಟ್ರೇಲರ್ ಬಿಡುಗಡೆಯಾಗಿದೆ. ನಟ ವಿನೋದ್ ಪ್ರಭಾಕರ್ ಮತ್ತು ಶ್ರೀನಗರ ಕಿಟ್ಟಿ ಟ್ರೇಲರ್ ಬಿಡುಗಡೆ ಮಾಡಿ ಶುಭಕೋರಿದರು. ಆನಂದರಾಜ್ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜಯರಾಜ್ ನಂತರದ ದಿನಗಳು, ಹಣಕಾಸು ವ್ಯವಹಾರ, ಮಾರ್ಕೆಟ್ ದಂಧೆ ಎಲ್ಲವೂ ಚಿತ್ರದ ಕಥೆಯಲ್ಲಿ ಬೆರೆತಿವೆ. ಜಯರಾಜ್ ಪುತ್ರನಾಗಿ ಅಜಿತ್ ಜಯರಾಜ್ ನಟಿಸಿರುವುದು ಚಿತ್ರದ ಬಗ್ಗೆ ಕುತೂಹಲ ಮೂಡುವಂತೆ ಮಾಡಿದೆ. ಎಂಬತ್ತು ತೊಂಬತ್ತರ ಕಾಲಘಟ್ಟದಲ್ಲಿ ಇದ್ದಂತಹ ಪಾತ್ರಗಳನ್ನು ಕಾಲ್ಪನಿಕವಾಗಿ ತೋರಿಸಲಾಗಿದೆ. ಜತೆಗೆ ತಾಯಿ ಸೆಂಟಿಮೆಂಟ್, ನವಿರಾದ ಪ್ರೀತಿ ಸನ್ನಿವೇಶಗಳು ಅಲ್ಲದೆ ಗೆಳತನದ ಸಾರವನ್ನು ಕಥೆಯಲ್ಲಿ ಬೆರೆಸಲಾಗಿದೆ. ಹಳೇ ಬೆಂಗಳೂರು ಹೇಗಿತ್ತು ಅಂತ ನೋಡಬೇಕಾದರೆ, ನಮ್ಮ ಸಿನಿಮಾ ನೋಡಲೇಬೇಕು ಎನ್ನುತ್ತಾರೆ ನಿರ್ದೇಶಕರು. ನಿವಿಷ್ಕಾ ಪಟೇಲ್ ನಾಯಕಿಯಾಗಿ ಅಭಿನಯಿಸಿದ್ದಾರೆ. ರಾಜವರ್ಧನ್, ಶರತ್ ಲೋಹಿತಾಶ್ವ, ಪೆಟ್ರೋಲ್ ಪ್ರಸನ್ನ, ಕಿಶನ್, ಸೋನು ಪಾಟೀಲ್, ಸಚ್ಚಿನ್ ಪುರೋಹಿತ್, ಮೈಕೋ ನಾಗರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು ಕಥೆ ಹೇಳಿದಾಗ ಮನಸಿಗೆ ಹಿಡಿಸಿತು. ಅಪ್ಪನ ಪಾತ್ರ ಮಾಡುವಾಗ ನರ್ವಸ್ ಆಗಿದ್ದೆ. ಕ್ಯಾಮಾರ ಮುಂದೆ ನಿಂತಾಗ ನಡುಕ ಬಂತು. ಅಂತ ಪವರ್‌ಫುಲ್ ರೋಲ್‌ನ್ನು ಹೇಗೆ ಮಾಡುವುದು ಎಂದು ಭಯವಿತ್ತು. ಅಂತು ಧೈರ್ಯ ಮಾಡಿ ಒಂದು ದೃಶ್ಯದಲ್ಲಿ ನಟಿಸಿದಾಗ ಈ ಪಾತ್ರವನ್ನು ನಿರ್ವಹಿಸಬಹುದು ಎನ್ನಿಸಿತು. ಅಪ್ಪನ ಕಾಲ ಹಾಗೂ ಮಗನಾಗಿ ಹೀಗೆ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಅಜಿತ್ ಜಯರಾಜ್ ತಮ್ಮ ಪಾತ್ರದ ಬಗ್ಗೆ ಹೇಳಿದರು.